# ವಿಭೂತಿ ಪೂಜೆ

## ಇಂದಿನ ಹೊಸಗನ್ನಡ ಕವಿತೆ ಮತ್ತು ಅದರ ಮುಂದಿನ ನಡೆ

ಅನುಭವ ಸ್ಥವಿರೆಯಾದರೂ ಸರ್ವದಾ ಪ್ರಗತಿಶೀಲೆ; ಸಂಪ್ರದಾಯ ಸುಸ್ಥಿರೆಯಾದರೂ ನಿರಂತರ ಕ್ರಾಂತಿದರ್ಶಿನಿ; ಪ್ರಾಚೀನೆಯಾದರೂ ನಿತ್ಯ ನೂತನೆ: ಸಾಹಿತ್ಯಲಕ್ಷ್ಮಿ ಸ್ವಭಾವತಃ ನವನವೋನ್ಮೇಷಶಾಲಿನಿ.

ಸನಾತನದಲ್ಲಿ ಕೂಟಸ್ಥೆಯಾಗಿರುವ ಆಕೆ, ಪರಿವರ್ತನೆಯ ಲೀಲೆಯಲ್ಲಿ ತನ್ಮಯಿಯಾಗಲು ಹಿಂಜರಿಯುವುದಿಲ್ಲ. ಯುಗಯುಗಾಯುವಾಗಿರುವ ಆಕೆಯ ನಡೆ ಒಮ್ಮೊಮ್ಮೆ ನಮ್ಮ ವಾರ್ಷಿಕವಾದ ಅಲ್ಪಾಯು ದೃಷ್ಟಿಗೆ, ನಿಂತುಹೋಗಿ ತಟಸ್ಥವಾದಂತೆ ತೋರಿದರೂ, ಆ ತೂರಿಕೆ ನಮ್ಮ ಮಿತಪ್ರಜ್ಞಾಕಾರಣವಾದ ದುರ್ಬಲತೆಯ ಕುರುಹೆ ಹೊರತು ನಿಜವಾಗಿಯೂ ಆಕೆಯ ನಡೆಗೇಡಲ್ಲ.

ಸಾಹಿತ್ಯವನ್ನು ಜನಜೀವನದ ಪ್ರತಿಬಿಂಬ ಎಂದು ವರ್ಣಿಸುವುದು ವಾಡಿಕೆಯಾಗಿದೆ. ಅದು ಬಿಂಬ ಮಾತ್ರವಲ್ಲದೆ ಪ್ರತಿಫಲವೂ ಆಗುತ್ತದೆಂಬುದನ್ನು ನಾವು ಮರೆಯಬಾರದು. ಹಾಗೆ ತಿದ್ದಿದರೂ ಪೂರ್ಣಸತ್ಯ ಸಿದ್ಧಿಯಾಗುವುದಿಲ್ಲ. ಏಕೆಂದರೆ ಸಾಹಿತ್ಯ ಜನಜೀವನವನ್ನು ನಿರೂಪಿಸುತ್ತದೆ, ಮತ್ತು ಜನ ಜೀವನದಿಂದ ರೂಪಿತವಾಗುತ್ತದೆ ಎಂಬ ಅಂಶಸತ್ಯಗಳ ಜೊತೆಗೆ ಸಾಹಿತ್ಯ ಜೀವನವನ್ನು ರೂಪಿಸುತ್ತದೆ ಎಂಬ ಮುಖ್ಯ ಸತ್ಯಾಂಶವೂ ಸೇರದಿದ್ದರೆ ಪೂರ್ಣದೃಷ್ಟಿಯ ಸತ್ಯ ಲಭಿಸುವುದಿಲ್ಲ.

ಜನಜೀವನದ ನದಿ ಹರಿದ ಮೇಲೆ ಸಿದ್ಧವಾಗುವ ನದೀಪಾತ್ರಮಾತ್ರದಂತಲ್ಲ ಸಾಹಿತ್ಯ; ನದಿಯ ನೀರನ್ನೂ ಸೃಜಿಸಿ, ಅದು ಹರಿಯುವ ದಿಕ್ಕನ್ನೂ ಹರಿಯಬೇಕಾದ ದಾರಿಯನ್ನೂ ನಿರ್ಣಯಿಸುವ ಚೇತನಶಕ್ತಿಯೂ ಹೌದು. ರಸರತಿ ಆ ಚೇತನಶಕ್ತಿ, ಸೃಷ್ಟಿಮೂಲವಾಗಿರುವುದರಿಂದ, ಅದು ಸೃಷ್ಟಿಹೃದಯದಲ್ಲಿ ಸದಾ ಸ್ಪಂದಿಸುತ್ತಿರುವುದರಿಂದ, ಸೃಷ್ಟಿದೇವಿಯಾದ ಮಹಾಲಕ್ಷ್ಮಿಯಂತೆ ವಾಗ್ದೇವಿಯಾದ ಮಹಾಸರಸ್ವತಿಯೂ ಯಾವಾಗಲೂ ಹೊಸ ಹೊಸದಾಗಿ ನವನವೀನ ಪ್ರಕಾರಗಳಲ್ಲಿ ಪ್ರವಾಹ ಲೋಲೆಯಾಗಿರುವ ನವನವೋನ್ಮೇಷಶಾಲಿನಿ ಮತ್ತು ಕ್ರಾಂತದರ್ಶಿನಿ.

ನಮಗೆ ತಿಳಿದಿರುವಂತೆ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮೂರು ಪ್ರಬಲವಾದ ಪರಿವರ್ತನೆಯ ಘಟ್ಟಗಳನ್ನು ಗುರುತಿಸಬಹುದು. ಅಥವಾ ಆಧುನಿಕ ಕಾಲವನ್ನೂ ಗಮನಿಸಿ ಹೇಳುವುದಾದರೆ ನಾಲ್ಕು ಘಟ್ಟಗಳನ್ನು ಗುರುತಿಸಬಹುದು.

ಒಂದನೆಯದು ಹತ್ತನೆಯ ಶತಮಾನದಲ್ಲಿ; ಎರಡನೆಯದು ಹನ್ನೆರಡನೆಯ ಶತಮಾನದಲ್ಲಿ; ಮೂರನೆಯದು ಹದಿನಾಲ್ಕು ಹದಿನೈದನೆಯ ಶತಮಾನಾವಧಿಯಲ್ಲಿ; ನಾಲ್ಕನೆಯದು ಹತ್ತೊಂಬತ್ತು ಇಪ್ಪತ್ತನೆಯ ಶತಮಾನಾವಧಿಯಲ್ಲಿ.

ಪ್ರಥಮ ನವೋದಯದಲ್ಲಿ ಜೈನ ಧರ್ಮ ರೂಪದಿಂದ ಆವಿರ್ಭೂತವಾದ ಆ ಚೇತನಶಕ್ತಿ ಕನ್ನಡಕ್ಕೆ ಆದಿಕವಿಯಾದ ಪಂಪನ ಕೃತಿಗಳಲ್ಲಿ ತನ್ನ ಭವ್ಯಸ್ಮಾರಕ ಸ್ವರೂಪವನ್ನು ನಿರ್ಮಿಸಿಕೊಂಡಿವೆ.

ದ್ವಿತೀಯ ನವೋದಯದಲ್ಲಿ ವೀರಶೈವ ಧರ್ಮ ರೂಪದಲ್ಲಿ ಮೈದೋರಿದ ಆ ಶಕ್ತಿ ಹರಿಹರ ರಾಘವಾಂಕರ ಕೃತಿಸಮಷ್ಟಿಯಲ್ಲಿ ತನ್ನ ಚಿರ ಸ್ಮೃತಿಮಂದಿರವನ್ನು ಸ್ಥಾಪಿಸಿಕೊಂಡಿದೆ.

ತೃತೀಯ ನವೋದಯದಲ್ಲಿ ವೈಷ್ಣವ ಭಕ್ತಿ ರೂಪದಲ್ಲಿ ಪುನರುತ್ಥಾನವಾದ ಆ ರಸಸ್ಫೂರ್ತಿ ಕುಮಾರವ್ಯಾಸ ಬಿರುದಿನ ನಾರಣಪ್ಪನ ಮಹಾಕೃತಿಯಲ್ಲಿ ತನ್ನ ವಿಯಚ್ಚುಂಬಿಯಾದ ಬೃಹದ್‌ಗೋಪುರವನ್ನು ಕಂಡರಿಸಿಕೊಂಡಿದೆ.

ನಮ್ಮ ಚತುರ್ಥ ನವೋದಯದಲ್ಲಿ ಆ ಚೇತನ ಶಕ್ತಿ ಯಾವ ರೂಪದಲ್ಲಿ ಮೈದೋರಿದೆ? ಅದರ ಸರ್ವತೋಮುಖತೆಯೇನು? ಅದರ ವ್ಯಾಪಕತೆಯೇನು? ಅದರ ಧರ್ಮವೇನು? ದೃಷ್ಟಿಯೇನು? ಸೃಷ್ಟಿಯೇನು? ಅದೂ ತನ್ನ ಮಹಾಕವಿಯನ್ನೂ ತನ್ನ ಶಕ್ತಿ ಕಾಂತಿ ಸಾಹಸ ಧ್ಯೇಯ ದರ್ಶನಗಳಿಗೆಲ್ಲ ವಿರಾಟ್ ಪ್ರತಿಮೆಯಾಗುವ ಮಹಾಕೃತಿಯನ್ನೂ ಕಡೆದಿದೆಯೆ? ಕಡೆಯಬಲ್ಲುದೆ? ಮುಂದಾದರೂ ಕಡೆದುಕೊಳ್ಳುತ್ತದೆಯೆ? ಹೇಳಬಲ್ಲವರಾರು?

ಆಂಗ್ಲೇಯ ಭಾಷೆಯ ಮುಖಾಂತರ ನಮ್ಮ ದೇಶಕ್ಕೆ ಆಗಮಿಸಿದ ಪಾಶ್ಚಾತ್ಯ ಸಾಹಿತ್ಯಸಂಸ್ಕೃತಿಗಳು ಭಾರತೀಯರ ಬದುಕಿನ ಮೇಲೆ ಬೀರಿದ ಪ್ರಭಾವವೆ ಆಧುನಿಕ ನವೋದಯಕ್ಕೆ ಕಾರಣ. ಕನ್ನಡಕ್ಕೆ ಆ ಪ್ರಭಾವ ಕೆಲವೆಡೆಗೆ ನೇರವಾಗಿ ಬಂದಿದೆ. ಮತ್ತೆ ಕೆಲವೆಡೆ ಇತರ ದೇಶಭಾಷಾ ಸಾಹಿತ್ಯಗಳ ಮೂಲಕ ಬಂದಿದೆ.

ಕವಿತೆಯನ್ನೆ ಗಮನಿಸಿ ಹೇಳುವುದಾದರೆ. ಆ ಪ್ರಭಾವ ನೇರವಾಗಿಯೆ ಬಂದಿದೆ ಎಂದು ಹೇಳಬಹುದು. ಇಂಗ್ಲಿಷ್‌ಕವನಗಳು ಭಾಷಾಂತರವಾಗಿ ಕನ್ನಡಕ್ಕೆ ಕಾಲಿಟ್ಟಂದಿನಿಂದ ಆಧುನಿಕ ಕನ್ನಡ ಕವಿತೆಯ ಹುಟ್ಟು ಮೊದಲಾಯಿತು. ಈ ಪ್ರಭಾವ ಕವನಗಳ ವಸ್ತು ಮತ್ತು ಸೃಷ್ಟಿ ಇವುಗಳನ್ನು ಕುರಿತದ್ದಕ್ಕಿಂತಲೂ ಹೆಚ್ಚಾಗಿ ಅವುಗಳ ಛಂದಸ್ಸು ರೀತಿ ರೂಪ ಮತ್ತು ಭಾವ ವಿನ್ಯಾಸಗಳಿಗೆ ವಿಶೇಷವಾಗಿ ಅನ್ವಯವಾಗುತ್ತದೆ. ಹಿಂದಿನ ನವೋದಯಗಳಿಗೆ ಸ್ವಮತಾಭಿಮಾನವೆ ಮುಖ್ಯ ಪ್ರಚೋದನೆಯಾದಂತೆ ಇಂದಿನ ನವೋದಯಕ್ಕೆ ಸ್ವದೇಶಪ್ರೇಮ ಮತ್ತು ಸ್ವರಾಷ್ಟ್ರಾಭಿಮಾನ ಮೂಲವಾದ ಸ್ವಾತಂತ್ರ್ಯ ಸಂಗ್ರಾಮ ಭಾವನೆಯಿಂದಲೆ ಆ ಪ್ರೇರಣೆ ವಿಪುಲಪ್ರಮಾಣದಲ್ಲಿ ಒದಗಿತೆಂದು ಹೇಳಬೇಕಾಗುತ್ತದೆ.

ಆ ಸ್ವಾತಂತ್ರ್ಯ ಸಂಗ್ರಾಮ ನಮ್ಮನ್ನು ಆಕ್ರಮಿಸಿದ್ದ ವಿದೇಶಿಯರನ್ನು ಹೊರಕ್ಕಟ್ಟುವ ರಾಜಕೀಯೋದ್ಯಮದಲ್ಲಿ ಮಾತ್ರವೆ ಪರ್ಯವಸಾನಹೊಂದದೆ ಧಾರ್ಮಿಕ ಸಾಮಾಜಿಕ ಆರ್ಥಿಕ ಭೂಮಿಕೆಗಳಲ್ಲಿಯೂ ಯತ್ನಶೀಲವಾಗಿದ್ದುದನ್ನು ಕಾಣುತ್ತೇವೆ. ಅಂದರೆ ಪರಕೀಯರಿಂದ ನಮ್ಮ ನಾಡನ್ನು ಬಿಡಿಸಿಕೊಳ್ಳಬೇಕೆಂಬುದರ ಜೊತೆಜೊತೆಗೆ ಪರಮತಾಕ್ರಮಣದಿಂದ ಸ್ವಧರ್ಮವನ್ನು ರಕ್ಷಿಸಬೇಕೆಂಬ ಉದ್ಯಮವನ್ನೂ ಕಾಣುತ್ತೇವೆ.

ನಮ್ಮ ಸಮಾಜವನ್ನು ದುರ್ಗತಿಗೆ ತಳ್ಳಿದ ಮೂಢಭಾವನೆ ಮತ್ತು ಮೂಢಾಚಾರಗಳಿಂದ ಅದನ್ನು ಶುದ್ಧಿಗೊಳಿಸಿ ಉದ್ಧರಿಸಬೇಕೆಂಬ ಸುಧಾರಣಾ ಸಾಹಸವನ್ನೂ ಇದಿರುಗೊಳ್ಳುತ್ತೇವೆ.

ನಮ್ಮ ಹೊಟ್ಟೆ ಬಟ್ಟೆಗಾಗಿ ಹೆರರ ಕೈ ಹಾರೈಸುವ ದುರ್ಬಲರ ದುರವಸ್ಥೆಯಿಂದ ನಮ್ಮನ್ನು ನಾವು ಪಾರುಮಾಡಿಕೊಂಡು ಸ್ವಾವಲಂಬಿಗಳಾಗಬೇಕೆಂಬ ತೀವ್ರಪ್ರಯತ್ನವನ್ನೂ ಸಂದರ್ಶಿಸುತ್ತೇವೆ.

ಆಧುನಿಕ ಕನ್ನಡ ಕವಿತಾಸಾಹಿತ್ಯ ಸರೋವರವು ಈ ಎಲ್ಲ ಶಕ್ತಿಗಳಿಂದಲೂ ತಾಡಿತವಾಗಿ, ಅವು ಪ್ರಚೋದಿಸುವ ಭಾವಾನುಭಾವಗಳಿಂದ ತರಂಗಿತವಾಗಿ ರಮಣೀಯವಾಗಿದೆ.

ಅದು ಕಾರಣವಾಗಿಯೆ ಇಂದಿನ ಕವಿತಾಸಾಹಿತ್ಯ, ಶಿವಶರಣರ ವಚನ ಸಾಹಿತ್ಯದಲ್ಲಿಯೂ ಹರಿದಾಸರ ಭಕ್ತಿಸಾಹಿತ್ಯದಲ್ಲಿಯೂ ನಾವು ಕಾಣುವಂತೆಯೆ, ದೀರ್ಘ ಕೃತಿ ರೂಪದಲ್ಲಿರದೆ, ಭಾವಗೀತೆಗಳಾಗಿ ಪರಿಣಮಿಸಿದೆ. ಈ ರೀತಿಲಾಘವವನ್ನೆ ಕಿರುನಾಟಕ ಸಣ್ಣಕಥೆ ಲಘುಪ್ರಬಂಧಗಳಲ್ಲಿಯೂ ನಾವು ಕಾಣುತ್ತೇವೆ.

ಆದರೆ ಗದ್ಯಸಾಹಿತ್ಯದಲ್ಲಿ ಮಹಾಕಾದಂಬರಿಗಳೂ ದೊಡ್ಡ ನಾಟಕಗಳೂ ಕೆಲವಾದರೂ ಉದ್ಭವಿಸಿದಂತೆ ಪದ್ಯಸಾಹಿತ್ಯದಲ್ಲಿ ದೀರ್ಘಕಾವ್ಯ ಮಹಾಕಾವ್ಯಗಳು ಉದ್ಭವಿಸಿಲ್ಲ.* ಚಿರಕಾಲ ನಿಲ್ಲಬಹುದಾದ ದೀರ್ಘಕೃತಿಗಳು ಒಂದೆರಡಿವೆ ಎಂದು ಒಪ್ಪಬಹುದಾದರೂ ಮಹಾಕೃತಿ ಎಂಬ ಹೆಸರಿಗೆ ಅರ್ಹವಾಗುವ ಚಿರಕಾವ್ಯ ಇನ್ನೂ ಸಂಭವವಿಲ್ಲ. ಅಥವಾ ಬಯಲಿಗೆ ಬಂದಿಲ್ಲ.

ಆದರೆ ಯಾವ ಕಾಲವಾದರೂ ತನ್ನ ಸಂಸ್ಕೃತಿಯ ಸತ್ವವನ್ನೂ ಮಹತ್ವವನ್ನೂ ಬರುವ ಶತಮಾನಗಳಿಗೂ ತೋರಿ ಬೀರಬೇಕಾದರೆ ತನ್ನ ಮಹಾವ್ಯಕ್ತಿತ್ವಕ್ಕೆ ನಿಧಿಯೂ ಪ್ರತಿನಿಧಿಯೂ ಆಗುವ ಬೃಹತ್‌ಪ್ರತಿಮೆ ಒಂದನ್ನಾದರೂ ಕಡೆದು ನಿಲ್ಲಿಸಲೇ ಬೇಕಾಗುತ್ತದೆ. ಇಂದಲ್ಲ ನಾಳೆ ಆಧುನಿಕ ಕವಿತಾ ಸಾಹಿತ್ಯಕ್ಕೆ ಅಂತಹ ಮೇರುಕೃತಿ ಸಿದ್ಧವಾಗಿಯೆ ಆಗುತ್ತದೆ ಎಂಬ ನಮ್ಮ ಶ್ರದ್ಧೆ ಬಂಜೆಯಾಗದಿರಲಿ.

ಇಂದಿನ ಕವಿತೆಯ ಸದ್ಯಸ್ಥಿತಿಯ ವಿಚಾರವಾಗಿ, ಹೆಸರು ಹೇಳಲು ಕೂಡ ಅವಕಾಶವಿಲ್ಲದನಿತು ಸಂಕ್ಷೇಪವಾಗಿ, ಸಂಗ್ರಹವಾಗಿ ಹೇಳಿದ್ದೇನೆ. ಈ ಕವನ ಕೋಟಿಗಳಲ್ಲಿ ಬಹುಪಾಲು ಹೆಸರುಳಿಯದೆ ಹೋಗುತ್ತದೆ, ನಿಜ. ಆದರೆ ಅವುಗಳಲ್ಲಿ ಕೆಲವಾದರೂ ತಮ್ಮ ಹೃದಯದಲ್ಲಿ ಅಮೃತಕಲಶವಿಟ್ಟುಕೊಂಡಿವೆ ಎಂದು ನಿರ್ಮಮತೆಯಿಂದ ಹೇಳಬಹುದು.

ಅಲ್ಲದೆ, ಇನ್ನೂ ಒಂದು ಹೆಜ್ಜೆ ಮುಂಬರಿದು ಹೇಳುವುದಾದರೆ, ಹಾಗೆ ಉಳಿಯುವ ಕವನಗಳಲ್ಲಿ ಕೆಲವಾದರೂ ಜಗತ್ತಿನ ಇತರ ಸಾಹಿತ್ಯಗಳ ಸರ್ವ ಶ್ರೇಷ್ಠ ಕೃತಿಗಳ ಪಂಕ್ತಿಯಲ್ಲಿ ಹೆಗಲೆಣೆಯಾಗಿ ಮುಡಿಯೆತ್ತಿ ನಿಲ್ಲಲು ಅರ್ಹವಾಗಿವೆ ಎಂದು ಹೆಮ್ಮೆಯಿಂದ ಘೋಷಿಸಲು ಕನ್ನಡಿಗರು ಹಿಂಜರಿಯಬೇಕಾಗಿಲ್ಲ.

ಕನ್ನಡ ಕವಿತಾಸಾಹಿತ್ಯದ ಇಂದಿನಿರವಿನ ವಿಚಾರವಾಗಿ ತೂಗಿ ತೊನೆದು ಇಷ್ಟನ್ನು ಆಡಿದ ಮೇಲೆ, ಅದರ ಮುಂದಿನ ನಡೆಯನ್ನು ಕುರಿತು ಎರಡು ಮಾತು ಅನಿವಾರ್ಯವಾಗಿ ಹೇಳಿದರೆ, 'ಅನಿಷ್ಟ'ವಾದರೂ ಚಿಂತೆಯಿಲ್ಲ. ಭವಿಷ್ಯತ್ತನ್ನು ಕುರಿತು ಆಡುವುದು ಎಂತಹ ಪ್ರವಾದಿಗೂ ಸಾಹಸಕಾರ್ಯವೆ. ಎಂತಹ ಸೂಕ್ಷ್ಮ ಮೇಧಾಶಕ್ತಿಯೂ ಊಹೆಯೂ ಹುಸಿಯಾಗುವುದು ಸಾಧ್ಯ.

ಪ್ರಕೃತ ಭಾಷಣಕಾರನ ಈ ಮುಂದಣ ಊಹೆಯಂತೂ ಹುಸಿಯಾಗುವುದಾದರೆ, ಅವನಿಗಿಂತಲೂ ಹೆಚ್ಚು ಸಂತೋಷಪಡುವವರು ಬೇರೆ ಇರುವುದಿಲ್ಲ.

ಇಂದಿನ ಕಿಶೋರ ಕವಿಗಳ ಬರಹದಲ್ಲಿ ಬಹು ಪಾಲು ಅನುಕರಣವಾದರೂ ಅದು ಸ್ವಾಭಾವಿಕವಾಗಿರುವುದರಿಂದ ಚಿಂತೆಗೆ ಎಡೆಗೊಡುವಂತಹ ವಿಷಯವೇನಲ್ಲ. ಆದರೆ ಹಲವರಲ್ಲಿ ತೋರುವ ಒಂದು ಅತಿ ಲಘು ಮನೋಧರ್ಮವೂ ಸುಲಭಪ್ರಶಂಸೆಗೆ ಹಾತೊರೆಯುವ ಶ್ರಮವಂಚನಾಬುದ್ಧಿಯೂ ಮತಿಗೌರವ ಸಾಲದ ಸ್ವಾತಂತ್ರ್ಯಭ್ರಾಂತಿ ಮಾತ್ರವಾಗಿರುವ ಅತಂತ್ರತೆಯೂ ನೆಲದಲ್ಲಿ ಸರಿಯಾಗಿ ಬೇರೂರುವ ಮುನ್ನವೆ, ಪ್ರಾಚೀನ ಕವಿಮನೋಫಲವತ್‌ಕಾವ್ಯ ಕ್ಷೇತ್ರಗಳಲ್ಲಿ ಸುಪ್ರತಿಷ್ಠರಾಗಿ ಸರ್ವರಸಗ್ರಹಣಸಾಮರ್ಥ್ಯವನ್ನೂ ರಸತಪಶ್ಯಕ್ತಿಯನ್ನೂ ಸಂಪಾದಿಸುವ ಮೊದಲೆ, ಆಕಾಶಕ್ಕೆ ಬೆಳೆದು ಲೋಕನೇತ್ರ ಕೇಂದ್ರಗಳಾಗಿ ನಿಲ್ಲಬೇಕೆಂಬ ವಟೋಪಮವಾದ ವಟುಮಹಾತ್ವಾಕಾಂಕ್ಷೆಯೂ ಪ್ರಶಂಸನೀಯವಾದರೂ ಬುಡಭದ್ರತೆಗೆ ಕೊಡಲಿ ಹಾಕಿಕೊಳ್ಳುವ ಆತ್ಮವಿಧ್ವಂಸನೀಯವಾದ ಬಾಲಕಾತುರತೆಯೂ ಕನ್ನಡ ಸಾಹಿತ್ಯ ಶ್ರೇಯೋಕಾಂಕ್ಷಿಗಳಿಗೆ ಅಧೈರ್ಯ ತರುವಂತಿದೆ.

ಆದರೆ ಇದು ಸ್ವಾತಂತ್ರ್ಯ ಸಾಧನೆಯಾದ ಸಂಧಿಕಾಲ. ವ್ಯವಸ್ಥಾಂತರವು ಪ್ರಾರಂಭದಲ್ಲಿ ಅವ್ಯವಸ್ಥೆಗೆ ಎಡೆಗೊಡುವುದು ಅನಿವಾರ್ಯ. ಅದು ಪೂರೈಸಿ ಸುವ್ಯವಸ್ಥೆಗೆ ಬಂದೇ ಬರುತ್ತದೆ. ಆದ್ದರಿಂದ ನಿರಾಶೆಗೆ ಅವಕಾಶವಿಲ್ಲ. ಅಧೈರ್ಯ ಸಲ್ಲ.

ಸಿರಿಗನ್ನಡಂ ಗೆಲ್ಗೆ!

## ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ : ೧. ವ್ಯಷ್ಟಿಸಿದ್ಧಿ

"ಯುಗದೊಳ್ಪಿಗೆ ಜಗದೊಳ್ಪಿಗೆ
ನಿನ್ನೊಳ್ಪೊನೆ ನೀಂ ಗೆಲ್ಲು"
– ಶತಮಾನ ಸಂಧ್ಯೆ

'ಸ್ವಾಮಿ ವಿವೇಕಾನಂದ'ರ ಜೀವನಚರಿತ್ರೆಯನ್ನು ಕುರಿತು ನಾವು ಸಮಾಲೋಚನೆ ಮಾಡಲಿರುವ ಈ ಲೇಖನದ ಮೂರು ಭಾಗಗಳಲ್ಲಿ ಮೊದಲನೆಯದು 'ವ್ಯಷ್ಟಿಸಿದ್ಧಿ'; ಎರಡನೆಯದು 'ಸಮಷ್ಟಿಸಿದ್ಧಿಗಾಗಿ'; ಮೂರನೆಯದು 'ದೃಷ್ಟಿಯಂತೆ ಸೃಷ್ಟಿ.' ಮೊದಲನೆಯದರಲ್ಲಿ: ನರೇಂದ್ರನು ವಿವೇಕಾನಂದರಾದದ್ದು ಹೇಗೆ? ವ್ಯಕ್ತಿಜೀವನ ದೃಷ್ಟಿಯಿಂದ ಅದರ ಅರ್ಥವೇನು? ಮಹಿಮೆಯೇನು? ಪ್ರಯೋಜನವೇನು? ಎರಡನೆಯದರಲ್ಲಿ: ವಿವೇಕಾನಂದರು ಅಮೆರಿಕಾಕ್ಕೆ ಹೋದದ್ದು ಏಕೆ? ಪ್ರಪಂಚ ಜೀವನ ದೃಷ್ಟಿಯಿಂದ ಅದಕ್ಕೆ ಅರ್ಥವೇನು? ಅದರ ಬೆಲೆಯೇನು? ಅದರಿಂದ ಪ್ರಯೋಜನವೇನು?

ಮೂರನೆಯದರಲ್ಲಿ: ಅಂತಹ ಜಿಜ್ಞಾಸೆಯಿಂದ, ಅಂತಹ ಪರಿಶೀಲನೆಯಿಂದ ನಮ್ಮಲ್ಲಿ ಎಂತಹ ದೃಷ್ಟಿ ಮೂಡುತ್ತದೆ; ವ್ಯಷ್ಟಿಯಲ್ಲಿ ಹಾಗೆ ಸಿದ್ಧವಾಗುವ ದೃಷ್ಟಿ ಮುಂದಣ ಜಗತ್‌ಸಮಾಜದ ಸಮಷ್ಟಿಸೃಷ್ಟಿಗೆ ಏನು ಬೆಳಕು ನೀಡುತ್ತದೆ? ಯಾವ ತಪಸ್ಸನ್ನು ಆಶಿಸುತ್ತದೆ? ಎಂತಹ ಶಕ್ತಿಯನ್ನು ಆಹ್ವಾನಿಸುತ್ತದೆ? ಅಂತಹ ದಿವ್ಯದರ್ಶನದಿಂದ ದೀಪ್ತವಾಗುವ ವ್ಯಷ್ಟಿಸಿದ್ಧಿಯಿಂದ ಎಂತಹ ಸಮಷ್ಟಿಸಿದ್ಧಿ ಸಂಸ್ಥಾಪಿತವಾಗಿ ಸರ್ವೋದಯವಾಗಲು ಸಾಧ್ಯವಾಗುತ್ತದೆ?

ವಿವೇಕಾನಂದರ ಜೀವನ ಚರಿತ್ರೆಯನ್ನು ಕುರಿತು ಈ ಪರ್ಯಾಲೋಚನೆ ಮೂರು ಭಾಷಣಗಳಲ್ಲಿ ಹಸುಗೆಗೊಂಡಿದ್ದರೂ ಅವುಗಳನ್ನು ಒಂದೇ ತ್ರಿಕೋನದ ಬೇರೆ ಬೇರೆ ಭುಜಗಳಂತೆ ಭಾವಿಸಬೇಕು. ಏಕೆಂದರೆ ಪೂರ್ಣದೃಷ್ಟಿಗಲ್ಲದೆ ಪೂರ್ಣ ಪ್ರಯೋಜನ ಲಭಿಸುವುದಿಲ್ಲ.

ವಿವೇಕಾನಂದರ ಜೀವನ ಚರಿತ್ರೆಯನ್ನು ಓದುವ ತರುಣರು ಮೊದಲು ಬೆರಗಾಗುವುದು ಅದರ ಅದ್ಭುತಕ್ಕೆ; ಪೌರಾಣಿಕ ಎಂಬಂತಿರುವ ಅದರ ಸಾಹಸಪೂರ್ಣತೆಗೆ; ರೋಮಾಂಚನಕರವೂ ಅಲೋಕಭವ್ಯವೂ ಆಗಿ ತೋರುವ ಅದರ ಉಜ್ವಲ ವಿಭೂತಿಯ ದುರ್ದಮ್ಯಶಕ್ತಿಗೆ. ಆ ವ್ಯಕ್ತಿತ್ವದ ಪ್ರಚಂಡ ಜ್ಯೋತಿಯ ಮುಂದೆ, ಅದರ ಅಪ್ರತಿಹತವಾದ ದೈತ್ಯೋಪಮವಾದ ದಿವ್ಯಾಧಿಕಾರದ ಮುಂದೆ ಓದುಗನ ಕಿರಿಯ ವ್ಯಕ್ತಿತ್ವ ಅಪ್ಪಳಿಸಿದಂತಾಗಿ ಶರಣುಹೋಗುತ್ತದೆ. ಆದರೂ ಒಡನೊಡೆಯೆ ಅದರ ಭೀಮಶಕ್ತಿ ನಮ್ಮ ನಾಡಿನಾಡಿಗಳಲ್ಲಿ ಹರಿದು ಅಲ್ಲಿಯ ದುರ್ಬಲತೆ ಅಲ್ಪತೆಗಳನ್ನೆಲ್ಲ ಕೊಚ್ಚಿ ನಮ್ಮ ಹೃದಯಗಳಲ್ಲಿಯೂ ತನ್ನ ಮಹಾಶಕ್ತಿಯನ್ನು ಉದ್ದೀಪಿಸಿ, ನಮ್ಮನ್ನೂ ತನ್ನತನಕ್ಕೆ ಏರಿಸುತ್ತಿರುವ ದಿವ್ಯಾನುಭವವೂ ಸ್ಫುರಿಸುತ್ತದೆ.

ಅಂತಹ ಶಕ್ತಿ ನರೇಂದ್ರನಲ್ಲಿ ಹೇಗೆ ಆವಿರ್ಭಾವವಾಯಿತು? ಇತರರಂತೆ ಕಾಲೇಜಿನ ಸಾಮಾನ್ಯ ವಿದ್ಯಾರ್ಥಿಯಾಗಿದ್ದ ಆತನಲ್ಲಿ ಜಗತ್‌ಕಂಪನಕಾರಿಯಾಗುವ ಶಕ್ತಿ ಹೇಗೆ ಉದ್ಭವಿಸಿತು? ಅಂತಹ ಎಳವಯಸ್ಸಿನಲ್ಲಿಯೆ ಆ ಅದ್ಭುತ ಮೇಧಾಶಕ್ತಿ, ಆ ಆಧ್ಯಾತ್ಮಿಕ ಓಜಸ್ಸು, ಆ ನಿರ್ಝರೋಪಾಮ ವಾಗ್ಮಿತೆ, ಆ ಧೀರೋದಾತ್ತ ಸಿಂಹಧೈರ್ಯ, ಆ ಸರ್ವರಹಸ್ಯ ಹೃದಯಭೇದಿಯಾದ ಯೋಗದೃಷ್ಟಿ, ನಿಶ್ಚಲ ನಿರ್ವಿವಾದವಾದ ಆತ್ಮಾನುಭವ ಇವೆಲ್ಲ ಆತನಿಗೆ ದೊರೆಕೊಂಡುದು ಹೇಗೆ?

ಈ ಪರಿಶೀಲನೆ ಇಂದಿನ ತರುಣರಿಗಂತೂ ಅತ್ಯಗತ್ಯ. ಏಕೆಂದರೆ "ಸ್ವಪ್ರಯತ್ನದಿಂದಲೇ ಸರ್ವವನ್ನೂ ಸಾಧಿಸುತ್ತೇನೆ" ಎಂಬ ಅಹಂಕಾರ ಮೂಲವಾದ ಸಾಹಸ ಗರ್ವದ ಹುಲಿ ಒಂದುಕಡೆ; "ನನ್ನಿಂದ ಏನಾಗುತ್ತದೆ? ಎಲ್ಲ ಹಣೆಯ ಬರಹ; ಪಡೆದುಕೊಂಡು ಬಂದಷ್ಟು ಲಭಿಸುತ್ತದೆ; ನಾನು ಎಷ್ಟು ಒದ್ದಾಡಿದರೂ ದೇವರು ಅಸ್ತು ಎನ್ನದಿದ್ದರೆ ಏನೂ ಆಗುವುದಿಲ್ಲ" ಎಂಬ ತಮಃಪ್ರಧಾನವೂ ಆಲಸ್ಯ ಮೂಲವೂ ಆದ ಹೆಂಬೇಡಿತನದ ದರಿ ಮತ್ತೊಂದು ಕಡೆ. ಹೀಗೆ ಅಪಾಯವೆರಡರ ನಡುವೆ ಅನಾಹುತದ ಅಂಚಿನಲ್ಲಿ ಓಡಾಡುತ್ತದೆ ಅನೇಕ ತರುಣ ಮನಸ್ಸು.

ವಿವೇಕಾನಂದರ ಜೀವನ ಚರಿತ್ರೆಯನ್ನು ಎಚ್ಚರಿಕೆಯಿಂದ ಗಮನಿಸಿದರೆ ಹುಲಿಯ ಮೇಲೆಯೆ ಏರಿ ದರಿಯನ್ನು ನೆಗೆಯುವ ಮಹೋಪಾಯವನ್ನು ಸಂದರ್ಶಿಸುತ್ತೇವೆ.

ವಿವೇಕಾನಂದರಲ್ಲಿ ಪ್ರಕಾಶವಾಗಿರುವ ಸರ್ವಮಹತ್ತನೂ ನರೇಂದ್ರನಲ್ಲಿ ಬೀಜರೂಪವಾಗಿ ಸಂಸ್ಕಾರರೂಪವಾಗಿ ಇತ್ತೆಂದು ಒಪ್ಪಿಕೊಂಡರೂ ಅದು ವ್ಯಕ್ತಿಯ ಸಾಧನೆಯೂ ಅದಕ್ಕೆ ಸಂವಾದಿಯಾದ ಗುರುಶಕ್ತಿಯ ಕೃಪೆಯೂ ಇಲ್ಲದೆ ವ್ಯಕ್ತವಾಗಲಾರದು ಎಂಬುದು ಸ್ಪಷ್ಟವಾಗುತ್ತದೆ. ನೆಲ ನೀರು ಗಾಳಿಗಳ ಗುರುಕೃಪೆಯಿದ್ದರೆ ತಾನೆ, ಬೀಜದಲ್ಲಿ ಗುಪ್ತವಾಗಿರುವ ವೃಕ್ಷತ್ವ ತನ್ನ ಸುಪ್ತಿಯಿಂದ ಎಚ್ಚತ್ತು ಬೆಳೆಯಲು ಸಾಧ್ಯವಾಗುತ್ತದೆ? ನಮ್ಮೆಲ್ಲರಲ್ಲಿಯೂ ಗುಪ್ತವಾಗಿರುವ ಆ ಸುಪ್ತಶಕ್ತಿ ಎಚ್ಚರಗೊಳ್ಳಬೇಕಾದರೆ ಅಂತಹ ಗುರುಕೃಪಾ ರೂಪವಾದ ದೈವೇಚ್ಛೆಯ ಬಲ ಅತ್ಯಂತ ಅವಶ್ಯಕ. ಯಾವ ರೂಪದಲ್ಲಿಯೆ ಒದಗಲಿ, ಯಾವ ರೀತಿಯಲ್ಲಾದರೂ ಕೆಲಸಮಾಡಲಿ, ಅಂತಹ ಗುರುಕೃಪೆಯ ಆಶೀರ್ವಾದದ ಬಲಕ್ಕಾಗಿ ನಾವು ಸಾಧನೆ ಮಾಡದಿದ್ದರೆ ನಮ್ಮ ಅಂತಃಶಕ್ತಿ ಸಮರ್ಪಕವಾಗಿ ಸಂಪೂರ್ಣವಾಗಿ ಶ್ರೀಯುಕ್ತವಾಗಿ ಮೈದೋರಲಾರದು. ಒಮದು ವೇಳೆ ಅವಿನಯಶೀಲವಾದ ಅಹಂ ಪ್ರಯತ್ನದಿಂದ ಸ್ವಪ್ರತಿಷ್ಠೆಯ ಉದ್ದೇಶಕ್ಕಾಗಿ ಹೊರಹೊಮ್ಮಿದರೂ ಬಂಡೆಯ ಮೇಲಿರುವ ಅಲ್ಪಮೃತ್ತಿಕೆಯಲ್ಲಿ ಮೊಳೆಯುವ ಗಿಡದಂತೆ ಹ್ರಸ್ವವೂ ಕುಬ್ಜವೂ ವಿಕೃತವೂ ಆಗಿ ವ್ಯರ್ಥವಾಗುವುದರಲ್ಲಿ ಸಂದೇಹವಿಲ್ಲ.

ಸ್ವಾಮಿ ವಿವೇಕಾನಂದರ ಪಕ್ಕದಲ್ಲಿ ಶ್ರೀರಾಮಕೃಷ್ಣ ಪರಮಹಂಸರನ್ನು ನಿಲ್ಲಿಸಿ ನೋಡುವ ತರುಣದೃಷ್ಟಿಗೆ ದಕ್ಷಿಣೇಶ್ವರದ ಗುಡಿಯ ಪೂಜಾರಿ ನಗೆಪಾಟಲಾಗಿ ಕಾಣಬಹುದು. “ಅಯ್ಯೋ, ಈ ಕಾಡು ಕಾಡಾದ ಗೊಡ್ಡು ಪೂಜಾರಿಯಿಂದ ಚಿಕಾಗೊ ಸರ್ವಧರ್ಮ ಸಮ್ಮೇಲನದಲ್ಲಿ ನಿಂತು ಭಾಷಣಮಾಡಿ ಜಗತ್ತನ್ನೆ ಬೆರಗುಗೊಳಿಸಿ ಅಡಿಗೆರಗಿಸಿದ ಈ ಭೀಮವ್ಯಕ್ತಿ ಏನನ್ನು ತಾನೆ ಪಡೆದಿದ್ದಾನು?” ಎಂಬ ಉದ್ಗಾರ ಹೊಮ್ಮಬಹುದು. ಅಂತಹ ಮನೋಧರ್ಮ ತಾರುಣ್ಯಕ್ಕೆ ಸ್ವಾಭಾವಿಕವಾದದ್ದೆ. ಬಹಿರ್‌ವೈಭವಕ್ಕೆ ಬೆರಗಾಗಿ ಶರಣಾಗುವುದೇ ಅದರ ಲಕ್ಷಣ. ರವೀಂದ್ರರು ಹೇಳಿದಂತೆ “ಗಿರಲು ಮೀಸೆ ಬಿಟ್ಟು, ರಂಗಿನ ರುಮಾಲಿಟ್ಟು, ಹೊಳೆಯುವ ಹಿತ್ತಾಳೆಯ ಬಿಲ್ಲೆಯ ಕೆಂಪು ದವಾಲಿ ತೊಟ್ಟು, ದಂಡಿನ ಉಡುಪು ಉಟ್ಟು, ಬಾಗಿಲು ಕಾಯುತ್ತಾ ನಿಮಿರಿ ನಿಲ್ಲುವ ದ್ವಾರ ಪಾಲಕನಿಗೆ ಕೊಡುವ ಗೌರವವನ್ನು ಒಳಗಿರುವ ಸಾಧಾರಣವಸನಧಾರಿಯಾದ ಅಧಿಕಾರಿಗೆ ಅದು ಕೊಡಲಾರದು.” ಕಾರಣ, ನಿಜವಾದ ಶಕ್ತಿಯ ಸ್ಥಾನದ ಅರಿವಿರುವುದಿಲ್ಲ ತಾರುಣ್ಯಸಹಜವಾದ ಬಹಿರ್ ಮುಖತೆಗೆ. ಉತ್ಸವಮೂರ್ತಿಯಂತಿರುವ ವಿವೇಕಾನಂದರ ವ್ಯಕ್ತಿತ್ವಕ್ಕೆ ಡಂಗುಬಡಿದುಹೋಗುವ ತರುಣ ಹೃದಯ ಪರಮಹಂಸರಿಂದ ಮೊದಮೊದಲು ಆಕರ್ಷಿತವಾಗುವುದಿಲ್ಲ. ಅನುಭವ ವಿಸ್ತಿರಸಿ, ದೃಷ್ಟಿ ಗಂಭೀರವಾಗಿ, ಸಂಸ್ಕಾರ ಹೆಚ್ಚು ಹೆಚ್ಚು ಪಕ್ವವಾಗಿ, ಪ್ರಾಣಮಯದ ರಜಸ್ಸು ಮನೋಮಯದ ಸತ್ತ್ವದಿಂದ ಪಳಗಿದಂತೆಲ್ಲ ಒಯ್ಯೊಯ್ಯನೆ ಅರಿವಾಗುತ್ತದೆ ಆ ಒಳನನ್ನಿ.

ಮೇಲೆ ಹೇಳಿದ ತಾರುಣ್ಯದ ದೃಷ್ಟಿಯಿಂದಲೆ ನರೇಂದ್ರನೂ ಶ್ರೀರಾಮಕೃಷ್ಣರ ಬಳಿಗೆ ಹೋದದ್ದು. ಆದರೆ “ದೇವಗಂಗೆಯ ಮಹಾ ಮಕರವು ನೀರು ಕುಡಿಯಲು ಬಂದ ಕಿಶೋರ ಕೇಸರಿಯನ್ನು ಭದ್ರವಾಗಿ ಹಿಡಿದು ಕೊಂಡಿತು. ಸಿಂಹದ ಮರಿ ತಪ್ಪಿಸಿಕೊಳ್ಳಲು ಎಷ್ಟು ಪ್ರಯತ್ನಪಟ್ಟರೂ ಪ್ರಯೋಜನವಾಗಲಿಲ್ಲ. ಒಮ್ಮೆ ಕಚ್ಚಿದ ಮಕರಕ್ಕೆ ತನ್ನ ಕೊಂಕುದಾಡೆಗಳನ್ನು ಕಳಚಿ ಬಿಚ್ಚಿ ಬಾಯ್ದೆರೆದು ಆ ಸಿಂಹ ಶಾಬಕವನ್ನು ಬಿಟ್ಟುಬಿಡಲೂ ಸಾಧ್ಯವಾಗಲಿಲ್ಲ. ಹೋರಾಡುತ್ತಾ ಹೋರಾಡುತ್ತಾ ಎರಡೂ ಅಮೃತನದಿಯ ಪವಿತ್ರ ತೀರ್ಥದಲ್ಲಿ ಮಗ್ನವಾಗುವುದನ್ನು ನೋಡುತ್ತೇವೆ.”

[1]

ಇಹಲೋಕದ ವ್ಯಾಪಾರಗಳನ್ನು ವಿವರಿಸುವುದಕ್ಕೆ ಲೌಕಿಕ ಕಾರಣಗಳೆ ಸಾಕು ಎಂಬ ದೃಷ್ಟಿಯೂ, ಬೇರೆ ಲೋಕಗಳಾಗಲಿ ಅಥವಾ ಅವುಗಳಿಗೆ ಸಂಬಂಧಿಸಿದ ಅಲೌಕಿಕ ಕಾರಣಗಳಾಗಲಿ ಅನಾವಶ್ಯಕ, ಆದ್ದರಿಂದ ಇಲ್ಲ, ಎಂಬ ದೃಷ್ಟಿಯೂ ಆಧುನಿಕ ಭೌತವಿಜ್ಞಾನಕ್ಕೆ ಮೂಲಭೂತವಾಗಿವೆ. ಆದರೆ ಸ್ವಾಮಿ ವಿವೇಕಾನಂದ ಶ್ರೀರಾಮಕೃಷ್ಣರ ಸಂಬಂಧವನ್ನೂ ಅದರ ಅಲೋಕ ಸಾಮಾನ್ಯವಾದ ರೀತಿಯನ್ನೂ ತತ್ಸಂಬಂಧ ಸಮೀಕ್ಷೆಯಿಂದ ನಮ್ಮ ಚೇತನದಲ್ಲಿ ಸ್ಫುರಿಸುವ ಧ್ವನಿಸಂಪತ್ತಿಯನ್ನೂ ಅನುಭವಿಸಿ ಅರಿಯುವ ಶ್ರದ್ಧೆಗೆ ಭಿನ್ನದೃಷ್ಟಿ ಒದಗುವುದು ಅನಿವಾರ್ಯ. ಇಲ್ಲಿ ನಡೆಯುವ ವ್ಯಾಪಾರಗಳಿಗೆ ಇಲ್ಲಿಯ ಕಾರಣಗಳಿಗೆ ಅತೀತವಾದ ಅನ್ಯಲೋಕ ಕಾರಣಗಳೂ ಇರಬಹುದೆಂಬ ಅನುಮಾನಕ್ಕೆ ಪ್ರತ್ಯಕ್ಷ ಪ್ರಮಾಣ ದೊರೆತಂತಾಗಿದೆ ಆ ಗುರುಶಿಷ್ಯ ಸಂಬಂಧದಲ್ಲಿ.

ವಿವೇಕಾನಂದರ ಜೀವನ ಅರ್ಥಪೂರ್ಣವಾಗಬೇಕಾದರೆ, ಆ ಜೀವನದ ಪೂರ್ಣಾರ್ಥ ನಮಗೆ ಹೊಳೆಯಬೇಕಾದರೆ ಶ್ರೀ ರಾಮಕೃಷ್ಣರ ಜೀವನ ಕಥೆಯ ಹೃದಯ ಪರಿಚಯವಿಲ್ಲದೆ ಸಾಧ್ಯವಿಲ್ಲ. ಸ್ವಾಮಿ ವಿವೇಕಾನಂದರೆ ಹೇಳಿರುವಂತೆ “ಈ ನವಯುಗ ಧರ್ಮಪ್ರವರ್ತಕ ಭಗವಾನ್ ಶ್ರೀ ರಾಮಕೃಷ್ಣನು ಹಿಂದೆ ಅವತರಿಸಿದ ಯುಗಧರ್ಮಪ್ರವರ್ತಕ ಸಮೂಹದ ಪುನಃ ಸಂಸ್ಕೃತ ಮಹಾ ಪ್ರಕಾಶವಾಗಿರುತ್ತಾನೆ.” ವಿವೇಕಾನಂದರು ಆ ಬೃಹಚ್ಛಕ್ತಿಯ ಒಂದು ಬಾಹು; ಆ ಪ್ರಕಾಶದ ಒಂದು ಕಿರಣ. ಆ ಬಾಹುವಿನಲ್ಲಿ ಮೈದೋರಿದ ಬಲವನ್ನು ಅರ್ಥಮಾಡಿಕೊಳ್ಳಬೇಕಾದರೆ ಅದನ್ನು ಚೋದಿಸಿದ ಆ ಮೂಲ ಶಕ್ತಿಗೇ ನಾವು ಹೋಗಬೇಕಾಗುತ್ತದೆ. ಅನಂತರಶಕ್ತಿಗಳ ರಹಸ್ಯವಿರುವುದು ಆದಿಶಕ್ತಿಯಲ್ಲಿ.**[2]**

ಪರಮಹಂಸರು ನರೇಂದ್ರನ ಆಗಮನಕ್ಕಾಗಿ ಕಾತರಿಸಿ ಕುದಿಯುತ್ತಿದ್ದರು; ನಿರೀಕ್ಷಿಸುತ್ತಿದ್ದರು; ಆದ್ದರಿಂದಲೆ ಕಂಡೊಡನೆ ಗುರುತಿಸಿದರು. ನರೇಂದ್ರನ ಸ್ವಸ್ವರೂಪದ ಮೇಲೆ ಪರ್ವತಪರ್ವತಗಳಾಗಿ ಹಬ್ಬಿ ಹರಡಿ ಬಿದ್ದಿದ್ದ ಆವರಣದ ಚಪ್ಪಡಿಗಳನ್ನು ತಮ್ಮ ವಿದ್ಯುತ್‌ಸ್ಪರ್ಶದಿಂದ ಮುಗಿಲುಗೈದು ಚದರಿಸಿ, ತಾವು ಸಮಾಧಿಯಲ್ಲಿ ಕಂಡ ‘ದರ್ಶನ’ದ ಸತ್ಯಾಂಶವನ್ನು ಸ್ಥಿರಪಡಿಸಿಕೊಂಡರು.**[3]** ನರೇಂದ್ರನು ಮಾತ್ರ ಗುರುವಿನ ಆ ವಿಚಿತ್ರ ವ್ಯಾಪಾರಗಳನ್ನೆಲ್ಲ ಒಮ್ಮೊಮ್ಮೆ ಕುತೂಹಲದಿಂದ, ಒಮ್ಮೊಮ್ಮೆ ಭಯಮಿಶ್ರಿತವಾದ ಆಶ್ಚರ್ಯದಿಂದ ವೀಕ್ಷಿಸುತ್ತಿದ್ದನೆ ಹೊರತು ಹೆಚ್ಚಿನ ಸಡ್ಡೆಗೆ ಹೋಗಲಿಲ್ಲ. ಪರಮಹಂಸರು ಸರ್ವಸಿದ್ಧಿಗಳನ್ನು ಪಡೆದ ಯೋಗೀಶ್ವರರಾಗಿದ್ದರೂ ಅವರು ಕಲ್ಲನ್ನು ರೊಟ್ಟಿ ಮಾಡುವ ಅಥವಾ ಕಬ್ಬಿಣವನ್ನು ಚಿನ್ನಮಾಡುವ ಪವಾಡಗಳ ಗೋಜಿಗೆ ಹೋಗಲಿಲ್ಲ. ಪವಾಡಗಳನ್ನೂ ಪವಾಡಮಾಡುವವರನ್ನೂ ಕೀಳಾಗಿ ಭಾವಿಸಬೇಕೆಂದು ಹೇಳುತ್ತಿದ್ದರು. ಆದರೆ ನರೇಂದ್ರನಿಂದ ವಿವೇಕಾನಂದರನ್ನು ಸೃಷ್ಟಿಸುವ ಆ ಒಂದು ಜಗದ್ಭವ್ಯವಾದ ದಿವ್ಯ ಲೀಲಾಕಾರ್ಯದಲ್ಲಂತೂ ತಮ್ಮ ವ್ರತನಿಷ್ಠೆಯನ್ನು ಲೋಕಸಂಗ್ರಹಕ್ಕಾಗಿ ಉಲ್ಲಂಘಿಸುವ ಕೃಪೆ ಮಾಡಿದ್ದಾರೆಂದು ನಾವು ಒಪ್ಪಲೇಬೇಕಾಗುತ್ತದೆ. ಅವರು ನರೇಂದ್ರನನ್ನು ವಿವೇಕಾನಂದರನ್ನಾಗಿ ಮಾರ್ಪಡಿಸಿದುದು ತತ್ತ್ವಶಾಸ್ತ್ರೋಪದೇಶದಿಂದಲ್ಲ. ತತ್ತ್ವಶಾಸ್ತ್ರಗಳ ಒಣಕಟ್ಟಿಗೆಗಳ ಹೊರೆಗಳನ್ನು ಪರಮಹಂಸರಿಗೆ ಬೇಕಾಗಿದ್ದರೆ ನರೇಂದ್ರನೇ ಬಂಡಿಗಟ್ಟಲೆ ಕೊಡಬಲ್ಲವನಾಗಿದ್ದನು. ಅವನು ಗುರುವಿನಲ್ಲಿಗೆ ಹೋದುದು ಆ ಒಣಕಟ್ಟಿಗೆಗಾಗಿ ಅಲ್ಲ; ಅನುಭವಪೂರ್ಣವಾದ ಸತ್ಯಸಾಕ್ಷಾತ್ಕಾರದ ಜೀವಂತ ವೃಕ್ಷಕ್ಕಾಗಿ. ಆ ಪುಲಕಕಾರಿಯಾದ ಪುಣ್ಯಕಥೆಯನ್ನು ಒದಿದರೂ

ಸಾಕು ಅದರ ಭವ್ಯತೆ ಹೃದಯಸ್ಯಂದಿಯಾಗಿ ನಮ್ಮ ಸಮಗ್ರ ಚೇತನದಲ್ಲಿಯೂ ಸ್ಪಂದಿಸುತ್ತದೆ.**[4]**

ಲೋಕ ಸಂಗ್ರಹಕ್ಕಾಗಿ, ಎಂದರೆ ‘ಸಮಷ್ಟಿಸಿದ್ಧಿ’ಗಾಗಿ ಶ್ರೀ ರಾಮಕೃಷ್ಣರು ನರೇಂದ್ರನಿಗೆ ‘ವ್ಯಷ್ಟಿಸಿದ್ಧಿ’ಯನ್ನು ದಯಪಾಲಿಸಿದರು. ಏಕೆಂದರೆ ಪರಿಣಾಮ ಕ್ರಮದ ಈ ಸೃಷ್ಟಿಯಲ್ಲಿ ವ್ಯಷ್ಟಿಯ ಮುಖಾಂತರವೇ ಸಮಷ್ಟಿಯ ಉತ್‌ಕ್ರಮಣವೂ ಉದ್ಧಾರವೂ ಆಗಬೇಕಾಗಿದೆ. ವ್ಯಷ್ಟಿಯ ಪರಿವರ್ತನೆಯಾಗದೆ, ವ್ಯಷ್ಟಿಯ ಮುಖಾಂತರವಾಗಿ ಪರಿಣಾಮಪಥಪ್ರದೇಶ ಮಾಡದೆ, ಸಿದ್ಧವ್ಯಷ್ಟಿಯಾದವನು ಸಮಷ್ಟಿಯ ಉದ್ಧಾರಕ್ಕಾಗಿ ತನ್ನನ್ನು ತಾನು ಸಮರ್ಪಿಸಿಕೊಳ್ಳದೆ, ಸಮಷ್ಟಿಯಲ್ಲಿ ಯಾವ ಪರಿವರ್ತನೆಯೂ ಮೊಳೆತು ಬೆಳೆದು ಸುಪ್ರತಿಷ್ಠಿತವಾಗಲಾರದು. ಆದ್ದರಿಂದಲೆ ಲೋಕೋದ್ಧಾರಮಾಡುವುದಕ್ಕೆ ಹೊರಡುವ ಮೊದಲು ಪ್ರತಿಯೊಬ್ಬ ವ್ಯಕ್ತಿಯೂ ತನ್ನನ್ನು ತಾನು ನಿಜವಾಗಿಯೂ ‘ಉದ್ಧಾರ’ ಮಾಡಿಕೊಳ್ಳಬೇಕು. ಬೆಳಕು ನೀಡುವ ಮುನ್ನ ಬೆಳಕು ಪಡೆಯಬೇಕು. ತನ್ನ ಪ್ರಸಿದ್ಧಿಯೇ ಜಗತ್ಕಲ್ಯಾಣಸಿದ್ಧಿ ಎಂಬ ಭ್ರಾಂತಿ ಹಳ್ಳಿಯೊಳಿದ್ದರೇನು**?** ದಿಳ್ಳಿಯೊಳಿದ್ದರೇನು**?** ಅಂತಹ ಕೀರ್ತಿಶನಿಯಿಂದ ಎಂದಿಗೂ ಸಿದ್ಧಿಸದು ಜಗತ್‌ಶಾಂತಿ. ಇಂದು ಮುಂದುವರಿಯಲೆಳಸುವ ನಾವು ಅಂದು ನರೇಂದ್ರನಿಟ್ಟ ತಪ್ಪು ಹೆಜ್ಜೆಗಳನ್ನೆಲ್ಲ ಮತ್ತೆಯೂ ಇಡಬೇಕಾಗಿಲ್ಲ. ಆತನು ನಮಗಾಗಿ ಗೆದ್ದುಕೊಟ್ಟಿರುವ ಸತ್ಯವನ್ನು ಸ್ವೀಕರಿಸಿ ಮುನ್ನುಗ್ಗಬೇಕಾದುದೆ ನಮ್ಮ ಕರ್ತವ್ಯ.

ಯುಗಯುಗಯುಗದತಿಕಷ್ಟದಿ ಜಡವನು ಜಯಿಸಿತು ಜೀವ;
ಬಹುತಪದಿಂದಾ ಜೀವಕೆ ಬಂದುದು ಮಾನವ ಭಾವ.
ಯುಗಯುಗ ಬೇಕೀ ಮನುಜತೆ ಮಾನವತನವನೆ ಮೀರಿ
ದೇವತ್ವವ ಸಂಪಾದಿಸೆ ಸಂಯಮ ಸ್ವರ್ಗಕ್ಕೇರಿ!

ಯುಗಚಕ್ರವ ಮುನ್ನೂಂಕಲು ಇದೆ ಗುರುದೇವನ ಶಕ್ತಿ;
ನಮಗಿಂದಿಗೆ ಬೇಕಾದುದು ಉದ್ಧಾರದ ಆಸಕ್ತಿ.
ಮತಿವಂತನೆ, ಓ ಮಾನವ, ಕಟಿ ಬಂಧನಗೈ. ನಿಲ್ಲು:
ಯುಗದೊಳ್ಳಿಗೆ ಜಗದೊಳ್ಳಿಗೆ ನಿನ್ನೊಳ್ಳನೆ ನೀಂ ಗೆಲ್ಲು!

---

[1] ಸ್ವಾಮಿ ವಿವೇಕಾನಂದರ ಗ್ರಂಥದ ‘ಅನುಭೂತಿ’ ಎಂಬ ೨ನೆಯ ಅಧ್ಯಾಯ ನೋಡಿ
[2] ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಮಾಲೆಯ ಶ್ರೀ ರಾಮಕೃಷ್ಣ ಪರಮಹಂಸ ಎಂಬ ಗ್ರಂಥದಲ್ಲಿ ‘ಜೈತ್ರಯಾತ್ರೆ’ ಎಂಬ ೩ನೆಯ ಅಧ್ಯಾಯವನ್ನು ಓದಿ.
[3] ಶ್ರೀ ರಾಮಕೃಷ್ಣ ಪರಮಹಂಸ. ಅಧ್ಯಾಯ ೬, ದೇವಶಿಲ್ಪಿ
[4] ಸ್ವಾಮಿ ವಿವೇಕಾನಂದ. ಅಧ್ಯಾಯ ೫, ‘ಮುಕ್ತಿರಾಹು’ ಓದಿ.
[5] ಸ್ವಾಮಿ ವಿವೇಕಾನಂದ: ಅನುಭೂತಿ. ಪುಟ ೯೮-೯೯.
[6] ಸ್ವಾಮಿ ವಿವೇಕಾನಂದ: ಅನುಭೂತಿ. ಪುಟ ೯೯.

[7] ಸ್ವಾಮಿ ವಿವೇಕಾನಂದ: ‘ಪರಿವ್ರಾಜಕ ಸನ್ಯಾಸಿ’ ಮತ್ತು ‘ಕಡಲಿನಾಚೆಗೆ’ ಎಂಬ ೯. ೧೦ನೆಯ ಅಧ್ಯಾಯಗಳನ್ನು ನೋಡಿ.
[8] ‘ಸ್ವಾಮಿ ವಿವೇಕಾನಂದ’, ಪು. ೧೪೭.

# ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ : ೨. ಸಮಷ್ಟಿ ಸಿದ್ಧಿಗಾಗಿ

‘ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ’

ಶ್ರೀ ಗುರುಕೃಪೆಯಿಂದಲೂ ಸ್ವಂತ ಸಾಧನೆಯಿಂದಲೂ ನರೇಂದ್ರನಿಗೆ ವ್ಯಷ್ಟಿಸಿದ್ಧಿಯೇನೊ ಲಭಿಸಿತು. ಅಂತಹ ಆತ್ಮಸಾಕ್ಷಾತ್ಕಾರಕ್ಕಾಗಿ ಆತನ ಹೃದಯತೃಷ್ಣೆ ಅಸೀಮವ್ಯಾಕುಲವಾಗಿತ್ತು. ಬದುಕಿನ ಸರ್ವಸಾರ್ಥಕತೆಯೂ ಸತ್ಯ ಸಾಕ್ಷಾತ್ಕಾರದಲ್ಲಿ; ಅದಿಲ್ಲದೆ ಬದುಕು ವ್ಯರ್ಥ; ಎಂಬ ದೃಢನಿಶ್ಚಯ ಬುದ್ಧಿಯಿಂದ ಅಂತಹ ಸತ್ಯಕ್ಕಾಗಿ ಶಾಂತಿಗಾಗಿ ಆನಂದಕ್ಕಾಗಿ ಅವನು ಕುದಿಯುತ್ತಿದ್ದನು. ಶ್ರೀ ರಾಮಕೃಷ್ಣರು ತಮ್ಮ ಸ್ಪರ್ಶಮಾತ್ರದಿಂದ ಆತನಲ್ಲಿ ಎರಡು ಮೂರು ಸಾರಿ ಪ್ರಚೋದಿಸಿದ ದಿವ್ಯಾನುಭವಗಳಿಂದ ಆತನಲ್ಲಿದ್ದ ಸಂದೇಹ ತಿಮಿರ ಸಂಪೂರ್ಣವಾಗಿ ತೊಲಗಿತಾದರೂ ರುಚಿಯರಿತ ತೃಷ್ಣೆ ಆ ಅನುಭವ ಪಾರಮ್ಯದ ನೈರಂತರ್ಯಕ್ಕಾಗಿ ಹಾತೊರೆಯತೊಡಗಿತು. ಅದಕ್ಕಾಗಿ ಗುರು ಹೇಳಿದಂತೆ ಸಾಧನೆ ಮಾಡಿದನು. ಅದು ತನಗಿನ್ನೂ ದೊರೆಯಲಿಲ್ಲವಲ್ಲಾ ಎಂದು ಒದ್ದಾಡಿದರು. ಗುರುದೇವನನ್ನು ಕಾಡಿ ಕಾಡಿ ಪೀಡಿಸಿದರು. ಗುರು “ಕಾಲ ಬಂದಾಗ ಎಲ್ಲವೂ ದೊರೆಯುತ್ತದೆ” ಎಂದು ಸಮಾಧಾನ ಹೇಳಿದರು. ಅಂತಹ ಕಾಲವೂ ಒದಗಿತು. ಕಾಶೀಪುರದ ತೋಟದಲ್ಲಿ ಧ್ಯಾನಮಗ್ನನಾಗಿದ್ದ ನರೇಂದ್ರನಿಗೆ ಬ್ರಹ್ಮಸಾಕ್ಷಾತ್ಕಾರಾನುಭವವನ್ನು ಕೃಪೆಗೈಯುವ ನಿರ್ವಿಕಲ್ಪ ಸಮಾಧಿಯೂ ಸಿದ್ಧಿಸಿತು.

[5]
ಅಂತಹ ಸಿದ್ಧಿ ತನಗೆ ತಾನೆ ಮಹೋನ್ನತವಾದುದು; ಬದುಕಿನ ಕೃತಜ್ಞತೆಯ ಅನುಭವವನ್ನು ಪೂರ್ಣವಾಗಿ ತಂದುಕೊಡತಕ್ಕುದು. ಅದಕ್ಕೆ ಅದೇ ಪರಮ ಪ್ರಯೋಜನ. ವ್ಯಕ್ತಿಗೆ ಅದಕ್ಕಿಂತಲೂ ಹೆಚ್ಚಿನ ಅನ್ಯಪ್ರಯೋಜನ ಬೇರಾವುದೂ ಇಲ್ಲ. ಅದನ್ನು ಪಡೆದ ಮೇಲೆ ಪಡೆಯತಕ್ಕದ್ದು ಇನ್ನೇನೂ ಇರುವುದಿಲ್ಲ. ಅದು ಪರಮ ಮೌನ; ಪರಮ ನೈಷ್ಕರ್ಮ್ಯ; ಸರ್ವಕರ್ತವ್ಯ ವಿರಾಮ. ಆದ್ದರಿಂದಲೆ ಆ ಸಿದ್ಧಿಯನ್ನು ಪಡೆದ ಸಾಧಕರು ಜೀವನರಂಗದಿಂದ ಸಂಪೂರ್ಣವಾಗಿ ವಿರಕ್ತರಾಗುತ್ತಾರೆ. ನರೇಂದ್ರನಿಗೂ ಅಂತಹ ಪೂರ್ಣ ವಿರಾಮದ ಆಸಕ್ತಿ ಸ್ವಾಭಾವಿಕವಾಗಿಯೆ ಮೂಡಿದುದನ್ನು ಕಾಣುತ್ತೇವೆ.

ನರೇಂದ್ರನೊಮ್ಮೆ ಗುರುದೇವನಿಗೆ ಹೇಳಿದನು: “ಗುರುದೇವ, ನಿಮ್ಮಂತೆ ನಾನೂ ಸರ್ವದಾ ನಿರ್ವಿಕಲ್ಪಸಮಾಧಿಯಲ್ಲಿ ಮುಳುಗಿರಬೇಕೆಂಬುದೇ ನನ್ನ ಮಹದಭಿಲಾಷೆ!” ಅದನ್ನು ಕೇಳಿ ಸ್ವಲ್ಪ ಅಧೀರರಾಗಿ ಪರಮಹಂಸರು ಹೇಳಿದರು: “ಮತ್ತೆ ಮತ್ತೆ ಅದೇ ಕತೆ! ನಿನಗೆ ನಾಚಿಕೆಯಾಗದೆ? ಇಷ್ಟು ಕಾಲ ಮಹಾವಟವೃಕ್ಷದಂತೆ ಬೆಳೆದಿರುವೆ. ಸಾವಿರಾರು ಜನರಿಗೆ

ಶಾಂತಿಛಾಯೆಯನ್ನು ನೀನು ನೀಡಬೇಕಾಗಿದೆ. ಅದನ್ನು ಬಿಟ್ಟು ಸ್ವಂತ ಮುಕ್ತಿಗಾಗಿ ಬಾಯಿ ಬಾಯಿ ಬಿಡುತ್ತೀಯಲ್ಲಾ! ಎಂತಹ ಕ್ಷುದ್ರ ಆದರ್ಶ ನಿನ್ನದು!"

ಅಭಿಮಾನ ಕೆಣಕಿ ನರೇಂದ್ರ ಹೇಳಿದನು: "ನಿರ್ವಿಕಲ್ಪಸಮಾಧಿ ದೊರಕುವವರೆಗೂ ನನ್ನ ಮನಸ್ಸಿಗೆ ಶಾಂತಿಯಿರದು. ಅದು ದೊರಕುವವರೆಗೆ ನಾನು ಏನನ್ನೂ ಮಾಡುವುದಿಲ್ಲ."

ಅದಕ್ಕೆ ಗುರು "ಹೆದರಬೇಡ, ಅದೂ ದೊರೆಯುತ್ತದೆ" ಎಂದು ಸಾಂತ್ವನ ಹೇಳಿದರು.

ಗುರು ಹಾಗೆ ಆಶೀರ್ವದಿಸಿದ ಎರಡು ದಿನಗಳಲ್ಲಿಯೆ ನರೇಂದ್ರನಿಗೆ ನಿರ್ವಿಕಲ್ಪಸಮಾಧಿಯ ಅನುಭವವೂ ಆಯಿತು.**[6]**

ನರೇಂದ್ರನು ಶ್ರೀ ರಾಮಕೃಷ್ಣರ ಬಳಿಗೆ ಬಂದು ದಂಡಪ್ರಣಾಮ ಮಾಡಿದಾಗ ಅವರು ಹೇಳಿದರು "ಜಗದಂಬೆ ನಿನಗೆಲ್ಲವನ್ನೂ ತೋರಿಸಿದಳಷ್ಟೆ? ಇನ್ನು ಅದಕ್ಕೆ ಬೀಗ ಹಾಕಿದೆ. ಬೀಗದ ಕೈ ನನ್ನಲ್ಲಿದೆ. ನೀನು ಮಾಡಬೇಕಾಗಿರುವ ಕೆಲಸವೆಲ್ಲವನ್ನೂ ಮುಗಿಸಿದ ಮೇಲೆ ಬೀಗ ತೆಗೆಯುತ್ತೇನೆ." ಜೊತೆಗೆ ಜಗಜ್ಜನನಿಯನ್ನೂ ಬೇಡಿದರಂತೆ. "ಅಮ್ಮಾ ಅವನ ನಿರ್ವಿಕಲ್ಪಾನುಭೂತಿಯ ಮೇಲೆ ನಿನ್ನ ಮಾಯಾವರಣವನ್ನು ದಯಮಾಡಿ ಬೀಸು. ಅವನಿಂದ ನಾನು ಮಾಡಿಸಬೇಕಾದ ಕೆಲಸ ಬಹಳವಿದೆ" ಎಂದು.

ನರೇಂದ್ರನ ವ್ಯಷ್ಟಿಸಿದ್ಧಿಯನ್ನು ಲೋಕಕಲ್ಯಾಣರೂಪವಾದ ಸಮಷ್ಟಿಸಿದ್ಧಿಗಾಗಿ ಧಾರೆಯೆರೆಯಲು ಪರಮಹಂಸರು ಮೊದಲೇ ಸಂಕಲ್ಪಿಸಿದುದನ್ನು ಸ್ಪಷ್ಟವಾಗಿ ಕಾಣುತ್ತೇವೆ. ಆ ದಕ್ಷಣೇಶ್ವರ ದೇವಮಾನವನ ಇಚ್ಛಾಶಕ್ತಿ ನರೇಂದ್ರನನ್ನು ಆಕ್ರಮಿಸಿ ತನ್ನ ಸಂಕಲ್ಪವನ್ನು ಹೇಗೆ ಈಡೇರಿಸಿಕೊಂಡಿತೆಂಬುದೇ ವಿವೇಕಾನಂದರ ಜೀವನಚರಿತ್ರೆ. ವ್ಯಷ್ಟಿಸಿದ್ಧಿಯನ್ನು ಪಡೆದು ಹೊರಹೊರಟ ನರೇಂದ್ರನು ಸ್ವಲ್ಪ ಕಾಲ ಅನಾಮಧೇಯವಾಗಿ ಭರತಖಂಡವನ್ನೆಲ್ಲ ಸುತ್ತಿದನು. ಪರಿವ್ರಾಜಕನಾಗಿ ತಾಯ್ನಾಡಿನ ದುಃಖ ದಾರಿದ್ರ್ಯ ದಾಸ್ಯ ಸಂಸ್ಕೃತಿ ನಾಗರಿಕತೆ ಸೌಜನ್ಯ ದೌಷ್ಟ್ಯ ಇತ್ಯಾದಿ ಸರ್ವಸಮಷ್ಟಿಯನ್ನೂ ಗ್ರಹಿಸಿದನು. ಅಷ್ಟರಲ್ಲಿ ಒಂದು ಅದ್ಭುತ ನಡೆಯಿತು. ಆ ಅದ್ಭುತ ಅಂದು ಅಷ್ಟೇನೂ ಅಸಾಧಾರಣವಾಗಿ ತೋರಲಿಲ್ಲ; ಆಕಸ್ಮಿಕವಾಗಿ ಒದಗಿದಂತೆಯೂ ಇತ್ತು. ಆದರೆ ಆ ಅದ್ಭುತ ಪರಮಹಂಸರ ಸ್ಪರ್ಶದಿಂದ ವಿವೇಕಾನಂದರಿಗೆ ಒದಗಿದ ದಿವ್ಯಾನುಭವದಷ್ಟೇ ಪವಾಡವಾಗಿತ್ತು. ವ್ಯತ್ಯಾಸವಿಷ್ಟೇ: ಅಂದು ಅದು ಆಂತರಿಕಾನುಭವವಾಗಿ ಬಂದಿತ್ತು; ಇಂದು ಬಹಿರಂಗ ಘಟನೆಯಾಗಿ ಮೈದೋರಿತು.**[7]**

ಆ ಸಾಗರ ಸಾಹಸದ ಕಥೆಯನ್ನು ನೀವೆಲ್ಲ ಓದಿದ್ದೀರಿ. ಅದರ ವಿದ್ಯುತ್‌ವೈಭವಕ್ಕೆ ಮಾರುಹೋಗಿದ್ದೀರಿ. ನಿಮ್ಮ ಹೃದಯದ ತೊಟ್ಟಿಲುಗಳಲ್ಲಿಯೂ ಅಂತಹ ಸಾಹಸವನ್ನು ಅನುಕರಿಸುವ ಮಹತ್ವಾಕಾಂಕ್ಷೆಯ ಶಿಶು ಒಮ್ಮೊಮ್ಮೆ ತೊದಲಿರಬಹುದು; ಇನ್ನೊಮ್ಮೆ ಅಂಬೆಗಾಲಿಕ್ಕಿರಲೂಬಹುದು. ಆದರೆ ಅದು ಎದ್ದುನಿಂತು ಓಡಾಡುವುದಕ್ಕೆ ಮೊದಲೆ ಒಂದಿನಿತು ವಿವೇಚನೆ ಮಾಡುವುದು ಶ್ರೇಯಸ್ಕರ.

ವಿವೇಕಾನಂದರು ಅಮೆರಿಕಾಕ್ಕೆ ಹೋಗಿ ದಿಗ್ವಿಜಯ ಗಳಿಸಿ ಬಂದಮೇಲೆ ಅವರಂತೆಯೆ ವಿಖ್ಯಾತರಾಗುವುದಕ್ಕೆ ಅನೇಕ ಭಾರತೀಯರು ಪ್ರಯತ್ನಿಸಿದರು. ಅವರಲ್ಲಿ ಇಂದಿಗೂ ಬಹುಜನ ಅಖ್ಯಾತರಾಗಿಯೆ ಉಳಿದಿದ್ದಾರೆ. ಆದರೂ ವಿದೇಶಗಳಲ್ಲಿ ಯೋಗ್ಯತಾ ಪತ್ರಿಕೆ ಪಡೆಯದೆ ತಮ್ಮ

ನಾಡಿನಲ್ಲಿ ತಮಗೆ ಕೀರ್ತಿ ಲಭಿಸುವುದಿಲ್ಲ ಎಂಬ ಭಾವನೆ ಬಹುಮಟ್ಟಿಗೆ ಸಕಲ ಮನೋವ್ಯಾಪ್ತಿಯಯಾಗಿದೆ. ಅದಕ್ಕೆ ಕಾರಣವೂ ಇಲ್ಲದಿಲ್ಲ. ದಾಸ್ಯ ಸಹಜವಾದ ಅತೀವ ಪರಪ್ರತ್ಯಯನೇಯ ಬುದ್ಧಿ ತನ್ನ ಯೋಗ್ಯತೆಯನ್ನೆ ತಾನು ಮರೆಯುತ್ತದೆ. ಅನ್ಯರು ಕೊಟ್ಟಲ್ಲದೆ ತನ್ನವರಿಗೆ ಅದು ಬೆಲೆ ಕೊಡುವುದಿಲ್ಲ. ಹಿತ್ತಲ ಗಿಡ ಅದಕ್ಕೆ ಮದ್ದಲ್ಲ. ಇತರರು ಕೊಟ್ಟ ಬೆಲೆಯನ್ನೆ ತಾನೂ ಕಟ್ಟುತ್ತದೆ. ಐರ್ಲೆಂಡಿನ ಈಟ್ಸ್ ಕವಿ ಕಟ್ಟಿದ ಮೇಲೆ, ನೊಬೆಲ್‌ಬಹುಮಾನವು ಆ ಬೆಲೆಯನ್ನು ಕೊಟ್ಟ ಮೇಲೆ ತಾನೆ ನಮ್ಮ ರವೀಂದ್ರರಿಗೂ ಇಲ್ಲಿ ಬೆಲೆ ಬಂದದ್ದು! ಅದಕ್ಕೆ ಪೂರ್ವದಲ್ಲಿಯೆ ಮೂವತ್ತು ನಾಲ್ವತ್ತು ವರ್ಷಗಳಿಂದ ಅವರು ಬರೆಯುತ್ತಿದ್ದರೂ ಭಾರತೀಯ ಲಕ್ಷ್ಯ ಅತ್ತಕಡೆ ಹರಿದಿರಲಿಲ್ಲ. ಇಂತಹ ನಾಲ್ಕಾರು ಪ್ರಸಿದ್ಧ ನಿದರ್ಶನಗಳು ಯಾರ ತಲೆಗೆ ಬೇಕಾದರೂ ಹೊಳೆಯುತ್ತವೆ. ಹೆಸರಿಸಬೇಕಾಗಿಲ್ಲ. ಅದನ್ನಿಲ್ಲಿ ಹೇಳುವ ಉದ್ದೇಶವಿಷ್ಟೆ: ನಮ್ಮ ಪರಪ್ರತ್ಯಯನೇಯ ಬುದ್ಧಿ ಅತ್ಯಂತ ಅವಹೇಳನಕರವೂ ಅಸಹ್ಯವೂ ಆಗುವಷ್ಟರ ಮಟ್ಟಿಗೆ ಬೆಳೆದಿದೆ. ಸ್ವಾತಂತ್ರ್ಯ ಬಂದ ಮೇಲಾದರೂ ಅದು ಕಡಿಮೆಯಾಗಬಹುದೆಂಬ ಆಶೆಯಿತ್ತು. ಬರಿಯ ರಾಜಕೀಯವಾದ ಸ್ವಾತಂತ್ರ್ಯದಿಂದ ಅಂತಹ ಆತ್ಮಶ್ರದ್ಧೆ ಸಂಭವಿಸುವುದಿಲ್ಲ ಎಂಬುದು ಹೆಚ್ಚುಹೆಚ್ಚಾಗಿ ಮನದಟ್ಟಾಗುತ್ತಿದೆ. ಏಕೆಂದರೆ ಸಮಾಚಾರ ಸಂಚಾರಾದಿ ಸೌಕರ್ಯ ಸೌಲಭ್ಯಗಳ ದೆಸೆಯಿಂದಾಗಿ ಆ ದೌರ್ಬಲ್ಯ ದಿನದಿನಕ್ಕೂ ಉಲ್ಬಣಿಸುತ್ತಿರುವಂತೆ ತೋರುತ್ತದೆ. ಯಂತ್ರ ನಾಗರಿಕತೆಯಲ್ಲಿ ನಮಗೆ ಮಾರ್ಗದರ್ಶಕವಾಗಬಹುದಾದ ಅಮೆರಿಕೆ ಜಗತ್ತಿನ ಶಾಂತಿಪಾಲನೆಯಲ್ಲಿಯೂ ಶಾಂತಿಸಾಧನೆಯಲ್ಲಿಯೂ ಗುರುವಾಗುತ್ತದೆ ಎಂಬುದು ಬರಿಯ ಭ್ರಾಂತಿ. ಎಷ್ಟು ಅರ್ಥಸಿದ್ಧಿಯಿದ್ದರೇನು? ಎಷ್ಟು ಯಂತ್ರಬುದ್ಧಿಯಿದ್ದರೇನು? ತನ್ನ ಶಾಂತಿಯನ್ನೆ ತಾನು ಸಂಪಾದಿಸಿಕೊಳ್ಳಲಾರದ ದೇಶ ಅನ್ಯದೇಶಗಳಿಗೆ ಎಂತು ತಾನೆ ಶಾಂತಿದಾನ ಮಾಡಬಲ್ಲುದು? ಮೊದಲ ಸಾರಿ ಅಮೆರಿಕಾಕ್ಕೆ ಹೋದಾಗ ವಿವೇಕಾನಂದರೂ ಅಮೆರಿಕಾದ ಅರ್ಥಬಲದಿಂದ ನಮ್ಮ ದಾರಿದ್ರ್ಯದ ಅನರ್ಥವನ್ನು ಪರಿಹರಿಸಿಕೊಳ್ಳಬಹುದೆಂಬ ಹಿರಿಯಾಸೆಗೆ ಪಕ್ಕಾಗಿದ್ದರು. ಆದರೆ ಎರಡನೆಯ ಸಾರಿ ಅಲ್ಲಿಗೆ ಹೋಗುವ ವೇಳೆಗೆ "ಅರ್ಥ ಮಂತ್ರದಿಂದ ಅನರ್ಥವಲ್ಲದೆ ಬೇರೆಯೇನೊ ಸಿದ್ಧಿಸದು" ಎಂಬುದು ಮನದಟ್ಟಾಗಿ, ಅಲ್ಲಿಯ ಧನಿಕವರ್ಗದವರನ್ನು ಆಶ್ರಯಿಸುವುದಕ್ಕೆ ಬದಲಾಗಿ 'ತಪೋಧನ'ರನ್ನೂ ಆತ್ಮಶ್ರೀಸಾಧನಾ ಕಾಂಕ್ಷಿಗಳನ್ನೂ ಆಕರ್ಷಿಸಿ ತಮ್ಮ ಕಾರ್ಯಸಾಧನೆಗೆ ತಳಹದಿ ಹಾಕಿದರು. ಆ ಕಾರ್ಯಸಾಧನೆ ರಾಜಕೀಯಘಟನಾ ಪರಂಪರಗಳಂತೆ ಪತ್ರಿಕೆಗಳಲ್ಲಿ ದಿನಂಪ್ರತಿ ದಪ್ಪಕ್ಷರಗಳಲ್ಲಿ ಘೋಷಿತವಾಗಿ ಜಗತ್ತಿನ ಜನಕೋಟಿಯ ಹೃದಯಗಳಲ್ಲಿ ಅದ್ಭುತಾನುಭವ ಸ್ಪಂದನಗಳನ್ನೆಬ್ಬಿಸುವಂಥಾದ್ದಲ್ಲ. ಅದು ಮಾನವಹೃದಯದ ಮೂಲಪರಿವರ್ತನೆಗೆ ಸಂಬಂಧಪಟ್ಟದ್ದು. ಯಾವ ಪರಿವರ್ತನೆಯಿಂದ ಅಶಾಂತಿಮೂಲವಾಗಿ ಸದ್ಯಕ್ಕೆ ಮಾನವಸಹಜವಾಗಿರುವ ಅಸ್ಮಿತಾಸಕ್ತಿಯ ಶಾಖೆಗಳಾದ ಅಹಂಕಾರ, ದ್ವೇಷ, ಸ್ಪರ್ಧೆ, ಅಸೂಯೆ, ಪ್ರತೀಕಾರಾದಿ ಆಸುರೀಗುಣಗಳು ಚಿರಶಾಂತಿಕರವೂ ನಿತ್ಯಾನಂದಕರವೂ ಆಗಿರುವ ದೈವೀಗುಣಗಳಾಗುವುವೊ ಅಂತಹ ತಪಸ್ಯೆಗೆ ಸಂಬಂಧಪಟ್ಟದ್ದು. ಅತಿ ಶೀಘ್ರಸಿದ್ಧಿಯ ಆತುರತೆಗೆ ಅಲ್ಲಿ ಎಡೆಯಿಲ್ಲ. ಸ್ವಪ್ರತಿಷ್ಠೆಗೆ ಅಲ್ಲಿ ಸ್ಥಾನವಿಲ್ಲ; ಅದು ಕೀರ್ತಿಶನಿಯ ಕ್ರೀಡಾರಂಗವಲ್ಲ. ಅದು ಪೂರ್ಣತ್ಯಾಗದಿಂದ ಪೂರ್ಣ ಸಿದ್ಧಿಯನ್ನು ಪಡೆಯುವ ಪೂರ್ಣದೃಷ್ಟಿಯ ತಪೋನಂದನ. ಅದಕ್ಕೆ ಬೇಕಾದುದು ತಪಸ್ಯೆ; ಎಲ್ಲರೂ ಅಮೆರಿಕಾಕ್ಕೆ ಹೋಗಬೇಕಾದುದಿಲ್ಲ. ಕೀರ್ತಿವಂತರಾಗಬೇಕಾದುದೂ ಇಲ್ಲ. ಎಲ್ಲಿದ್ದರಲ್ಲಿಯೆ, ಏನಾಗಿದ್ದರದಾಗಿಯೆ, ಅನ್ಯಸ್ಥಾನಕ್ಕೆ ಅಸೂಯೆಪಡದೆ, ತನ್ನ ಸ್ಥಾನವನ್ನು ಅಗೌರವಿಸದೆ. ಚಮ್ಮಾರನಾಗಲಿ ಚಕ್ರವರ್ತಿಯಾಗಲಿ ಸಮದರ್ಶನದಿಂದ ಕೈಗೊಳ್ಳಬೇಕಾದ ತಪಸ್ಯೆ ಅದು:

‘ಶ್ರೀ ಸಾಮಾನ್ಯವೆ ಭಗವನ್‌ಮಾನ್ಯಂ:
ಶ್ರೀ ಸಾಮಾನ್ಯನೆ ಭಗವದ್‌ಧನ್ಯಂ!’

ಎಂಬುದು ಅದರ ಮಂತ್ರ.

“ಸಾಮಾನ್ಯತೆ ಭಗವಂತನ ರೀತಿ;
ಸಾಮಾನ್ಯವೆ ಭಗವತ್ ಪ್ರೀತಿ!”

ಎಂಬುದು ಅದರ ತಂತ್ರ. ‘ಸಾಮಾನ್ಯವೆ ಸರ್ವಮಾನ್ಯ’ ಎಂಬ ಅನುಭವವು ಸಾಮಾನ್ಯವಾದಾಗ ಜಗತ್‌ಶಾಂತಿ ಸ್ವತಃಸಿದ್ಧ.

ವಿವೇಕಾನಂದರ ಅಮೇರಿಕೆಯಾತ್ರೆಯನ್ನು ಪೂರ್ಣದೃಷ್ಟಿಯಿಂದ ಪರಿಶೀಲಿಸಬೇಕು. ಅದರ ಉದ್ದೇಶ ಪ್ರಯೋಜನಗಳನ್ನು ನಿಜವಾಗಿಯೂ ವೈಜ್ಞಾನಿಕವಾಗಿ ಗೊತ್ತುಹಚ್ಚಬೇಕು. ಅದರಿಂದಾದುದೇನು: ವಿವೇಕಾನಂದರ ಸ್ವಂತ ಪ್ರಖ್ಯಾತಿಯೆ? ಭರತಖಂಡದ ಮತ್ತು ಹಿಂದೂಧರ್ಮದ ಪ್ರತಿಷ್ಠೆಯೆ? ಅನ್ಯಮತಗಳ ಅಹಂಕಾರಕ್ಕೆ ಒದಗಿದ ಆಘಾತವೆ? ಆವೊತ್ತಿವರೆಗೆ ಪಾಶ್ಚಾತ್ಯ ಮತದೃಷ್ಟಿಗೆ ಸಂಪೂರ್ಣವಾಗಿ ಅಪರಿಚಿತವೂ ಅಸಹನೀಯವೂ ಅಸಾಧುವೂ ಆಗಿದ್ದ ಸರ್ವಧರ್ಮ ಸಮನ್ವಯದೃಷ್ಟಿಯ ಪ್ರಪ್ರಥಮ ಸಾರ್ವಲೌಕಿಕ ಪ್ರತಿಷ್ಠಾಪನಾಂಕುರಾರ್ಪಣೆಯೆ? ಮೇಲೆ ಹೇಳಿದ ನಾಲ್ಕು ಪ್ರಯೋಜನಗಳಲ್ಲಿ ಮೊದಲ ಮೂರು ಒಂದಲ್ಲ ಒಂದು ರೀತಿಯಿಂದ ಅಹಂಕಾರ ಮೂಲವಾಗಿವೆ; ಕೀರ್ತಿಶನಿಯ ಕಿಂಕರರಾಗಿವೆ. ಆ ಮಿಥ್ಯಾಪ್ರಯೋಜನಗಳನ್ನು ತಿರಸ್ಕರಿಸಿದರೆ ಉಳಿಯುವುದು ಕೊನೆಯದಾದ ಆತ್ಮಶ್ರೀಕರವಾದ ಸತ್ಯ ಪ್ರಯೋಜನ. ನಿಜವಾಗಿಯೂ ಭರತಖಂಡ ಹಿಂದೆಯೂ ಇನ್ನು ಮುಂದೆಯೂ ಲೋಕದ ಶ್ರೇಯಸ್ಸಿಗಾಗಿ ದಾನಮಾಡಬೇಕಾಗಿರುವ ನಿತ್ಯಸತ್ಯದ ಮತ್ತು ಶಾಶ್ವತಶಾಂತಿಯ ದಿವ್ಯ ಸಂದೇಶ: ಸರ್ವಧರ್ಮಸಮನ್ವಯದೃಷ್ಟಿ; ಸರ್ವ ಸಮತೆ; ಸರ್ವೋದಯ, ಸರ್ವಪುಷ್ಟಿ, ಮತ್ತು ಸರ್ವತುಷ್ಟಿ.**[8]**

ಪ್ರಪಂಚದ ಸ್ವಮತಭ್ರಾಂತಿಯ ಎದೆಗೆ ಭರತಖಂಡವು ಹೊಡೆದ ಮೊದಲ ಸಿಡಿಲ್‌ಗುಂಡು ಸ್ವಾಮಿ ವಿವೇಕಾನಂದರು ಚಿಕಾಗೊ ಸರ್ವಧರ್ಮಸಮ್ಮೇಳನದಲ್ಲಿ ಮಾಡಿದ ದಿವ್ಯೋಜ್ಜ್ವಲವಾದ ಭಾಷಣ! ಅವರ ತರುವಾಯ ಅವರನ್ನು ಹಿಂಬಾಲಿಸಿ ಅನುಸರಿಸಿ ಅನೇಕ ಮಹನೀಯರು ಆ ವೇದಾಂತ ದೃಷ್ಟಿಯ ಉದಾರವಾಣಿಯನ್ನು ಬೇರೆ ಬೇರೆ ದೇಶಗಳಲ್ಲಿ ಅದ್ಭುತವಾಗಿ ಸಾರಿದ್ದಾರೆ; ಮತ್ತು ಸಾರುತ್ತಲೂ ಇದ್ದಾರೆ. ವಿವೇಕಾನಂದರ ತರುವಾಯ ಶ್ರೀ ರಾಮಕೃಷ್ಣರ ಇತರ ಅಂತರಂಗಶಿಷ್ಯರಲ್ಲಿ ಕೆಲರೂ, ಮತ್ತು ಸಾಮಾನ್ಯಶಿಷ್ಯರಲ್ಲಿ ಬಹುಜನರೂ ಶ್ರೀ ರಾಮಕೃಷ್ಣ ಮಹಾಸಂಘದ ಆಶ್ರಯದಲ್ಲಿ ಆ ಸಂದೇಶ ಕಾರ್ಯಕ್ಕೆ ನಿವೇದಿತರಾಗಿ ನಿರಂತರವೂ ನಿಶ್ಯಬ್ದವಾಗಿ ಅನಾಮವಾಗಿ ದುಡಿಯುತ್ತಿದ್ದಾರೆ. ರವೀಂದ್ರರು, ಗಾಂಧೀಜಿ, ಶ್ರೀ ಅರವಿಂದರು ಮೊದಲಾದ ವಿಭೂತಿಗಳು, ರಾಧಾಕೃಷ್ಣನ್‌ಮೊದಲಾದ ತತ್ತ್ವಶಾಸ್ತ್ರಜ್ಞರೂ, ನೆಹರೂ ಮೊದಲಾದ ರಾಜಕಾರಣ ನಿಪುಣರೂ ಆ ಸಂದೇಶವನ್ನು ನಾನಾಮುಖಗಳಿಂದ ವಿಸ್ತರಿಸಿದ್ದಾರೆ. ಹೆಸರು. ಕೀರ್ತಿ. ಪ್ರಸಿದ್ಧಿ ಇವುಗಳಿಗೇನಾದರೂ ಬೆಲೆಯಿದ್ದರೆ ಆ ಅಮೃತ ಸಂದೇಶ ಪ್ರಸಾರಕಾರ್ಯಕ್ಕೆ ಪ್ರಣಾಳಿಕೆಗಳಾಗುವುದರಲ್ಲಿಯೆ. ಇತರ ಅಭಿಸಂಧಿಗಳೆಲ್ಲ ಬರಿಯ ಕೆಲಸಕ್ಕೆ ಬಾರದ ಅಹಂಭ್ರಾಂತಿ.

ಅಂತಹ ಅಹಂಭ್ರಾಂತಿಗೆ ಮರುಳಾಗದೆ, ಆ ಅಮೃತಸಂದೇಶದ ಅನುಷ್ಠಾನದಲ್ಲಿ ನಿರತರಾಗಬೇಕಾದುದು ನಮ್ಮ ಸದ್ಯದ ಕರ್ತವ್ಯ. ಅಂತಹ ತಪಸ್ಯೆಯಿಂದ ತಮಗೆ ತಾವಾಗಿಯೆ ಹೊರಹೊಮ್ಮಿದರೆ ಹೊಮ್ಮಲಿ-ಕೀರ್ತಿ, ಸ್ಥಾನ, ಮಾನ, ಸಮಾಜಗೌರವ, ಸಮಾಜಸುಧಾರಣೆ, ಅರ್ಥಲಾಭ, ಯಶೋಲಾಭ, ಇತ್ಯಾದಿ ಉಪಲಭ್ಯಗಳು. ಅವುಗಳನ್ನು ಬೇಡವೆನ್ನುವ ವೈರಾಗ್ಯವೂ ಕೀರ್ತಿಶನಿಯ ವೇಷಾಂತರವಾಗದಂತೆ ನಾವು ಹೃತ್ಪೂರ್ವಕವಾಗಿ ವಿನಯಶೀಲರಾಗಬೇಕಾದುದು ನಮ್ಮ ಆಧ್ಯಾತ್ಮಿಕ ಕ್ಷೇಮಕ್ಕೆ ಅತ್ಯಾವಶ್ಯಕ.

"ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯಸ್ವಿದ್‌ಧನಂ"

ಎಂಬುದು ಉಪನಿಷತ್ತಿನ ಮಂತ್ರೋಪದೇಶ. ಅದು 'ಮಾ ಗೃಧಃ' ಎಂದು ಮಾತ್ರ ಹೇಳಿಲ್ಲ. 'ಭುಂಜೀಥಾ' ಎಂದೂ ಆಶೀರ್ವದಿಸಿದೆ. ವ್ಯಷ್ಟಿಸಿದ್ಧಿ ಅತ್ಯಾವಶ್ಯಕ; ಆದರೆ ಅದು ಸಮಷ್ಟಿಸಿದ್ಧಿಗೆ ಸಮರ್ಪಿತವಾಗದಿದ್ದರೆ ಲೋಕ ಕಲ್ಯಾಣವು ದೂರದೂರವಾಗಿ ಬಹಿದೀರ್ಘಸೂತ್ರಿಯಾಗಬೇಕಾದೀತು. ನಾವು ಬಯಸುವ ಶಾಂತಿ ನಾವು ಬಯಸುವ ಪ್ರಮಾಣದಲ್ಲಿ ಸ್ಥಾಪಿತವಾಗುವುದಕ್ಕೆ ಬಹಳಕಾಲ ಬೇಕಾಗಬಹುದು:

"ಇಳಿತಂದುದು ಈ ಭೂಮಿಗೆ
ಅವತಾರದ ಮೇಲವತಾರ:
ಆದುದ್ಧಾರಕೆ ಸಾವಿರಮಡಿ
ಇಹುದಾಗುವ ಉದ್ಧಾರ!"

ಆದರೆ ಸಾಧಕನಾದವನ ಶ್ರದ್ಧೆ ಹಿಂಜರಿಯುವುದಿಲ್ಲ. ವಿವೇಕಾನಂದರು ನಮಗಿತ್ತಿರುವ ಈ ಕರೆಯನ್ನು ಆಲಿಸಿ:

ಓ ಮಾನವ, ಅತೀತದ ಪೂಜೆಯಿಂದ ಪ್ರತ್ಯಕ್ಷದ ಪೂಜೆಗೆ, ನಿನಗಿದೋ ಆಹ್ವಾನ! ಹೋದ ದುಃಖದಿಂದ ಬರುವ ಸುಖಕ್ಕೆ, ನಿನಗಿದೋ ಆಹ್ವಾನ! ಗತಾನುಶೋಚನೆಯಿಂದ ಆಧುನಿಕ ನವಪ್ರಯತ್ನಕ್ಕೆ, ನಿನಗಿದೋ ಆಹ್ವಾನ! ಲುಪ್ತಪಂಥದ ಪುನರುದ್ಧಾರಸಾಹಸದ ವೃಥಾಶಕ್ತಿಕ್ಷಯದಿಂದ ಸದ್ಯೋನಿರ್ಮಿತ ವಿಶಾಲ ಸನ್ನಿಕಟ ಪಥಕ್ಕೆ, ನಿನಗಿದೋ ಆಹ್ವಾನ! ಓ ಬುದ್ಧಿಮಾನ್‌ಮಾನವಾ, ಇದನ್ನು ತಿಳಿ; ಸಿದ್ಧನಾಗು, ಪ್ರಬುದ್ಧನಾಗು!

"ಯಾವ ಶಕ್ತಿಯ ಉನ್ಮೇಷ ಮಾತ್ರದಿಂದಲೆ ದಿಗ್ದಿಗಂತವ್ಯಾಪಿಯಾದ ಪ್ರತಿಧ್ವನಿಯಿಂದ ಜಗತ್ತು ಜಾಗ್ರತವಾಗುತ್ತಿರುವುದೋ ಆ ಶಕ್ತಿಯ ಪೂರ್ಣತ್ವವನ್ನು ಭಾವಿಸಿ ಅನುಭವಿಸು; ವೃಥಾ ಸಂದೇಹಬೇಡ; ದುರ್ಬಲತೆ ಬೇಡ ದಾಸಜಾತಿ ಸುಲಭವಾದ ಈರ್ಷ್ಯಾದ್ವೇಷಗಳನ್ನು ದೂರಮಾಡಿ ಈ ಮಹಾ ಯುಗಚಕ್ರ ಪರಿವರ್ತನೆಯ ಸಹಾಯಾರ್ಥವಾಗಿ ಹೆಗಲುಕೊಟ್ಟು ನಿಲ್ಲು; ಸೊಂಟಕಟ್ಟಿ ನಿಲ್ಲು; ಧೀರನಾಗಿ ನಿಲ್ಲು!"

"ನಾವು ಪ್ರಭುವಿನ ದಾಸರು, ಪ್ರಭುವಿನ ಪುತ್ರರು; ಪ್ರಭುವಿನ ಲೀಲೆಗೆ ಸಹಾಯಕರು ಎಂಬುದನ್ನು ತಿಳಿ. ವಿಶ್ವಾಸಹೃದಯದಿಂದ ದೃಢಭಾವಧಾರಿಯಾಗಿ ಕಾರ್ಯಕ್ಷೇತ್ರಕ್ಕೆ ಧುಮುಕು! ನಿರ್ಭರತೆಯಿಂದ ಧುಮುಕು!"

# ಲೌಕಿಕ ಭಾರತಕ್ಕೆ ಸ್ವಾಮಿ ವಿವೇಕಾನಂದರ ಜೀವನ ಸಂದೇಶ : ೩. ದೃಷ್ಟಿಯಂತೆ ಸೃಷ್ಟಿ

"ಹಾರೈಸು ಹಾರೈಸು ಹಾರೈಸು, ಜೀವ:
ಹಾರೈಸು ನೀನಾಗುವನ್ನೆಗಂ ದೇವ!"
- ಅಗ್ನಿಹಂಸ

ಇಂದಿನ ಕನಸು ನಾಳೆಯ ಮನಸ್ಸು; ನಾಳೆಯ ಮನಸ್ಸು ನಾಡಿದ್ದಿನ ಉಣಿಸು. ಇವೊತ್ತಿನ ಹಾರೈಕೆ ನಾಳೆಯ ಪೂರೈಕೆ. ವಟಬೀಜದ ಋತಹೃದಯದಲ್ಲಿ ಶಕ್ತಿಪೂರ್ಣವಾಗಿರುವ ಚಿತ್‌ಸಂಕಲ್ಪವು ತಪೋಮಯವಾಗಿ ಆಶಿಸಿತೆಂದರೆ, ಆ ಆಶೆಯೆ ಇಚ್ಛಾಬಲವಾಗಿ ಅಂತಸ್ಸುಪ್ತವಾಗಿರುವ ವೃಕ್ಷತ್ವವನ್ನು ಬಹಿಃಸ್ಫುಟವಾಗುವಂತೆ ಮಾಡುತ್ತದೆ. ಒಂದು ವರ್ಗದ ಪ್ರಾಣಿ ಮತ್ತೊಂದು ವರ್ಗದ ಪ್ರಾಣಿಯಾಗಿ ಪರಿಣಾಮಗೊಳ್ಳುವುದೂ ಅಂತರ್ನಿಗೂಢವಾದ ಋತಸಂಕಲ್ಪದ ಚಿತ್‌ತಪಸ್ಸಿನಿಂದಲೆ ಎಮದು ಪತಂಜಲಿಯ ಯೋಗಸೂತ್ರ ಹೇಳುತ್ತದೆ:

"ಜಾತ್ಯಂತರ ಪರಿಣಾಮಃ ಪ್ರಕೃತ್ಯಾಪೂರಾತ್ ||" (ಅ.೪, ಸೂ.೨)

ಪ್ರಕೃತಿಯ ಆಪೂರಣದಿಂದಲೆ ಜಾತ್ಯಂತರ ಪರಿಣಾಮ ಸಾಧ್ಯ. ಪ್ರಕೃತಿರೂಪದಲ್ಲಿ ಅವ್ಯಕ್ತವಾಗಿರುವ ಶಕ್ತಿಯ ಇಚ್ಛಾವಿಕಾಸದಿಂದಲೆ ಸೃಷ್ಟಿಯಲ್ಲಿ ಬೇರೆಬೇರೆ ಪರಿಣಾಮಗಳಾಗುತ್ತವೆ. ಬರಿಯ ಸನ್ನಿವೇಶ ಮಾತ್ರದಿಂದಲ್ಲ. ಸನ್ನಿವೇಶ ಪ್ರಭಾವ ಅಭಿನಿವೇಶನಕ್ಕೆ, ಎಂದರೆ ಅಸ್ಮಿತಾಸಕ್ತಿಗೆ, ನಿಮಿತ್ತಭಿತ್ತಿಯಾಗುತ್ತದೆಯೆ ಹೊರತು ಅದೇ ಪರಿಣಾಮಕರ್ತೃವಲ್ಲ. "ಹಾರೈಸಿ ಹಾರೈಸಿ ಹಾರೈಸಿ ಹಾರಿದುದೊ ನೀರಧಿಯ ಮೀನ!" ಎಂದು ಆಧುನಿಕ ಜೀವ ವಿಜ್ಞಾನವೂ ಅದೇ ತತ್ತ್ವವನ್ನು ಸೂಚಿಸುತ್ತದೆ. ಮಾನವವರ್ಗದಲ್ಲಿ ಪ್ರಗತಿಪರಿಣಾಮವಾಗಬೇಕಾದರೂ ಅದು ಮೊದಲು ವ್ಯಷ್ಟಿಯ ಮನೋಮಯಕ್ಕೆ ಭಾವನಾರೂಪದಲ್ಲಿ ಅವತರಿಸಿ ಬುದ್ಧಿಗ್ರಾಹ್ಯವಾಗುತ್ತದೆ. ಮೊದಲು 'ಬುದ್ಧಿಗೋಚರ'ವಾದುದು ಕ್ರಮೇಣ 'ಹೃದಯಗೋಚರ'ವಾಗುತ್ತದೆ. ತರುವಾಯ ಕಾಯಕ್ರಿಯೆಯಲ್ಲಿ ಪ್ರತಿಷ್ಠಿತವಾಗಿ ವಾಸ್ತವವಾಗುತ್ತದೆ.

[1]ಒಳಹೊಕ್ಕು ನೋಡಿದರೆ ಹೊಳೆಯುತ್ತದೆ - ಅಭಿಪ್ರಾಯಗಳ ಶಕ್ತಿ ಆಟಂ ಶಕ್ತಿಗಿಂತಲೂ ಬಲವತ್ತರವಾದದ್ದು, ಅಮೋಘವಾದದ್ದು ಎಂದು. ಭಾರತ ಸ್ವಾತಂತ್ರ್ಯದ ಉದಯ, ಪಾಕಿಸ್ತಾನ್ ಇಸ್ರಾಯೇಲ್ ರಾಷ್ಟ್ರಗಳ ವಿಸೃಷ್ಟಿ, ದುರ್ದಮ್ಯ ಚಕ್ರಾಧಿಪತ್ಯಗಳ ದಮನ ಮತ್ತು ದಲನ,-ಇಂತಹ ಅತ್ಯಂತ ಬಹಿರ್ಮುಖವಾದ ರಾಜಕೀಯ ಘಟನೆಗಳಿಗೂ 'ಮಂತ್ರ'ಗಳೆ, ಎಂದರೆ ಶಕ್ತಿಪೂರ್ಣವಾದ ಭಾವನೆಗಳೆ, ಕಾರಣವಾದುದನ್ನು ನಾವೆಲ್ಲಾ ಕಂಡಿದ್ದೇವೆ. ಸತ್‌ಸೃಷ್ಟಿಗಾಗಲಿ ಅಸತ್‌ಸೃಷ್ಟಿಗಾಗಲಿ 'ಮಂತ್ರ' ನಿಷ್ಪಕ್ಷಪಾತವಾಗಿ ನೆರವಾಗುತ್ತದೆ. ಅದಕ್ಕೆ ಅಧೀನವಾಗಿ ಅವಶ್ಯಕವಾದ 'ತಂತ್ರ' ಸಿದ್ಧವಾಗುತ್ತದೆ; ಅದನ್ನಾಶ್ರಯಿಸಿ ಶಾಸ್ತ್ರವಿಜ್ಞಾನ 'ಯಂತ್ರ'ಗಳನ್ನು ಕಂಡುಹಿಡಿದು ಒದಗಿಸುತ್ತದೆ. ಲೆನಿನ್ ಸ್ಟಾಲಿನ್ ಗಾಂಧಿಯಂಥವರೂ ಹಿಟ್ಲರ್ ಮುಸ್ಸೊಲಿನಿಯ ವರ್ಗದವರೂ ಜರ್ಮನಿ ಇಟಲಿ ರಷ್ಯಾ ಇಂಡಿಯಾ ಮೊದಲಾದ ದೇಶಗಳ ಅಚಿರಪೂರ್ವ ಇತಿಹಾಸಗಳೂ ಅದಕ್ಕೆ ನಿದರ್ಶನಗಳಾಗಿವೆ. 'ಮಂತ್ರ ಶಕ್ತಿ' ಎಂಬ

ಪದದ ಅರ್ಥ ಎಷ್ಟು ಹಿಗ್ಗಳಿಸಿ ಎಲ್ಲಿಗೆಳೆದರೂ ಅಸತ್ಯವಾಗಲಾರದೆಂದು ತೋರುತ್ತದೆ. ಆದ್ದರಿಂದಲೆ ನಾವು ಸ್ವೀಕರಿಸುವ 'ಮಂತ್ರ' ಸನ್ಮಂತವಾಗಿರಬೇಕಾದುದು ಅತ್ಯಂತ ಆವಶ್ಯಕ, ಲೋಕದ ಕ್ಷೇಮಕ್ಕೆ ಮತ್ತು ನಮ್ಮ ಶ್ರೇಯಸ್ಸಿಗೆ. ದೃಷ್ಟಿಯಂತೆ ಸೃಷ್ಟಿ. ಅದೇನೊ ನಿಜ. ಆದರೆ ನಿರ್ಬಲವಾದ ದೃಷ್ಟಿಯಿಂದ ಯಾವ ಸೃಷ್ಟಿಯೂ ಆಗಲಾರದು. ಅಂತಹ ನಿರ್ವೀರ್ಯತೆಯಿಂದ ದಿವಾಸ್ವಪ್ನಗಳು ಬೇಕಾದರೆ ಮಿಣುಕಬಹುದು. ಅತ್ಯಸೃಷ್ಟಿಯಾಗದು. ಋತವಿಲ್ಲದ ಮಿಥ್ಯಾದೃಷ್ಟಿಯಿಂದ ಅನೃತಸೃಷ್ಟಿ ಮಾತ್ರ ಸಾಧ್ಯ. ಆಲೋಚನೆ ಭಾವಮಯವಾದರೆ 'ತಪಸ್' ಒದಗುತ್ತದೆ; ತಪಸ್ಯೆಯಿಂದಲ್ಲದೆ ಲಭಿಸಲಾರದು 'ತಪಸ್' ವಿವೇಕಾನಂದರು ಸಾರಿರುವ ಸಂದೇಶದಿಂದ, ನೀಡಿರುವ ಆವೇಶದಿಂದ, ಅಂತಹ ತಪೋಮಯದೃಷ್ಟಿ ನಮಗೆ ಒದಗುತ್ತದೆಯೆ? ಅಂತಹ 'ದರ್ಶನ' ಶಕ್ತಿ ನಮ್ಮಲ್ಲಿ ಪ್ರಜ್ವಲಿಸುತ್ತದೆಯೆ?

ವಿವೇಕಾನಂದರು ಲೋಕಕ್ಕೆ ಇತ್ತ ಸಂದೇಶವನ್ನು ಕುರಿತು ಹಿಂದಣ ಭಾಷಣಗಳಲ್ಲಿ ಪ್ರಾಸಂಗಿಕವಾಗಿ ಪ್ರಸ್ತಾಪಿಸಿದ್ದೇವೆ. ಅದರಲ್ಲಿ ಒಂದಂಶ ವ್ಯಷ್ಟಿಗೆ ಸಂಬಂಧಿಸಿದ್ದು, ಇನ್ನೊಂದು ಸಮಷ್ಟಿಗೆ. ಇವೆರಡೂ ನಿಜವಾಗಿ ಬೇರೆ ಬೇರೆ ಅಲ್ಲ: ಒಂದಕ್ಕಾಗಿ ಇನ್ನೊಂದು. ವ್ಯಷ್ಟಿಸಿದ್ಧಿಗೆ ಸಂಬಂಧಿಸಿದ ತಪಸ್ಯೆಯನ್ನು ಕುರಿತು, ನರೇಂದ್ರನನ್ನೆ ಉದಾಹರಣೆಯಾಗಿಟ್ಟುಕೊಂಡು ಸಂಕ್ಷೇಪವಾಗಿಯಾದರೂ ನಾಲ್ಕಾರು ಮಾತು ಹೇಳಿದ್ದೇವೆ. ಇಲ್ಲಿ ಯಾವ ರೂಪದ ಮುಂದಣ ಸೃಷ್ಟಿಯಾಗಿ ಯಾವ ಸ್ವರೂಪದ ವ್ಯಷ್ಟಿದೃಷ್ಟಿ ಸಿದ್ಧವಾಗಬೇಕಾಗಿದೆ ಎಂಬುದನ್ನು ಪರ್ಯಾಲೋಚಿಸುತ್ತೇವೆ.

ಇಂದಿನ ಪ್ರಪಂಚದ ಸಮಸ್ಯೆಗಳೆಲ್ಲ ಎರಡು ಪ್ರಧಾನ ಚಿತ್ತವೃತ್ತಿಗಳ ಮೇಲೆ ನಿಂತಂತಿವೆ: ಒಂದು ಯುದ್ಧಭೀತಿ; ಮತ್ತೊಂದು ಶಾಂತಿಪ್ರೀತಿ. ಗಮನಿಸಬೇಕಾದ ಮತ್ತೊಮದು ವಿಚಿತ್ರವೆಂದರೆ, ಒಂದರಿಂದ ಮತ್ತೊಂದು ಉದ್ಭವಿಸಿ, ಒಂದರಿಂದ ಮತ್ತೊಂದು ಪ್ರೇರಿತವಾಗಿ, ಒಂದು ಮತ್ತೊಂದಕ್ಕೆ ಕಾರಣವಾಗಿ, ಒಂದಕ್ಕೊಂದು ಮಾರಣವಾದಂತಿದೆ! ಎರಡು ಘೋರ ಯುದ್ಧಗಳನ್ನು ನೋಡಿದ ಜಗತ್ತು. ಒಮದಕ್ಕಿಂತ ಒಂದು ಘೋರತರವಾಗಿ ಪ್ರಲಯಕಾರಿಯಾದುದನ್ನು ಕಂಡರಿತ ಜಗತ್ತು, ಮುಂದೇನಾದರೂ ಯುದ್ಧ ಸಂಭವಿಸಿದರೆ ಅದು ಅತ್ಯಂತ ಘೋರತಮವಾಗಿ ಸರ್ವನಾಶದಲ್ಲಿಯೆ ಕೃತಕೃತ್ಯವಾಗಬಹುದೆಂದು 'ಪ್ರಾಣಭೀತಿ'ಯಿಂದ ಶಾಂತಿಯನ್ನು ಪ್ರೀತಿಸುವಂತೆ ತೋರುತ್ತಿದೆಯೆ ಹೊರತು ಶಾಂತಿಯಲ್ಲಿ ಆರೂಢವಾಗಿ ಸ್ವತಃಸಿದ್ಧವಾಗಿರುವ ಆತ್ಮಶ್ರೀಯ ಆಧ್ಯಾತ್ಮಿಕ ಪ್ರಯೋಜನಕ್ಕಾಗಿ ಅದನ್ನು ಬಯಸುತ್ತಿರುವಂತೆ ಕಾಣುವುದಿಲ್ಲ. ಆದಕಾರಣವೆ 'ಶಾಂತಿರಕ್ಷಣೆ'ಗಾಗಿ ಉನ್ಮಾದವೇರಿದಂತೆ 'ಯುದ್ಧಸಿದ್ಧತೆ' ಮಾಡಿಕೊಳ್ಳುವ ವಿಪರೀತ ಪರಿಸ್ಥಿತಿ ಒದಗಿರುವುದನ್ನು ನೋಡುತ್ತಿದ್ದೇವೆ. 'ಯುದ್ಧಸಿದ್ಧತೆ'ಗಾಗಿ ಬುದ್ಧಿವ್ಯಯ, ಶಕ್ತಿವ್ಯಯ, ಧನವ್ಯಯ, ಎಲ್ಲಕ್ಕಿಂತಲೂ ಹೆಚ್ಚಾಗಿ ಸೌಜನ್ಯವ್ಯಯವಾಗುವುದರಿಂದ ಮಾನವನ ದೈನಂದಿನ ಸರಳ ಜೀವನಕ್ಕೆ ಬೇಕಾಗುವ ಅನ್ನವಸ್ತ್ರಾದಿಗಳ ಉತ್ಪತ್ತಿ ಹಿಂದೆ ಬಿದ್ದು, ಅನೇಕರಿಗೆ ಅವು ದೊರೆಯದೆ ಹಾಹಾಕಾರವೆದ್ದು 'ಅಶಾಂತಿ'ಗೆ ಕಾರಣವಾಗುತ್ತದೆ. 'ಕ್ರಾಂತಿಶಕ್ತಿ' ಅಂತಹ 'ಅಶಾಂತಿ'ಯನ್ನೆ ತನಗೆ ಮೂಲಧನವನ್ನಾಗಿಯೂ ಮೂಲಬಲವನ್ನಾಗಿಯೂ ಮಾಡಿಕೊಂಡು ತನ್ನ ಸ್ವಾರ್ಥದ ದುರಭಿಸಂಧಿಗೆ ಅದನ್ನು ಉಪಯೋಗಿಸಿಕೊಳ್ಳುತ್ತದೆ. ಅದರಿಂದೊದಗುವ 'ಅಶಾಂತಿ'ಯನ್ನು ಶಮನ ಮಾಡಲು 'ಯುದ್ಧಸಿದ್ಧತೆ'; ಯುದ್ಧಸನ್ನಾಹ; ಕೊನೆಗೆ ಯುದ್ಧ! ಹೀಗೆ ತನ್ನ ಬಾಲದ ತುದಿಕಡೆಯಿಂದ ತನ್ನನ್ನೆ ನುಂಗಿಕೊಳ್ಳುವ ವಿಚಿತ್ರವಾದ ಸತ್‌ಪ್ರಯತ್ನದಲ್ಲಿ ಸರ್ವದಾ ನಿರತವಾಗಿರುವ ಈ ಅನರ್ಥಶಾಸ್ತ್ರ, ವಿಷಯಸರ್ಪದಿಂದ ಮೂಡಿರುವ 'ಯುದ್ಧಭೀತಿ-ಶಾಂತಿ

ಪ್ರೀತಿ'ಯ ಜಟಿಲ ವಿಷವರ್ತುಲಗರ್ತದಿಂದ ಮಾನವತೆಗೆ ಮುಕ್ತಿಯಿದೆಯೆ ಎಂಬ ಪ್ರಶ್ನಚಿಹ್ನೆ ಹಾವಿನ ಹೆಡೆಯಂತೆಯೆ ನಿಮಿರಿ ನಿಲ್ಲುತ್ತದೆ!

ನಿಜವಾದ ಶಾಂತಿಗೆ ಮುನ್ನ ಮನುಷ್ಯತ್ವ ಶಮವನ್ನು ಸಾಧಿಸಬೇಕಾಗುತ್ತದೆ. ಶಮವಿಲ್ಲದ ಶಾಂತಿ ಬರಿಯ ಭ್ರಾಂತಿ. ವ್ಯಷ್ಟಿ ವ್ಯಷ್ಟಿ ಸೇರಿ ಸಮಷ್ಟಿಯಾಗಿದೆ. ಸಮಷ್ಟಿಯೂ ಅನೇಕ ವ್ಯಷ್ಟಿಗಳಾಗಿ ಮೈದೋರಿದೆ. ಆದ್ದರಿಂದ ವ್ಯಷ್ಟಿಯೂ ತನ್ನಲ್ಲಿ ಶಮವನ್ನು ಸ್ಥಾಪಿಸಿಕೊಳ್ಳಲು ಪ್ರಯತ್ನಿಸಿದರೆ ಸಮಷ್ಟಿಯ ಶಮಕ್ಕೆ ಬಲವಾದ ತಳಹದಿಯಾಗುತ್ತದೆ. ವ್ಯಷ್ಟಿವ್ಯಷ್ಟಿಯ ಅಹಂಕಾರ ಶಮನವಾದರೆ ಸಮಷ್ಟಿ ಸಮಷ್ಟಿಗಳ ಅಹಂಕಾರವೂ ಶಮನವಾಗುವುದು ಸಾಧ್ಯ. ದೇಶಭಕ್ತಿ, ರಾಷ್ಟ್ರೀಯತೆ, ಸ್ವಮತ ಸ್ವಸಂಸ್ಕೃತಿ ಸ್ವಭಾಷಾಭಿಮಾನಗಳೆಲ್ಲ ಅಹಂಕಾರಮೂಲವಾದ ವ್ಯಷ್ಟಿಪ್ರತಿಷ್ಠೆಯ ಸಮಷ್ಟಿರೂಪಗಳಲ್ಲದೆ ಮತ್ತೇನು? ಆದ್ದರಿಂದ ವ್ಯಷ್ಟಿ ವ್ಯಷ್ಟಿಗಳಲ್ಲಿ ಅಂತಹ ಶಮಸಾಧನೆಯಿಂದ ಮೂಡುವ ಮೂಲ ಪರಿವರ್ತನೆಗಾಗಿ ನಾವು ಸಾಮೂಹಿಕವಾಗಿ ಕಾರ್ಯೋನ್ಮುಖವಾಗದಿದ್ದರೆ ಬರಿಯ ಅರ್ಥಶಾಸ್ತ್ರ, ಅಥವಾ ರಾಜಕೀಯ ಶಾಸ್ತ್ರದ ತೇಪೆ ಹಾಕುವ ಕುಶಲಕರ್ಮದಿಂದ ಎಂದಿಗೂ ಸರ್ವರು ಅಪೇಕ್ಷಿಸುವ ಸಮಷ್ಟಿ ಶಾಂತಿ ಸಿದ್ಧಿಸುವುದಿಲ್ಲ. ಸ್ವಭಾವ ಬದಲಾಯಿಸದೆ ಬದುಕು ಬದಲಾಯಿಸುವುದಿಲ್ಲ. ಅಂತಹ ಬದಲಾವಣೆಗಾಗಿ ಲೋಕಶೋಷಣೆ ಮಾಡಬೇಕಾಗಿಲ್ಲ. ನಮ್ಮ ಸ್ವರೂಪದಲ್ಲಿಯೆ ಆ ದೈವೀಶಕ್ತಿ ಸುಪ್ತವಾಗಿದೆ. ಪ್ರತಿಯೊಬ್ಬ ವ್ಯಕ್ತಿಯೂ ಅದನ್ನು ಎಚ್ಚರಗೊಳಿಸಲು ಪ್ರಯತ್ನಮಾಡಿದರೆ ಲೋಕಕಲ್ಯಾಣಕ್ಕೆ ಪ್ರತ್ಯಕ್ಷವಾಗಿ ಸಕ್ರಿಯವಾಗಿ ನೆರವಾಗುತ್ತಾನೆ. ಆ ದೈವೀಸ್ವರೂಪವೆ ಸ್ವಭಾವವಾದರೆ ಅದನ್ನು ಅನುಷ್ಠಾನಕ್ಕೆ ತರುವ ಸ್ವಧರ್ಮ ಸ್ವತಃಸಿದ್ಧವಾಗಿ, ತದನುಗುಣವಾದ ಸ್ವಕರ್ಮದಲ್ಲಿ ಸುಪ್ರತಿಷ್ಠಿತವಾಗಿಯೆ ಆಗುತ್ತದೆ. ಪುರಾತನ ಮಹರ್ಷಿಗಳೆಲ್ಲರಿಂದಲೂ ಒಂದಲ್ಲ ಒಂದು ರೀತಿಯಿಂದ ಘೋಷಿತವಾಗುತ್ತಲೆ ಬಂದಿರುವ ಈ ಸನಾತನ ಸತ್ಯವು ನಮ್ಮ ಅರ್ವಾಚೀನ ವಿಭೂತಿಗಳಿಂದ ಮತ್ತೊಮ್ಮೆ ಆಧುನಿಕವಾಗಿ ಮಹೋಜ್ವಲವಾಗಿ ಪ್ರಕಾಶಿತವಾಗಿದೆ.

ವಿವೇಕಾನಂದರು ಸರ್ವಧರ್ಮ ಸಮ್ಮೇಲನದಲ್ಲಿ ಮಾಡಿದ ಉಜ್ವಲ ಭಾಷಣಗಳಲ್ಲಿ ಈ ದೃಷ್ಟಿಗೆ ಪೀಠಿಕಾಪ್ರಾಯವಾದ ವಜ್ರವೇದಿಕೆಯನ್ನು ವಿರಚಿಸಿದ್ದಾರೆ. ಅವರ ಪ್ರಪ್ರಥಮ ಸಂಬೋಧನೆಯ ಆ ದೃಷ್ಟಿಗೆ ಮೂಲಮಂತ್ರದಂತಿದೆ: “ಅಮೆರಿಕಾ ದೇಸದ ಭ್ರಾತೃ ಭಗಿನಿಯರೆ!” ವಾಚ್ಯವಾಗಿ ನೋಡಿದರೆ ಅತಿ ಸಾಮಾನ್ಯವಾಗಿ ಅತ್ಯಲ್ಪವಾಗಿ ತೋರುವ ಆ ಸಂಬೋಧನೆ ಚಿಚ್ಛಕ್ತಿಯ ಎಂತಹ ವಿದ್ಯುತ್‌ಪ್ರವಾಹವನ್ನು ಆಲಿಸಿದವರ ಹೃದಯಗಳಲ್ಲಿ ಪ್ರಚೋದಿಸಿತೆಂಬುದನ್ನು ಸಾಕ್ಷಿಗಳಿಂದಲೆ ಅರಿಯಬೇಕು, ಅನುಭವಿಸಬೇಕು. ಅಸೀಮವಾಗಿದೆ ಅದರ ‘ಧ್ವನಿಶಕ್ತಿ’! ಊದಿದನಿತೂ ಉಜ್ವಲವಾಗುವ ಬೆಂಕಿಯಂತೆ ಭಾವಿಸಿದನಿತೂ ನಿರ್ದಿಗಂತವಾಗುತ್ತದೆ ಅದರ ವ್ಯಾಪ್ತಿ; ನಿಶ್ಶಿಖರವೆಂಬಂತೆ ಏರುತ್ತದೆ ಅದರ ಉನ್ನತ ದೀಪ್ತಿ.[2]

ಇಂದು ವಿವೇಕಾನಂದರ ಕೃಪೆಯಿಂದ ನಮಗೆ ನಿತ್ಯಾಚಾರದ ಸಾಮಾನ್ಯ ವಿಷಯಗಳಾಗಿ ತೋರುವ ಚಿಂತನಾಶಕ್ತಿಗಳು ಅಂದು ಆ ಜನಕ್ಕೆ ಸತ್ಯಕ್ಕೆ ತೆರೆದ ವೈಚಿತ್ರ್ಯಪೂರ್ಣವಾದ ನವೋನವ್ಯವಾದ ದಿವ್ಯವಾಕ್ಷಗಳಂತೆ ರಾರಾಜಿಸಿದುವು. ಆ ವಿಶಾಲದರ್ಶನದ ಔದಾರ್ಯಕ್ಕೆ ಅಲ್ಲಿಯವರೆಗೆ ಮತದೃಷ್ಟಿಯ ಸಂಕೋಚ ಕಾರ್ಪಣ್ಯಗಳು ಅಪ್ಪಳಿಸಿಹೋಗಿ ನಿಬ್ಬೆರಗಾದುವು. ಬಾವಿಯಲ್ಲೆ ಹುಟ್ಟಿ ಬೆಳೆದಿದ್ದ ಕಪ್ಪೆಗಳನ್ನು ಹಿಡಿದೆತ್ತಿ ಸಮುದ್ರಕ್ಕೆ ಬೀಸಿದಂತಾಗಿ ಅವರು

ತತ್ತರಿಸಿ ಹೋದರು: ಎಂದು ಪಥ ಅಂತು ಮತ! ದೃಷ್ಟಿಗಳೆನಿತೂ ದಾರಿಗಳನಿತು! ಪೂಜಿಸುವ ರೂಪಗಳೆಲ್ಲ ಪರಮಾತ್ಮನ ಪ್ರತಿಮೆಗಳೆ! ಭಕ್ತನ ಭಾವದಂತೆ ಭಗವಂತನ ಅವಿರ್ಭಾವ!

"ಪ್ರಭಿನ್ನೇ ಪ್ರಸ್ಥಾನೇ ಪರಮಿದಮದಃ ಪಥ್ಯಮಿತಿ ಚ
ರುಚೀನಾಂ ವೈಚಿತ್ರ್ಯಾದೃಜುಕುಟಿಲ ನಾನಾ ಪಥಜುಷಾಂ
ನೃಣಾಮೇಕೋ ಗಮ್ಯಸ್ತ್ವಮಸಿ ಪಯಸಾಮರ್ಣವ ಇವ"

"ಯೇ ಯಥಾ ಮಾಂ ಪ್ರಪದ್ಯಂತೇ ತಾಂಸ್ತಥೈವ ಭಜಾಮ್ಯಹಂ
ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ"

ಸೃಷ್ಟಿಯೆಲ್ಲ ಭಗವಂತನ ಅಭಿವ್ಯಕ್ತಿ. ಜೀವದಲ್ಲಿ ಶಿವನಿದ್ದಾನೆ. ಶಿವನೆ ಜೀವವಾಗಿದ್ದಾನೆ. ಜೀವತ್ವದಲ್ಲಿ ಶಿವತ್ವಸ್ಥಾಪನೆಯೆ ಬದುಕಿನ ಗಮ್ಯ; ಅದೇ ಸರ್ವ ಜೀವರ ಗಂತವ್ಯ. ಆದ್ದರಿಂದ ಸ್ವಮತಶ್ರೇಷ್ಠತಾಭ್ರಾಂತಿ ನಿಷಿದ್ಧ, ಅಕ್ಷಮ್ಯ, ಅವೈಜ್ಞಾನಿಕ. ಸಮಸ್ತ ಜಡಚೇತನಗಳಲ್ಲಿ ಅಂತರ್ಯಾಮಿಯಾಗಿರುವುದು ಏಕಮಾತ್ರ ಪರತತ್ತ್ವ. ಅದು ಚಿನ್ಮಯ, ಆನಂದಮಯ, ಸದ್ರೂಪ.

"ಭಯಾದಸ್ಯಾಗ್ನಿಸ್ತಪತಿ ಭಯಾತ್ತಪತಿ ಸೂರ್ಯಃ
ಭಯಾದಿಂದ್ರಶ್ಚ ವಾಯುಶ್ಚ ಮೃತ್ಯುರ್ಧಾವತಿ ಪಂಚಮಃ"
"ಆನಂದೋ ಬ್ರಹ್ಮೇತಿ ವ್ಯಜಾನಾತ್
ಆನಂದಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ
ಆನಂದೇನ ಜಾತಾನಿ ಜೀವಂತಿ
ಆನಂದಂ ಪ್ರಯಂತ್ಯಭಿಸಂವಿಶಂತಿ"

ಆದ್ದರಿಂದ ಭಯಬೇಡ; ಜುಗುಪ್ಸೆ ಸಲ್ಲದು. ಅಸೂಯಾದಿಗಳು ಅಜ್ಞಾನ ಜನ್ಯ. ತಿರಸ್ಕಾರ ಮಹಾಪಾಪ. ಪರಿಣಾಮಯಾತ್ರೆಯಲ್ಲಿ ಒಬ್ಬನು ಮುಂದೆ, ಇನ್ನೊಬ್ಬನು ಹಿಂದೆ; ಇಲ್ಲಿ ಶಕ್ತಿ, ಅಲ್ಲಿ ಅಶಕ್ತಿ ಅದು ಲೀಲಾವಿಧಾನ. ಈಶ್ವರ ವಿಭೂತಿಗಳಲ್ಲಿ ಲೀಲಾಕಾರಣವಾದ ತಾರತಮ್ಯಗಳಿದ್ದರೂ ನಿತ್ಯ ದೃಷ್ಟಿಯಲ್ಲಿ ಅವನು ಸರ್ವರಲ್ಲಿಯೂ ಸಮನಾಗಿದ್ದಾನೆ. "ತತಃಕೃತಾರ್ಥಾನಾಂ ಪರಿಣಾಮಕ್ರಮಸಮಾಪ್ತಿರ್ಗುಣಾನಾಂ" ಎಂದು ಯೋಗವಿಜ್ಞಾನಿ ಪತಂಜಲಿ ಹೇಳುವಂತೆ ವಿಕಾಸಪಥದಲ್ಲಿ ಮುಂದೆ ಮುಂದೆ ನಡೆದು ಕೊನೆಗೆ ಎಲ್ಲರೂ ಕೃತಾರ್ಥರಾಗಿಯೆ ಆಗುತ್ತಾರೆ. ಪರಮ ಪುರುಷಾರ್ಥ ಸಾಧನೆಯೆ ಸೃಷ್ಟಿಯ ಸರ್ವೋತ್ತಮೋದ್ದೇಶ!

ಆದ್ದರಿಂದ ಲೌಕಿಕವನ್ನು ಯಾರೂ ಅಲಕ್ಷಿಸದಿರಲಿ, ಏಕೆಂದರೆ ಅಲೌಕಿಕವು ಲೌಕಿಕದಲ್ಲಿಯೆ ಉನ್ಮೇಷಿತವಾಗಬೇಕು. ಋತಚಿತ್‌ಶಕ್ತಿ ನಮ್ಮ ವಿಶ್ವದ ಪರಿಣಾಮದ ಕ್ರಮವನ್ನು ಹಾಗೆ ಇಚ್ಛಿಸಿ, ಸಂಕಲ್ಪಿಸಿದೆ. ಒಮ್ಮೆ ವಿವೇಕಾನಂದರು ಕಲ್ಕತ್ತೆಯ ಮೃಗಶಾಲೆಗೆ ಭೇಟಿಯಿತ್ತರಂತೆ. ಅಲ್ಲಿಯ ಮುಖ್ಯಾಧಿಕಾರಿಯೊಡನೆ ಡಾರ್ವಿನ್ನನ ವಿಕಾಸವಾದ **(Theory of Evolution)** ವನ್ನು ಪ್ರಸ್ತಾಪಿಸುತ್ತಾ ಅದರ ನ್ಯೂನತೆಯನ್ನು ವಿವರಿಸಿ, ವೇದಾಂತದೃಷ್ಟಿಯಿಂದ ಅದನ್ನು ತಿದ್ದಿದರಂತೆ: "ಜಾತ್ಯಂತರ ಪರಿಣಾಮಃ ಪ್ರಕೃತ್ಯಾಪೂರಾತ್" ಎಂಬ ಯೋಗಸೂತ್ರದಂತೆ

ಆಪೂರಣದ ಪೂರ್ವಸ್ಥಿತಿ ಇಲ್ಲದೆ ಪರಿಣಾಮದ ಉತ್ತರಸ್ಥಿತಿ ಹೇಗೆ ಒದಗುತ್ತದೆ? ಯಾವ ಯಂತ್ರಕ್ಕಾಗಲಿ ನಾವು ತುಂಬುವಷ್ಟು ಶಕ್ತಿಯನ್ನು ಮಾತ್ರವೆ ಅದರಿಂದ ಪಡೆಯಲು ಸಾಧ್ಯ. ಆ ಶಕ್ತಿ ರೂಪಾಂತರ ಹೊಂದಬಹುದು; ಆದರೆ ಪ್ರಮಾಣಾಂತರ ಹೊಂದಲಾರದು. ಎಷ್ಟು ಪೆಟ್ರೋಲ್ ಹಾಕಿದರೆ ಅಷ್ಟು ದೂರ ಹೋಗುತ್ತದೆ ವಿಮಾನ; ಎಷ್ಟು ಕಲ್ಲಿದ್ದಲು ತುಂಬಿದರೆ ಅಷ್ಟು 'ದೂರ ಕೊಡುತ್ತದೆ' ರೈಲು. ಹಾಗೆಯೆ ಜೀವಿಗಳ ವಿಕಾಸಾತ್ಮಕವಾದ ಪರಿಣಾಮವೂ ತತ್‌ಪೂರ್ವವಾದ ಆಪೂರಣದ ಶಕ್ತಿ, ವೇಗ, ಪ್ರಮಾಣ, ಸಂಕಲ್ಪ, ಉದ್ದೇಶಾದಿಗಳ ಕ್ರಮದಲ್ಲಿಯೆ ಸಾಗುತ್ತದೆ. ಆ ಸಾಗುವಿಕೆಯ ಸ್ವಭಾವ ಮತ್ತು ಸ್ವಧರ್ಮಗಳಲ್ಲಿ ಜೀವಿಯಿಂದ ಜೀವಿಗೆ ಅಂತರವಿರುತ್ತದೆ. ಡಾರ್ವಿನ್ನನ 'ಬಲಕ್ಕೆ ಬದುಕು' 'ಬಲಿಷ್ಠನಿಗೆ ಬಾಳು' ಎಂಬ ನಿರಂತರ ಸ್ಪರ್ಧೆಯ ಸಿದ್ಧಾಂತವು ಪ್ರಾಣಿವರ್ಗದ ವಿಚಾರದಲ್ಲಿ ಸತ್ಯವಾಗುವಷ್ಟರಮಟ್ಟಿಗೆ ಮನುಷ್ಯವರ್ಗದಲ್ಲಿ ಪೂರ್ಣ ಸತ್ಯವಾಗುವುದಿಲ್ಲ. ಏಕೆಂದರೆ ಪರಿಣಾಮದಲ್ಲಿ ಮುಂದುವರಿದಂತೆಲ್ಲ ಸ್ಪರ್ಧೆಯ ಸ್ವರೂಪವೆ ವ್ಯತ್ಯಾಸವಾಗುತ್ತದೆ. ಮೊದಲು ಭೋಗಾತ್ಮಕವಾದದ್ದು ಕೊನೆಗೆ ತ್ಯಾಗಾತ್ಮಕವಾಗುತ್ತದೆ. ಸ್ವಭೋಗದಲ್ಲಿಯೆ ಸರ್ವತೃಪ್ತವಾಗುತ್ತಿದ್ದ ಪ್ರಾಣಿ ಸ್ವಾರ್ಥತ್ಯಾಗದಲ್ಲಿಯೆ ತನ್ನ ಆತ್ಮಭೋಗವನ್ನು ಅನುಭವಿಸುವ ಸಾಮರ್ಥ್ಯವನ್ನು ಪಡೆಯುತ್ತದೆ. ಮನುಷ್ಯತ್ವದಲ್ಲಿ. ಯಾವುದನ್ನು ಡಾರ್ವಿನ್ `**Strug**gle for Life' ಎಂದು ಕರೆಯುತ್ತಾನೆಯೊ ಅದನ್ನು ಪತಂಜಲಿ 'ಅಭಿನಿವೇಶ' ಎಂದು ಕರೆದಿದ್ದಾನೆ. ಅದು ಅಸ್ಮಿತಾಸಕ್ತಿ. 'ನಾನಿರಬೇಕು. ನಾನಿರಬೇಕು; ಬದುಕಬೇಕು, ಬದುಕಬೇಕು' ಎಂಬ ಆಸಕ್ತಿ. ಇದು ಪ್ರಾಣಿಗಳಲ್ಲಿ ಮಾತ್ರವಲ್ಲ. ಜ್ಞಾನಿಗಳಲ್ಲಿ ಕೂಡ ಇರುತ್ತದೆ ಈ ಅಭಿನಿವೇಶಸ್ವರವಾಹಿಯಾದದ್ದು. ತನಗೆ ತಾನೆ ರುಚಿಯಾದದ್ದು. ಬದುಕಿನ ಇತರ ಸವಿಗಳಿಗೆಲ್ಲ ಮೂಲ ಸವಿ ಬದುಕುವ ಸವಿ:

"ಸ್ವರಸವಾಹೀ ವಿದುಷೋsಪಿ ತಥಾರೂಢೋsಭಿನಿವೇಶಃ"
(ಯೋ.ಸೂ.೨, ೯.)

ಇದು ಪಶುಸಹಜವಾದರೂ ಮಾನವನಲ್ಲಿ ರೂಪಾಂತರ ಹೊಂದುತ್ತದೆ. ಬರಿಯ 'ಬದುಕಬೇಕು' ಎಂಬ ಆಸಕ್ತಿ 'ಅಮೃತನಾಗಬೇಕು' ಎಂಬ ಅಭೀಪ್ಸೆಯಾಗುತ್ತದೆ. ಆ ಅಮೃತತ್ವ ಪ್ರಾಣಿಸಹಜವಾದ ಭೋಗಸ್ಪರ್ಧೆಯಿಂದ ಸಿದ್ಧವಾಗದೆ ಪ್ರೇಮಸಹಜವಾದ ತ್ಯಾಗಸ್ಪರ್ಧೆಯಿಂದ ಲಭಿಸುತ್ತದೆ. ಆದ್ದರಿಂದ ಜಾತ್ಯಂತರ ಪರಿಣಾಮವು ಪ್ರಾಣಿವರ್ಗದಿಂದ ಮಾನವವರ್ಗಕ್ಕೆ ಕಾಲಿಟ್ಟಮೇಲೆಯೂ ಪ್ರಾಣಿವರ್ಗಕ್ಕೆ ಸ್ವಾಭಾವಿಕವಾಗಿದ್ದ ಹೋರಾಟದ ವಿಧಾನಗಳನ್ನು ಮತ್ತೆಯೂ ಮುಂದುವರಿಸುವುದು ಪ್ರಗತಿಶೀಲವಲ್ಲ; ಪುರೋಗಮನದ ಲಕ್ಷಣವಲ್ಲ; ತಿರೋಗಮನಕ್ಕೆ ಹಾದಿಯಾಗುತ್ತದೆ. ಆದ್ದರಿಂದ ಪಶುವರ್ಗದಿಂದ ಮಾನವಧರ್ಮವನ್ನು ಅಳೆಯುವುದು ತಪ್ಪು; ಪಶು ಸ್ವಭಾವದಿಂದ ಮಾನವಸ್ವಭಾವವನ್ನು ನಿರ್ಣಯಿಸುವುದಂತೂ ಪರಮ ಬೆಪ್ಪು. ಅಂತಹ ತಪ್ಪು ತತ್ತ್ವದಿಂದಾದ ಬೆಪ್ಪು ನಿರ್ಣಯಗಳನ್ನು ಒಪ್ಪಿಕೊಂಡೆ ಅಲ್ಲವೆ ದೇಶಗಳೂ ಜನಾಂಗಗಳೂ ಯುದ್ಧದಿಂದ ಯುದ್ಧಕ್ಕೂ ಅಶಾಂತಿಯಿಂದ ಅಶಾಂತಿಗೂ ಮುಗ್ಗುತ್ತಿರುವ ಸಂಕಟಕರ ದೃಶ್ಯವನ್ನು ನಾವಿಂದು ನೋಡುತ್ತಿದ್ದೇವೆ?

ಸ್ವಾಮಿಜಿಯ ಈ ಅದ್ಭುತ ವಾದವನ್ನು ಆಲಿಸಿದವರೊಬ್ಬರು, ಅವರು ಭಾರತೀಯರು, ಪ್ರಶ್ನಿಸಿದರಂತೆ: "ಹಾಗಾದರೆ ನೀವು ಅಮೆರಿಕಾದಿಂದ ಹಿಂತಿರುಗಿದ ಮೇಲೆ ಕೊಲೊಂಬೊದಿಂದ

ಆಲ್ಮೋರದವರೆಗೆ ಬಿರುಗಾಳಿಯಾಗಿ ಬೀಸಿದ ವಿದ್ಯುದ್ ಭಾಷಣಗಳಲ್ಲಿ ಲೌಕಿಕೋದ್ಧಾರ ಲೌಕಿಕಕ್ಷೇಮ ಲೌಕಿಕಶ್ರೀ ಲೌಕಿಕಬಲ ಇವುಗಳ ಸಾಧನೆ ಸಂಪಾದನೆಗಳನ್ನೆ ಕುರಿತು ನಮಗೆ ಹೇಳಿದ್ದೇಕೆ? ಈಸಬೇಕು, ಇದ್ದು ಜೈಸಬೇಕು; ಜೀವನ ಸ್ಪರ್ಧೆಯಲ್ಲಿ ಗೆದ್ದು ಬಾಳಬೇಕು ಎಂದು ಬೋಧಿಸಿದ್ದೇಕೆ?"

ತೆಕ್ಕನೆ ಉಕ್ಕಿತಂತೆ ಸ್ವಾಮಿಜಿಯ ಕಣ್ಣಿನಲ್ಲಿ ಧರ್ಮಕೋಪಜ್ವಾಲೆ. ಗುಡುಗಿ ಹೇಳಿದಂತೆ ಆ ಸಿಡಿಲಾಳು: "ನೀವು, ನೀವು ಭಾರತೀಯರು, ನೀವು ಮನುಷ್ಯರೆ? ನೀವು ಪಶುಗಳಿಗಿಂತ ಮೇಲಲ್ಲ. 'ಆಹಾರ ನಿದ್ರಾ ಭಯ ಮೈಥುನಂ ಚ' ನಿಮಗೂ ಚತುಷ್ಪಾದಿಗಳಿಗೂ ಏನು ಅಂತರ? ಏನೊ ಸ್ವಲ್ಪಮಾತ್ರವಾದರೂ ಬುದ್ಧಿಶಕ್ತಿ ಮಿನುಗುತ್ತಿರುವುದರಿಂದ ನಿಮಗಿನ್ನೂ ರೂಪಾಂತರ ಒದಗಿಲ್ಲ. ಇಲ್ಲದಿದ್ದರೆ ಇಷ್ಟು ಹೊತ್ತಿಗೆ ನೀವೆಲ್ಲ ಚತುಷ್ಪಾದಿಗಳಾಗುತ್ತಿದ್ದಿರಿ! ನೀವಿನ್ನೂ ಪಶುಸ್ವಭಾವದಲ್ಲಿಯೆ ಬಿದ್ದರಿವುದರಿಂದ ನಿಮಗೆ ಹೋರಾಡಿ ಗೆಲ್ಲುವ ಪಶುಧರ್ಮವನ್ನೆ ಬೋಧಿಸಬೇಕಾಯಿತು. ಮೊದಲು ಅನ್ನಮಯ ಪ್ರಾಣಮಯಗಳ ಸ್ಪರ್ಧೆಯಲ್ಲಿ ಗೆಲ್ಲಿ. ಆಮೇಲೆ ಮನೋಮಯ ವಿಜ್ಞಾನಮಯ ಆನಂದಮಯಗಳ ಹೋರಾಟಕ್ಕೆ ನಿಮಗೆ ಯೋಗ್ಯತೆ ಬರುತ್ತದೆ. 'ನಾಯಮಾತ್ಮಾ ಬಲಹೀನೇನ ಲಭ್ಯಃ' ನಿರ್ಬಲನಿಗೆಲ್ಲಿ ಆತ್ಮ ಸಾಕ್ಷಾತ್ಕಾರ?" ತಮ್ಮ ಶ್ರೇಯಸ್ಸಿಗಾಗಿ, ಜಗತ್ತಿನ ಶ್ರೇಯಸ್ಸಿಗಾಗಿ. ಭಾರತೀಯರು ಮೊತ್ತಮೊದಲು ತಮ್ಮ ಪ್ರೇಯಸ್ಸನ್ನು ಸಾಧಿಸಲೇಬೇಕು ಎಂಬುದು ವಿವೇಕಾನಂದರ ಕಟ್ಟಾಣೆ.

ಆ ಪ್ರೇಯಸ್ಸಾಧನೆಗೆ ಪೀಠಿಕಾಪ್ರಾಯವಾಗಿ ಭರತಖಂಡ ಇಂದು ಸ್ವಾತಂತ್ರ್ಯವನ್ನು ಸಂಪಾದಿಸಿದೆ. ಆಧ್ಯಾತ್ಮಿಕ ಕ್ಷೇಮಕ್ಕೆ ವಿರೋಧವಾಗದಂತೆ ಲೌಕಿಕವಾದ ಎಲ್ಲ ಅಭ್ಯುದಯಗಳನ್ನೂ ಅದು ಸಾಧಿಸಲೇಬೇಕು. ಆದರೆ ದಿಕ್ಕು ತಪ್ಪದಂತೆ ದಿವ್ಯ ಶ್ರೇಯಸ್ಸಿನ ಧರ್ಮಧ್ರುವತಾರೆಯ ಕಡೆ ಸದಾ ಒಂದು ಕಣ್ಣಿಟ್ಟಿರಬೇಕು. ಇಲ್ಲದಿದ್ದರೆ ಭಾರತವೂ ಬರಿಯ ಅಮೆರಿಕೆಯೊ ರಷ್ಯವೊ ಆಗಿಬಿಡುವ ದುರಂತಕ್ಕೆ ಗುರಿಯಾಗುತ್ತದೆ.[3]

ಸ್ವಾಮಿ ವಿವೇಕಾನಂದರ ಆಶಾವಾಣಿ ನಮ್ಮನ್ನು ಆ ದುರಂತಕ್ಕೆ ಇಳಿ ಬಿಡುವುದಿಲ್ಲ ಎಂಬುದಕ್ಕೆ ಅನೇಕ ನಿದರ್ಶನಗಳು ನಮಗೆ ಕಾಣಿಸುತ್ತಿವೆ. ಅದು ನಮ್ಮ ಪುಣ್ಯ, ಸೌಭಾಗ್ಯ. ಪೂಜ್ಯ ಗಾಂಧೀಜಿ, ಶ್ರೀ ಅರವಿಂದಾದಿ ಮಹಾ ವ್ಯಕ್ತಿಗಳಿಂದಲೂ ಶ್ರೀಮದ್ ಭಗವದ್ಗೀತೆ, ಶ್ರೀ ರಾಮಕೃಷ್ಣ ವಚನವೇದ,[4] 'ದಿವ್ಯ ಜೀವನ'[5] ಮೊದಲಾದ ಭವ್ಯ ವಾಙ್ಮಯ ಕೃತಿಗಳಿಂದಲೂ ಶ್ರೀ ರಾಮಕೃಷ್ಣ ಮಹಾಸಂಘ ಮೊದಲಾದ ಅಮರಸಂಸ್ಥೆಗಳಿಂದಲೂ ಪುನಃ ಪುನಃ ಪ್ರಣೀತವಾಗುತ್ತಿರುವ ಭಾರತೀಯವಾದ ಸರ್ವಧರ್ಮ ಸಮನ್ವಯ ದಿವ್ಯ ದೃಷ್ಟಿಯ ಅಮೃತಸೇಚನೆಯಿಂದ ಬಹುದೂರ ದೇಶಗಳಲ್ಲಿಯೂ ಅನೇಕ ಭಾಷಾಸಂಸ್ಕೃತಿಗಳಲ್ಲಿಯೂ ಈ ನವಯುಗ ಧರ್ಮವು ಅಪ್ರತಿಹತವಾಗಿ ಪ್ರಫುಲ್ಲಿತವಾಗುತ್ತಿದೆ. ಭರತಖಂಡ ಆಶಿಸುವ ಲೋಕ ನಾಯಕತ್ವದ ಅಂತಸ್ಥ ರಾಜಕೀಯವಾದುದಲ್ಲ. ಆಧ್ಯಾತ್ಮಿಕವಾದದ್ದು; ದರ್ಪಮನೋಭಾವದ್ದಲ್ಲ, ಸೇವಾ ಮನೋಭಾವದ್ದು; ಅದು ಸ್ವಾರ್ಥ ದೂರವಾಗಿ ಆಕೃತ್ರಿಮ ಸ್ನೇಹಪೂರ್ಣವಾದದ್ದು; ಸರ್ವೋದಯದ ವಿನಾ ಬೇರೆ ಪ್ರತಿಫಲಾಪೇಕ್ಷೆಯೂ ಇಲ್ಲದ ಅಹೇತುಕವಾದ ಪ್ರೇಮದಿಂದ ಪೂರ್ಣವಾದದ್ದು.[6]

ಈ ದಿವ್ಯ ಧ್ವನಿಯನ್ನೆ ಪ್ರತಿಧ್ವನಿಸುತ್ತಿದೆ, ರಾಜಕೀಯ ಸ್ವಾತಂತ್ರ್ಯವನ್ನು ಆಧ್ಯಾತ್ಮಿಕ ಶ್ರೇಯಸ್ಸಿಗೆ ಸಮರ್ಪಿಸುವ ವಾಗ್ದೇವಿಯ ಆಶೀರ್ವಾಣಿ:

“ಅರ್ಪಿತವಾಗಲಿ ಈ ಸ್ವಾತಂತ್ರ್ಯಂ
ಶ್ರೀ ಚಾಮುಂಡಿಯ ಪದತಲಕೆ!
ಅರ್ಪಿತವಾಗಲಿ ಈ ಸ್ವಾತಂತ್ರ್ಯಂ
ಶ್ರೀ ಪುರುಷೋತ್ತಮ ಕ್ರೀ ಬಲಕೆ!

ಅರ್ಪಿತವಾಗಲಿ ಈ ಸ್ವಾತಂತ್ರ್ಯಂ
ಪರಮಹಂಸ ಗುರುವರನಡಿಗೆ!

ಅರ್ಪಿತವಾಗಲಿ ಈ ಸ್ವಾತಂತ್ರ್ಯಂ
ಅರುಣಾಚಲ ಋಷಿಯೆದೆಗುಡಿಗೆ!

ಸಮರ್ಪಿತವಾಗಲಿ ಈ ಸ್ವಾತಂತ್ರ್ಯಂ
ಶ್ರೀ ಅರವಿಂದರ ಸಿರಿಮುಡಿಗೆ!

ಸಮರ್ಪಿತವಾಗಲಿ ಈ ಸ್ವಾತಂತ್ರ್ಯಂ
ಚಿರ ಕಲ್ಯಾಣಕೆ ಅಡಿಗಡಿಗೆ!”[7]

---

[1] ‘Take up one idea. Make that one idea your life: think of it: dream of it: live on that idea. Let the brain. muscles. nerves. every part of your body be full of that idea. and just leave every other idea alone. This is the way to success. and this is the way great spiritual giants are produced.’ – SWAMI VIVEKANANDA
[2] ‘ಸ್ವಾಮಿ ವಿವೇಕಾನಂದ.’ ಪು. ೧೪೭ ರಿಂದ ೧೫೧ರ ವರೆಗೆ ಓದಿ.
[3] ಸ್ವಾಮಿ ವಿವೇಕಾನಂದ, ‘ಕರೆಯುತಿದೆ ಯುಗವಾಣಿ’ ಎಂಬ ೧೭ನೆಯ ಅಧ್ಯಾಯ ನೋಡಿ.
[4] The Gospel of Sri Ramakrishna – By ‘M.’ Translated by Swami Nikhilananda. ಈಗ ಕನ್ನಡಕ್ಕೆ ಅನುವಾದಗೊಂಡಿದೆ.
[5] The Life Divine – By SRI AUROBINDO.
[6] ‘ಶ್ರೀ ರಾಮಕೃಷ್ಣ ಪರಮಹಂಸ’ ‘ಅನಂತರ’ ಎಂಬ ೮ನೆಯ ಅಧ್ಯಾಯ ನೋಡಿ.
[7] ಶ್ರೀಸ್ವಾತಂತ್ರ್ಯೋದಯ ಮಹಾಪ್ರಗಾಥಾ-ಕುವೆಂಪು

# ಪರಮಹಂಸರ ವಚನಾಮೃತದಲ್ಲಿ ದೃಷ್ಟಾಂತ ಕಥಾವಿಧಾನ

ಪ್ರತಿಮಾ, ಪ್ರತೀಕ, ಸಂಕೇತ, ನಿದರ್ಶನ, ದೃಷ್ಟಾಂತ, ಸಾಮತಿ ಈ ಎಲ್ಲ ವಿಧಾನಗಳೂ ನಾಗರಿಕತೆಯ ಪ್ರತ್ಯುಷೆಯ ಕಾಲದಿಂದಲೂ ಜ್ಞಾನಸಾಧನೆಗೆ ಪ್ರಣಾಳಿಕೆಗಳಾಗಿ ಮಾನವನ ಬುದ್ಧಿಶ್ರೀಯನ್ನೂ ಭಾವಶ್ರೀಯನ್ನೂ ಬೆಳೆಸುತ್ತಾ ಆತ್ಮಶ್ರೀಯನ್ನು ಬೆಳಗುತ್ತಾ ಬಂದಿದೆ, ವೇದಗಳಲ್ಲಿ ಉಪನಿಷತ್ತುಗಳಲ್ಲಿ ಪುರಾಣಗಳಲ್ಲಿ ಕಾವ್ಯಗಳಲ್ಲಿ ನೀತಿಕಥೆಗಳಲ್ಲಿ, ದೇಶವಿದೇಶಗಳ ಪವಿತ್ರಗ್ರಂಥಗಳಲ್ಲಿ, ವಿವಿಧ ಸಾಹಿತ್ಯಕೃತಿಗಳಲ್ಲಿ, ಋಷಿ ಆಚಾರ್ಯ ಅವತಾರಾದಿ ವಿಭೂತಿಪುರುಷರ ಉಪದೇಶಾಮೃತದಲ್ಲಿ. ಈ ವಿಧಾನಗಳ ನೆರವಿನಿಂದ ಅಗ್ರಾಹ್ಯ ಅಥವಾ ದುರ್ಗ್ರಾಹ್ಯವಾದ ಅಮೂರ್ತ ತತ್ತ್ವಗಳೂ ಮೂರ್ತವಾಗಿ, ಸಕಲ ಸುಲಭ ಗ್ರಾಹ್ಯವಾಗಿ, ಬಾಳಿನ ಬೇರಿಗೆ ಚಿತ್‌ಸುಧೆಯನ್ನೆರೆದು, ಬದುಕಿಗೆ ಶಕ್ತಿ ಪುಷ್ಟಿ ಜ್ಯೋತಿಗಳನ್ನಿತ್ತು, ಅದನ್ನು ನಿರಂತರವೂ ಉತ್ತಮತರವನ್ನಾಗಿಯೂ ಊರ್ಧ್ವಗಾಮಿಯನ್ನಾಗಿಯೂ ಮಾಡಿವೆ. ಅವು ಅತೀತದ ಅವತರಣಕ್ಕೆ ಸಹಾಯವಾದಂತೆಯೆ ಅವತರಿಸಿದ ಅತೀತವನ್ನು ಪೂರ್ಣವಾಗಿಯಾಗಲಿ ಆಂಶಿಕವಾಗಿಯಾಗಲಿ ಘನಗೈದು, ಲೌಕಿಕ ಸ್ಥೂಲವನ್ನಾಗಿ ಮಾಡಿ, ಪಾರ್ಥಿವ ಪ್ರಜ್ಞೆಯ ಸಾಮಾನ್ಯ ಸಾಮರ್ಥ್ಯಕ್ಕೂ ಯಾವಾಗ ಬೇಕೆಂದರಾಗ ಅತೀತದ ಸ್ಪರ್ಶ ನಿಲುಕುವಂತೆ ಮಾಡಿವೆ.

ಈ ಎಲ್ಲ ವಿಧಾನಗಳು ರೂಪತಃ ಒಂದೆ ವರ್ಗಕ್ಕೆ ಸೇರಿದಂತೆ ತೋರಿದರೂ ಸ್ವರೂಪತಃ ಅವುಗಳಲ್ಲಿ ವ್ಯತ್ಯಾಸವಿರುತ್ತದೆ. ಅವುಗಳಲ್ಲೆಲ್ಲ ಅತ್ಯಂತ ಶ್ರೇಷ್ಠವೂ ಗಹನವೂ ಜೀವಂತವೂ ಮಂತ್ರೋಪಮ ಶಕ್ತಿಪೂರ್ಣವೂ ದೇವತಾಸ್ವರೂಪ ಸದೃಶವೂ ಮತ್ತು ತನ್ನ ಅತ್ಯುತ್ತಮ ಅವಿರ್ಭಾವದಲ್ಲಿ ದೇವತಾಸಮಾನವೂ ಆಗಿರುವ ಪ್ರತಿಮಾವಿಧಾನವು ಪ್ರತಿಭಾಮಾತ್ರ ವಶವಾಗಿ 'ಬುದ್ಧಿಪೂರ್ವ'ವಾಗಿ ತನಗೆ ತಾನೆ ಮೂಡುವ ಸ್ವಭಾವವುಳ್ಳದ್ದು. ಪ್ರತೀಕವಿಧಾನವಾದರೊ ಭಾವದಿಂದ ಉದ್ಭವವಾದರೂ 'ಬುದ್ಧಿಪೂರ್ವಕ'ವಾಗಿಯೆ ಹೊಮ್ಮುವಂತಹುದು. ಸಂಕೇತವಿಧಾನವಂತೂ ಸಂಪೂರ್ಣವಾಗಿ ಬುದ್ಧಿಪೂರ್ವಕವಾಗಿಯೆ ಸಿದ್ಧವಾಗುತ್ತದೆ. ನಿದರ್ಶನ, ದೃಷ್ಟಾಂತ, ಸಾಮತಿ ಈ ವಿಧಾನಗಳು ಸಾಮಾನ್ಯವಾಗಿ ಆಲೋಚನೆಯ ಭೂಮಿಕೆಯಿಂದಲೆ ಸಿದ್ಧವಾಗತಕ್ಕವಾದರೂ ಸಮಯ ಸಂದರ್ಭಗಳಿಗೆ ಅನುಗುಣವಾಗಿ, ಉಪಯೋಗಿಸುವ ವ್ಯಕ್ತಿಯ ಶಕ್ತಿಗನುಗುಣವಾಗಿ, ವಿಷಯವನ್ನು ಮನಃಸ್ಪಷ್ಟವನ್ನಾಗಿ ಮಾಡುವುದರ ಜೊತೆಗೆ ಭಾವದೀಪ್ತವನ್ನಾಗಿಯೂ ಮಾಡುವ ಸಾಮರ್ಥ್ಯವನ್ನೂ ಪಡೆಯುತ್ತವೆ.

ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರ ಅದ್ಭುತವಾದ ಜೀವನಚರಿತ್ರೆಯನ್ನು ಓದುವವರಿಗೆ ಅವರ ಸಾಧನೆ ಮತ್ತು ಸಿದ್ಧಿಗಳ ಭೂಮಿಕೆಯಲ್ಲಿ ಈ ಪ್ರತಿಮಾವಿಧಾನವು ಹೆಜ್ಜೆಹೆಜ್ಜೆಗೂ ಮಿಂಚಿ ಮೂಡುವ ಮಹತ್ತು ಗೋಚರಿಸುತ್ತದೆ. "ಒಂದು ದಿನ ನಾನು ಧ್ಯಾನಕ್ಕೆ ಕುಳಿತಿದ್ದಾಗ ನನ್ನ ದೇಹದಿಂದಲೆ ತೇಜಸ್ವಿಯಾದ ಸನ್ಯಾಸಿಯೊಬ್ಬನು ತ್ರಿಶೂಲಧಾರಿಯಾಗಿ ಹೊರಗೆ ಬಂದು ಏಕಾಗ್ರತೆಯಿಂದ ಧ್ಯಾನಮಾಡುವಂತೆ ನನಗೆ ಆಜ್ಞೆಮಾಡಿದನು. ಹಾಗೆ ಮಾಡದಿದ್ದರೆ ತ್ರಿಶೂಲದಿಂದ ತಿವಿಯುವೆನೆಂದೂ ಹೆದರಿಸಿದನು. ಅಷ್ಟರಲ್ಲಿ ಕರಿಯ ದೇಹದ ಪಾಪಪುರುಷನು ನನ್ನ ದೇಹದಿಂದಲೆ ಹೊರಕ್ಕೆ ಹಾರಿದನು. ತ್ರಿಶೂಲಧಾರಿಯಾದ ಸನ್ಯಾಸಿ ಅವನನ್ನು ಅಲ್ಲಿಯೆ ತಿವಿದು ಕೊಂದುಬಿಟ್ಟನು." ಪಾಪಪುಣ್ಯಗಳ ಸ್ವರೂಪ, ಪಾಪವನ್ನು

ನಿರಸನಗೊಳಿಸುವ ಪುಣ್ಯದ ಲಕ್ಷಣ, ಪಾಪಪುಣ್ಯಗಳ ಹೋರಾಟ, ಕೊನೆಯದಾಗಿ ಪಾಪದ ವಿನಾಶ ಮತ್ತು ಪುಣ್ಯದ ಜಯ ಇವೆಲ್ಲವೂ ಪರಮಹಂಸರಿಗಾದ ಪ್ರತಿಮಾವಿಧಾನದ ಆ ಅನುಭವದಲ್ಲಿ ಎಷ್ಟು ಜೀವಂತವಾಗಿ ಸಶಕ್ತವಾಗಿ ನಾಟಕೀಯವಾಗಿ ಸತ್ಯವಾಗಿ ಮೂರ್ತಗೊಂಡಿವೆ! ಅವರ ಮಧುರಭಾವದ ಸಾಧನೆ, ವಾತ್ಸಲ್ಯಭಾವ ಸಾಧನೆ, ದಾಸ್ಯಭಾವ ಸಾಧನೆ, ಕ್ರಿಸ್ತ ಪೈಗಂಬರಾದಿ ವಿಭೂತಿ ಪುರುಷರೂ ದೇವದೇವತೆಗಳೂ ಪ್ರತ್ಯಕ್ಷರಾಗಿ ತಮ್ಮಲ್ಲಿಯೆ ವಿಲೀನವಾಗುವ ಮೂರ್ತ ಚಿತ್ರಗಳು, ನರೇಂದ್ರನೇ ನರಮಹರ್ಷಿ ಎಂಬುದನ್ನು ಸೂಚಿಸುವಾಗ ತಾವು ಕಂಡುದೆಂದು ವರ್ಣಿಸುವ ಅತ್ಯಂತ ಸುಂದರವೂ ಭವ್ಯವೂ ಆಗಿರುವ ಒಂದು ದರ್ಶನ-ಇಂತಹ ನೂರಾರು ಪ್ರಸಂಗಗಳಲ್ಲಿ ಪ್ರತಿಮಾವಿಧಾನದ ವೈಭವವನ್ನೂ ವೈವಿಧ್ಯವನ್ನೂ ಸಂದರ್ಶಿಸುತ್ತೇವೆ. ಆ ವಿಚಾರವಾಗಿ ಪರಮಹಂಸರು ಕೊಡುತ್ತಿದ್ದ ವಿವರಣೆ 'ತಾಯಿ ನನಗೆ ತೋರಿಸುತ್ತಾಳೆ' ಎಂಬುದಾಗಿತ್ತು. ಎಂದರೆ ಅಂತಹ 'ತೋರುವಿಕೆ'ಗೆ ವ್ಯಕ್ತಿಯ ಬಾಹ್ಯಪ್ರಜ್ಞೆಯಾಗಲಿ ಜಾಗ್ರತ್‌ಸತ್ತೆಯ ಸಾಮಾನ್ಯ ಬುದ್ಧಿಯಾಗಲಿ ವ್ಯಕ್ತಿಪ್ರಯತ್ನವಾಗಲಿ ನೇರವಾದ ಕಾರಣಗಳಾಗುವುದಿಲ್ಲ.

ಪರಮಹಂಸರ ಬದುಕಿನಲ್ಲಿ, ಅವರ ಸಾಧನೆ ಸಿದ್ಧಿ ಸಂವಾದೋಪದೇಶಗಳಲ್ಲಿ ಪ್ರತಿಮಾವಿಧಾನದ ಸ್ಥಾನ ವಿಶೇಷವಾದುದಾದರೂ ಇತರ ವಿಧಾನಗಳ ಸ್ಥಾನ ಕಡಿಮೆಯಾದುದೇನಲ್ಲ. ಮಾಸ್ಟರ್ ಮಹಾಶಯನು ಬರೆದಿಟ್ಟಿರುವ ಅವರ 'ವಚನಾಮೃತ'ದ ಬೃಹತ್‌ಕೃತಿಯನ್ನು ಓದುವವರು ನಿದರ್ಶನ, ದೃಷ್ಟಾಂತ, ಸಾಮತಿಗಳ ವಿಧಾನವನ್ನೂ ಯಥೇಚ್ಛವಾಗಿ ಎದುರುಗೊಳ್ಳುತ್ತಾರೆ. ಅವರ ಸಂವಾದಗಳಲ್ಲಿ ಕಂಡುಬರುವ ವಿಶೇಷ ವೈಶಿಷ್ಟ್ಯವೆ ಅದು. ಸಾವಿರಾರು ಪುಟಗಳಲ್ಲಿ ಬಹುಶಃ ಯಾವ ಒಂದು ಪುಟವೂ ಆ ವಿಶಿಷ್ಟತೆಯಿಂದ ಚ್ಯುತವಾಗುವುದಿಲ್ಲವೆಂದು ತೋರುತ್ತದೆ. ಆ ವಿಶಿಷ್ಟತೆಯೆ ಅದರ ಸ್ವಾರಸ್ಯವನ್ನು ಕಾಪಾಡಿಕೊಂಡು ಬರುತ್ತದೆ. ಚಿಕ್ಕವರಿಗಾಗಲಿ ದೊಡ್ಡವರಿಗಾಗಲಿ, ಪಾಮರರಿಗಾಗಲಿ ಪಂಡಿತರಿಗಾಗಲಿ, ಅತ್ಯಂತ ಗಹನವಾದ ಜ್ಞಾನ ವಿಷಯವಾಗಲಿ ಅತ್ಯಂತ ತೀವ್ರವಾದ ಭಕ್ತಿಯ ವಿಷಯವಾಗಲಿ, ಎಲ್ಲರಿಗೂ ಯಾವಾಗಲೂ ತಿಳಿಯಾಗಿ ಅರ್ಥವಾಗುವಂತೆ ತೋರಿ ತೃಪ್ತಿಯನ್ನುಂಟುಮಾಡುತ್ತದೆ. ನಿಜ, ಓದುವವರ ಸಂಸ್ಕಾರ ಬೆಳೆದಂತೆಲ್ಲ ಆ ಮಾತುಗಳ ಆ ದೃಷ್ಟಾಮತ ಆ ಸಾಮತಿಗಳ ಅರ್ಥಭಾವ ತತ್ತ್ವಗಳ ವ್ಯಾಪ್ತಿ ಬೆಳೆಯುತ್ತಾ ಹೋಗುತ್ತದೆ. ಕೊನೆಕೊನೆಗೆ ಅವುಗಳ ಮಿತಿಯೇ ಇಲ್ಲದಂತೆಯೂ ತೋರುತ್ತದೆ. ಆದರೆ ಯಾರಿಗೂ ಯಾವ ಸಂದರ್ಭದಲ್ಲಿಯೂ ನಿರಾಶೆಯನ್ನಾಗಲಿ ಭಯವನ್ನಾಗಲಿ ಉಂಟು ಮಾಡುವುದಿಲ್ಲ. ಅಶೋಕವನದಲ್ಲಿ ಸೀತಾದೇವಿಯ ಮುಂದೆ ನಿಂತ ಅಂಗುಷ್ಟ ಮಾತ್ರ ಗಾತ್ರದ ಆಂಜನೇಯನಂತೆ ಅವಶ್ಯಬಿದ್ದಾಗ ವಿರಾಡ್ರೂಪವನ್ನು ತಾಳಬಲ್ಲುವಾದರೂ ಅಣುವನ ಅಣುತ್ವ ವಿನಯವನ್ನು ಉಲ್ಲಂಘಿಸುವುದಿಲ್ಲ.

ನಿದರ್ಶನ ಮತ್ತು ದೃಷ್ಟಾಂತಗಳ ವಿಷಯ ನಮಗಿಲ್ಲಿ ಅಪ್ರಕೃತ. ನಮಗಿಲ್ಲಿ ಸಂಗತವಾದದ್ದು ದೃಷ್ಟಾಂತ ಕಥೆ, ಎಂದರೆ ಸಾಮತಿ. ಸಾಮತಿ ಯಾವಾಗಲೂ ಒಂದು ಕಥಾರೂಪದಲ್ಲಿಯೆ ಇರುತ್ತದೆ. ಅದು ಒಂದು ನೀತಿಯನ್ನಾಗಲಿ ಒಂದು ತತ್ತ್ವವಿಷಯವನ್ನಾಗಲಿ, ಒಂದು ಭಾವವನ್ನಾಗಲಿ ಇಂಗಿತದಿಂದ ಸೂಚಿಸುತ್ತದೆ, ಕಾವ್ಯವು ಧ್ವನಿಕ್ರಮದಿಂದ ತನ್ನ ಕಾರ್ಯಸಾಧನೆ ಮಾಡುವಂತೆ ಅದು ಮೂರ್ತವಾಗಿರುವುದರಿಂದ, ಸ್ಥೂಲವಾಗಿರುವುದರಿಂದ, ವಿಗ್ರಹ ಸದೃಶವಾಗಿರುವುದರಿಂದ ಮನಸ್ಸು ಅದನ್ನು ಸುಲಭವಾಗಿ ಹಿಡಿದು ಬಹುಕಾಲ ಇಟ್ಟುಕೊಳ್ಳಬಲ್ಲುದು; ಇನ್ನೊಬ್ಬನಿಗೆ ಕೊಡಲೂ ಕಷ್ಟವಾಗುವುದಿಲ್ಲ. ಬರಿಯ

ತತ್ತ್ವಪ್ರತಿಪಾದನೆಯಿಂದಾಗಬಹುದಾದ, ನಿಷ್ಕೃಷ್ಟತೆಯಿಂದಲೇ ಒಮ್ಮೊಮ್ಮೆ ಒದಗುವ, ಗಣಿತವರ್ತನೆಯಿಂದ ಸಂಭವಿಸಬಹುದಾದ, ಅಪಾಯವಿರುವುದಿಲ್ಲ. ಕಥೆಯ ಸ್ವಾರಸ್ಯ, ತತ್ತ್ವದ ಸೂಕ್ಷ್ಮತೆ, ನೀತಿಯ ಮೈತ್ರಿ, ಭಾವದ ಜೀವಂತತೆ ಇವೆಲ್ಲವನ್ನೂ ಒಳಗೊಂಡಿರುತ್ತದೆ ಸಾಮತಿ.

ಆಲಿಸಿ: ಶಾಸ್ತ್ರಜ್ಞಾನದ ತಪ್ಪುತಿಳಿವಳಿಕೆಯಿಂದ ಆಗುವ ಪ್ರಮಾದವನ್ನು ಹೇಗೆ ಸೂಚಿಸುತ್ತದೆ, ಹೇಗೆ ತಿದ್ದುತ್ತದೆ ಈ 'ಮಾವಟಿಗಬ್ರಹ್ಮ'ನ ಸಾಮತಿ:

ಗುರು ಶಿಷ್ಯರಿಗೆ ಬೋಧಿಸುತ್ತಾನೆ: 'ಸರ್ವವೂ ಬ್ರಹ್ಮ, ಪ್ರತಿಯೊಂದು ವಸ್ತುವನ್ನೂ ಬ್ರಹ್ಮವೆಂದು ತಿಳಿದು ನಮಸ್ಕರಿಸಿ. 'ಉಪದೇಶಾಮೃತವನ್ನು ಸವಿದ ಶಿಷ್ಯರು ಸಮಿತ್ತು ತರಲು ಬಳಿಯ ವನಕ್ಕೆ ಹೋಗುತ್ತಾರೆ. ಹಠಾತ್ತನೆ 'ದಾರಿ ಬಿಡಿ! ದಾರಿ ಬಿಡಿ!' ಎಂದು ಎಚ್ಚರಿಕೆಯ ಕೂಗು ಕೇಳಿಸುತ್ತದೆ. ತಲೆಯೆತ್ತಿ ನೋಡುತ್ತಾರೆ: ಮದಿಸಿದ ಆನೆಯೊಂದು ತಮ್ಮೆಡೆಗೆ ಧಾವಿಸುತ್ತಿದೆ! ಮೇಲೆ ಕುಳಿತ ಮಾವಟಿಗ 'ದಾರಿ ಬಿಡಿ! ಅಪಾಯ! ದಾರಿ ಬಿಡಿ!' ಎಂದು ಒರಲುತ್ತಿದ್ದಾನೆ. ಶಿಷ್ಯರು ಓಡಿದರು, ಒಬ್ಬನು ವಿನಾ. ಅವನು ದಾರಿ ಬಿಡದೆ ನಿಂತಲ್ಲಿಯೆ ತರ್ಕಿಸಿದ: 'ಆನೆಯೂ ಬ್ರಹ್ಮ, ನಾನೂ, ಬ್ರಹ್ಮ. ಬ್ರಹ್ಮ ಬ್ರಹ್ಮಕ್ಕೆ ಹೆದರಲೇಕೆ? ಗುರು ಬೋಧಿಸಿದಂತೆ ಸರ್ವವೂ ಬ್ರಹ್ಮ ಎಂದು ನಮಸ್ಕರಿಸಬೇಕು.' ಮಾವಟಿಗ ಕೂಗಿದ: 'ದಾರಿ ಬಿಡು, ಸಾಯುತ್ತೀಯೆ!' ಶಿಷ್ಯ ಕದಲಲಿಲ್ಲ. ಆನೆ ಅವನನ್ನು ಸೊಂಡಿಲಿನಿಂದ ಹಿಡಿದು ದೂರಕ್ಕೆಸೆದು ಮುಂದೆ ನುಗ್ಗಿತು. ಗುರುಗಳಿಗೆ ಸಿದ್ದಿ ಮುಟ್ಟಲು ಅವರು ಶಿಷ್ಯಸಮೇತರಾಗಿ ಅಲ್ಲಿಗೆ ಬಂದು ಮೈಯೆಲ್ಲ ನುಗ್ಗುನುರಿಯಾಗಿ ರಕ್ತಮಯವಾಗಿ ಜ್ಞಾನತಪ್ಪಿ ಬಿದ್ದಿದ್ದ ಶಿಷ್ಯನನ್ನು ಎತ್ತಿಕೊಂಡು ಹೋಗಿ ಶುಶ್ರೂಷೆ ಮಾಡಿದರು. ಸ್ವಲ್ಪ ಹೊತ್ತಿನ ಮೇಲೆ ಅವನಿಗೆ ಎಚ್ಚರವಾಯಿತು. ಗುರು ಕೇಳಿದರು: 'ವತ್ಸ, ಅದೇಕೆ ದಾರಿ ಬಿಡದೆ ಅಪಾಯಕ್ಕೊಳಗಾದೆ? ಮಾವಟಿಗ ಕೂಗಿದ್ದು ಕೇಳಿಸಲಿಲ್ಲವೆ?' ಶಿಷ್ಯನೆಂದ 'ಸ್ವಾಮಿ, ಸರ್ವವೂ ಬ್ರಹ್ಮ ಎಂದು ಉಪದೇಶಮಾಡಿದ್ದಿರಿ. ಆನೆಯನ್ನು ಬ್ರಹ್ಮವೆಂದು ಭಾವಿಸಿ ಅಲುಗಾಡದೆ ನಿಂತುಬಿಟ್ಟೆ.' ಗುರು ವ್ಯಥೆಯಿಂದ ಹೇಳಿದರು: ವತ್ಸ. ಓಡಿಬಂದುದೇನೋ ಗಜಬ್ರಹ್ಮವೇ ದಿಟ. ಆದರೆ ಅದರ ಮೇಲಿದ್ದ ಮಾವಟಿಗಬ್ರಹ್ಮ ದಾರಿ ಬಿಡುವಂತೆ ನಿನಗೆ ಕೂಗಿ ಹೇಳಲಿಲ್ಲವೆ? ಸರ್ವವೂ ಬ್ರಹ್ಮವೆಂಬುದು ಸತ್ಯ. ಆದರೆ ಆನೆ ಬ್ರಹ್ಮವಾದರೆ ಮಾವಟಿಗನೂ ಬ್ರಹ್ಮವಲ್ಲವೇ? ಮಾವಟಿಗಬ್ರಹ್ಮನ ಮಾತನ್ನೇಕೆ ಕೇಳಲಿಲ್ಲ?

ಇದು ಇನ್ನೊಂದು ಸಾಮತಿ. ಆಚರಣೆಯ ದೃಷ್ಟಿಯಿಂದ ಹಿಂಸೆ ಅಹಿಂಸೆಗಳ ತತ್ತ್ವಸೂಕ್ಷ್ಮವನ್ನು ಬೋಧಿಸುತ್ತದೆ ಈ 'ಸನ್ಯಾಸಿ ಮತ್ತು ಸರ್ಪದೀಕ್ಷೆ'ಯ ಸಾಮತಿ:

ಹುಡುಗರು ದನ ಮೇಯುಸುತ್ತಿದ್ದ ಒಂದು ಹಕ್ಕಲಿನಲ್ಲಿ ಒಂದು ವಿಷಸರ್ಪವಿತ್ತು. ಅದರ ಹೆದರಿಕೆಯಿಂದ ಅಲ್ಲಿ ತಿರುಗಾಡುವವರೆಲ್ಲ ಕೈಯಲ್ಲಿ ಜೀವ ಹಿಡಿದುಕೊಂಡೆ ತಿರುಗಾಡಬೇಕಿತ್ತು. ಒಂದು ದಿನ ಒಬ್ಬ ಸನ್ಯಾಸಿ ಆ ದಾರಿಯಲ್ಲಿ ಹೋಗುತ್ತಿದ್ದ. ದನಕಾಯುವ ಹುಡುಗರು ಅವನೆಡೆಗೆ ಓಡಿ 'ಸ್ವಾಮಿ, ಅಲ್ಲಿ ಹೋಗಬೇಡಿ. ಅಲ್ಲೊಂದು ಘಟಸರ್ಪ ಇದೆ' ಎಂದರು. ಅವನು ಮುಗುಳುನಗುತ್ತಾ 'ಚಿಂತೆಯಿಲ್ಲ, ಮಕ್ಕಳಿರಾ, ನನಗೆ ಮಂತ್ರಬಲವಿದೆ' ಎಂದು ಮುಂದುವರಿದು ಹೋದ. ಹುಡುಗರಾರೂ ಹೆದರಿಕೆಯಿಂದ ಅವನ ಜೊತೆ ಹೋಗಲಿಲ್ಲ. ಅಷ್ಟರಲ್ಲಿ ಆ ಹಾವು ಹೆಡೆಯೆತ್ತಿ ಸನ್ಯಾಸಿಯ ಕಡೆ ನುಗ್ಗಿ ಬಂತು. ಹತ್ತಿರ ಬಂದೊಡನೆ ಸನ್ಯಾಸಿ ಹಾಕಿದ ಮಂತ್ರಕ್ಕೆ ಅಧೀನವಾಗಿ ಸೋತು ಅವನ ಪಾದಕ್ಕೆರಗಿತು.

ಸನ್ಯಾಸಿ ಆಶೀರ್ವದಿಸಿ ಹೇಳಿದ: 'ನೀನು ಸುಮ್ಮನೆ ಏಕೆ ಎಲ್ಲರಿಗೂ ಹಿಂಸೆ ಕೊಡುತ್ತಿದ್ದೀಯೆ? ನಿನಗೆ ಮಂತ್ರೋಪದೇಶ ಕೊಡುತ್ತೇನೆ. ಅದನ್ನು ಜಪಿಸುತ್ತಿದ್ದರು. ನಿನ್ನಲ್ಲಿ ಭಗವದ್ ಭಕ್ತಿ ಉಂಟಾಗುತ್ತದೆ. ಕೊನೆಯಲ್ಲಿ ನಿನಗೆ ಅವನ ಸಾಕ್ಷಾತ್ಕಾರವೂ ಆಗಿ ನಿನ್ನ ಹಿಂಸಾಗುಣ ಸಂಪೂರ್ಣವಾಗಿ ಬಿಟ್ಟು ಹೋಗುತ್ತದೆ.' ಹೀಗೆಂದು ಅದಕ್ಕೆ ಮಂತ್ರೋಪದೇಶ ಮಾಡಿದನು. ಹಾವು ಗುರುವಿಗೆ ತಲೆಬಾಗಿ 'ಸಾಧನೆಯ ಕ್ರಮವನ್ನು ಬೋಧಿಸುವ ಕೃಪೆ ಮಾಡಬೇಕು ಎಂದಿತು. 'ಮಂತ್ರಜಪ ಮಾಡುತ್ತಿರು; ಯಾರಿಗೂ ಹಿಂಸೆ ಕೊಡಬೇಡ! ನಾನು ಮತ್ತೊಮ್ಮೆ ನಿನ್ನನ್ನು ಬಂದು ನೋಡುತ್ತೇನೆ' ಎಂದು ಹೇಳಿ ಸನ್ಯಾಸಿ ಹೊರಟುಹೋದನು.

ಹಾವು ಅಹಿಂಸಾವ್ರತವನ್ನು ಕೈಗೊಂಡಮೇಲೆ ಯಾರನ್ನೂ ಕಚ್ಚುತ್ತಿರಲಿಲ್ಲ; ಅಟ್ಟುತ್ತಲೂ ಇರಲಿಲ್ಲ. ಇದನ್ನು ಗಮನಿಸಿದ ದನಕಾಯುವ ಹುಡುಗರು ಮೊದಮೊದಲು ಅದರ ಕಡೆಗೆ ದೂರದಿಂದ ಕಲ್ಲೆಸೆದರು. ಅದು ಏನೂಮಾಡದೆ ಒಂದು ಎರೆ ಹುಳುವಿಗಿಂತ ಸಾಧುಪ್ರಾಣಿಯಾಗಿದ್ದುದನ್ನು ಕಂಡು ಹತ್ತಿರಕ್ಕೂ ಹೋದರು. ಕೊನೆಗೆ ಅದರ ಬಾಲವನ್ನು ಹಿಡಿದು ಗಿರನೆ ತಿರುಗಿಸಿ ನೆಲ್ಕಕೆ ಮತ್ತೆಮತ್ತೆ ಅಪ್ಪಳಿಸಿಯೂ ಬಿಟ್ಟರು. ಹಾವು ರಕ್ತ ಕಾರಿಕೊಂಡು ನಿಶ್ಚೇಷ್ಟಿತವಾಗಿ ಬಿದ್ದಿತು. ಸತ್ತುಹೋಯಿತೆಂದು ನಿಶ್ಚಯಮಾಡಿಕೊಂಡು ಹುಡುಗರು ಹೊರಟುಹೋದರು.

ರಾತ್ರಿ ಬಹಳ ಹೊತ್ತಾದ ಮೇಲೆ ತಂಗಾಳಿ ಬೀಸಿ ಅದಕ್ಕೆ ಪ್ರಜ್ಞೆ ಮರಳಿತು. ಮೈಯೆಲುಬೆಲ್ಲ ನುಗ್ಗಾಗಿತ್ತು. ಹೇಗೋ ಕಷ್ಟದಿಂದ ಹೊರಳಿಕೊಂಡು ಹೋಗಿ ತನ್ನ ಹುತ್ತ ಹೊಕ್ಕಿತು. ಆಘಾತದ ಪರಿಣಾಮವಾಗಿ ಅದು ಬರಿಯ ಚರ್ಮ ಹೊದೆದ ಎಲುಬುಗೂಡಾಯಿತು. ರಾತ್ರಿಕಾಲದಲ್ಲಿ ಮಾತ್ರ ಹೊರಗೆ ಬಂದು ಸೊಪ್ಪುಸದೆ ಹಣ್ಣುಹಂಪಲು ತಿಂದು ಜೀವಿಸುತ್ತಿತ್ತು.

ಒಂದು ವರ್ಷದ ಮೇಲೆ ಸನ್ಯಾಸಿ ಮತ್ತೆ ಆ ದಾರಿಯಲ್ಲಿ ಬರುತ್ತಾ ಹಾವು ಏನಾಯಿತೆಂದು ದನಗಾಹಿಗಳನ್ನು ಕೇಳಿದನು. 'ಅದು ಎಂದೋ ಸತ್ತು ಹೋಯಿತು' ಎಂದರು. ತಾನು ಕೊಟ್ಟ ದೀಕ್ಷೆ ಸಫಲವಾಗಿ ಮಂತ್ರ ಸಿದ್ಧಿಯಾಗುವವರೆಗೂ ಹಾವಿಗೆ ಸಾವಿಲ್ಲವೆಂದು ಅವನಿಗೆ ಗೊತ್ತು. ಹಕ್ಕಲಿನಲ್ಲಿ ಹಾವಿರುತ್ತಿದ್ದ ಜಾಗಕ್ಕೆ ಹೋಗಿ ಕೂಗಿ ಕರೆದನು. ಗುರುವಾಣಿಯನ್ನು ಆಲಿಸಿ ಹಾವು ಹೊರಗೆಬಂದು ಪಾದಕ್ಕೆ ಭಕ್ತಿಯಿಂದ ನಮಸ್ಕರಿಸಿತು. ಗುರು 'ಕ್ಷೇಮವಾಗಿದ್ದೀಯಾ?' ಎಂದು ಕೇಳಿದನು. 'ಕ್ಷೇಮವಾಗಿದ್ದೇನೆ' ಎಂದಿತು ಹಾವು. 'ಯಾಕೆ ಬಹಳ ಬಡವಾಗಿದ್ದೀಯಲ್ಲಾ?' 'ಯಾರಿಗೂ ಹಿಂಸೆ ಕೊಡಬಾರದೆಂದು ಅಪ್ಪಣೆಕೊಡಿಸಿದ್ದಿರಿ. ಆದ್ದರಿಂದ ಸೊಪ್ಪುಸದೆ ತರಗೆಲೆ ತಿನ್ನುತ್ತಾ ಜೀವಿಸುತ್ತಿದ್ದೇನೆ. ಆ ಕಾರಣದಿಂದ ಕೊಂಚ ತೆಳ್ಳಗಾಗಿರಬಹುದು.'

ಹಾವಿಗೆ ಆಗಲೆ ಸತ್ತ್ವಗುಣ ವೃದ್ಧಿಯಾಗಿದ್ದುದರಿಂದ ಅದು ಯಾರ ಮೇಲೆಯೂ ಕೋಪಗೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಹುಡುಗರು ಮಾಡಿದ್ದೆಲ್ಲ ಮರೆತೇ ಹೋಗಿತ್ತು.

ಸನ್ಯಾಸಿ ಕೇಳುತ್ತಾನೆ: 'ಬರಿಯ ಆಹಾರ ಬದಲಾವಣೆಯಿಂದಲೆ ಹೀಗೆ ಎಲುಬು ಚಕ್ಕಳ ಆಗಲು ಸಾಧ್ಯವಿಲ್ಲ. ಇನ್ನೇನೋ ನಡೆದಿರಬೇಕು. ನೆನಪು ತಂದುಕೋ.'

ಹಾವಿಗೆ ನೆನಪಾಗಿ ಹೇಳಿತು 'ಹೌದು ಸ್ವಾಮಿ, ಮರೆತಿದ್ದೆ. ದನಕಾಯುವ ಹುಡುಗರು ಒಂದು ದಿನ ನನ್ನನ್ನು ಬಾಲಹಿಡಿದು ನೆಲಕ್ಕೆ ಅಪ್ಪಳಿಸಿಬಿಟ್ಟರು. ಪಾಪ, ಆ ಮಕ್ಕಳಿಗೆ ಏನುಗೊತ್ತು? ನನ್ನಲ್ಲಾದ ಪರಿವರ್ತನೆ ಅವರಿಗೆ ಹೇಗೆ ಗೊತ್ತಾಗಬೇಕು?'

ಸನ್ಯಾಸಿ ಹೇಳಿದ" 'ಅಯ್ಯೋ ಪೆಚ್ಚೆ, ನಿನಗೇನು ಹಿಡಿಯಿತು ಈ ಬೆಪ್ಪು? ಮೂರ್ಖ, ನಿನ್ನನ್ನು ನೀನು ರಕ್ಷಿಸಿಕೊಳ್ಳುವುದಕ್ಕೆ ಗೊತ್ತಾಗಲಿಲ್ಲವೆ? ಕಚ್ಚಿ ಕೊಲ್ಲಬೇಡ ಎಂದರೆ ಬುಸ್ಸೆಂದು ಹೆದರಿಸಬೇಡ ಎಂದೆನೆ? ಹೆಡೆಯೆತ್ತಿ ಬುಸ್ಎಂದಿದ್ದರೆ ಹುಡುಗರು ನಿನ್ನ ಗೋಜಿಗೇ ಬರುತ್ತಿರಲಿಲ್ಲ.'

ಸತ್ತ್ವರಜಸ್ಸು ತಮಸ್ಸುಗಳ ಸ್ವರೂಪವನ್ನು ಯಾವ ವ್ಯಾಖ್ಯಾನವೂ ವಿವರಿಸಲಾರದಷ್ಟು ಸರ್ವಸುಲಭಗ್ರಾಹ್ಯವಾಗುವ ರೀತಿಯಲ್ಲಿ ವಿವರಿಸುವ ಇನ್ನೊಂದು ಸೊಗಸಾದ ಸಾಮತಿ ಈ 'ಮೂವರು ಕಳ್ಳರು ಮತ್ತು ಶ್ರೀಮಂತ'ನ ಕಥೆ:

ಒಬ್ಬ ಶ್ರೀಮಂತ ಕಾಡಿನಲ್ಲಿ ಪ್ರಯಾಣಮಾಡುತ್ತಿದ್ದಾಗ ಮೂವರು ಕಳ್ಳರು ಮೇಲೆಬಿದ್ದು ಅವನ ಐಶ್ವರ್ಯವನ್ನೆಲ್ಲ ಸುಲಿದುಕೊಂಡರು. ಸುಲಿಗೆಯಾದ ಮೇಲೆ ಒಬ್ಬ ಕಳ್ಳ ಇವನನ್ನು ಜೀವಸಹಿತ ಬಿಡುವುದು ಒಳೆಯದಲ್ಲ. ಕೊಂದು ಹಾಕಿಬಿಡೋಣ ಎಂದು ಕತ್ತಿ ಎತ್ತಿ ಇನ್ನೇನು ಕತ್ತರಿಸಬೇಕು, ಅಷ್ಟರಲ್ಲಿ ಎರಡನೆಯ ಕಳ್ಳ ಅವನನ್ನು ತಡೆದು 'ಕೊಂದುಹಾಕುವುದರಿಂದ ಏನು ಪ್ರಯೋಜನ? ಬಾಯಿಗೆ ಬಟ್ಟೆತುರುಕಿ, ಕೈಕಾಲು ಕಟ್ಟಿಹಾಕಿ ಹೋದರಾಯಿತು. ಆಮೇಲೆ ಪೋಲೀಸಿಗೆ ಹೇಗೆ ದೂರುಕೊಡುತ್ತಾನೆ?' ಎಂದನು. ಮೂವರೂ ಸೇರಿ ಅವನನ್ನು ಕಟ್ಟಿಹಾಕಿ ಹೊರಟುಹೋದರು.

ಸ್ವಲ್ಪ ಕಾಲದ ಮೇಲೆ ಮೂರನೆಯ ಕಳ್ಳ ತಾನೊಬ್ಬನೆ ಶ್ರೀಮಂತನ ಬಳಿಗೆ ಬಂದು 'ಪಾಪ, ನಿಮಗೆ ಬಹಳ ನೋವಾಯಿತು! ಹೆದರಬೇಡಿ. ನಾನು ಕಟ್ಟನ್ನೆಲ್ಲ ಬಿಚ್ಚಿ ನಿಮ್ಮನ್ನು ಬಿಡಿಸುತ್ತೇನೆ' ಎಂದು ಹೇಳಿ ಶ್ರೀಮಂತನ ಬಂಧನಗಳನ್ನೆಲ್ಲ ಕಳಚಿ, ಅವನನ್ನು ಕಾಡಿನಿಂದ ಹೊರಗೆ ಹೆದ್ದಾರಿಗೆ ಕರೆದುಕೊಂಡು ಬಂದ. ಹೆದ್ದಾರಿ ಕಾಣಿಸುತ್ತಲೆ ಆ ಮೂರನೆಯ ಕಳ್ಳ ನಿಂತುಬಿಟ್ಟು ಹೇಳಿದ 'ಈ ದಾರಿ ಹಿಡಿದು ಹೋದರೆ ನಿಮ್ಮ ಮನೆ ಸುಲಭವಾಗಿ ಸಿಗುತ್ತದೆ. ನೀವಿನ್ನು ಹೋಗಬಹುದು.' ತನಗೆ ಅಷ್ಟೊಂದು ಉಪಕಾರಮಾಡಿದ ಕಳ್ಳನಿಗೆ ಕೃತಜ್ಞತೆ ತೋರಬೇಕೆಂಬ ಮನಸ್ಸಿನಿಂದ ಆ ಶ್ರೀಮಂತ 'ನೀನೂ ನಮ್ಮ ಮನೆಗೆ ಬರಬೇಕು. ಎಷ್ಟು ಉಪಕಾರ ಮಾಡಿದ್ದೀಯ! ನಮ್ಮ ಸತ್ಕಾರ ಸ್ವೀಕರಿಸಿದರೆ ನಮಗೆಲ್ಲ ಸಂತೋಷವಾಗುತ್ತದೆ' ಎಂದು ಕೇಳಿಕೊಂಡ. 'ಇಲ್ಲ ಇಲ್ಲ, ಅದಾಗುವುದಿಲ್ಲ. ನಾನು ಅಲ್ಲಿಗೆ ಬರಲಾರೆ. ಬಂದರೆ ಪೋಲೀಸರು ಹಿಡಿಯುತ್ತಾರೆ!' ಎಂದು ದಾರಿತೋರಿಸಿ ಹಿಂದಕ್ಕೆ ಹೊರಟೇಬಿಟ್ಟ.

ಈ ಕಥೆ ಹೇಳಿ ಪರಮಹಂಸರು ಹೀಗೆಂದಿದ್ದಾರೆ: 'ಇವನನ್ನು ಕೊಂದು ಬಿಡೋಣ' ಎಂದ ಮೊದಲನೆ ಕಳ್ಳನೆ ತಮಸ್ಸು. ನಾಶಮಾಡುವುದೆ ತಮಸ್ಸಿನ ಲಕ್ಷಣ. ಎರಡನೆಯ ಕಳ್ಳನೆ ರಜಸ್ಸು. ಜೀವವನ್ನು ಪಾಶಗಳಲ್ಲಿ ಬಂಧಿಸಿ ನೂರಾರು ಕರ್ಮಗಳಲ್ಲಿ ಅದನ್ನು ಸುತ್ತಿಸುವುದೆ ಅದರ ಲಕ್ಷಣ. ರಜಸ್ಸು ನಮ್ಮ ಕೆಲಸಗಳನ್ನೆ ಪ್ರಧಾನವಾಗಿ ಮಾಡಿ ದೇವರನ್ನು ಮರೆಯುವಂತೆ ಮಾಡುತ್ತದೆ. ಸತ್ತ್ವವೊಂದೇ ದೇವರೆಡೆಗೆ ದಾರಿ ತೋರಿಸಿ ಜೀವವನ್ನು ಕರೆದೊಯ್ಯುತ್ತದೆ. ಅದರೆ ಅದೂ ದೇವರಲ್ಲಿಗೇ ಬರಲಾರದು, ಮೂರನೆಯ ಕಳ್ಳನಂತೆ ದಯೆ, ಧರ್ಮ, ಭಕ್ತಿ ಇವುಗಳ

ಅದರ ಲಕ್ಷಣ. ಅಲ್ಲದೆ ಸತ್ತ್ವವೆ ಏಣಿಯ ಕೊನೆಯ ಮೆಟ್ಟಿಲು. ಅದನ್ನು ದಾಟಿದರೆ ಮಹಡಿ. ಪರಬ್ರಹ್ಮವೆ ಜೀವದ ನಿಜಮನೆ. ತಮಸ್ಸು ರಜಸ್ಸು ಸತ್ತ್ವ ಈ ಮೂರು ಗುಣಗಳಿಂದಲೂ ಪಾರಾಗಿ ತ್ರಿಗುಣಾತೀತವಾಗದಿದ್ದರೆ ಬ್ರಹ್ಮಜ್ಞಾನ ಲಭಿಸುವುದಿಲ್ಲ.

'ಮಾವಟಿಗಬ್ರಹ್ಮ' 'ಸನ್ಯಾಸಿ-ಸರ್ಪದೀಕ್ಷೆ' 'ಶ್ರೀಮಂತ-ಮೂವರು ಕಳ್ಳರು' 'ಹೋಮಾಪಕ್ಷಿ' 'ನವಿಲು-ಅಫೀಮಿನ ರುಚಿ' 'ತಂದೆ-ಇಬ್ಬರು ಮಕ್ಕಳು' 'ಇರುವೆ-ಸಕ್ಕರೆ ಬೆಟ್ಟ' 'ಉಪ್ಪಿನ ಬೊಂಬೆ' 'ಗೋಸುಂಬೆ' 'ಆನೆ-ಕುರುಡರು' 'ಹುಲಿ-ಮೂವರು ಮಿತ್ರರು' 'ಹುಲ್ಲುಮೇಯುವ ಹುಲಿ' 'ಸಾಧುವೇಷದ ಬೆಸ್ತ' 'ಕಾರ್ತಿಕ-ಗಣೇಶ' 'ಈಜುಬಾರದ ಪಂಡಿತ' 'ಬೆಸ್ತರವಳು-ಮೀನುಬುಟ್ಟಿ' 'ಸನ್ಯಾಸಿ-ಕೌಪೀನ' 'ಅಕ್ಬರ-ಫಕೀರ' 'ರಾಮಚಂದ್ರ-ಕಪ್ಪೆ' 'ವ್ಯಾಸ-ಗೋಪಿಯರು' ಹೀಗೆ ಒಂದಲ್ಲ ಎರಡಲ್ಲ ನೂರಾರು ಸಾಮತಿಗಳಿಂದ ಪರಮಹಂಸರ ವಚನಾಮೃತವು ಮನೋಜ್ಞವಾಗಿದೆ. ವೇದವೇದಾಂತಶಾಸ್ತ್ರಪುರಾಣಗಳ ಬೋಧನೆಯ ಸಾರಸರ್ವವೆಲ್ಲ ಆ ಸಾಮತಿಗಳಲ್ಲಿ ಅಡಕವಾಗಿದೆ. ಅಮೃತ ಸಾಕ್ಷಾತ್ಕಾರಕ್ಕೆ ಭಗವತ್ ಕೃಪೆಯ ಕೆಚ್ಚಲಿನಂತೆ ಮಾತೃವಕ್ಷ ಸದೃಶವಾಗಿ ಸಕರುಣವಾಗಿ ಮೃದು ಕೋಮಲವಾಗಿ ಅವು ಮುಮುಕ್ಷು ಜೀವರಿಗೆ ಮೋಕ್ಷದ ವರದಹಸ್ತವಾಗಿವೆ.

## ಕವಿಯಲ್ಲಿ ವಿಭೂತಿ

ಪ್ರಶಂಸೆ, ಪೂಜೆ, ಆರಾಧನೆ, ಉಪಾಸನೆ ಈ ಪದಗಳು ನಮ್ಮ ಮನಸ್ಸಿನ ಅಥವಾ ಬುದ್ಧಿಯ ಯಾವ ವ್ಯಾಪಾರಗಳನ್ನು ವರ್ಣಿಸುತ್ತವೆ ಎಂಬುದನ್ನು ಪರಿಶೀಲಿಸಿದರೆ ನಮ್ಮ ಚೇತನದ ಅತಿ ನಿಗೂಢವಾದ ಎರಡು ಪ್ರಧಾನ ಲಕ್ಷಣಗಳು ಗೋಚರವಾಗುತ್ತವೆ. ಒಂದು ಅದರ ಊರ್ಧ್ವಮುಖತೆ, ಮತ್ತೊಂದು ಅದರ ಊರ್ಧ್ವಯಾತ್ರೆ. ಅನ್ಯರಲ್ಲಿದ್ದು ಸದ್ಯಕ್ಕೆ ತನಗಿಲ್ಲದ ಆದರೂ ಪಡೆಯಲಾಶಿಸುವ ಮನೋಧರ್ಮ ಪ್ರಶಂಸೆಯ ರೂಪದಲ್ಲಿ ಮೊದಲು ಮೈದೋರುತ್ತದೆ. ಇಂದು ತಾನಾಗಿಲ್ಲದಿದ್ದರೂ ಮುಂದೆ ತಾನಾಗಲೆಬೇಕೆಂಬ ಎದೆಹಂಬಲ ತೀವ್ರವಾದಂತೆಲ್ಲ ಆ ಪ್ರಶಂಸೆ ಪೂಜಾರೂಪಕ್ಕೆ ತಿರುಗುತ್ತದೆ. ಪೂಜಾವಸ್ತು ಆದರ್ಶವಾಗಿ ಪರಿಣಮಿಸುತ್ತದೆ. ತನ್ನ ಆಕಾಂಕ್ಷೆಯ ಆತ್ಮಶ್ರೀಯನ್ನು ಪಡೆದಿರುವ ಆ ವ್ಯಕ್ತಿ ಪೂಜ್ಯನಾಗುತ್ತಾನೆ. ಬರಿಯ ಊರ್ಧ್ವಮುಖವಾಗಿರುವ ಆಕಾಂಕ್ಷೆ ಸಾಧನೆಯ ರೂಪಕ್ಕೆ ತಿರುಗಿ ಊರ್ಧ್ವಯಾತ್ರಾರೂಪಿಯಾದೊಡನೆ ಪೂಜೆ ಆರಾಧನೆಯಾಗುತ್ತದೆ. ಆರಾಧನಾ ಭಾವನೆ ಉಜ್ವಲವಾಗಿ ತಪಸ್ಯಾರೂಪಕ್ಕೆ ತಿರುಗಿದರೆ ಉಪಾಸನೆಯಾಗುತ್ತದೆ. ಉಪಾಸನೆ ತುತ್ತತುದಿಗೆ ತಲ್ಲೀನರೂಪದ ಸಾಕ್ಷಾತ್ಕಾರದಲ್ಲಿ ಪರ್ಯವಸಾನ ಹೊಂದುತ್ತದೆ. ಆಗ ಸಾಧಕನಿಗೆ ಸಿದ್ಧಿಯಾಯಿತೆಂದು ಹೇಳುತ್ತೇವೆ. ಸಿದ್ಧಿಯೆಂದರೆ ನಿಸ್ತರಂಗವಾದ ನಿರಪೇಕ್ಷಕವಾದ ಪೂರ್ಣತಾ ವಿಶ್ರಾಂತಿ, ತಾದ್ಯಾತ್ಮ್ಯ, ಶಾಂತಿ.

ಹೊಳೆ ಹರಿಯುವುದನ್ನು ಭೌತವಿಜ್ಞಾನಿ 'ನದಿಗಿರುವ ಸಮುದ್ರಪರವಾದ ಪ್ರಶಂಸೆ' ಎಂದು ವಿವರಿಸುವುದಿಲ್ಲ. ಮೇಲುಮಟ್ಟದಲ್ಲಿ ಕಟ್ಟಿರುವ ಜಲಾಶಯದಿಂದ ಕೊಳಾಯಿಗಳಲ್ಲಿ ನುಗ್ಗಿ ಅಧೋಮುಖವಾದ ನಲ್ಲಿಗಳಲ್ಲಿ ಹರಿದು ಎತ್ತರದಲ್ಲಿರುವ ನಗರಸ್ಥಾನಗಳಿಗೇರಲು ಮತ್ತೆ ಊರ್ಧ್ವಮುಖವಾಗಿ ಅಡಗಿರುವ ನೀರಿನ ಅಚಿದ್‌ವ್ಯಾಪಾರವನ್ನು ತನ್ನ ಪೂರ್ವಸ್ಥಾನ

ಸಾಧನಾಕ್ರಿಯೆಯೆಂದು ವಿವರಿಸುತ್ತೇವೆ. ಆ ನೀರಿನ ಕ್ರಿಯೆ ಪ್ರಜ್ಞಾಪೂರ್ವಕವಾಗಿದ್ದಿದ್ದರೆ ಅದರ ಆ ಊರ್ಧ್ವಮುಖತೆಯನ್ನೂ ಊರ್ಧ್ವಯಾತ್ರೆಯನ್ನೂ ಪ್ರಶಂಸೆ ಪೂಜೆ ಆರಾಧನೆ ಉಪಾಸನೆ ಸಾಧನೆ ಮೊದಲಾದ ಮಾತುಗಳಿಂದ ವಿವರಿಸಬೇಕಾಗಿತ್ತು. ನಾವು ಹಾಗೆ ಮಾಡದಿರುವುದಕ್ಕೆ ಕಾರಣ ಅನ್ನಮಯ ವ್ಯಾಪಾರಗಳನ್ನು ಪ್ರಾಣಮಯ ವ್ಯಾಪಾರಗಳಿಂದ ಪ್ರತ್ಯೇಕವಾಗಿ ಭಾವಿಸುವ ನಮ್ಮ ರೂಢಿ. ಆದರೂ ಪೂರ್ಣಪ್ರಜ್ಞೆಗೆ ಅವೆರಡು ವ್ಯಾಪಾರಗಳಿಗೂ ಸ್ವರೂಪತಃ ಭೇದವಿಲ್ಲ.

ಇಂತಹ ವೈಜ್ಞಾನಿಕವಾದ ಪೂರ್ಣದೃಷ್ಟಿಯಿಂದ ಸಮೀಕ್ಷಿಸಿದರೆ ನಮ್ಮ ಪೂಜಾಭಾವದ ನಿಜಸ್ವರೂಪ ಗೊತ್ತಾಗುತ್ತದೆ. ಅದರ ಉದ್ದೇಶ ಅರ್ಥವಾಗುತ್ತದೆ. ಎಲ್ಲ ಪೂಜೆಯ ಪರಮೋದ್ದೇಶವೆಂದರೆ ನಾವು ಯಾವುದನ್ನು ಪೂಜಿಸುತ್ತೇವೆಯೊ ಅದರಂತಾಗುವುದು; ಕೊನೆಗೆ ಇನ್ನೂ ಮುಂಬರಿದು ಅದನ್ನು ಪೂರ್ಣವಾಗಿ ಪಡೆದು ಅದೇ ಆಗುವುದು. ಜಲಾಶಯದಿಂದ ಕೊಳಾಯಿಗಳಲ್ಲಿ ಕೆಳಗಿಳಿದು ಮತ್ತೆ ಮೇಲೇರುವ ನೀರಿನ ಪ್ರಯತ್ನವನ್ನು ಪೂರ್ವಸ್ಥಾನಸಾಧನಾಕ್ರಿಯೆ ಎಂದು ವಿವರಿಸುವಂತೆಯೆ ಜೀವರ ಈ ಎಲ್ಲ ಪ್ರಯತ್ನಗಳನ್ನೂ ವಿವರಿಸಿದರೆ ತಪ್ಪಾಗುವುದಿಲ್ಲ. ತಾರತಮ್ಯವಿರುವುದು ಪ್ರಜ್ಞಾಪ್ರಕಾರದಲ್ಲಿ ಮಾತ್ರ. ಸಚ್ಚಿದಾನಂದ ಲೀಲಾರ್ಥವಾಗಿ ಮಾಯೆಗವತರಿಸಿದ ಜೀವ ತನ್ನ ಸ್ವಸ್ಥಾನ ಸಂಸ್ಥಾಪನಾಸಾಧನೆಯಲ್ಲಿ ತೊಡಗುತ್ತದೆ. ಸ್ವಾಭಾವಿಕವಾಗಿ, ಪ್ರಕೃತಿ ಸಿದ್ಧವಾಗಿ. ಆ ಸಾಧನೆ ಬೇರೆಬೇರೆಯ ಕೋಶಗಳಲ್ಲಿ ಆಯಾ ಕೋಶಗಳಿಗೆ ಅನುಗುಣವಾದ ರೀತಿಗಳಲ್ಲಿ ರೂಪಗಳಲ್ಲಿ ಸಾಗುತ್ತದೆ. ಅದು ಅನ್ನಮಯದಲ್ಲಿ ವಿಕಾಸಗೊಳ್ಳುವಾಗ ನಿದ್ರಿತವೆಂಬಂತೆ ಸಾಗುತ್ತದೆ. ಪ್ರಾಣಮಯದಲ್ಲಿ ಸ್ವಪ್ನಸ್ಥವೆಂಬಂತೆ; ಮನೋಮಯದಲ್ಲಿ ಜಾಗ್ರತವಾಗಿ, ಪ್ರಜ್ಞಾಪೂರ್ವಕವಾಗಿ, ಸ್ವಪ್ರಯತ್ನಶೀಲವಾಗಿ, ತನ್ನರಿವಿಗೆ ತಾನೆ ವಿಷಯವಾಗಿ ತನ್ನನ್ನು ತಾನೆ ಗಮನಿಸುತ್ತಾ ಮುಂಬರಿಯುತ್ತದೆ. ಮನೋಮಯದ ಪ್ರಜ್ಞೆಯಲ್ಲಿ ಜೀವನಿಗೆ ತನಗಿಂತಲೂ ಮುಂದಿರುವ ಸ್ಥಾನ ಆಕರ್ಷಣೀಯವಾಗಿ, ಆರಾಧ್ಯವಾಗಿ, ಆದರ್ಶವಾಗಿ, ಕರೆಯಾಗಿ, ಕೋರಿಕೆಯಾಗಿ, ಪ್ರಿಯವಾಗಿ, ಪೂಜ್ಯವಾಗಿ ಗೋಚರವಾಗುತ್ತದೆ. ಹಾಗೆಯೆ ತಾನಿರುವ ಮಟ್ಟಕ್ಕೆ ಆ ಮೇಲಿರುವ ಮಟ್ಟ ವಿಭೂತಿಸ್ಥಾನವಾಗಿ ಪರಿಣಮಿಸುತ್ತದೆ. ಅಲ್ಲಿಗೆ ಏರಿರುವ ಇನ್ನೊಂದು ಚೇತನ ವಿಭೂತಿಸ್ಥಾನವಾಗಿ ಪರಿಣಮಿಸುತ್ತದೆ. ಅಲ್ಲಿಗೆ ಏರಿರುವ ಇನ್ನೊಂದು ಚೇತನ ವಿಭೂತಿಯಾಗುತ್ತಾನೆ. ಅಲ್ಲಿಗೆ ಏರಬೇಕೆಂಬುವ ಅಪೇಕ್ಷೆ ಪ್ರಶಂಸಾರೂಪದಲ್ಲಿ ಪೂಜಾರೂಪದಲ್ಲಿ ಭಾವಚರವಾಗುತ್ತದೆ. ಆ ಅಪೇಕ್ಷೆ ತನ್ನ ಸದ್ಯಃಸ್ಥಿತಿಯಿಂದ ಆದರ್ಶಪ್ರಾಯವಾದ ಆ ವಿಭೂತಿ ಸ್ಥಾನಕ್ಕೆ ಏರಲು ಪೂಜಾಪಥದಲ್ಲಿ ಯಾತ್ರಿಯಾಯಿತೆಂದರೆ ಆರಾಧನೆಯ ಉಪಾಸನೆಯ ಸಾಧನೆಯ ರೂಪದಲ್ಲಿ ಯೋಗಶಕ್ತಿಯಾಗುತ್ತಾ ಹೋಗುತ್ತದೆ. ಮನುಷ್ಯಚೇತನದ ಈ ಊರ್ಧ್ವಮುಖವಾದ ಅಭೀಪ್ಸೆಯ ಚೇಷ್ಟಿತವನ್ನು 'ವೀರಪೂಜೆ' ಎಂದು ಕರೆದಿದ್ದಾರೆ. ಆದರೆ ಅದನ್ನು 'ವಿಭೂತಿಪೂಜೆ' ಎಂದು ಕರೆದರೆ ನಮ್ಮ ವಿವರಣೆಯ ದೃಷ್ಟಿಯಿಂದ ಹೆಚ್ಚು ಸಾರ್ಥಕವಾಗುತ್ತದೆ.

ವಿಭೂತಿಯೆಂದರೆ ವಿಶೇಷವಾದ ಭೂತಿ. ಭೂತಿ ಎಂದರೆ ಆಗುವಿಕೆ. ಜಗತ್ತೆಲ್ಲ ಈಶ್ವರನ ಭೂತಿಯೆ, ಎಂದರೆ ಅವನ ಆಗುವಿಕೆಯೆ. ಆದರೂ ಲೀಲಾಪ್ರಯೋಜನಾರ್ಥವಾಗಿ ಅವನ ಈ ಭೂತಿ ಅಥವಾ ಆಗುವಿಕೆಯಲ್ಲಿ ಗುಣ, ಕಾಂತಿ, ಶಕ್ತಿ, ವಿಕಾಸ ಪ್ರಕಾಶಾದಿಗಳಲ್ಲಿ ತಾರತಮ್ಯ ಗೋಚರವಾಗಿದೆ. ಈಶ್ವರನ ಅಥವಾ ಈಶ್ವರೀ ಶಕ್ತಿಯ ಈ ಭೂತಿ ಅಥವಾ ಆಗುವಿಕೆ ಎಲ್ಲಿ ಸಾಮಾನ್ಯ ಪ್ರಮಾಣಕ್ಕಿಂತಲೂ ಅಧಿಕತರವಾಗಿ ಅಥವಾ ತನ್ನ ಸಾಮಾನ್ಯರೀತಿಗಿಂತಲೂ

ಪರತರವಾಗಿ ಕಾಣಿಸಿಕೊಳ್ಳುತ್ತದೆಯೊ ಅಲ್ಲಿ 'ವಿಭೂತಿ' ಮೂಡುತ್ತದೆ. ಎಂದರೆ ವಿಶೇಷವಾದ ಭುತಿ ಅವಿರ್ಭವಿಸುತ್ತವೆ. ಆಗ 'ಸಾಮಾನ್ಯ ಭೂತಿ' ಈ ವಿಭೂತಿಯ ಮಟ್ಟಕ್ಕೇರಲು ಮೊದಲು ಆಶಿಸುತ್ತದೆ; ಆಮೇಲೆ ಪ್ರಯತ್ನಿಸುತ್ತದೆ. ಆ ಆಶೆಯ ಪ್ರಶಂಸೆ, ಪೂಜೆ; ಆ ಪ್ರಯತ್ನವೆ ಉಪಾಸನೆ, ಸಾಧನೆ. ಸಾಮಾನ್ಯಭೂತಿ ವಿಶೇಷಭೂತಿಯಾಗಲು ಕೈಕೊಳ್ಳುವ ಕಾರ್ಯಕ್ರಮದ ಪ್ರಪ್ರಥಮ ವಿನ್ಯಾಸವೆ ವಿಭೂತಿಪೂಜೆ!

ಮನುಷ್ಯ ಲೋಕದಲ್ಲಿ ಈ ವಿಭೂತಿ ನಾನಾ ರೂಪಗಳಲ್ಲಿ ಅನಂತವಾಗಿ ಮೈದೋರುತ್ತದೆ: ಜೋಗದ ಜಲಪಾತದಿಂದ ಹಿಡಿದು ಮಹಾತ್ಮಾ ಗಾಂಧಿಯವರೆಗೆ; ವರ್ಣಶಿಲ್ಪಿ ರೋರಿಕ್‌ನಿಂದ ಹಿಡಿದು ಪೂರ್ಣಯೋಗಿ ಶ್ರೀ ಅರವಿಂದರವರೆಗೆ. ಭಗವದ್ಗೀತೆಯ ಹತ್ತನೆಯ ಅಧ್ಯಾಯವವೆಲ್ಲ ಈ 'ವಿಭೂತಿಯೋಗ'ಕ್ಕೆ ಮೀಸಲಾಗಿದೆ. ಈ ಕೊನೆಮೊದಲಲ್ಲ. ತನ್ನ ವಿಭೂತಿಗಳನ್ನು ಕುರಿತು ಹೇಳುವಾಗ ಪೀಠಿಕೆಯಾಗಿ ಹೀಗೆ ಹೇಳುತ್ತದೆ ಭಗವದ್‌ವಾಣಿ: "ನಾಸ್ತ್ಯಂತೋ ವಿಸ್ತರಸ್ಯ ಮೇ!" ಆ ವಿಭೂತಿಕೋಟಿಯ ಹೊರಹೊಮ್ಮುವಿಕೆಯ ವಿವಿಧತೆ ಸರ್ವಲೋಕವ್ಯಾಪ್ತವಾಗಿದೆ; ಸರ್ವತೋಮುಖವಾಗಿದೆ. ಬೆಟ್ಟ ಹೊಳೆ ಹಕ್ಕಿ ಮಿಗ ಮೀನು ಹಿಡಿದು ಅವತಾರ ಋಷಿ ಪ್ರವಾದಿ ಯೋಗಿ ಆಚಾರ್ಯ ಕವಿಯವರೆಗೂ ಇನ್ನೂ ಮೀರಿ ಅದರ ಉಲ್ಲೇಕವಿದೆ. ಆಲಿಸಿ: "ಆದಿತ್ಯಾನಾಮಹಂ ವಿಷ್ಣು" "ವೇದಾನಾಂ ಸಾಮವೇದೋಸ್ಮಿ" "ಸೇನಾನಿನಾಮಹಂ ಸ್ಕಂದಃ" "ಸ್ಥಾವರಾಣಾಂ ಹಿಮಾಲಯಃ" "ಅಶ್ವತ್ಥಃ ಸರ್ವ ವೃಕ್ಷಾಣಾಂ" "ಆಯುಧಾನಾಮಹಂ ವಜ್ರಂ" "ಧೇನೂನಾಮಸ್ಮಿ ಕಾಮಧುಕ್" "ಅನಂತಶ್ಚಾಸ್ಮಿ ನಾಗಾನಾಂ" "ರಾಮಃ ಶಸ್ತ್ರಭೃತಾಮಹಂ" "ಝುಷಾಣಾಂ ಮಕರಶ್ಚಾಸ್ಮಿ" "ಸ್ರೋತ ಸಾಮಸ್ಮಿ ಜಾಹ್ನವೀ" "ಆಧ್ಯಾತ್ಮವಿದ್ಯಾ ವಿದ್ಯಾನಾಂ" "ದ್ವಂದ್ವಃ ಸಾಮಾಸಿ ಕಸ್ಯ ಚ" (ಕಡೆಗೆ ವ್ಯಾಕರಣವನ್ನು ಕೂಡ ಕೈಬಿಟ್ಟಿಲ್ಲ ಭಗವಂತ!) "ಕೀರ್ತಿ ಶ್ರೀರ್ವಾಕ್‌ಚ ನಾರೀಣಾಂ" "ಗಾಯತ್ರೀ ಛಂದಸಾಮಹಮ್" "ಕವೀನಾ ಮುಶನಾ ಕವಿಃ" "ಮೌನಂ ಚೈವಾಸ್ಮಿ ಗುಹ್ಯಾನಾಂ" ಕೊನೆಗೆ "ಉದ್ದೇಶತಃ ಕೆಲವನ್ನು ಹೇಳಿದ್ದೇನೆ, ಪರಂತಪ; ನನ್ನ ದಿವ್ಯ ವಿಭೂತಿಗಳಿಗೆ ಅಂತವಿಲ್ಲ" ಎಂದು ಭಗವಂತನು ಎಲ್ಲಕ್ಕೂ ಅನ್ವಯಿಸುವ ಮತ್ತು ಎಲ್ಲವನ್ನೂ ಒಳಕೊಳ್ಳುವ ಈ ವಿಭೂತಿಯೋಗ ಸೂತ್ರವನ್ನು ಹಾಡಿದ್ದಾನೆ:

ಯದ್ಯದ್ ವಿಭೂತಿಮತ್ ಸತ್ತ್ವಂ ಶ್ರೀಮದೂರ್ಜಿತಮೇವ ನಾ
ತತ್ತದೇವಾವಗಚ್ಛ ತ್ವಂ ಮಮ ತೇಜೋಂsಶ ಸಂಭವಮ್|

ವಿಭೂತಿಮತ್ತಾದ ಸತ್ತ್ವ ಎಲ್ಲಿ ಗೋಚರಿಸುತ್ತದೆಯೊ ಅಲ್ಲಿ ಭಗವಂತನ ತೇಜಸ್ಸಿನ ಅಂಶ ವಿಪುಲಪ್ರಮಾಣದಲ್ಲಿ ಅನುಭವಕ್ಕೆ ಬರುತ್ತದೆ. ಸಾಮಾನ್ಯ ಚೇತನದ ಉದ್ಧಾರಕ್ಕೆ ಪುರೋಗಮನಕ್ಕೆ ವಿಕಾಸಕ್ಕೆ ಈ 'ವಿಭೂತಿ ಪೂಜೆ' ಅನಿವಾರ್ಯ ಮಾರ್ಗವಾಗುತ್ತದೆ, ಅವಶ್ಯ. ವಿಧಾನವಾಗುತ್ತದೆ.

ಮನುಷ್ಯ ಲೋಕದಲ್ಲಿ ಮತ್ತು ಮನುಷ್ಯ ರೂಪದಲ್ಲಿ ಈ ವಿಭೂತಿ ತನ್ನ ಪರಮಾವಧಿಯಲ್ಲಿ ಮೈದೋರಿದಾಗ 'ಅವತಾರ' ಎನ್ನುತ್ತೇವೆ. ಎಂದರೆ ತನ್ನ ನರರೂಪದಲ್ಲಿ 'ಅವತಾರ'ಕ್ಕಿಂತಲೂ ಅತಿಶಯತರವಾದ ಪ್ರಕಾರದಲ್ಲಿ ಆ ಭಗವದ್ ವಿಭೂತಿ ಗೋಚರಿಸುವುದಿಲ್ಲ. ಅದಕ್ಕೆ ದ್ವಿತೀಯ ಸ್ಥಾನದಲ್ಲಿ ಆ ವಿಭೂತಿ ಋಷಿ, ಯೋಗಿ, ಪ್ರವಾದಿ, ಗುರು, ಮಹಾತ್ಮಾ, ಮಹಾಕವಿ, ವರ್ಣಶಿಲ್ಪ, ರಸಋಷಿ, ಗಾನಯೋಗಿ, ಯುದ್ಧವೀರ, ದಾನವೀರ, ದಯಾವೀರ, ತ್ಯಾಗಿ, ಜ್ಞಾನಿ, ಭಕ್ತ, ಕರ್ಮಯೋಗಿ, ರಾಷ್ಟ್ರಭಕ್ತ ಇತ್ಯಾದಿಯಾಗಿ ನಾನಾ ಗುಣಗಳಲ್ಲಿ ವ್ಯಕ್ತಿಗನುಗುಣವಾದ

ಶಕ್ತಿತಾರತಮ್ಯಗಳಿಂದ ಆವಿರ್ಭವಿಸುತ್ತದೆ. ಆ ಶಕ್ತಿವಿಶೇಷವನ್ನು ಸಂದರ್ಶಿಸಿದ ಸಾಮಾನ್ಯಚೇತನದಲ್ಲಿ ವಿಕಾಸಾಕಾಂಕ್ಷೆ ಪ್ರಶಂಸಾರೂಪದಲ್ಲಿ ಹೃದಯಚಾರಿಯಾಗಿ ಕಾಣಿಸಿಕೊಳ್ಳುತ್ತದೆ; ಈರ್ಷ್ಯೆ ಅಸೂಯೆ ಮಾತ್ಸರ್ಯಾದಿಗಳ ರೂಪದಲ್ಲಿಯೂ ಅನೇಕ ವೇಳೆ ತೋರುವುದುಂಟು. ಆದರೆ ಅದೂ ಪ್ರಶಂಸೆಯ ವಿಪರೀತ ಸ್ಥಿತಿಯೆ. ಜೀವದ ಅಜ್ಞಾನದಿಂದ ಆ ವಿಕಾರ ಒದಗುತ್ತದೆ. ಅಂತಹ ಮನೋವಿಕಾರಕ್ಕೆ ದೊರೆಕೊಳ್ಳುವ ಪ್ರತಿಫಲದ ಆಘಾತದಿಂದ ಚೇತನ ಇಂದಲ್ಲ ನಾಳೆ ಎಚ್ಚರುತ್ತದೆ; ತರುವಾಯ ಅಧೋ ಗಮನದ ಅಡ್ಡದಾರಿಯನ್ನು ತ್ಯಜಿಸಿ ಋಜುಪಥಕ್ಕೆ ಬಂದು ಊರ್ಧ್ವಗಾಮಿಯಾಗುತ್ತದೆ.

ವಿಭೂತಿ ವ್ಯಕ್ತಗೊಳ್ಳುವ ವಿವಿಧ ನರವರ್ಗಗಳನ್ನಷ್ಟೆ ಸೂಚಿಸಿದೆ, ಮೇಲೆ ಕೊಟ್ಟಿರುವ ಹೆಸರಿನ ಪಟ್ಟಿ. ಆ ಹೆಸರುಗಳು ಒಂದಕ್ಕೊಂದೇನು ಹೊರತಲ್ಲ. ದೇಶಭಕ್ತನು ಮಹಾಕವಿಯಾಗಬಾರದೆಂದಾಗಲಿ, ರಸಋಷಿ ದೇಶಭಕ್ತನಾಗಲಾರನೆಂದಾಗಲಿ, ಯೋಗಿಯಾದವನು ವರ್ಣಶಿಲ್ಪಿಯಾಗಲಾರನೆಂದಾಗಲಿ, ಮಹಾಕವಿ ಮಹರ್ಷಿಯಾಗಿರಲಾರನೆಂದಾಗಲಿ ಅರ್ಥವಿಲ್ಲ. ವಿಭುತಿ ಏಕಮುಖವಾಗಿಯೂ ತೋರಬಹುದು; ಬಹುಮುಖವನ್ನೂ ಧಾರಣೆಮಾಡಬಹುದು.

ಭಗವದ್ ವಿಭೂತಿಯ ಆವಿರ್ಭಾವರೀತಿಗಳಲ್ಲಿ ಎಲ್ಲ ದೇಶಗಳಲ್ಲಿಯೂ, ಸರ್ವಸಾಧಾರಣವಾಗಿ, ಎಲ್ಲರ ಅದರಕ್ಕೂ ವಿಶೇಷವಾಗಿ ಪಾತ್ರವಾಗಿರುವ ಒಂದು ರಸಪೂರ್ಣವಾದ ರೀತಿ ಎಂದರೆ ಕವಿ. ಕವಿಯಲ್ಲಿ ಮೈದೋರುವ ವಿಭೂತಿ ಸರ್ವೋಚ್ಚವಾದುದು ಎಂದಲ್ಲ. ಏಕೆಂದರೆ ಸಚ್ಚಿದಾನಂದಾಭಿಮುಖವಾದ ಆತ್ಮದ ವಿಕಾಸಪಥದಲ್ಲಿ ಕವಿಯ ಪೂಜೆಗೂ ಪಾತ್ರವಾಗುವಂತೆ ಮುಂಬರಿದಿರುವ ಅನೇಕ ವಿಭೂತಿಗಳಿರುತ್ತವೆ: ಯೋಗೀಶ್ವರ, ಸಿದ್ಧಗುರು, ಮಹರ್ಷಿ, ಮಹಾತ್ಮಾ ಇತ್ಯಾದಿ. ಅಥವಾ ಕವಿಯೆ ಯೋಗಿಯೂ ಸಿದ್ಧನೂ ಋಷಿಯೂ ಆಗಿರಲಾರನು ಎಂದೂ ಅಲ್ಲ. ಕವಿಯಲ್ಲಿರುವ ಕಲಾ ವಿಭೂತಿಯನ್ನು ಮಾತ್ರ ಲಕ್ಷ್ಯದಲ್ಲಿಟ್ಟುಕೊಂಡು ನಾವು ಮಾತನಾಡುತ್ತಿದ್ದೇವೆ. ಆ ಅರ್ಥದಲ್ಲಿ ಆ ಕಾರಣಕ್ಕಾಗಿ 'ಕವಿ'ಯಲ್ಲಿ ಮೈದೋರುವ ವಿಭೂತಿಗೆ ಲೋಕವಿಶ್ವಾಸ ಲೋಕಾದರ ಲೋಕಪೂಜೆಗಳು ಆ ದೇಶ ಈ ದೇಶ ಎನ್ನದೆ, ಆ ಕಾಲ ಈ ಕಾಲ ಎನ್ನದೆ, ಆ ಮತ ಈ ಮತ ಅವರಿವರೆನ್ನದೆ, ಎಲ್ಲ ದೇಶಗಳಲ್ಲಿಯೂ ಎಲ್ಲ ಕಾಲಗಳಲ್ಲಿಯೂ ಎಲ್ಲರಿಂದಲೂ ಏಕಪ್ರಕಾರವಾಗಿ ಸಲ್ಲುತ್ತಾ ಬಂದಿದೆ.

ಅವತಾರ, ಮಹರ್ಷಿ, ಯೋಗಿ, ಸಿದ್ಧಗುರು ಇವರು ಸಚ್ಚಿದಾನಂದ ಸತ್ಯ ಮತ್ತು ಶಿವಾಂಶಗಳನ್ನೇ ಪ್ರಧಾನಲಕ್ಷ್ಯವಾಗಿಟ್ಟುಕೊಳ್ಳುವುದರಿಂದ ಅವರು ಗೌರವಾರ್ಹರಾದರೂ ಪೂಜಾರ್ಹರಾದರೂ ಮಧುಲೋಲ ಪ್ರಿಯವಾದ ನರಚೇತನಕ್ಕೆ ಆಕರ್ಷಣೀಯವೂ ರಮಣೀಯವೂ ಆಗಿ ರುಚಿಸುವುದು ಕಷ್ಟ. ಕವಿಯಾದರೋ ಸಚ್ಚಿದಾನಂದದ ಸತ್ಯ ಮತ್ತು ಶಿವಾಂಶಗಳನ್ನೂ ಸೌಂದರ್ಯ ಮುಖದಿಂದಲೇ ಆಸ್ವಾದಿಸಿ, ಸತ್ಯದ ಮತ್ತು ಶಿವದ ಅಮೃತಮಯ ಪುಷ್ಟಿಶಕ್ತಿಗಳನ್ನು ಸೌಂದರ್ಯದ ಕೆಚ್ಚಲಿನಿಂದಲೇ ರಸರೂಪದಲ್ಲಿ ಕರೆದು ಸ್ವಾದುಗೊಳಿಸಿ ನೀಡುವುದರಿಂದ ಸಾಧಾರಣವಾದ ಬಾಲಚೇತನಗಳಿಗೂ ಸುಲಭನೂ ಪ್ರಿಯನೂ ಮಧುಪ್ರಾಯನೂ ಆಗುತ್ತಾನೆ. ಅಲ್ಲದೆ ತನ್ನಲ್ಲಿ ಭಾವಚರವಾಗುವ ನಿತ್ಯಸತ ಮತ್ತು ಶಿವಶಕ್ತಿಗಳನ್ನು ರಸಾನುಭವವಾಗಿ ಪರಿವರ್ತಿಸಿ ಸಾಮಾನ್ಯರಿಗೆ ಆ ಅನುಭವವನ್ನು ದಾನಮಾಡಲು ಕವಿ ಕೈಕೊಳ್ಳುವ ವಿಧಾನಗಳೂ ಅವನ ಲೋಕಪ್ರಿಯತೆಗೆ ಬಹುಮಟ್ಟಿಗೆ

ಕಾರಣಗಳಾಗಿವೆ. ಅಮರ್ತ್ಯಚೇತನಗಳಿಗೂ ಮರ್ತ್ಯಚೇತನಗಳಿಗೂ ಮಧ್ಯೆ ಕವಿಯ ಚೇತನ ರಸಸೇತುವೆಯಾಗಿ ಕಾಮನಬಿಲ್ಲಿನಂತೆ ಚೇತೋಹಾರಿಯಾಗಿ ವಂಕಿಮವಾಗಿ ನಿಲ್ಲುವುದರಿಂದ ಕವಿರೂಪದಲ್ಲಿ ಆವಿರ್ಭವಿಸುವ ಭಗವದ್‌ವಿಭೂತಿ ಲೋಕೋತ್ತರವೂ ಲೋಕಪ್ರಿಯವೂ ಲೋಕೋದ್ಧರಕವೂ ಆಗಿ ಜಗದ್ವಂದ್ಯವಾಗಿದೆ.

ಶ್ರೀ ರಾಮ ಶ್ರೀ ರಾಮ ಕೃಷ್ಣಾದಿ ಅವತಾರ ವಿಭೂತಿಗಳೂ ವಾಲ್ಮೀಕಿ ವ್ಯಾಸಾದಿ ಕವಿ ವಿಭೂತಿಗಳಿಂದಲೆ ಲೋಕಕ್ಕೆ ಪ್ರಕಟಿತರೂ ಪ್ರಕಾಶಿತರೂ ಸನಾತನರಾದರೂ ಚಿರನೂತನರೂ ಆಗಿದ್ದಾರೆ. ಕವಿಪ್ರತಿಭೆಯ ಸಂಜೀವಿನೀ ಶಕ್ತಿಗೆ ಒಳಗಾಗಿ ಮೃತವಾದುದೆಲ್ಲ ಚಿರಂಜೀವವಾಗುತ್ತದೆ. ರಾಮಪಾದ ಸೋಕಿದೊಡನೆ ಕಲ್ಲು ಹೆಣ್ಣಾದಂತೆ ಕವಿಪ್ರತಿಭಾಕಿರಣಸ್ಪರ್ಶಮಾತ್ರದಿಂದ ಹೆಪ್ಪುಗಟ್ಟಿದಂತೆ ಗಡ್ಡೆಯಾಗಿರುವ ಎನಿತೆನಿತೊ ಜೀವಿಗಳ ಜಡತ್ವ ಅಳಿಯುತ್ತದೆ. ಆ ಪ್ರತಿಭೆಯ ದರ್ಶನಶಕ್ತಿಗೆ ವಶರಾಗಿ ದೇವತೆಗಳೂ ನೆಲ ಮುಟ್ಟುತ್ತಾರೆ; ಮರ್ತ್ಯಚರ ವ್ಯಾಪಾರಗಳಾಗಿ ನಮ್ಮ ಕಲ್ಯಾಣಕ್ಕೆ ದುಡಿಯುತ್ತಾರೆ.

ಕವಿ ಇತರ ಎಲ್ಲ ವಿಭೂತಿಗಳಿಗೂ ಪ್ರಣಾಳಿಕಾರೂಪವಾಗಿ ಆವಿರ್ಭವಿಸುವ ವಿಭೂತಿ. ಸರ್ವಚೇತನಗಳ ಸಮಷ್ಟಿಚೇತನರೂಪವಾಗಿ ಸರ್ವ ದೇವತಾ ಶಕ್ತಿಗಳ ಸಮಷ್ಟಿದೇವತಾಶಕ್ತಿರೂಪನಾಗಿ ಆವಿರ್ಭವಿಸುವ ಮಹಾಕವಿ ಇತರ ಎಲ್ಲ ವಿಭೂತಿಗಳಿಗೂ ಪ್ರಣಾಳಿಕಾರೂಪದಲ್ಲಿ ಅವತರಿಸುವ ಲೋಕಮೋಹಕ ವಿಭೂತಿ.

## ಕಲಿಯದವರಿಗೂ ಕಾಮಧೇನು

ಕನ್ನಡ ಸಾಹಿತ್ಯ ಒಂದು ಸಾವಿರ ವರ್ಷಗಳಿಂದ ಬೆಳೆದುಬಂದಿದೆ. ಅನೇಕ ಕವಿಕೃತಿಗಳಿಂದ ವೈವಿಧ್ಯ ರಮಣೀಯವಾಗಿದೆ. ಆ ಸಾಹಿತ್ಯಕ್ಷೇತ್ರದ ಸುದೀರ್ಘ ಪಥದ ವಿಪುಲ ವಿಸ್ತೀರ್ಣದಲ್ಲಿ, ಒಂದರಿಂದೊಂದಕ್ಕೆ ಸುಮಾರು ೫೦೦ ವರ್ಷಗಳ ಅಂತರದ ದೂರದಲ್ಲಿ, ಎರಡು ಮಹಾ ಶಿಖರಗಳು ಶೋಭಿಸುತ್ತಿವೆ, ಆಕಾಶ ಚುಂಬಿಗಳಾಗಿ, ಬೃಹತ್ತಿನಲ್ಲಿ, ಮಹತ್ತಿನಲ್ಲಿ, ಮಹೋನ್ನತಿಯಲ್ಲಿ, ಭವ್ಯತೆಯಲ್ಲಿ ಅವರೆಡೂ ಒಂದರೊಡನೊಂದು ಹೊಯ್‌ಕಯ್ಯಾಗಿ ನಿಂತಿವೆ. ಅವುಗಳ ಸುತ್ತಲೂ, ಒಂದರಿಂದೊಕ್ಕೆ ತೋರಣ ಕಟ್ಟಿದಂತೆ, ಮಲೆಗಳಿಗೆ, ಬೆಟ್ಟಗಳಿವೆ, ಗುಡ್ಡಗಳಿವೆ, ಬೋರೆತಿಟ್ಟುಗಳಿವೆ. ಆದರೆ ಮೇರು ಮಂದರ ಸದೃಶರಾಗಿರುವ ಪಂಪ ನಾರಣಪ್ಪರಿಗೆ ಹೆಗಲೆಣೆಯಾಗುವವರು ಅವರಲ್ಲಿ ಯಾರೊಬ್ಬರೂ ಇಲ್ಲ.

ಹಳಗನ್ನಡದ ಕವಿ ಪಂಪ-ಕಲಿತವರಿಗೆ ಕಲ್ಪತರು. ನಡುಗನ್ನಡದ ಕವಿ ನಾರಣಪ್ಪ-ಕಲಿಯದವರಿಗೂ ಕಾಮಧೇನು. ಕರ್ಣಾಟಕದ ಕವಿಜೀವನದ ಮೇಲೆ ಪಂಪನ ಪ್ರಭಾವ ವಿಶೇಷವಾಗಿರಬಹುದು. ಆದರೆ ಜನಜೀವನದ ಹೃದಯ ವೇದಿಕೆಯಲ್ಲಿ ನಾರಣಪ್ಪನೆ ಅಗ್ರಾಸನಸ್ಥ ಮಹಾಧ್ಯಕ್ಷ, ಅದಕ್ಕೆ ಕಾರಣ, ನಾರಣಪ್ಪನ ನಡುಗನ್ನಡದ ಭಾಮಿನೀಗಣದ ತರಂಗಶೈಲಿಯ ಸುಲಭ ಸರಳತೆ ಮಾತ್ರವಲ್ಲ; ಪ್ರವಾಹಪೂರ್ಣವಾದ ಪರ್ವತ ಭಾಗೀರಥಿಯ ಅದಮ್ಯ ವೇಗದ ಭೀಮಗಮನ ವಿನ್ಯಾಸದಿಂದ ಮುನ್ನುಗ್ಗುವ ಆತನ ಪ್ರತಿಭೆಯೊಂದೇ ಅಲ್ಲ: ಹೆಮ್ಮೋಡದಂತೆ ದಿಗಂತದಿಂದ ಅನಿರೀಕ್ಷಿತವಾಗಿ ಮೇಲ್ವಾಯುವ ಅವನ ಕಲ್ಪನಾಶಕ್ತಿ,

ಕಾರ್ಗಾಳಿಯಂತೆ ಬೀಸಿ ಬಡಿಯುವ ಅವನ ಭಾವಾವೇಗ, ಮಿಂಚಿನ ಬಳ್ಳಿಯಂತೆ ಅಲ್ಲಲ್ಲಿ ತಳತಳಿಸುವ ಆತನ ಉಪಮಾರೂಪಕಾದಿಗಳ ರುದ್ರುರಮ್ಯತೆ, ಸಿಡಿಲುಗುಡುಗಿನ ಡಮರುಡಿಂಡಿಮಗಳನ್ನೆ ಹಿಡಿದು ಬಡಿದು ಕುಣಿವ ನಾದ ತಾಂಡವನಂತಹ ಆತನ ರುಂದ್ರುನೃತ್ಯಶೈಲಿ-ಇವು ಮಾತ್ರುವೆ ಸಮಸ್ತಕಾರಣವಲ್ಲ, ಗದುಗಿನ ಭಾರತದ ಜನಪ್ರಿಯತೆಗೆ. ಕವಿ ವಿರಾಟ್‌ಕುಮಾರವ್ಯಾಸನ ಕಾವ್ಯಲಕ್ಷ್ಮಿಗೆ ಆಕೆಯ ನಾಡಿಯ ನಿತ್ಯಸ್ಪಂದನಗಳೇನೊ ನಿಜ, ಮೇಲೆ ಹೇಳಿದ ಗುಣಗಳೆಲ್ಲ. ಜೊತೆಗೆ, ಬಹುಮುಖ್ಯವಾಗಿ, ಅವನ ಮಹಿಮೆಗೆ ಕಾರಣ ಆತನ ಧರ್ಮದೃಷ್ಟಿ, ಆತನ ಭಗವದ್‌ಭಕ್ತಿ, ಆತನ ಋಷಿದರ್ಶನ.

ಅವನ ಕೃತಿ ಕಲೆಗಾಗಿ ಕಲೆಯಾಗಿರದೆ ರಸರೂಪಿ ವಿಶ್ವೇಶನ ಸಾಕ್ಷಾತ್ಕಾರಕ್ಕೆ ಸೋಪಾನವೂ ಸಾಧನವೂ ಆಗಿದೆ. ಆದ್ದರಿಂದಲೆ ಸಾಹಿತ್ಯ ವಿಮರ್ಶನ ದೃಷ್ಟಿಯಿಂದ ತನ್ನ ಕೃತಿಯನ್ನು ಪರಿಶೀಲಿಸುವವರ ವಿಷಯದಲ್ಲಿ ಆತನಿಗೆ ಕೊಂಚ ಜುಗುಪ್ಸೆ. ಅದಿರಲಿ, ಕಡೆಗೆ, ಪದಕ್ಕೊಂದು ಖಚಿತವಾದ ಅರ್ಥವಿರಲೇಬೇಂಬ ನಿಘಂಟಿನ ನಿಯಮಕ್ಕೂ ಅವನು ನಿಷ್ಠಾವಂತನಾಗಿರುವಂತೆ ತೋರುವುದಿಲ್ಲ.

ಪದದ ಪ್ರೌಢಿಯ, ನವರಸಂಗಳ ಉದಿತವನು, ಅಭಿಧಾನಭಾವವ
ಬೆದಕಲಾಗದು ಬಲ್ಲ ಪ್ರೌಢರುಮೀ ಕಥಾಂತರಿಕೆ;
ಇದು ವಿಚಾರಿಸೆ ಬರಿಯ ತೊಳಸಿಯ ಉದಕದಂತಿರೆ ಇಲ್ಲಿ ನೋಳ್ಪುದು
ಪದುಮನಾಭನ ಮಹಿಮೆ, ಧರ್ಮವಿಚಾರ ಮಂತ್ರುವನು.

ಧರ್ಮಬೋಧೆ ಆಕರ್ಷಿಸದವರನ್ನು ಕಲಾಸೌಂದರ್ಯವಾದರೂ ಸೆಳೆದು ಸಯ್ಪಿನ ಕಡೆಗೆ ನಡೆಯಿಸಲಿ ಎಂಬುದು ಆತನ ಆಕಾಂಕ್ಷೆ:

ಸರಸರಿಗೆ ಸಾಹಿತ್ಯರಿಗೆ ಹರಿಶರಣರಿಗೆ ಶಾಂತಾ
ತ್ಮರಿಗೆ ವರವಿದು ವಶ್ಯಮಾತ್ರುದಮೋಘರಸಘಂಟಿಕೆ.
ದುರುಳರಿಗೆ ದೂಷಕರಿಗತಿಮೊಗದಿರುಹುವರಿಗಜ್ಞರಿಗೆ ಚಿತ್ತಾ
ಕರುಷಣವು ಕವಿತಾ ವಿಲಾಸದ ವರ ಚಮತ್ಕಾರ.

ನಾರಣಪ್ಪನಿಗೆ ಭಾರತವೆಂದರೆ ಭಗವಂತನ ಲೀಲೆ. ಆತನ ಲೀಲೆಯ ಸ್ಮರಣ, ಆತನ ಲೀಲೆಯ ಧ್ಯಾನ, ಆತನ ಲೀಲೆಯ ವರ್ಣನ ಮತ್ತು ವಾಚನ-ಈ ಎಲ್ಲ ಸಾಧನಗಳಿಂದ, ಎಂದರೆ, ಹೃದಯದ ಮೇಲೆ ಹಾದುಹೋಗುವ ಮಹದ್ಭಾವಗಳ ಪವಿತ್ರು ಪದಸ್ಪರ್ಶನದಿಂದ ಪ್ರಾಪ್ತವಾಗುವ ಜೀವನ ಸಂಸ್ಕಾರವೆ ತಪಸ್ಸಾಧನೆಯಾಗಿ, ಆತ್ಮಬೋಧಿಗೆ ಹಾದಿಯಾಗುತ್ತದೆ.

ತಿಳಿಯಹೇಳುವೆ ಕೃಷ್ಣಕಥೆಯನು ಇಳೆಯ ಜಾಣರು ಮೆಚ್ಚುವಂತಿರೆ
ನೆಲೆಗೆ ಪಂಚಮಶ್ರುತಿಯನೊರೆವೆನು ಕೃಷ್ಣ ಮೆಚ್ಚಲಿಕೆ;
ಹಲವು ಜನ್ಮದ ಪಾಪರಾಶಿಯ ತೊಳೆವ ಜಲವಿದು, ಶ್ರೀಮದಾಗಮ
ಕುಳಕೆ ನಾಯಕ, ಭಾರತಾಕೃತಿ ಪಂಚಮಶ್ರುತಿಯ.

ಇಂತಹ ಶ್ರದ್ಧೆಯಿಂದ ಉದ್ದೀಪ್ತನಾಗಿ ಮಹಾಕಾವ್ಯವನ್ನು ಮಹತ್ತಾಗಿ ನಿರ್ವಹಿಸಿರುವ ನಮ್ಮೀ ಕವಿ ಬರಿಯ ಕವಿ ಅಲ್ಲ. ರಸದರ್ಶಿಯೂ ಹೌದು. ಆದ್ದರಿಂದ ಬ್ರಹ್ಮದರ್ಶಿಯೂ ಆಗಿದ್ದಾನೆ.

ಅಲ್ಪಕಾಲಾವಕಾಶದ ಭಾಷಣದಲ್ಲಿ ವಿವರಕ್ಕೆ ಕೈಹಾಕುವುದು ಗಾಂಪತನವಾದೀತು, ಮೂರುಗಳಿಗೆಯಲ್ಲಿ ಮೇರುವನ್ನು ಸುತ್ತ ಬಯಸುವಂತೆ. ಆದ್ದರಿಂದ ಆ ತ್ರಿವಿಕ್ರಮಪ್ರದಕ್ಷಿಣದ ಜಾಂಬವಸಾಹಸಕ್ಕೆ ಕೈಹಾಕದೆ, ಅಂತಹ ಸಾಹಸಕ್ಕೆ ಕೈಮರಗಳಂತಿರುವ ಕೆಲವು ಪುಸ್ತಕಗಳ ಹೆಸರು ಹೇಳಿ ವಿರಮಿಸುತ್ತೇನೆ: ಮೈಸೂರು ಮಹಾರಾಜಾ ಕಾಲೇಜಿನ ಕರ್ನಾಟಕ ಸಂಘವು ಪ್ರಕಟಿಸಿರುವ ಕುಮಾರವ್ಯಾಸ ಪ್ರಶಸ್ತಿ; ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಮಾಲೆಯಲ್ಲಿ ಅಚ್ಚಾಗಿರುವ "ಕುಮಾರವ್ಯಾಸ" ಮತ್ತು 'ಕುಮಾರವ್ಯಾಸ ವಾಣಿ.'

ಒಂದೆಚ್ಚರಿಕೆಯ ಮಾತು. ವಿಮರ್ಶೆಗಳೆಷ್ಟಿದ್ದರೂ ಅವೆಲ್ಲ ಕೈಮರಗಳಂತೆ. ಕೈಮರಕ್ಕೆ ಜೋತುಬಿದ್ದ ಮಾತ್ರಕ್ಕೆ ಯಾರಿಗೂ ದಾರಿ ಸಾಗುವುದಿಲ್ಲ, ಯಾರೂ ಗುರಿಗೆ ಸೇರುವುದಿಲ್ಲ. ಆದ್ದರಿಂದ ಓರಿಯಂಟಲ್ ಲೈಬ್ರರಿಯಲ್ಲಿ ಅಚ್ಚಾಗಿರುವ ಮತ್ತು ಅಚ್ಚಾಗುತ್ತಿರುವ ಸಂಪುಟಗಳ ನಿಜಸೌಧಕ್ಕೇ ನಾವು ಯಾತ್ರಿಗಳಾಗುವುದು ಉತ್ತಮೋತ್ತಮ. ಅಭಿರುಚಿ ಇರುವವರಿಗೆ ಇನ್ನೊಂದು ಶುಭವಾರ್ತೆ. ವಿಶ್ವವಿದ್ಯಾನಿಲಯದ ಗ್ರಂಥಮಾಲೆಯಲ್ಲಿ ಗದುಗಿನ ಭಾರತದ ಸಂಗ್ರಹವು ಎರಡು ಹೊತ್ತಗೆಗಳಲ್ಲಿ. ಸಾಮಾನ್ಯರೂ ಕೊಳ್ಳಬಹುದಾದ ಬೆಲೆಯಲ್ಲಿ ಸಿದ್ಧವಾಗುತ್ತಿದೆ.

ಆದರೆ ಎಲ್ಲರೂ ಅಷ್ಟುದೂರ ಹೋಗುವುದೂ ಬೇಡ, ಅಷ್ಟು ಕಾಲ ಕಾಯುವುದೂ ಬೇಡ. ನಮ್ಮ ಪುಣ್ಯಕ್ಕೆ ನಮಗೊಂದು ವಿಶೇಷ ಸೌಕರ್ಯವಿದೆ. ಅಕ್ಷರ ಪರಿಚಯ ಇಲ್ಲದವರೂ ಪುಸ್ತಕಕ್ರಯ ಕೊಡಲಾರದವರೂ ಗಮಕಿಗಳ ಅನುಗ್ರಹದಿಂದ ನಾರಣಪ್ಪನ ರಸಾವೇಶದ ರುಚಿಯನ್ನು ಮನದಣಿಯ ಸವಿಯಬಹುದು. ಗದುಗಿನ ಭಾರತವನ್ನು ಕುರಿತು ಮಾತನಾಡುವಾಗ ಅದರ ಅಮೃತ ಸುಖದ ವಿತರಣೆಗೆ ದಿನದಿನವೂ ದುಡಿಯುತ್ತಿರುವ ಗಮಕಿಗಳನ್ನು ನೆನೆಯದಿರುವುದು ಸಾಧ್ಯವಿಲ್ಲ. ನಾರಣಪ್ಪನ ಕಾವ್ಯದ ಬದುಕಿಗೆ ಗಮಕಕಲೆ ಶ್ವಾಸೋಚ್ಛ್ವಾಸದಂತೆ ಅತ್ಯಂತಾವಶ್ಯಕ. ಓದಿ ಅಥವ ಓದಿಸಿ ಕೇಳಿದಲ್ಲದೆ ಕುಮಾರವ್ಯಾಸನ ವಾಣಿಯ ಮಹತ್ತು ಅರಿವಾಗುವುದಿಲ್ಲ. ಕವಿ ಪ್ರತಿಭೆಯ ಸೂಕ್ಷ್ಮ ಸೌಂದರ್ಯಗಳನ್ನು ಅರಿಯಲು ವಿಮರ್ಶನಕಲೆ ಎಷ್ಟರಮಟ್ಟಿಗೆ ಅವಶ್ಯಕವೋ ಆ ಪ್ರತಿಭೆಯನ್ನು ಆಸ್ವಾದಿಸಲು ಗಮಕಕಲೆ ಅಷ್ಟೇ ಮಟ್ಟಿಗೆ ಅವಶ್ಯಕ. ವಿಮರ್ಶಕರು ಗಮಕಿಗಳಾಗಿ, ಗಮಕಿಗಳು ವಿಮರ್ಶಕರಾಗಿ ಅಥವಾ ವಿಮರ್ಶಕರಿಂದ ಗಮಕಿಗಳರಿತು, ಗಮಕಿಗಳಿಂದ ವಿಮರ್ಶಕರನುಭವಿಸಿ, ಒಬ್ಬರಿಗೊಬ್ಬರು ನೆರವಾಗಿ ಎರಡೂ ಕಲೆಗಳ ಉಪಾಸಕರು ಅನ್ಯೋನ್ಯತೆಯಿಂದ ಕುಮಾರವ್ಯಾಸನ ಸೇವೆಗೆ ಹೊರಟರೆ ಎಂತಹ ಆಶೀರ್ವಾದವಾದೀತು ಜನ ಜೀವನಕ್ಕೆ.

ಅಂತಹ ಪುಣ್ಯಕಾಲ ಈಗಾಗಲೆ ಸ್ವಲ್ಪ ಮಟ್ಟಿಗೆ ಪ್ರಾರಂಭವಾಗಿದೆ. ಇಂದಿನ ಉತ್ಸವದ ಕಾರ್ಯಕ್ರಮವೂ ಅದಕ್ಕೊಂದು ಸಾಕ್ಷಿ.

ನಮ್ಮ ಕನ್ನಡನಾಡಿಗೆ ದೇವರು ಸಹ್ಯಾದ್ರಿಯನ್ನು ದಯಪಾಲಿಸಿದ್ದಾನೆ. ತುಂಗಾ ಕಾವೇರಿಯನ್ನು ದಯಪಾಲಿಸಿದ್ದಾನೆ. ಪಶ್ಚಿಮ ಸಮುದ್ರದ ಸಂಗ ಸಾನಿಧ್ಯಗಳನ್ನು ಕೃಪೆಮಾಡಿದ್ದಾನೆ. ಜೊತೆಗೆ, ಅವೆಲ್ಲಕ್ಕೂ ಹೆಗಲೆಣೆಯಾಗಿ ನಿಂತರೂ ನಮಗೆ

ಒಡನಾಡಿಗಳಾಗಿರುವಂತೆ, ಪಂಪ ನಾರಣಪ್ಪರನ್ನೂ ಅನುಗ್ರಹಿಸಿದ್ದಾನೆ. ಅವರ ಬೆಲೆಯರಿತು ನಾಡಿನ ಬಾಳು ಅರಳಲಿ. ಆ ವಿಶ್ವಕವಿಗಳಿಬ್ಬರನ್ನೂ ನಮ್ಮವರೆಂದು ಹೇಳಿಕೊಳ್ಳುವ ನಮ್ಮ ಹೆಮ್ಮೆಯ ನೆತ್ತಿ ಮುಗಿಲಿಗೆ ತಾಗುತ್ತಿರಲಿ.

# ಕವಿಯ ದೃಷ್ಟಿಯಲ್ಲಿ ಪ್ರಕೃತಿ

ಕವಿಯ ದೃಷ್ಟಿಗೆ ಪ್ರಕೃತಿ ಹೇಗೆ ಕಾಣುತ್ತದೆ? ಎಂಬ ಪ್ರಶ್ನೆಗೆ ಅಂಗವಾಗಿ ಇನ್ನೆರಡು ಪ್ರಶ್ನೆಗಳು ಉದ್ಭವಿಸುತ್ತವೆ. ಅವುಗಳನ್ನು ಪರಿಶೀಲಿಸದೆ ಮುಂದುವರಿದರೆ ತಪ್ಪಾಗುತ್ತದೆ. ಏಕೆಂದರೆ ಕವಿ ಮತ್ತು ಪ್ರಕೃತಿ ಎಂಬ ಪದಗಳು ಒಂದು ಎರಡು ಮೂರು ನಾಲ್ಕು ಎಂಬ ಅಂಕಿಗಳಂತೆ ನಿರ್ವಿಶಿಷ್ಟವೂ ನಿರ್ವಿವಿಧವೂ ನಿರ್ವಿವಾದವೂ ಆಗಿರುವ ಅರ್ಥವನ್ನು ಸೂಚಿಸುವುದಿಲ್ಲ. ಕವಿ ಮತ್ತು ಪ್ರಕೃತಿ ಎಂಬ ಸತ್ಯಗಳು ೪x೨ =೮ ಎಂಬ ಗಣಿತಸತ್ಯದಂತಲ್ಲ. ಕವಿ ಎಂದೊಡನೆ ಯಾವ ಕವಿ ಎಂಬ ಪ್ರಶ್ನೆ ಏಳುತ್ತದೆ. ಗಣಿತದಲ್ಲಿ ೨ ಎಂದೊಡನೆ ಯಾವ ೨ ಎಂಬ ಪ್ರಶ್ನೆ ಏಳುವುದಿಲ್ಲ. ಹಾಗೆಯೆ ಪ್ರಕೃತಿ ಎಂದೊಡನೆ ಎಂತಹ ಪ್ರಕೃತಿ? ದೃಕ್‌ಪ್ರಕೃತಿಯೋ? ಅಪರಾ ಪ್ರಕೃತಿಯೋ? ಪರಾ ಪ್ರಕೃತಿಯೋ? ವೈಜ್ಞಾನಿಕನ ಪ್ರಕೃತಿಯೋ? ತತ್ತ್ವಶಾಸ್ತ್ರದ ಪ್ರಕೃತಿಯೋ? ಎಂದೆಲ್ಲ ಪ್ರಶ್ನೆಗಳು ಸುಳಿಯಬಹುದು.

ಕವಿಗಳೆಲ್ಲ ಒಂದೆ ತೆರನಲ್ಲ. ಒಬ್ಬೊಬ್ಬ ಕವಿಯೂ ವಿಶಿಷ್ಟ ವ್ಯಕ್ತಿ. ಒಬ್ಬೊಬ್ಬನದೂ ಸಂಸ್ಕಾರ ಬೇರೆ, ಬದುಕು ಬೇರೆ, ಜೀವಿತೋದ್ದೇಶ ಬೇರೆ, ಸ್ವಭಾವ ಸ್ವಧರ್ಮಗಳೂ ಬೇರೆ ಬೇರೆ. ಆಶೆ, ರುಚಿ, ಅಭಿರುಚಿ, ವಿದ್ಯೆ, ಸಂಸ್ಕೃತಿ ಎಲ್ಲ ಬೇರೆ ಬೇರೆ. ಊರಿಂದೂರಿಗೆ ನಾಡಿಂದ ನಾಡಿಗೆ ದೇಶದಿಂದ ದೇಶಕ್ಕೆ ಈ ವ್ಯಕ್ತಿತ್ವದ ವ್ಯತ್ಯಾಸಗಳು ಹೆಚ್ಚುತ್ತಾ ಹೋಗುತ್ತವೆ. ಅದರಂತೆ ಪ್ರಕೃತಿಯೂ ವ್ಯತ್ಯಸ್ತವಾಗುತ್ತದೆ. ಮರಭೂಮಿಗೂ ಮಲೆನಾಡಿಗೂ ಎಷ್ಟು ವ್ಯತ್ಯಾಸ! ಮೈಸೂರಿನ ಚೆಲುವಿನ ಬೃಂದಾವನಕ್ಕೂ ಆಸ್ಸಾಮಿನ ಭೂಕಂಪದ ಪ್ರದೇಶಕ್ಕೂ ಎಷ್ಟು ವ್ಯತ್ಯಾಸ! ಉತ್ತರಧ್ರುವದ ಕಟುಶೈತ್ಯಕ್ಕೂ ಅರೇಬಿಯಾದ ಉಗ್ರೋಷ್ಣಕ್ಕೂ ಎಷ್ಟು ವ್ಯತ್ಯಾಸ! ಪ್ರಕೃತಿ ಒಂದೆಡೆ ರಮಣೀಯವಾದರೆ ಮತ್ತೊಂದೆಡೆ ರುದ್ರ. ಒಮ್ಮೆ 'ಇಂದುವದನೆ ಕುಂದರದನೆ ಪ್ರಕೃತಿ ರೂಪಿಸಿ', ಇನ್ನೊಮ್ಮೆ 'ರಕ್ತಮುಖಿ ರಕ್ತನಖಿ ಪ್ರಕೃತಿ ರಾಕ್ಷಸಿ.' ನೆಮ್ಮದಿಯಾಗಿರುವ ಸುಂದರಪ್ರದೇಶದಲ್ಲಿ ಹುಟ್ಟಿ ಬೆಳೆದು ಬಾಳು ಸಾಗಿಸುವ ಕವಿಗೆ ಪ್ರಕೃತಿ 'ರೂಪಸಿ'ಯಾಗುತ್ತಾಳೆ. ಸರ್ವದಾ ಕಷ್ಟ ಕ್ಲೇಶ ಕಂಟಕಮಯವಾದ ಕ್ರೂರ ಪ್ರದೇಶದಲ್ಲಿ ದುಡಿದು ಕಡಿದು ಬದುಕುವ ಕವಿಗೆ ಪ್ರಕೃತಿ 'ರಾಕ್ಷಸಿ'ಯಾಗುತ್ತಾಳೆ. ಹೀಗೆ ಕವಿ ಮತ್ತು ಪ್ರಕೃತಿ ಎಂಬ ಎರಡು ಪದಗಳಿಗೂ ಬಹುಮುಖಗಳಿರುವಾಗ 'ಕವಿಯ ದೃಷ್ಟಿಯಲ್ಲಿ ಪ್ರಕೃತಿ ಹೇಗೆ ಕಾಣುತ್ತದೆ?' ಎಂಬ ಪ್ರಶ್ನೆಗೆ ಕೊಡುವ ಉತ್ತರಕ್ಕೂ ಬಹುಮುಖಗಳಿರಬೇಕಾಗುತ್ತದೆ. ಆದರೆ ಎಲ್ಲ ಮುಖಗಳನ್ನೂ ಎಲ್ಲ ಮುಖಗಳಿಂದಲೂ ಪರಿಶೀಲಿಸುವುದು ಇಲ್ಲಿ ಸಾಧ್ಯವಿಲ್ಲ. ಆದ್ದರಿಂದ ಕವಿ ಮತ್ತು ಪ್ರಕೃತಿ ಎಂಬ ಪದಗಳಿರುವ ಒಂದು ಸರ್ವಸಾಧಾರಣವೂ ಸರ್ವಸಂಪೂರ್ಣವೂ ಆದ ಅರ್ಥವನ್ನು ಮನಸ್ಸಿನಲ್ಲಿಟ್ಟುಕೊಂಡು ಉತ್ತರದ ವ್ಯಾಪ್ತಿಯನ್ನಾಗಲಿ ಮಿತಿಯನ್ನಾಗಲಿ ಮರೆಯದೆ ಮುಂಬರಿಯುತ್ತೇವೆ.

ಕವಿ ಎಂದರೆ ಯಾರು? ಪ್ರಕೃತಿ ಎಂದರೆ ಏನು? ಎಂಬ ವಿಚಾರ ಇಲ್ಲಿಗೆ ಎಷ್ಟೇ ಪ್ರಕೃತವಾದರೂ ನಾವು ಅದರ ಜಿಜ್ಞಾಸೆಯ ಗೋಜಿಗೆ ಹೋಗುವುದಿಲ್ಲ. ಕವಿ ಎಂಬ ಪದಕ್ಕೆ ಪದ್ಯ ಹೆಣೆಯುವವನು ಎಂಬರ್ಥದಿಂದ ಹಿಡಿದು ದ್ರಷ್ಟಾರನಾದ ರಸಋಷಿ ಎಂಬರ್ಥದ ವರೆಗೆ ವ್ಯಾಪ್ತಿಯಿದೆ. ಪ್ರಕೃತಿ ಎಂಬ ಪದದಲ್ಲಿ ನಮ್ಮ ಸುತ್ತಮುತ್ತ ಇರುವ ಮತ್ತು ತನಗೆ ತಾನೆ ಆಗಿರುವ ಎಲ್ಲ ವಸ್ತುಸಮೂಹಗಳೂ ಸೇರುತ್ತವೆ. ಆದರೆ ಬಳಕೆಯಲ್ಲಿ ಆ ಮಾತಿಗೆ ವಿಶೇಷವಾಗಿ ಇಂದ್ರಿಯ ಗೋಚರವಾದ ಸುಂದರ ನಿಸರ್ಗ ಎಂಬರ್ಥವಿರುತ್ತದೆ. ಎಂದರೆ ಕಾಡು ಬೆಟ್ಟ ಹೊಳೆ ಕೆರೆ ಗದ್ದೆ ಹೊಲ ಬಯಲು ಮಲೆ ಬಾನು ಬೆಳಗು ಬೈಗು ಇರುಳು ಚುಕ್ಕಿ ಹಕ್ಕಿ ಮಿಗ ಮುಗಿಲು ಕಡಲು ನೇಸರು ತಿಂಗಳು ಮಳೆ ಗುಡುಗು ಮಿಂಚು ಗಾಳಿ ಬಿಸಿಲು ತಳಿರು ಹೂವು ಇತ್ಯಾದಿ ಇತ್ಯಾದಿ.

ಇದನ್ನೆಲ್ಲ ಗಮನಿಸಿದ ಮೇಲೆ ನಮ್ಮ ಪ್ರಶ್ನೆ ಈ ರೂಪ ತಾಳುತ್ತದೆ: 'ರಸಋಷಿಯಾದ ಕವಿಯ ಪೂರ್ಣದೃಷ್ಟಿಗೆ ಗೋಚರವಾಗುವ ಪ್ರಕೃತಿದರ್ಶನದ ಸ್ವರೂಪವೇನು?'

ಪ್ರಕೃತಿ ವಿಷಯವಾದ ಕವಿಯ ದೃಷ್ಟಿ ಪೂರ್ಣದೃಷ್ಟಿಯಾಗಿ, ಅದು 'ದರ್ಶನ' ಎಂಬ ಹೆಸರಿಗೆ ಅರ್ಹವಾಗಬೇಕಾದರೆ ಕಾಲವೂ ಬೇಕು, ಸಾಧನೆಯೂ ಬೇಕು. ಅರಿತು ಮಾಡಲಿ, ಅರಿಯದೆ ಮಾಡಲಿ ಆ ಸಾಧನೆ ತಪಸ್ಯೆಯ ರೂಪವನ್ನು ತಾಳಿಯೆ ತಾಳುತ್ತದೆ ಅಂತಹ ಸಹಜ ಯೋಗಸಾಧನೆಯಿಂದ ಕವಿ ದ್ರಷ್ಟಾರನಾದ ರಸಋಷಿಯಾಗಿ ಪೂರ್ಣದೃಷ್ಟಿಯ 'ದರ್ಶನ'ಕ್ಕೇರುತ್ತಾನೆ.

ಬಾಲ್ಯದ ಬಹಿರ್ಮುಖವಾದ ಪ್ರಜ್ಞೆಗೆ ಪ್ರಕೃತಿ ಒಮ್ಮೆ ಆಡುಂಬೊಲವಾಗಿಯೂ ಒಮ್ಮೆ ಆಟದ ವಸ್ತುವಿನಂತೆಯೂ ಒಮ್ಮೆ ಜೊತೆ ಆಡುವ ಆಟಗಾರನಂತೆಯೂ ಗೋಚರವಾಗುತ್ತದೆ. ಮಳೆ ಗಾಳಿ ಮಿಂಚು ಇಂತಹ ಪ್ರಕೃತಿ ವ್ಯಾಪಾರಗಳು ಬೆದರಿಕೆಗೂ ಬೆಕ್ಕಸಕ್ಕೂ ಕಾರಣವಾದರೆ, ಹಸುರು ಹಕ್ಕಿ ಹೂವು ಮೊದಲಾದುವು ಅದರ ಆಶ್ಚರ್ಯ ಆನಂದಗಳಿಗೆ ಕಾರಣವಾಗುತ್ತವೆ. ಆಗ ಮರ ಹಣ್ಣುಕೊಡುವ ಇಷ್ಟದೇವತೆಯಾದರೆ ಗಾಳಿ ಹಣ್ಣು ಉದುರಿಸುವ ಗಗನದ ಗೆಳೆಯನಾಗುತ್ತಾನೆ. ಆಗ ಆಕಾಶ ಆಶ್ಚರ್ಯದ ವಿಷಯವಾಗಿ ಕಂಡರೂ ಅದು ಹುಡುಗನಿಗೆ ಬಹಳ ಸಮೀಪದ ವಸ್ತು: ಮನೆಯ ಗೋಡೆಕಟ್ಟೆ ಹಬ್ಬಿರುವ ಮಲೆಯ ತಲೆಯ ಮೇಲೆ ಒಂದು ಏಣಿ ಹಾಕಿದರೆ ಸರಿ ಆಕಾಶಕ್ಕೆ ತಲುಪುತ್ತೇವೆ! ಆಗ ಪ್ರಕೃತಿ ಸಮಸ್ತವೂ ಪ್ರಜ್ಞಾಪೂರ್ವಕವಾದಂತೆ ತೋರುತ್ತದೆ. ಮಗುವಿಗೆ ತನ್ನ ವ್ಯಾಪಾರಕ್ಕೂ ಪ್ರಕೃತಿವ್ಯಾಪಾರಕ್ಕೂ ಪ್ರಭೇದ ಕಾಣುವುದಿಲ್ಲ. ಸೃಷ್ಟಿಯ, ಎಂದರೆ ಜಡ ಜೀವ ಮನಸ್ಸು ಎಲ್ಲ ಸೇರಿ, ಸೃಷ್ಟಿಯ ಸರ್ವವ್ಯಾಪಾರಗಳೂ ಚಿಚ್ಛಕ್ತಿಯ ಪ್ರಕಾಶನದ ಭಿನ್ನ ಭಿನ್ನ ಪ್ರಕಾರಗಳು ಎಂಬ ತುತ್ತತುದಿಯ ಪೂರ್ಣದೃಷ್ಟಿಯ ಸಾಕ್ಷಾತ್ಕಾರ ಪ್ರಜ್ಞೆ, ಇನ್ನೂ ಜ್ಞಾನವಲ್ಲದ ಯಾವುದೊ ಒಂದು ರೀತಿಯಲ್ಲಿ, ಮಗುತನಕ್ಕೆ ಸಹಜವಾಗಿರುವಂತೆ ತೋರುತ್ತದೆ.

ಮಗುವಿನ ಚೇತನ ಅರ್ಧಚಂದ್ರನನ್ನು ಕಂಡು 'ದೇವರ ಪೆಪ್ಪರಮೆಂಟೇನಮ್ಮಾ ಗಗನದೊಳಲೆಯುವ ಚಂದಿರನು?' ಎನ್ನುತ್ತದೆ. ಬೈಗಿನ ನೇಸರನ್ನು ಕಂಡು 'ಸಂಜೆಯ ರಂಜಿಪ ಸೂರ್ಯನ ತರುವೆನು; ಕೈಬಿಡು ಹೋಗುವೆ ನಾನಮ್ಮಾ!' ಎಂದು ಸಾಹಸಿಯಾಗುತ್ತದೆ. 'ಕಾಮನ ಬಿಲ್ಲು ಕಮಾನು ಕಟ್ಟಿದೆ ಮೋಡದ ನಾಡಿನ ಬಾಗಿಲಿಗೆ!' ಎಂದು ಕುಣಿಯುತ್ತದೆ. ಆಗಸದಲ್ಲಿ ತೇಲಾಡುವ ಬೆಳ್ಮುಗಿಲು 'ಬಾನೊಳು ಹರಡಿಹ ಬೆಳ್ಳನೆ ಲಾಲಿಕುಲಾಲಿ

ಮಿಠಾಯಿ'ಯೋ 'ನೀಲಿಯ ನೀರೊಳು ಬಾನಮ್ಮನಿಟ್ಟಿಹ ಬೆಣ್ಣೆಯ ಮುದ್ದೆ'ಗಳೋ ಆಗುತ್ತವೆ. ಚಂದ್ರೋದಯವಾದರೆ 'ತಿಂಗಳ್‌ಮಾವ ಬರುತಿದಾನೆ ನೋಡಮ್ಮಾ' ಎನ್ನುತ್ತದೆ. ಚಂದ್ರಸೂರ್ಯನು ಕೂಡ ಮೂಡಿ ಮುಳುಗುವುದು ಮಗುವಿಗಾಗಿ, ಮಗುವಿನ ಸಂತೋಷಕ್ಕಾಗಿ, ಅದರ ಜೊತೆಗಾರಿಕೆಗಾಗಿ. 'ಎಲ್ಲಿಗೆ ನಾ ಹೋದರಲ್ಲಿಗೆ ಬರುವನು, ಅಮ್ಮಾ, ಚಂದಿರ ನನ್ನವನು' ಎಂಬ ಸತ್ಯದಲ್ಲಿ ಮಗುವಿಗಿನಿತೂ ಅವಿಶ್ವಾಸವಿಲ್ಲ. ಬಾಲ್ಯದ ಅಂತಹ ಸ್ವರ್ಗೀಯವಾದ ಅನುಭವವನ್ನು ಸ್ಮರಿಸಿಕೊಂಡೆ ಪ್ರಕೃತಿ ಉಪಾಸಕನೆಂದು ಪ್ರಸಿದ್ಧನಾಗಿರುವ ಇಂಗ್ಲಿಷ್ ಕವಿ ಹೀಗೆ ಹಾಡಿದ್ದಾನೆ:

"There was a time when meadow, grove and stream,
The earth and every common sight,
To me did seem
Apparelled in celestial light,
The glory and freshness of a dream."

ಬೆಳೆಯುವ ಹುಡುಗನ ಎಳೆಯ ಪ್ರಜ್ಞೆ ವಿಕಾಸವಾದ ಹಾಗೆಲ್ಲ ಕ್ರಮೇಣ ಪ್ರಕೃತಿ ಅದರ ಮೊದಲಿನ ಅಪೃಥಗ್ಭಾವದಿಂದ ದೂರದೂರವಾಗಿ ಬಾಲಕನ ಕ್ರೀಡಾದಿ ಕರ್ಮಗಳಿಗೆ ರಂಗಭೂಮಿಯಾಗಿ ಪರಿಣಮಿಸುತ್ತದೆ. ಪ್ರಪಂಚದ ಭೌತರೂಪವೂ ಮನಸ್ಸಿನ ಮೇಲೆ ತನ್ನ ಅಧಿಕಾರವನ್ನು ಹೆಚ್ಚು ಹೆಚ್ಚಾಗಿ ಸ್ಥಾಪಿಸುತ್ತ ಹೋಗುತ್ತದೆ. ಎಲ್ಲವೂ ತನಗಾಗಿ, ತನ್ನ ಸಂತೋಷಕ್ಕಾಗಿ, ತನ್ನ ಅನುಕೂಲಕ್ಕಾಗಿ ಎಂಬುವ ಭಾವಕ್ಕೆ ಧಕ್ಕೆ ತಗಲುತ್ತಾ ಹೋದಂತೆ ನಮ್ಮ ಪ್ರತ್ಯೇಕತೆಯೂ ವಿಶಿಷ್ಟತೆಯೂ ಅಹಂಕಾರವೂ ಬಲಿಯುತ್ತದೆ. 'ಅಮ್ಮಾ ಅಮ್ಮಾ ತಿಂಡಿ ಕೊಡು' ಎಂದು ಗೋಗರೆದಾಗ ತಾಯಿ ತಿಂಡಿ ಕೊಡುವಂತೆ 'ಮರವೇ ಮರವೇ ಹಣ್ಣುಕೊಡು' ಎಂದಾಗ ಮರ ಹಣ್ಣುಕೊಡುವುದಿಲ್ಲ ಎಂಬುದು ಗೊತ್ತಾಗುತ್ತದೆ. ಹಣ್ಣು ಬೇಕಾದರೆ ಮರ ಹತ್ತಿ ಕೀಳಬೇಕು. ಇಲ್ಲವೆ ಬಡಿಗೆ ಎಸೆದು ಉದುರಿಸಬೇಕು ಎಂಬ ಪೌರುಷ ಬುದ್ಧಿಯೂ ಉದ್ಯೋಗಶೀಲತೆಯೂ ಮೂಡುತ್ತವೆ. ಭೂಮಿಯ ಮೇಲೆ ನಡೆದಂತೆ ನಡೆಯುತ್ತೇವೆ ಎಂದು ನೀರಿಗೆ ಕಾಲಿಟ್ಟಾಗ ಹಳ್ಳಕ್ಕೆ ಬಿದ್ದು ಮೈ ಒದ್ದೆಮಾಡಿಕೊಂಡ ಮೇಲೆ ನೀರಿನ ನಿರ್ದಾಕ್ಷಿಣ್ಯ ಮನಸ್ಸಿಗೆ ಗೋಚರವಾಗಿ, ನೀರನ್ನು ಗೆಲ್ಲುವುದಕ್ಕಾಗಿ ಈಜುಕಲಿಯುತ್ತಾನೆ. ಹೀಗೆ ಪ್ರಕೃತಿಯ ನಿರ್ದಾಕ್ಷಿಣ್ಯತೆಯೂ ನಿಷ್ಠುರತೆಯೂ ಮತ್ತೆ ಮತ್ತೆ ಮನಸ್ಸಿಗೆ ತಗುಲಿ ಹುಡುಗನ ಬುದ್ಧಿಯನ್ನು ಅದರ ನಿಯತಿ ಮತ್ತು ನಿಯಮನಿಷ್ಠೆಯ ಕಡೆಗೆ ಕೊಂಡೊಯ್ಯುತ್ತವೆ. ಜೊತೆಗೆ ಹಿರಿಯರ ಮಾತುಕತೆ ನಡೆನುಡಿಗಳಿಂದಲೂ ವಿದ್ಯಾಭ್ಯಾಸಕ್ಕಾಗಿ ಓದುವ ಪಠ್ಯಪುಸ್ತಕಾದಿ ಪ್ರಥಮ ಪಾಠಗಳಿಂದಲೂ ಪೂರ್ವಕವಿಗಳ ಕವನಕೃತಿಗಳಿಂದಲೂ ಮತ್ತು ಇತರ ಕಲಾನುಭವಗಳಿಂದಲೂ ಪ್ರಕೃತಿವಿಷಯವಾದ ಸ್ಥೂಲಾಭಿಪ್ರಾಯಗಳು ರೂಪುಗೊಳ್ಳುತ್ತವೆ.

ಪ್ರಕೃತಿ ಕವಿಪ್ರಜ್ಞೆಯನ್ನು ಮೊತ್ತಮೊದಲು ಆಕರ್ಷಿಸುವುದು ತನ್ನ ವೈಭವಯುಕ್ತವೂ ವೈವಿಧ್ಯಪೂರ್ಣವೂ ಆಗಿರುವ ಸೌಂದರ್ಯದಿಂದ. ಆಕೆಯ ನಾನಾ ಭಂಗಿಯ ವರ್ಣಮಯ ನರ್ತನ ಅವನ ಚೇತನವನ್ನು ಸೆಳೆಯುತ್ತದೆ. ಆ ಭಾವೋಜ್ವಲ ಆಕರ್ಷಣೆಯ ಸ್ವರೂಪವಾಗಲಿ ಉದ್ದೇಶವಾಗಲಿ ಪ್ರಯೋಜನವಾಗಲಿ ಅವನ ಮತಿಗೆ ಆಗ ಗೋಚರಿಸದಿರಬಹುದು. ಆದರೂ ಆ ರಸಾ ಕರ್ಷಣೆಗೆ ಸಿಲುಕಿ ಅವಶವಾಗಿ ಎಂಬಂತೆ, ಅನಿವಾರ್ಯವಾಗಿ ಎಂಬಂತೆ, ಆಸ್ವಾದನಾ

ಮಧುಸ್ರೋತದಲ್ಲಿ ತೇಲುತ್ತಾನೆ: ಆ ತಾವರೆಯ ತೇರನ್ನು ಏರುತ್ತಾನೆ; ಆ ಕಮಲಯಾನದ ಕಲಾವಿಮಾನದಲ್ಲಿ ಅನಂತ ಯಾತ್ರಿಯಾಗುತ್ತಾನೆ:

"ನೀನಂದು ಕನಕರಥವನು ತಂದು ಬಾ ಎಂದು
ಕರೆದಂದು ನಾನು ದೂಳಾಡುತ್ತಿದ್ದೆ;
ಹೊಂಬಿಸಲು ಹೊಮ್ಮಿತ್ತು, ಖಗಗಾನ ಚಿಮ್ಮಿತ್ತು,
ಕಣ್ದೆರೆದುಕೊಂಡಿತ್ತು ಜಗದ ನಿದ್ದೆ!
ತೇರಿನಾ ಬಣ್ಣವನು ಕಂಡೆ
ಮೊದಲು ಮರುಳಾದೆ;
ಹುಡುಗಾಟ ಎಂದಂದುಕೊಂಡೆ
ಅದನೇರಿ ಹೋದೆ!
ಎಲ್ಲಿಗೊಯ್ಯುವೆ ಎಂದು ನಾ ಕೇಳಲಿಲ್ಲಂದು
ಕೇಳಿದರೆ ನೀನು ನುಡಿಯದಿಹೆ ಇಂದು.
ಬರಿದೆ ಬೆರಳೆತ್ತಿ ತೋರುವೆ; ಮುಂದೆ ನೋಡಿದರೆ
ಹಬ್ಬಿಹುದು ನೀಲಿಮೆಯ ಶೂನ್ಯಸಿಂಧು!"

ಕ್ರಮೇಣ ಬಹಿರ್ಮುಖವಾದ ಬಹಿರಂಗ ಸೌಂದರ್ಯದ ಮೋಹಾಕರ್ಷಣೆ ಅಂತರ್ಮುಖವಾದ ಅಂತರಂಗ ಸೌಂದರ್ಯದ ಕಡೆಗೂ ತಿರುಗಿ ಉಪಾಸನಾರೂಪವನ್ನು ತಾಳುತ್ತದೆ. ಪ್ರಕೃತಿಯ ಅದ್ಭುತ ಶಕ್ತಿ, ಅತ್ಯದ್ಭುತ ರಚನಾಕೌಶಲ, ಅನಿರ್ವಚನೀಯವಾದ ಮಹೋದ್ದೇಶ, ಅಚಿಂತ್ಯವಾದ ಪರಮಪುರುಷಾರ್ಥ ಇತ್ಯಾದಿಗಳ ಮನನದಿಂದ ಧ್ಯಾನಗೋಚರವಾಗುವ ಆಕೆಯ ಸ್ವರೂಪಸತ್ಯವನ್ನೆ ಪರಿವರ್ತನಗೊಳಿಸುತ್ತದೆ. ಹೊರಹರಗೆ ಮೃಣ್ಮಯಿಯಾಗಿ ತೋರುವವಳು, ವೈಜ್ಞಾನಿಕವಾದ ನೋಟಕ್ಕೆ ನಿಯಮಮಯಿಯಾಗಿ ತೋರುವವಳು, ವೇದಾಂತಿಯ ದೃಷ್ಟಿಗೆ ಚಿನ್ಮಯೀಶಕ್ತಿಯಾಗಿ ತೋರುವವಳು ಕವಿಪ್ರಜ್ಞೆಗೆ ಆ ಸತ್ಯಮುಖಗಳಲ್ಲಿ ಯಾವುದನ್ನೂ ಅಲ್ಲಗಳೆಯದ ಮತ್ತು ಆ ಎಲ್ಲ ಸತ್ಯಮುಖಗಳನ್ನು ಒಳಕೊಳ್ಳುವ ಬ್ರಹ್ಮಮಯಿಯಾಗಿ ಆನಂದಮಯಿಯಾಗಿ ಗೋಚರಿಸುತ್ತಾಳೆ. ಮೊದಮೊದಲು ಬಾಳುವೆಯ ಹಿನ್ನೆಲೆವಾಗಿ, ಬರಬರುತ್ತ ಕಾವ್ಯಕಲಾಕ್ಷೇತ್ರದ ಹಿನ್ನೆಲೆಯಾಗಿ, ಮತ್ತೆ ಮುಂಬರಿದು ಕಾವ್ಯರಮಣೀಯತೆಯನ್ನು ಹೆಚ್ಚಿಸುವ ಅಲಂಕಾರಸಾಧನಗಳನ್ನು ಸಮೃದ್ಧಿಯಾಗಿ ಒದಗಿಸುವ ಸೊಬಗಿನ ಗಣಿಯಾಗಿ, ಅದಕ್ಕೂ ಮುಂದೆ ಹೋಗಿ ಸೂಕ್ಷ್ಮತರವಾದ 'ಧ್ವನಿ'ಗೂ ಆಧ್ಯಾತ್ಮಕವಾದ 'ದರ್ಶನ'ಕ್ಕೂ ಪ್ರತಿಮಾ ರೂಪಿಣಿಯಾಗುತ್ತಾಳೆ. ಅಂತಹ ಕವಿಪ್ರಜ್ಞೆಗೆ 'ಪ್ರಕೃತಿಯಾರಾಧನೆ ಪರಮನಾರಾಧನೆಯಾಗುತ್ತದೆ;' 'ಪ್ರಕೃತಿಲೊಲ್ಮೆಯೆ ಮುಕ್ತಿಯಾನಂದ ಸಾಧನೆ'ಯಾಗುತ್ತದೆ.

"ಪ್ರಕೃತಿಯನು ಬ್ರಹ್ಮಮಯಿ ಎಂದರಿತು ಒಲಿದವನಿಗೆ
ಮೇಣು ಆನಂದಮಯಿ ಎಂದೊಲಿದು ಅರಿತವಗೆ
ದುಗುಡವೆತ್ತಣದು?"......

ಎಂಬ ಒಂದು ಶ್ರದ್ಧೆ, ಧೈರ್ಯ, ಶಾಂತಿ ಹೃದಯವನ್ನು ತುಂಬುತ್ತವೆ. ಅಂತಹ ರಸದೃಷ್ಟಿಗೆ ಸ್ಥೂಲವಾದುದೂ ಜಡವಾದುದೂ ಸಚ್ಚಿದಾನಂದವಾಗಿ ತೋರತೊಡಗುತ್ತದೆ.

"ಈ ಬಿಳಿ ಮಳಲ ರಾಶಿ, ವನಪರ್ಣವಾರಾಶಿ,
ವರ್ತಿಸುತ ಪ್ರವಹಿಸುವ ನೀಲಾಭ ಜಲರಾಶಿ,
ನೀಲ ನೀರವ ಶಕುನದಂತಿರುವ ಆಕಾಶ,
ಎಲ್ಲವೂ ನನ್ನ ದೃಷ್ಟಿಗೆ ಆತ್ಮದಾವೇಶ
ಭಾವಗಳು! ಜಡವಲ್ಲ; ಸ್ಥೂಲವಸ್ತುಗಳಲ್ಲ;
ಮೃತನಿಸರ್ಗದ ಚೇತನವಿಹೀನ ಶವವಲ್ಲ!
ಈಶ್ವರ ಶರೀರದಲಿ ಚಿನ್ಮಯ ಮಾಹಾಂಗಗಳು;
ಬ್ರಹ್ಮದ ಮಹಾ ಚಿತ್ತ ಶರಧಿಯ ತರಂಗಗಳು;
ಚಿಂತೆಗಳು ನನ್ನ ಮನದಲಿ, ನನ್ನ ನಾಡಿಯಲಿ
ರಕ್ತಬಿಂದುಗಳು! ನಾನುಸಿರೆಳೆಯೆ ಮೋಡದಲಿ
ಶ್ವಾಸವಾಡುವುದು!...

ಎಂಬ ತಾದ್ಯಾತ್ಮ್ಯಾನುಭವವುಂಟಾಗುತ್ತದೆ. ಅಂತಹ ರಸಸ್ಥಿತಿಗೆ ಎಲ್ಲೆಲ್ಲಿಯೂ ಚೈತನ್ಯವೆ ಗೋಚರವಾಗುತ್ತದೆ.

"ಹನಿಯನು ನಾನನುಭವಿಸುವ ಪ್ರೀತಿ
ಆ ಹನಿ ನನ್ನನು ರಮಿಸುವ ರೀತಿ!
ನನ್ನಡಿ ಸೋಂಕಿಹ ಈ ಹುಲ್ಲು
ಇನಿಯನ ತುಟಿಸೋಂಕನೆ ಸವಿಯುತ್ತಿದೆ!
ಪ್ರೀತಿಯ ಮುತ್ತಿಗೆ ಹಾತೊರೆಯುತ್ತಿದೆ
ಚೇತನ ಮೂರ್ತಿಯು ಆ ಕಲ್ಲು:-
ತೆಗೆ, ಜಡವೆಂಬುದೆ ಬರಿಸುಳ್ಳು!"

ರಸಋಷಿಯಾದ ಕವಿಯ ಪೂರ್ಣದೃಷ್ಟಿಗೆ ಪ್ರಕೃತಿ ಪರಮಾತ್ಮನ ಚಿನ್ಮಯ ದಿವ್ಯ ಶರೀರವಾಗಿ ತೋರುತ್ತದೆ. ಇಂದ್ರಿಯವ್ಯಾಪಾರಗಳೆಲ್ಲ ಪೂಜೆಯಾಗಿ ಪರಿಣಮಿಸುತ್ತವೆ.

"ಸುಂದರ ಮಹೇಶ್ವರನ ರಸಮಯ ಶರೀರವಿದು
ವಿಶ್ವರೂಪದಿ ನಮಗೆ ತೋರುತಿದೆ. ಜೀವನಂ
ಕ್ಷಣಕ್ಷಣಕೆ ಮುಟ್ಟುತಿಹುದಾತನಂ, ಘ್ರಾಣದಲಿ
ಸ್ಪರ್ಶದಲಿ ರುಚಿಯಲ್ಲಿ, ಶ್ರೋತ್ರ ದೃಷ್ಟಿಗಳಲ್ಲಿ.
ಎದೆ ತುಂಬಿ ಬಾಳುವುದೆ ಪ್ರಾಣಕರ್ಪೂರಮಂ
ಪೊತ್ತಿಸೆತ್ತುವ ಮಂಗಳಾರತಿ....."

ದ್ರಷ್ಟಾರನಾದ ಕವಿಯ ಪೂರ್ಣದೃಷ್ಟಿಗೆ ಪ್ರಕೃತಿ ಮರ್ತ್ಯಗೋಚರವಾದ ಜಗತ್ತಷ್ಟರಿಂದಲೆ ಪೂರೈಸುವುದಿಲ್ಲ. ಅವಳು ಉರ್ವರೆಯೂ ಹೌದು. ವಿಶ್ವಂಭರೆಯೂ ಹೌದು. ಅಂತರ್ಯಾಮಿಯೂ ಹೌದು, ಅತೀತೆಯೂ ಹೌದು. ಅವಳು ಸೃಷ್ಟಿರತಿ, ಕಲಾಸುಂದರಿ, ಜಗದ್ಧಾತ್ರಿ, ಜಗಜ್ಜನನಿ, ಮಹಾಮಾಯೆ, ಆದಿಶಕ್ತಿ, ಸೃಷ್ಟಿಯೆಲ್ಲ ಅವಳ ಲೀಲಾವ್ಯಕ್ತಿ; ಜನನ ಮರಣ ಕಾಲ ದೇಶಗಳು ಅವಳ ನರ್ತನದ ಚರಣನ್ಯಾಸಗಳು:

‘ಮೊದಲ ಬಯಕೆ ಸಿಡಿದ ಕಿಡಿ,
ಮೊದಲ ಗಾನವೊಗೆದ ನುಡಿ,
ನೀನೆ ಕಡಲು, ನೀನೆ ತಡಿ,
ಹೇ ವಿಶ್ವದೇಹಿನಿ!-’

‘ಸೂರ್ಯ ಚಂದ್ರರುದಯದಲಿ
ಪೂರ್ವದಿಶಾ ಹೃದಯದಲಿ,
ಸ್ವರ್ಣಸ್ವಪ್ನರಂಗಿನಿ!
ವರ್ಣಜಲಧಿ ಮಥನದಿ,
ಬಣ್ಣ ಬಳಿವೆ ಜತನದಿ,
ಓ ಭಾವನಾಂಗಿನಿ!’

‘ಚರಾಚರಗಳಂತರದಿ
ಉರಿಯುತಿಹೆ ನಿರಂತರದಿ,
ಹೇ ಪ್ರೇಮೋನ್ಮಾದಿನಿ!
ನಿನ್ನ ಮೋಹ ಶಕ್ತಿಯಿಂ,
ಬದುಕಿದೆ ಸೆರೆ ಮುಕ್ತಿಯಿಂ,
ಓ ಬಂಧನ ಮೋದಿನಿ!’

‘ಶತ ಸಹಸ್ರ ನಿಯತಿ ಲೋಲೆ
ನೀನ್ಅಕೂಲ ಮುಕ್ತಿಶೀಲೆ;
ನಿಯಮಗಳೆ ನಿನಗೆ ಬಳೆ,
ಅನವರತ ಅಶೃಂಖಲೆ!’

ಸಚ್ಚಿದಾನಂದಮಯಿಯಾದ ಆ ಪರಾಪ್ರಕೃತಿಯ ಒಂದು ಪಾದ, ಒಂದು ಅಂಶ ಮಾತ್ರ ಇಲ್ಲಿ ‘ನಮ್ಮ ಪ್ರಕೃತಿ’ ಆಗಿದೆ. ಉಳಿದ ಮೂರು ಪಾದ ಇನ್ನೂ ಅವ್ಯಕ್ತದಲ್ಲಿ ಅನಂತದಲ್ಲಿ ಅತೀತದಲ್ಲಿ ಅಮೃತವಾಗಿ ಇದೆ. ಋಗ್ವೇದದ ಕವಿಋಷಿ ಇಂತು ಮಂತ್ರಿಸುತ್ತಾನೆ:

ಏತವಾನಸ್ಯ ಮಹಿಮಾ ಅತೋ ಜ್ಯಾಯಾಂಶ್ಚ ಪೂರುಷಃ |
ಪಾದೋऽಸ್ಯ ವಿಶ್ವಾ ಭೂತಾನಿ ತ್ರಿಪಾದಸ್ಯಾಮೃತಂ ದಿವಿ ||

ಆ ‘ದರ್ಶನ’ಕ್ಕೆ ಅಲ್ಪ ಎಂಬುದು ಯಾವುದೂ ಇರುವುದಿಲ್ಲ. ಎಲ್ಲವೂ ‘ಭೂಮ’ವಾಗುತ್ತವೆ. ಅತ್ಯಂತ ಸಾಮಾನ್ಯವೂ ಅತ್ಯಂತ ವಿಶೇಷವಾಗಿ ತೋರುತ್ತದೆ. ಸಾಮಾನ್ಯವೆ ಸರ್ವಸಾಮಾನ್ಯವಾಗಿ ಸಮದರ್ಶನ ಸಿದ್ಧಿಸುತ್ತದೆ. ಅಂತಹ ‘ದರ್ಶನ’ ಅತ್ಯಂತಿಕವಾದ ಸುಖಕ್ಕೂ ಶಾಂತಿಗೂ ಕಾರಣವಾಗುತ್ತದೆ.

‘ಯೋ ವೈ ಭೂಮಾ ತತ್‌ಸುಖಮ್, ನಾಲ್ಪೇ ಸುಖಮಸ್ತಿ |’
‘ಯಂತ್ರ ನಾನ್ಯತ್ ಶ್ರುಣೋತಿ ನಾನ್ಯತ್ ವಿಜಾನಾತಿ ಸ ಭೂಮಾಃ’

‘ಅಥ ಯತ್ರಾನ್ಯತ್‌ಪಶ್ಯತಿ ಅನ್ಯತ್‌ಶ್ರುಣೋತಿ ಅನ್ಯದ್‌ವಿಜಾನಾತಿ ತದಲ್ಪಮ್’
‘ಯೋ ವೈ ಭೂಮಾ ತದಮೃತಮ್’
‘ಅಥ ಯದಲ್ಪಮ್ ತನ್ಮರ್ತ್ಯಮ್.’

ಈ ‘ಅಲ್ಪ’ದಲ್ಲಿ ಪ್ರಾರಂಭವಾಗಿ ಬೇರೆ ಬೇರೆ ಭೂಮಿಗಳಲ್ಲಿ ರಸಗ್ರಾಹಿಯಾಗಿ ಚರಿಸಿ, ಕೊನೆಗೆ ಆ ‘ಭೂಮ’ದಲ್ಲಿ ಸಿದ್ಧಿ ಪಡೆಯುತ್ತದೆ ಪ್ರಕೃತಿ ದರ್ಶನ ಪರವಾದ ಕವಿಯ ಪೂರ್ಣದೃಷ್ಟಿ.

## ‘ಶಕ್ತಿಕವಿ’ ರನ್ನ

ಕನ್ನಡ ಸಾಹಿತ್ಯದ ಮಹಾಕವಿಗಳಲ್ಲಿ ರನ್ನ ಪ್ರಧಾನತಃ ‘ಶಕ್ತಿ’ ಕವಿ. ಆತನಲ್ಲಿರುವ ಉದ್ದಾಮವಾದ ಇತರ ಕಾವ್ಯಗುಣಗಳು ಶ್ರೇಷ್ಠರಾದ ಬೇರೆ ಕನ್ನಡ ಕವಿಗಳಲ್ಲಿ ಸಮಪ್ರಮಾಣದಲ್ಲಿಯೊ ಸಮಧಿಕಪ್ರಮಾಣದಲ್ಲಿಯೊ ದೊರೆಯುತ್ತದೆ. ಆದರೆ ರನ್ನನ ವಿಶಿಷ್ಟಗುಣವಾದ ‘ಶಕ್ತಿ’ ಅದೇ ಪ್ರಮಾಣದಲ್ಲಿ ಆ ತೂಕದಲ್ಲಿ ಆ ವೇಗದಲ್ಲಿ ಆ ಮಿಂಚಿನಲ್ಲಿ ಮತ್ತೆಲ್ಲಿಯೂ ಲಭಿಸುವುದಿಲ್ಲ. ರನ್ನನ ‘ಶಕ್ತಿ’ಯ ಭವ್ಯತೆಯೇ ಬೇರೆ; ಅದರ ಭೀಮಬಲವೇ ಬೇರೆ; ಅದರ ದುರ್ಯೋಧನ ಧೈರ್ಯವೇ ಬೇರೆ. ಅದರೆದುರು ನಿಂತಾಗ ಗೇರುಸೊಪ್ಪೆಯ ಜಲಪಾತದ ರುಂದ್ರ ಭೀಷ್ಮತೆ ನಮ್ಮನ್ನು ಆಕ್ರಮಿಸಿದಂತಾಗುತ್ತದೆ. ಅದರ ಬಿರುವೊನಲಿಗೆ ಸಿಕ್ಕಿದಾಗ ಕಿಬ್ಬಿಗೆ ಭೋರ್ಗರೆದುರುಳುರುಳುವ ಕಾರ್ಗಾಲದ ನಿರ್ಝರಿಣಿಯ ಮಲೆಯಬ್ಬಿಗೆ ಮಂಡೆಗೊಟ್ಟಂತಾಗುತ್ತದೆ: ನಮ್ಮನ್ನು ಅಪ್ಪಳಿಸುತ್ತದೆ; ಉಸಿರ್ಕಟ್ಟಿಸುತ್ತದೆ; ಒದ್ದೆಮುದ್ದೆಯನ್ನಾಗಿ ಮಾಡಿ ಕೊಚ್ಚಿ ಬೀಸಾಡುತ್ತದೆ; ಕಯ್ ತತ್ತರಿಸಿ, ಕಾಲ್ ತತ್ತರಿಸಿ, ಮಿದುಳ್ ತತ್ತರಿಸಿ ಹುಚ್ಚೆಬ್ಬಿಸುತ್ತದೆ. ಆ ವಿದ್ಯುತೀರ್ಥದ ರಭಸಕ್ಕೆ ಎದೆಗೊಟ್ಟು ಮಿಂದು, ಶುಚಿಯಾಗಿ, ಚೇತನೋಜ್ವಲನಾಗಿ, ಅದರ ಶಕ್ತಿಪೀಯೂಷಪಾನದಿಂದ ಬಲಾನ್ವಿತನಾಗಿ ಹೊರಗೆ ಬರಬೇಕಾದರೆ ಸಹೃದಯನಿಗೆ ಆಂಜನೇಯ ಸದೃಶವಾದ ಪಟುತೆ ಬೇಕಾಗುತ್ತದೆ. ಅಂತಹ ‘ಶಕ್ತಿ’ ಗುಣ ಒಂದಿಲ್ಲದಿದ್ದರೆ ರನ್ನನಿಗೆ ಮಹಾಕವಿಯ ಪಟ್ಟ ದುರ್ಲಭವಾಗುತ್ತಿತ್ತು. ಅವನದು ಪಂಪಸೂರ್ಯ ಕಾಂತಿಯನ್ನು ಪ್ರತಿಬಿಂಬಿಸುವ ಚಂದ್ರಕೀರ್ತಿ ಮಾತ್ರವಾಗುತ್ತಿತ್ತು. ಕವಿಚಕ್ರವರ್ತಿ ಎಂಬ ಬಿರುದೂ ಅವನನ್ನು ರಕ್ಷಿಸುತ್ತಿರಲಿಲ್ಲ. ಪೊನ್ನನಿಗೊದಗಿರುವ ಗತಿಯೇ ಅವನಿಗೂ ಒದಗುತ್ತಿತ್ತು. ಆ ‘ಶಕ್ತಿ’ ವಿಶೇಷ ಒಂದರಿಂದಲೆ ರನ್ನ ಬದುಕಿದ್ದಾನೆ; ಮಹಾಕವಿಯಾಗಿದ್ದಾನೆ; ಪಂಪ ನಾರಣಪ್ಪರ ನಡುವೆ ಹೆಗಲೆಣೆಯಾಗಿ ಹಣೆಯೆತ್ತಿ ನಿಂತಿದ್ದಾನೆ.

ರನ್ನನಂತೆ ಪ್ರಥಮ ಪರಿಚಯದಲ್ಲಿಯೆ ಸಾಹಿತ್ಯದ ಪ್ರೌಢವಿದ್ಯಾರ್ಥಿಯನ್ನು ತೆಕ್ಕನಾಕ್ರಮಿಸಿ ಅಪ್ಪಳಿಸಿ ಉದ್ರೇಕಿಸಿ ಹೊಡೆದೆಬ್ಬಿಸಿ ಬೆರಗುಗೊಳಿಸಿ ವಶಪಡಿಸಿಕೊಳ್ಳುವ ವೀರಕವಿ ಕನ್ನಡದಲ್ಲಿ ಮತ್ತೊಬ್ಬನಿಲ್ಲ. ಆ ಪ್ರಥಮ ರಸಾಸ್ವಾದನೆಯ ಅನುಭವದ ಮುದ್ರೆಚಿರಸ್ಥಾಯಿಯಾಗಿರುತ್ತದೆ. ಆತನ ಪರವಾದ ನಮ್ಮ ಪ್ರಶಂಸೆಯಾಗಲಿ ಪೂಜೆಯಾಗಲಿ ಪಕ್ಷಪಾತವಾಗಲಿ ಮತ್ತೆ ಧಕ್ಕೆಗೀಡಾಗುವುದಿಲ್ಲ. ಆದರೆ ಸಾಹಿತ್ಯಸೀಮೆಯಲ್ಲಿ ಮುಂದುವರಿದು ಹೊಸಹೊಸ ಪರಿಚಯಗಳಿಂದ ಹೆಚ್ಚು ಹೆಚ್ಚು ಶ್ರೀಮಂತನಾಗುವ ವಿದ್ಯಾರ್ಥಿಗೆ, ಅದರಲ್ಲಿಯೂ ವಿಶೇಷವಾಗಿ ಪಂಪನ ಬೃಹತ್‌ಪ್ರತಿಭೆಯ ಕೂಲಂಕುಷ ಪರಿಚಯದಿಂದ ಊರ್ಧ್ವಪುಚ್ಛನಾದ ಮೇಲೆ, ಕ್ರಮೇಣ ಗೊತ್ತಾಗುತ್ತದೆ. ಆ ಪ್ರಥಮಾನುಭವದ ನಿಜನಕ್ಷೆ.

ನೆರೆಯ ಸಿರಿಮನೆಯಿಂದ ಎರವುತಂದು ಸಿಂಗರಿಸಿದ ಬಡಮನೆಯ ಮದುಮಗಳಂತೆ ಕಾಣಿಸತೊಡಗುತ್ತಾನೆ, ರನ್ನ: ಓಹೊ ಈ ರೇಖೆಯ ವಿನ್ಯಾಸ ಅವನದಲ್ಲ: ಆ ಬಣ್ಣದ ಹೊಳಪು ಸಾಲದ ಸಿರಿ. ಈ ಸಂವಿಧಾನ ಕೃತಿಚೌರ್ಯವಲ್ಲದಿದ್ದರೂ ತತ್ಸದೃಶ್ಯ; ಆ ಪ್ರತಾಪದ ಶಕ್ತಿ ತನ್ನದಾದರೂ ಉಕ್ತಿ ತನ್ನದಲ್ಲ. ಈ ಉಪಮೆ ಚರ್ವಿತರ್ವಣ. ಆ ರೂಪಕ ಸಂಪ್ರದಾಯದ್ದು. ಇಲ್ಲಿ ಪೂರ್ವಕವಿಯ ರೀತಿಯಿದ್ದರೂ ಅಲ್ಲಿರುವ ಧ್ವನಿಯಲ್ಲ; ಅಲ್ಲಿ ಅಕ್ಷರಾಡಂಬರವಿದ್ದರೂ ಪಂಪನ ಗುಣ್ಪಿಲ್ಲ. ಓಹೊ ಇಷ್ಟೇಯೆ ಈ ರನ್ನ? ನವಿಲಿನ ಪುಕ್ಕ ಸಿಕ್ಕಿಸಿಕೊಂಡ ಕೆಂಬೂತ! ಪಂಪೆಲ್ಲ ಪಂಪನದು; ಹೆಸರಿಗೆ ರನ್ನ! ಪಂಪನ ಮಹಾಕಾವ್ಯವಾದ 'ವಿಕ್ರಮಾರ್ಜುನ ವಿಜಯ'ದ ಒಂದೆರಡು ಆಶ್ವಾಸಗಳನ್ನು ಕಿತ್ತುಕೊಂಡು ಒಂದಿನಿತು ನಾಟಕೀಯವಾಗಿ ಸನ್ನಿವೇಶಗಳನ್ನು ನೆಯ್ದು, ಪಂಪನಿಂದ ಸಕಲ ಸಾಮಗ್ರಿಗಳನ್ನು ಪಡೆದಿದ್ದರೂ ಅವನನ್ನು ಒಮ್ಮೆಯಾದರೂ ನೆನೆಯುವ ಕೃತಜ್ಞತೆಯನ್ನೂ ಅವಜ್ಞೆಮಾಡಿ, ಸಂಪೂರ್ಣಾನುಕರಣದ 'ಸಾಹಸ ಭೀಮವಿಜಯ'ವನ್ನು ಜೋಡಿಸಿದ್ದಾನೆ ಅಷ್ಟೆ! ಅಷ್ಟಕ್ಕಾದರೂ ಮುಗಿಯುತ್ತದೆಯೆ ಅವನ ಋಣಭಾರ? ಇಲ್ಲ. ಲೌಕಿಕ ಕಾವ್ಯದಲ್ಲಿ ಹೇಗೊ ಹಾಗೆ ಆಗಮಿಕ ಕಾವ್ಯದಲ್ಲಿಯೂ ರನ್ನ ಪಂಪನ ಅನುಚರ. ಅಲ್ಲಿಯಂತೂ ಇಲ್ಲಿಗಿಂತಲೂ ಕೀಳ! 'ಆದಿಪುರಾಣ'ದ ಆನೆಯ ಮುಂದೆ 'ಅಜಿತಪುರಾಣ'ದ ಆಡೆ?-ಇದ್ದಕಿದ್ದ ಹಾಗೆ ರನ್ನನನ್ನು ಆರಾಧಿಸುತ್ತಿದ್ದ ನಮ್ಮ ಪ್ರೌಢವಿದ್ಯಾರ್ಥಿ ಅವನನ್ನು ಮೂದಲಿಸಲೂ ಹಿಂಜರಿಯುವುದಿಲ್ಲ. ಕೊನೆಗೆ ಪ್ರಥಮ ಪರಿಚಯದಿಂದ ಸಂಭವಿಸುತ್ತಿದ್ದ ಆರಾಧನಾ ಕ್ರಿಯೆಗೆ ಪ್ರತಿಯಾಗಿ ಅದೊಂದು ರೀತಿಯ ತಾತ್ಸಾರದ ಪ್ರತಿಕ್ರಿಯೆ ಮೂಡುತ್ತದೆ. ಹುಣ್ಣಿಮೆ ಹೋಗಿ ಅಮಾವಾಸ್ಯೆ ಕವಿಯುತ್ತದೆ. ಆದರೇನು? ಮತ್ತೆ ಬೆಳ್ವಕ್ಕದ ಪಾಡಿವ ಮೂಡದಿರುತ್ತದೆಯೆ?

ಪಂಪನನ್ನು ಕೆಳಗಿಟ್ಟು ಮತ್ತೆ 'ಗದಾಯುದ್ಧ'ವನ್ನು ಎತ್ತಿಕೊಳ್ಳುತ್ತಾನೆ; ಜಾಗ್ರತ್‌ಪ್ರಜ್ಞನಾಗಿ ಅಮೂಲಾಗ್ರವಾಗಿ ಓದುತ್ತಾನೆ:

ಯಾವ ಪುಟವನ್ನು ತೆರೆಯಲಿ, ಯಾವ ಸನ್ನಿವೇಶವನ್ನು ಗಮನಿಸಲಿ, ಯಾವ ಸಂವಾದವನ್ನು ಪಠಿಸಲಿ, ಯಾವ ವೀರಾಲಾಪನವನ್ನು ವಾಚಿಸಲಿ, ಯಾವ ವರ್ಣನೆಯನ್ನು ಆಲಿಸಲಿ ಪೂರ್ವಪರಿಚಿತವಾದ ಅದೇ 'ಶಕ್ತಿ' ಹೃದಯವಿಹಾರಿಯಾಗುತ್ತದೆ. ಪ್ರಾಣಸಂಚಾರಿಯಾಗುತ್ತದೆ. ಉತ್ಸಾಹ, ರೋಷ, ಔದಾರ್ಯ, ಪ್ರತೀಕಾರಾದಿ ರಜೋಗುನಪ್ಲಾವಿತ ಸನ್ನವೇಶಗಳ ಮಾತಿರಲಿ; ವಿಲಾಪ, ವಿಷಾದ, ನಿರಾಶೆ, ಶೋಕ, ಚಲ, ದೈನ್ಯ, ಮರಣ ಇತ್ಯಾದಿ ತಮೋಗುಣಪ್ರಚುರವಾದ ಸನ್ನಿವೇಶಗಳಲ್ಲಿಯೂ ಆ ದುರ್ದಮ್ಯ 'ಶಕ್ತಿ' ಓದುಗನ ಧಮನಿಗಳಲ್ಲಿ ಅಗ್ನಿಜ್ವಾಲೆಯಂತೆ ಧುಮುಧುಮುಕುವ ಅನುಭವವಾಗುತ್ತದೆ: ಭೀಮ ದುರ್ಯೋಧನರ ಗದಾಯುದ್ಧ ಪ್ರಸಂಗದಲ್ಲಿ ಹೇಗೋ ಹಾಗೆಯೆ ಆಕ್ರಂದಿಸುತ್ತಿರುವ 'ಕುರುಕುಲವಿಳಯಜ್ವಾಲೆ ಪಾಂಚಾಲಿ'ಯನ್ನು ಸಮೀರ ಕುಮಾರನು ಸಂತೈಸುತ್ತಿರುವ ಸನ್ನಿವೇಶದಲ್ಲಿಯೂ ಆ 'ಶಕ್ತಿ'ಯ ಮಿಂಚುದೋಳು ನಮ್ಮನ್ನು ಆಲಿಂಗಿಸುತ್ತದೆ. ದುರ್ಯೋಧನನು ಪಾಂಡವಪ್ರಶಂಸಾಪರನಾದ ಸಂಜಯನನ್ನು ತಿರಸ್ಕರಿಸುವ ದೃಶ್ಯದಲ್ಲಿ ಹೇಗೋ ಹಾಗೆಯೆ ಮಡಿದ ಕರ್ಣನ ಕಳೇಬರವನ್ನು ಕಂಡು ಆತನು ಪುಲಾಪಿಸುವಾಗಲೂ ನಮಗೆ ಆ 'ಶಕ್ತಿ' ಸ್ಪರ್ಶನವಾಗುತ್ತದೆ. ಭೀಮನ ರೌದ್ರಪ್ರತಿಜ್ಞೆಯಲ್ಲಿ ಎಂತೊ ಅಂತೆಯೆ ಶರಶಯ್ಯಾಗತರಾದ ಗಾಂಗೇಯರನ್ನು ಬೀಳ್ಕೊಳ್ಳುವ ದುರ್ಯೋಧನನ ಅಮರ್ಷತೆಯಲ್ಲಿಯೂ ಅದೇ 'ಶಕ್ತಿ' ದರ್ಶಿತವಾಗುತ್ತದೆ. ಕೌರವೇಂದ್ರನು ವೈಶಂಪಾಯನ ಸರೋವರದಲ್ಲಿ ತಲೆ ಮರೆಸಿಕೊಳ್ಳುವಾಗ ಎಂತೊ ಅಂತೆಯೆ ಸಾಹಸಭೀಮನ ಮೂದಲಿಕೆಗೆ,

ನೀರೊಳಗಿದ್ದೂ ಬೆವರಿ, ಆತನು ಹೊರಚಿಮ್ಮಿದ ವಿದ್ಯುದ್‌ವರ್ಣನೆಯಲ್ಲಿಯೂ ಅದೇ 'ಶಕ್ತಿ' ಸೌದಾಮಿನಿಯ ಭಯಂಕರಾಸ್ಫೋಟನೆಗೆ ಸಿಲ್ಕಿದಂತಾಗುತ್ತದೆ, ನಮ್ಮ ಚೇತನ! 'ಶಕ್ತಿ'! 'ಶಕ್ತಿ'! ಮತ್ತೂ 'ಶಕ್ತಿ'! ಇನ್ನೂ 'ಶಕ್ತಿ'! ಮುಟ್ಟಿದಲ್ಲಿ 'ಶಕ್ತಿ'! ಮೆಟ್ಟಿದಲ್ಲಿ 'ಶಕ್ತಿ'! ಆ 'ಶಕ್ತಿ'ಯ ಭೀಮಕಾಂತಾ ಕರ್ಷಣೆಯಿಂದ ಬಿಡಿಸಿಕೊಳ್ಳಲಾಗುವುದಿಲ್ಲ. ಅದರ ದಿಗ್ಗಜೋಪಮವಾದ ಐರಾವತ ಕರಾಸ್ಫಾಲನೆಯ ವಿದ್ಯುನ್ಮೋಹನೀಯ ರಸಾಕ್ರಮಣದಿಂದ ತಪ್ಪಿಸಿಕೊಳ್ಳಲಾಗುವುದಿಲ್ಲ!

ಹೀಗೆ ಪರಸ್ಪರ ವಿರುದ್ಧವೆಂದು ತೋರುವ ಅನುಭವಗಳ ಘರ್ಷಣಾಂದೋಲನಗಳಿಗೆ ಸಿಲುಕಿ ನಮ್ಮ ಪ್ರೌಢವಿದ್ಯಾರ್ಥಿ ದಿಙ್ಮೂಢನಾದಂತಾಗುತ್ತಾನೆ. ಬೆರಗು ಬಡಿದಂತಾಗುತ್ತಾನೆ. ಜ್ವಾಲಾಮಯನಾಗುತ್ತಾನೆ. 'ಶಕ್ತಿ' ಸಂಚಾರದಿಂದ ಬಲಿಷ್ಠನಾಗುತ್ತಾನೆ. ರಸಲೋಕದ ಭವ್ಯಾನುಭೂತಿಯಿಂದ ದೀಪ್ತನಾಗುತ್ತಾನೆ.

"ಆರತೀಯ ಕವೀಶ್ವರ
ರಾರುಂ ಮುನ್ನಾರ್ತರಿಲ್ಲ ವಾಗ್ದೇವಿಯ ಭಂ
ಡಾರದ ಮುದ್ರೆಯನೊಡೆದಂ
ಸಾರಸ್ವತಮೆನಿಪ ಕವಿತೆಯೊಳ್ ಕವಿರತ್ನಂ!"

ಎಂಬ ರನ್ನನ ಆತ್ಮಪ್ರತ್ಯಯಕ್ಕೆ ಕೆಮ್ಮನೆ ಸಮ್ಮತ ಹೊಡೆದು ತಾನೂ ಅದನ್ನು ಹೆಮ್ಮೆಯಿಂದ ಅಘೋಷಿಸುತ್ತಾನೆ.

"ರತ್ನಪರೀಕ್ಷಕನಾಂ ಕೃತಿ
ರತ್ನಪರೀಕ್ಷಕನೆನೆಂದು ಫಣಿಪತಿಯ ಫಣಾ
ರತ್ನಮುಮಂ ರನ್ನನ ಕೃತಿ
ರತ್ನಮುಮಂ ಪೇಳ್ ಪರೀಕ್ಷಿಪಂಗೆಂಟೆರ್ದೆಯೆ?"

ಎಂದು ರನ್ನ ತನ್ನ ವಿಮರ್ಶಕರನ್ನು ಉದ್ದೇಶಿಸಿ ಅಂದು ಆಡಿದುದನ್ನು ಮತ್ತೆ ಹೇಳಿಕೊಂಡು ತನಗೆ ತಾನೆ ಎಚ್ಚರಿಕೆ ಕೊಟ್ಟುಕೊಳ್ಳುತ್ತಾನೆ.

ಅರೆ! ಇದೇನು? ಕಥೆ ಅವನದಲ್ಲ; ಸಂವಿಧಾನ ಅವನದಲ್ಲ; ಸನ್ನಿವೇಶ ವಿರಚನೆಯೂ ಸಂಪೂರ್ಣವಾಗಿ ಅವನದಲ್ಲ. ಅಲಂಕಾರ ರೀತಿ ರಸ ಧ್ವನಿ ಎಲ್ಲದಕ್ಕು ಪಂಪನಲ್ಲಿ ಮೇಲ್ಪಂತಿ ಕಾಣುತ್ತದೆ. ವಿಚಾರಕ್ಕೆ ಅವನದಾಗಿ ಹೊಸತು ಹೆಚ್ಚೇನೂ ಗೋಚರಿಸುವುದಿಲ್ಲ. ಆದರೂ ರನ್ನನ ರಸಾಗ್ನಿತೀರ್ಥದಲ್ಲಿ ಮಗ್ನನಾದ ಸಹೃದಯದ ಚೇತನ ತಪೋಜ್ವಲವಾಗುತ್ತದೆ! ಅದಾವುದೊ ಒಂದು ಮಹತ್ವ ನಮ್ಮಲ್ಲಿ ಸಂಚರಿಸುತ್ತದೆ. ಎಲ್ಲಿಂದ ಬಂತು ಮತ್ತೆ ಆ ಮಹತ್ತ್ವಾನುಭವ?

ಅಂಗಡಿಯಿಂದ ಯಾರು ಬೇಕಾದರೂ ತಾಮ್ರದ ತಂತಿಯನ್ನು ಕೊಂಡು ತರಬಹುದು. ಅದನ್ನು ಮುಟ್ಟಿದರೆ ಏನೋ ಆಗುವುದಿಲ್ಲ. ಅದು ವಿದ್ಯುತ್ ಕಂಬವನ್ನೇರಿದಮೇಲೆ ತಾನೆ ಅದರ ಗೌರವ ಬೇರೆಯಾಗುತ್ತದೆ! ಆದ ಅದನ್ನು ಮುಟ್ಟಿದವನಿಗೆ ಅನುಭವ

ಗೋಚರವಾಗುತ್ತದೆ ಅಗೋಚರವಾದ ಶಕ್ತಿಯ ತಟಿಚ್ಛುಂಬನ! ರನ್ನನ ಕೃತಿಯನ್ನು ಓದುವವನಿಗೂ ಅಂತಹುದೇ ಅನುಭವವಾಗುತ್ತದೆ. ವಿಷಯ, ವಸ್ತು, ಸಂವಿಧಾನಾದಿಗಳಿಗೆ ಅವನು ಅನ್ಯರಿಗೆ ಋಣಿಯಾಗಿರಬಹುದು. ಆದರೆ ಕೃತಿಯಲ್ಲಿ ಎಲ್ಲೆಲ್ಲಿಯೂ ಪ್ರವಹಿಸುತ್ತಿರುವ 'ಶಕ್ತಿ' ಅವನ ಸ್ವಂತ ವ್ಯಕ್ತಿತ್ವದ ತಪೋಗಭಸ್ತಿ; ಅದು ಅವನದೇ ಆದ ಚೈತನ್ಯದ ವಿಶಿಷ್ಟ ಪ್ರತಿಭಾನ; ಕವಿಯ ಸ್ವಸ್ವರೂಪಾನುಸಾರಿಯಾಗಿ ಮೈದೋರುವ ಸ್ವಭಾವವನ್ನು ಲೀಲಾಲೋಕದಲ್ಲಿ ಪ್ರತಿಷ್ಠಿಸುವ ಸ್ವಧರ್ಮ ಸಂಬಂಧಿಯಾದ ಚಿತ್ತಪಸ್. ಆ 'ಶಕ್ತಿ' ಪ್ರವಹಿಸಿದಂತೆ ಚಿನ್ನ, ಬೆಳ್ಳಿ, ಕಬ್ಬಿಣ, ಹಿತ್ತಾಳೆ, ಕಡೆಗೆ ಹಸಿಹುಲ್ಲು, ಎಲ್ಲವೂ ವಿದ್ಯುನ್ಮಯವಾಗಿ ನಮ್ಮಮೇಲೆ ಅಧಿಕಾರ ನಡೆಸಲು ಸ್ವಯಂ ಸಮರ್ಥವಾಗುತ್ತವೆ. ಅಂತಹ 'ಶಕ್ತಿ' ಮಾತ್ರದಿಂದಲೆ ರನ್ನನ 'ಗದಾಯುದ್ಧ' ಕಾವ್ಯಕ್ಕೆ ಭವ್ಯತೆ ಒದಗಿದೆ.

'ಜಗತ್ತಿನ ಮಹಾಕವಿಗಳನ್ನು ಸಾಲಾಗಿ ನಿಲ್ಲಿಸಿ ನೋಡಿದರೆ ಗುಟ್ಟು ರಟ್ಟಾಗುತ್ತದೆ: ಒಬ್ಬನ ಕೈ ಮತ್ತೊಬ್ಬನ ಜೇಬಿನಲ್ಲಿ!' ಎಂಬ ಜಾಣ್ನುಡಿಯಲ್ಲಿ ಅರೆಪಾಲಿಗೆ ಮಿಗಿಲೆ ಸತ್ಯಾಂಶವಿದೆ. ರನ್ನನ ಕೈ ಪಂಪನ ಬಕ್ಕಣದಲ್ಲಿರುವುದನ್ನು ಮಾತ್ರ ನೋಡಿದರೆ ಸಾಲದು. ಆ ಬೆಳ್‌ಗೊಳ್ಳೆಯಿಂದ ರನ್ನನು ಸೃಷ್ಟಿಸಿರುವ ಬೊಕ್ಕಸದ ಐಸಿರಿಯನ್ನೂ ನಾವು ಗಮನಿಸಬೇಕು. ಹನಿಯನ್ನು ಹೊತ್ತು ಮುತ್ತನ್ನು ಹೆರುವ ಶುಕ್ತಿಕೆಯ ಋಣ ಅದರ ದೋಷವಲ್ಲ, ಸರ್ವರೂ ಹೃತ್ಪೂರ್ವಕವಾಗಿ ಹಾರೈಸಿ ಹರಸಬೇಕಾದ ದಿವ್ಯಗುಣ, ಮತ್ತು ಅದರ ಸ್ವಧರ್ಮ ಲಕ್ಷಣ. ಕನ್ನಡ ಸಾಹಿತ್ಯಭಂಡಾರಕ್ಕೆ ಅನರ್ಘ್ಯಕೃತಿರತ್ನವನ್ನು ದಯಪಾಲಿಸಿದ ರನ್ನನ ಋಣ ಕನ್ನಡಿಗರಿಗೆ ವರಕವಿಯ ಕೃಪೆಯ ಅನುಗ್ರಹ ಕಣಾ!

ರನ್ನ ಇತರ ಹಳಗನ್ನಡ ಕವಿಗಳಿಗಿಂತ ಹೆಚ್ಚು ಪುಣ್ಯವಂತ. ಆಧುನಿಕ ಸಾರಸ್ವತ ನವೋದಯದಲ್ಲಿ ಕನ್ನಡ ನಾಡು ಆತನಿಗೆ ಸಲ್ಲಬೇಕಾದ ಮರ್ಯಾದೆ ಕಾಣಿಕೆ ಪೂಜೆ ಎಲ್ಲವನ್ನು ಪೂರ್ಣವಾಗಿ ಸಲ್ಲಿಸಿ, ತನ್ನ ಸಾಹಿತ್ಯಜೀವನಕ್ಕೆ ಆತನಿಂದ ಪಡೆಯಬಹುದಾದ ಸ್ಫೂರ್ತಿಸಮಸ್ತವನ್ನೂ ಪಡೆದು ಹಿಗ್ಗಿತು, ಬೆಳಗಿತು, ಮುನ್ನುಗ್ಗಿತು. ಹಾಗಾಗುವುದಕ್ಕೆ ಪ್ರಧಾನ ಕಾರಣ ರನ್ನನ ಕೃತಿರತ್ನಕ್ಕೆ ಒದಗಿದ ಒಂದು ಅಪೂರ್ವವಾದ ಕಲ್ಯಾಣ ಘಟನೆ. ಅದನ್ನು ನಡಸಿದವರೂ ಆಧುನಿಕ ನವೋದಯದ ಹಿರಿಯ ಆಚಾರ್ಯರೆ. ಬಿ.ಎಂ. ಶ್ರೀಕಂಠಯ್ಯನವರು ರನ್ನನ ಗದಾಯುದ್ಧ ಕಾವ್ಯದಿಂದ ಗದಾಯುದ್ಧ ನಾಟಕವನ್ನು ಕಂಡರಿಸಿ, ರಂಗಭೂಮಿಯ ಸರ್ವಜನಪ್ರಿಯ ವೇದಿಕೆಯಮೇಲೆ ತಂದು ಆಡಿಸಿದುದೆ ತಡ ಕಂಡವರು ಡಂಗುಬಡಿದು ಹೋದರು. ಆ ಸಂಭ್ರಮವನ್ನು ಕಂಡವರಿಗೂ ಅದರ ಔತಣವನ್ನು ಉಂಡವರಿಗೂ ಅಂದಿನ ನೆನಪೆ ಇಂದಿಗೂ ರೋಮಾಂಚನಕಾರಿಯಾಗಿದೆ ಎಂದಮೇಲೆ ಅದು ಬೀರಿದ ಪ್ರಭಾವವನ್ನೂ ಅದರಿಂದಾದ ಪರಿಣಾಮವನ್ನೂ ಊಹಿಸಲು ಮಾತ್ರ ನಮಗೆ ಸಾಧ್ಯ.

ಅದುವರೆಗೂ ಮ್ಯಾಕ್‌ಬೆತ್‌ಹ್ಯಾಮ್ಲೆಟ್‌ಮೊದಲಾದ ಇಂಗ್ಲಿಷ್ ರುದ್ರ ನಾಟಕಗಳನ್ನೂ ಪ್ಯಾರಡೈಸ್ ಲಾಸ್ಟ್ ಮೊದಲಾದ ಪಾಶ್ಚಾತ್ಯ ಮಹಾಕಾವ್ಯಗಳನ್ನೂ ಓದಿ, ನೋಡಿ, ಆ ಜಗತ್ಪ್ರಸಿದ್ಧ ಕವಿಗಳ ಕಲೆಗೂ ನಾಟಕೀಯತೆಗೂ ಸಂವಾದ ನೈಪುಣ್ಯಕ್ಕೂ ಓಜಸ್ಸಿಗೂ ಭಾವಪ್ರವಾಹಕ್ಕೂ ರಸಶಕ್ತಿಗೂ ಮರುಳಾಗಿ ಮಾರುಹೋಗಿದ್ದವರೂ ಮೊತ್ತಮೊದಲಾಗಿ ಗದಾಯುದ್ಧ ನಾಟಕವನ್ನು ಕಂಡಾಗ ಬೆರಗಾದರು; ಮೂಗಿನಮೇಲೆ ಬೆರಳಿಟ್ಟುಕೊಂಡರು; ದಿಗ್ಭ್ರಾಂತರಾದಂತಾಗಿ 'ಆ! ಪರ್ವಾಇಲ್ಲ ಕನ್ನಡ!' ಎಂದು ಅನುಗ್ರಹಪೂರ್ವಕವಾಗಿಯಾದರೂ ಆಶೀರ್ವದಿಸಿಕೊಂಡರು. ಪಾಶ್ಚಾತ್ಯ ವಿಮರ್ಶೆಯ

ಒರೆಗಲ್ಲಿನ ಮೇಲೆಯೂ ರನ್ನನ ಚಿನ್ನ ಹೊಂಗೆರೆಯ ಮಿಂಚೆಸೆದು ತನ್ನ ಅಪರಂಜಿತನವನ್ನು ನಿರ್ವಿವಾದವಾಗಿ ಸ್ಥಾಪಿಸಿಕೊಂಡಿತು.

ಗದಾಯುದ್ಧ ಕಾವ್ಯಕ್ಕೆ ದೃಶ್ಯರೂಪ ಒದಗಿದುದನ್ನು ನಾವು 'ಅಪೂರ್ವವಾದ ಕಲ್ಯಾಣ ಘಟನೆ' ಎಂದು ಬಣ್ಣಿಸಿದ್ದೇವೆ. ಆ ಘಟನೆ ಅಪೂರ್ವವಾದರೂ ಮೂಲಕೃತಿಯಲ್ಲಿ ಅದು ಅಂತರ್ಘಟಿತವಾಗಿರದಿದ್ದರೆ ಶ್ರೀಕಂಠಯ್ಯನವರ ಪರಿಣಿತ ಕೌಶಲಕ್ಕೂ ಅದನ್ನು ಅಷ್ಟು ಸಹಜವಾಗಿ ಸ್ವಭಾವಿಕ ಸೃಷ್ಟಿಯೆಂಬಂತೆ ಕಂಡರಿಸಲಾಗುತ್ತಿರಲಿಲ್ಲ. ಬಹುಶಃ ರನ್ನನ ಮೂಲ ಆಶಯವೆ ಶತಮಾನಗಳ ತರುವಾಯ "ಶ್ರೀ" ಯವರ ಹೃದಯದಲ್ಲಿ ಆವಿರ್ಭವಿಸಿ ಮೂರ್ತಿಮತ್ತಾಯಿತೆಂದು ತೋರುತ್ತದೆ. 'ವಿಕ್ರಮಾರ್ಜುನ ವಿಜಯ'ವನ್ನು ಅಧ್ಯಯನ ಮಾಡುತ್ತಿದ್ದಾಗ ತರುಣ ಆ ಮಹಾಕಾವ್ಯದಲ್ಲಿ ಬರುವ ಗದಾಯುದ್ಧ ವಸ್ತುವಿನ ನಾಟಕೀಯತೆಗೆ ಮೆಚ್ಚಿ ಮನಸೋತು, ಅದನ್ನೊಂದು ಸೊಗಸಾದ ನಾಟಕದ ರೀತಿಯಲ್ಲಿ ರಚಿಸಬೇಕೆಂಬ ಹಂಬಲದಿಂದ ಆಯ್ದುಕೊಂಡು, ಕೆಲಕಾಲ ದೃಶ್ಯರೂಪದಲ್ಲಿಯೆ ಅದನ್ನು ಕಲ್ಪಿಸಿಕೊಳ್ಳುತ್ತಾ ಇದ್ದು, ತರುವಾಯ ನಾಟಕರೀತಿ ಲೌಕಿಕವೆಂಬ ಜೈನಧಾರ್ಮಿಕ ಕಾರಣದಿಂದಲೊ ಏನೊ ಆ ರೀತಿಯನ್ನು ತ್ಯಜಿಸಿ 'ಗದಾಯುದ್ಧ'ವನ್ನು ಕಾವ್ಯವಾಗಿಯೆ ರಚಿಸಿದನೆಂದು ತೋರುತ್ತದೆ; ಪ್ಯಾರಡೈಸ್‌ಲಾಸ್ಟ್‌ಕಾವ್ಯವಸ್ತು ಮಿಲ್ಟನ್‌ಕವಿಯ ಪ್ರತಿಭೆಯಲ್ಲಿ ಕೆಲಕಾಲ ದೃಶ್ಯರೂಪದಲ್ಲಿಯೆ ಮೂಡಿದ್ದು, ತರುವಾಯ ತೂಗುಯ್ಯಲಾಡಿ, ಕೊನೆಗೆ ಕಾವ್ಯರೂಪದಲ್ಲಿ ಪರಿಣಮಿಸಿದಂತೆ.

ನಾಟಕರೂಪದಲ್ಲಿಯೆ ಜನ್ಮಧಾರಣೆ ಮಾಡಲು ಕವಿಮನೋಗರ್ಭದಲ್ಲಿ ಹವಣಿಸುತ್ತಿದ್ದ ಗದಾಯುದ್ಧವಸ್ತುವಿನ ಮೊದಲಮೆಯ್ ಅನಂತರದ ಅದರ ಕಾವ್ಯರೂಪದ ಹೇರೊಡಲಲ್ಲಿ ಅಡಗಿತೆ ವಿನಾ ಅಳಿಯಲಿಲ್ಲ. ಹಾಗೆ ಪಳೆಯುಳಿಕೆಯಂತೆ ಒಳಗುಳಿದುದರಿಂದಲೆ ಶ್ರೀಕಂಠಯ್ಯನವರ ಮೇಧಾಶಕ್ತಿಯ ಚಾಣದ ಕಡೆಹಕ್ಕೆ ಹೊರಮೂಡಿ ಸಹಜವೆಂಬಂತೆ ಕಾಣಿಸಿಕೊಳ್ಳಲು ಸಮರ್ಥವಾಯಿತು. ಹಿಂದಣ ಕನ್ನಡ ಸಾಹಿತ್ಯದಲ್ಲಿ ಒಂದು ನಾಟಕವಾದರೂ ಕಾಣ ಬರದಿರುವ ಸೋಜಿಗದ ಕಾರಣ ಏನೆಯಿರಲಿ, ರನ್ನನನ್ನು ನಮ್ಮ ಪ್ರಪ್ರಥಮ ನಾಟಕಕಾರನೆಮದು ಸ್ವೀಕರಿಸುವುದರಲ್ಲಿ ಕಾಲಕ್ರಮೌಚಿತ್ಯ ದೃಷ್ಟಿಗೆ ಬಂದರೂ ಕಲಾಕ್ರಮೌಚಿತ್ಯ ದೃಷ್ಟಿಗೆ ಸತ್ಯದೂರವಾಗುವುದಿಲ್ಲ. ಏಕೆಂದರೆ 'ಶಕ್ತಿ'ಗೆ ಎರಡನೆಯದಾಗಿ ನಾಟಕೀಯತೆಯಿಂದಲೆ ಅಥವಾ 'ಶಕ್ತಿ' ಸಮನ್ವಿತನಾದ ನಾಟಕೀಯತೆಯಿಂದಲೆ ರನ್ನ ವರಕವಿ, ಚಿರಕವಿ ಮತ್ತು ಮಹಾಕವಿಯಾಗಿ ನಿಂತಿದ್ದಾನೆ.

ರನ್ನನ ನಾಟಕೀಯತೆಗೆ 'ಗದಾಯುದ್ಧ' ನಾಟಕವೆ ಶ್ರೀಮಂತ ಸಾಕ್ಷಿ. ಆದರೆ ನಾಟಕದಲ್ಲಿ 'ಕಾವ್ಯ'ದಲ್ಲಿರುವ 'ಶಕ್ತಿ' ಸಂಪೂರ್ಣವಾಗಿ ಪ್ರದರ್ಶಿತವಾಗಲು ಅವಕಾಶವಿಲ್ಲ. ನಾಟಕಕಲೆ ಪಾತ್ರಗಳ ಮೂಲಕವಾಗಿ ಹೊಮ್ಮುವ ಶಕ್ತಿಯನ್ನು ಮಾತ್ರ ತೋರಿಸಬಲ್ಲುದು; ಕವಿ ತಾನೆಯೆ ರಂಗಕ್ಕೆ ಬರುವಂತಿಲ್ಲವಾದ್ದರಿಂದ ಅವನ ವ್ಯಕ್ತಿತ್ವದ ಶಕ್ತ್ಯಂತ ಪರದೆಯ ಹಿಂದೆ ನಿಲ್ಲಬೇಕಾಗುತ್ತದೆ. ನಾಟಕದಲ್ಲಿ ಮುಖ್ಯವಾಗಿ ಭೀಮದುರ್ಯೋಧನರ ಪಾತ್ರಗಳಲ್ಲಿ ಆ 'ಶಕ್ತಿ' ಅದ್ಭುತವಾಗಿ ಸ್ಫುರಿಸುತ್ತದೆ. ಆದರೆ ಭೀಮದುರ್ಯೋಧನರ ಪಾತ್ರಗಳೇ ಸ್ವರೂಪತಃ 'ಶಕ್ತಿಪಾತ್ರ'ಗಳಾಗಿರುವುದರಿಂದ ದ್ವಿತೀಯ ವರ್ಗದ ಸಾಧಾರಣ ಕವಿಗೂ ಅಲ್ಲಿ 'ಶಕ್ತಿ' ಸೃಷ್ಟಿಮಾಡುವುದು ಸುಲಭಸಾಧ್ಯವಾಗುತ್ತದೆ ಬಹುಶಃ ಅನಿವಾರ್ಯವಾಗಿಯೆ 'ಶಕ್ತಿ' ಸೃಷ್ಟಯಾಗುತ್ತದೆ. ಪ್ರಬಲವಾದ ಪ್ರವಾಹದಲ್ಲಿ ಅದಕ್ಕೆ ಅನುಕೂಲ ದಿಙ್ಮುಖವಾಗಿ ಈಜುವ

ಸಾಮಾನ್ಯ ಬಲನೂ ದಡದಲ್ಲಿ ನಿಂತು ನೋಡುವವರಿಗೆ ಆಶ್ಚರ್ಯಕರವಾದ ವೇಗದಿಂದ ಈಜುವ ಮಹಾಬಲಿಷ್ಠನಂತೆ ಕಾಣುವುದಿಲ್ಲವೆ ಹಾಗೆ! ಶಕ್ತಿ ಸಾಲದ ದುರ್ಬಲ ಕವಿಗೆ ಭೀಮದುರ್ಯೋಧನರ ವ್ಯಕ್ತಮಹಿಮೆಯೆ ಅದನ್ನು ದಾನಮಾಡುತ್ತದೆ. ಹಾಗಿರುವಾಗ ರನ್ನನಂತಹ ಬಲಿಷ್ಠಕವಿ ಆ ಪಾತ್ರಗಳಿಂದ ಅದ್ಭುತವಾದ 'ಶಕ್ತಿ' ಸೃಷ್ಟಿಮಾಡಿರುವುದರಲ್ಲಿ ಆಶ್ಚರ್ಯವೇನಿದೆ? ರಸಾನುಭವದೃಷ್ಟಿಯಿಂದಲ್ಲದಿದ್ದರೂ ಕಲಾಚಾತುರ್ಯ ದೃಷ್ಟಿಯಿಂದ ನೋಡಿದರೆ ಬಲ್ಲಿದರಿಗೆ ಅಲ್ಲಿ ಬೆರಗಿಲ್ಲ.

'ಕಾವ್ಯ' ರಂಗದಲ್ಲಿಯಾದರೋ ಈ ನಾಟಕಕಲಾಸಮಯದ ಕಟ್ಟು ಕಟ್ಟಳೆಯ ಇಕ್ಕಟ್ಟಿಲ್ಲ; ಅಲ್ಲಿ ಪ್ರತಿಭೆಯ ತಾಂಡವಕ್ಕೆ ನಾಟಕವೇದಿಕೆಯ ಸ್ಥಳಸಂಕೋಚವಿಲ್ಲ. ಅಲ್ಲಿ ರನ್ನನ 'ಶಕ್ತಿ' ತನ್ನ ಮಹೋಗ್ರಭವ್ಯವಾದ ನಗ್ನರೂಪದಲ್ಲಿ ತಾನೆ ತಾನಾಗಿ ನಟರಾಜನಾಗಿರುವುದನ್ನು ಸಂದರ್ಶಿಸುತ್ತೇವೆ. ತನ್ಮಗ್ನವಾಗಿ 'ಸದ್ಯಃಪರ ನಿರ್ವೃತಿ'ಯಾಗುವ ಸಹೃದಯನ ಚೇತನ ಆ ಅಗ್ನಿನಾಟ್ಯದಲ್ಲಿ ಸುಲಗ್ನವಾದಾಗ ಆತನಿಗೆ ಸಂವೇದ್ಯವಾಗುತ್ತದೆ, ರಸರೂಪಿಯಾಗಿ ಅನುಭವಕ್ಕವತರಿಸುವ ಆ ಭಗವದ್ ಭೂಮಾನುಭೂತಿ!

'ಶಕ್ತಿಕವಿ' ರನ್ನನ 'ಗದಾಯುದ್ಧ ಶಿವನ ಸಮುದ್ರ'ದಲ್ಲಿ ಉತ್ಪತ್ತಿಯಾಗುವ 'ವಿದ್ಯುತ್‌ಶೇಷ'ನ ಒಂದು ಜಿಹ್ವೆ ಸಾಲದೆ, ಅಖಂಡ ಕರ್ಣಾಟಕ ಕ್ಷೇಮಕ್ಕೆ ಮೇಣ್ ವಿರೋಧಿ ವಿಧ್ವಂಸನಕ್ಕೆ?

ರನ್ನನಿರುವ ಕನ್ನಡಕ್ಕೆ
ಅನ್ಯರಿಂದ ಬಹುದೆ ಧಕ್ಕೆ?
ಬರಿಯ ಕವಿಯೆ? ಸಿಡಿಲ ಚಕ್ಕೆ
ಸಿಡಿದು ಬಂತೋ ನಮ್ಮ ನಾಡ
ನುಡಿಯ ಪುಣ್ಯಕೆ!
ಬಿತ್ತು, ಕಾಣೊ, ದಿವ್ಯಾಗ್ನಿಯ
ಕಿಡಿ ಅರಣ್ಯಕೆ!

## ಮಲೆನಾಡಿನ ನಿಸರ್ಗವಿಭೂತಿ

ಹೋಗುವೆನು ನಾ ಹೋಗುವೆನು ನಾ, ನನ್ನ ಒಲುಮೆಯ ಗೂಡಿಗೆ;
ಮಲೆಯ ನಾಡಿಗೆ, ಮಳೆಯ ಬೀಡಿಗೆ, ಸಿರಿಯ ಚೆಲುವಿನ ರೂಢಿಗೆ.
ಬೇಸರಾಗಿದೆ ಬಯಲು, ಹೋಗುವೆ ಮಲೆಯ ಕಣಿವೆಯ ಕಾಡಿಗೆ;
ಹಸುರು ಸೊಂಪಿನ ಬಿಸಿಲು ತಂಪಿನ ಗಾನದಿಂಪಿನ ಕೂಡಿಗೆ!

ಅಲ್ಲಿ ತೆರೆತೆರೆಯದ್ರಿಪಂಕ್ತಿಗಳೆಲ್ಲ ಕಾಣದೆ ಹಬ್ಬಿವೆ;
ನಿಬಿಡ ಕಾನನ ರಾಜಿ ಗಿರಿಗಳನಪ್ಪಿ ಸುತ್ತಲು ತಬ್ಬಿವೆ.

ದೆಸೆಯ ಬಸವನ ಹಿಣಿಲ ಹೋಲಿವೆ; ಮುಗಿಲ ಚುಂಬನಗೈದಿವೆ
ತುಂಗಶೃಂಗಗಳಲ್ಲಿ; ದಿಕ್ತಟದಲ್ಲಿ ಸೊಂಡಿಲ ನೆಯ್ದಿವೆ!

ರವಿಯ ರಶ್ಮಿಯ ಪ್ರಜ್ಞೆಯಿಲ್ಲದ ವಿಪಿನ ನಿರ್ಜನ ರಂಗಕೆ,
ಮುಗಿಲನಂಡಲೆಯುತ್ತ ನಿಂತಿಹ ಧೀರ ಪರ್ವತ ಶೃಂಗಕೆ,
ವನ ವಿಹಂಗ ಸ್ವನ ತರಂಗಿತ ಪವನ ಪಾವನ ಸಂಗಕೆ,
ಹೋಗುವೆನು ನಾ ಮಧುರ ಸುಂದರ ಶೈಲವನ ಲಲಿತಾಂಗಕೆ!
– 'ಪಕ್ಷಿಕಾಶಿ'ಯಿಂದ.

ಆಧುನಿಕ ಕವಿ ಹೀಗೆ ಹಾಡಿದರೆ, ಸಾವಿರ ವರ್ಷಗಳ ಹಿಂದೆ ಕನ್ನಡದ ಆದಿಕವಿ ಪಂಪ ಇಂದಿನ ಇದೇ ಮಲೆನಾಡಿನ ಅಂದಿನೊಂದು ಹಿರಿಯ ಸಿರಿವೀಡಾಗಿದ್ದ ಬನವಾಸಿಯಲ್ಲಿ ತನ್ನ ಬಾಲ್ಯ ಕೌಮಾರಗಳನ್ನೂ, ಬಹುಶಃ ಯೌವನಪ್ರಾರಂಭವನ್ನೂ, ಕಳೆದು ಧರ್ಮಕರ್ಮ ಸಂಯೋಗದಿಂದ ತವರೂರಿಗೆ ದೂರವಾಗಿ ಪುಲಿಗೆರೆಗೆ ಬಂದು, ಅಲ್ಲಿ ಅರಿಕೇಸರಿಯ ಆಸ್ಥಾನದಲ್ಲಿ ಕವಿಯೂ ಕಲಿಯೂ ಆಗಿ ನೆಲಸಿದ ಮೇಲೆ, ಮಲೆನಾಡನ್ನು ನೆನೆನೆನೆದು ವಿರಹವ್ಯಾಕುಲತೆಯಿಂದೆಂಬಂತೆ ತನ್ನ ಲೌಕಿಕ ಕಾವ್ಯ ವಿಕ್ರಮಾರ್ಜುನವಿಜಯದಲ್ಲಿಯ ಬನವಾಸಿಯ ವರ್ಣನೆಯಲ್ಲಿ ತನ್ನ ಹೃದಯದ ರಸಕೃತಜ್ಞತೆಯನ್ನು ತೋಡಿಕೊಂಡಿದ್ದಾನೆ; ಕಾವ್ಯ ಮಾಧುರ್ಯಕ್ಕೆ ಕೋಡಿ ಕೊರೆದಿದ್ದಾನೆ.

ಸೊಗಯಿಸಿ ಬಂದ ಮಾಮರ, ಮರವನ್ನಪ್ಪಿದ ಎಲೆವಳ್ಳಿ, ಹೂತುಂಬಿದ ಜಾತಿ ಸಂಪಗೆ, ಕುಕಿಲುವ ಕೋಗಿಲೆ, ಹಾಡುವ ತುಂಬಿ, ಕೂಡುವ ನಲ್ಲರು-ಯಾವ ಬೆಟ್ಟದಲ್ಲಿ ನೋಡಲಿ, ಯಾವ ಕಾಡಿನಲ್ಲಿ ನೋಡಲಿ! ಹೊರಗಣ ಪ್ರಕೃತಿಸೌಂದರ್ಯಕ್ಕೆ ಮಾತ್ರವಲ್ಲ, ಆಂತರದ ಸಂಸ್ಕೃತಿಗೆ ಆ ನಾಡು ಬೀಡಾಗಿತ್ತಂತೆ. ತ್ಯಾಗಕ್ಕೆ ಭೋಗಕ್ಕೆ ವಿದ್ಯೆಗೆ ಸಂಗೀತಕ್ಕೆ ಸುಖ ಗೋಷ್ಠಿಗೆ ಆಗರವಾಗಿತ್ತಂತೆ ಆ ನಾಡು. ಅದನ್ನು ನೆನೆದ ಕವಿಯ ಜೀವ ಮರಳಿ ಅಲ್ಲಿಗೆ ಹೋಗಲು ಹಾತೊರೆಯುತ್ತದೆ. ಆದರೆ ಬಹುಶಃ ರಾಜಕಾರ್ಯ ಕರ್ತವ್ಯಭಾರಗಳಿಂದ ಬಂಧಿತನಾದ ಅವನಿಗೆ ಈಗಿನ ವೇಗಸಂಚಾರದ ಮತ್ತು ಸಂಪರ್ಕದ ಸೌಲಭ್ಯಗಳಿಲ್ಲದ ಆಗಿನ ಕಾಲದಲ್ಲಿ ಅದು ಸಾಧ್ಯವಾಗುವ ಸಂಭವವೂ ತೋರಲಿಲ್ಲವೆಂದು ಕಾಣುತ್ತದೆ. ಆದ್ದರಿಂದಲೆ ಈ ಜನ್ಮದಲ್ಲಿ ಅಲ್ಲದಿದ್ದರೆ ಇನ್ನೊಂದು ಜನ್ಮದಲ್ಲಿ, ಮನುಷ್ಯಜನ್ಮ ಸಾಧ್ಯವಿಲ್ಲದಿದ್ದರೆ ಕೋಗಿಲೆಯ ಜನ್ಮವೋ ಮರಿದುಂಬಿಯ ಜನ್ಮವೋ ಪ್ರಾಣಿ ಜನ್ಮವಾದರೂ ಚಿಂತೆಯಿಲ್ಲ, ಅಂತೂ ಮಲೆನಾಡಿನಲ್ಲಿ ಹುಟ್ಟಬೇಕೆಂದು ಹಾರೈಸುತ್ತಾನೆ.

"ಚಾಗದ ಭೋಗದ ಅಕ್ಕರದ ಗೇಯದ ಗೊಟ್ಟಿಯಲಂಪಿನ ಇಂಪುಗಳ್ಗೆ ಆಗರವಾದ ಮಾನಸರೆ ಮಾನಸರ್! ಅಂತು ಅವರಾಗಿ ಪುಟ್ಟಲ್ಎನಾಗಿಯುಂ ಏನೊ ತೀರ್ದಪುದೆ? ತೀರದೊಡಂ ಮರಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್?" "ಆರಂಕುಸವಿಟ್ಟೊಡಂ ನೆನೆವುದೆನ್ನ ಮನಂ ವನವಾಸಿದೇಶಮಂ!" "ತೆಂಕನಾಡ ಮರೆಯಲ್ಕೆ ಇನ್ನೇನ್ ಮನಂ ಬರ್ಕುಮೇ?"

ಕವಿಯ ಈ ಎದೆಯರಕೆಯಿಂದಲೆ ನಾವರಿಯಬಹುದು ಅಂದಿನ ಮಲೆನಾಡಿನ ಸೊಬಗು ಸೊಗಸುಗಳನ್ನು; ಸೌಂದರ್ಯ ಸೌಭಾಗ್ಯಗಳನ್ನು. ಆದರೆ ಇಂದಿನ ಮಲೆನಾಡು? ತಪ್ಪು ಮಾಡಿದ ಅಧಿಕಾರಿಗಳಿಗೆ ಶಿಕ್ಷೆಕೊಡುವ ಸಲುವಾಗಿ ಸರಕಾರ ಅವರನ್ನು ಮಲೆನಾಡಿಗೆ ವರ್ಗಮಾಡುತ್ತದೆ ಎಂಬ ಪ್ರತೀತಿಯೆ ಸಾಕು ಸಾಮಾನ್ಯ ಜನಮನದಲ್ಲಿ ಮಲೆನಾಡಿನ ವಿಚಾರವಾಗಿರುವ ಅಭಿಪ್ರಾಯ ಏನು ಎಂಬುದನ್ನು ತಿಳಿದುಕೊಳ್ಳುವುದಕ್ಕೆ. ಅವರಿಗೆ ಮಲೆನಾಡು ಎಂದರೆ ಮಲೆಕಾಡು ಮಳೆ ಸೊಳ್ಳೆ ಮಲೇರಿಯಾ ಹುಲಿ ಹಾವು ರೋಗ ಸಾವು! ಭೂಮಿಯಲ್ಲಿ ಹುಟ್ಟಿದ್ದಕ್ಕೆ ಹೇಗಾದರೂ ಮಾಡಿ ನಿವಾರಿಸಿಕೊಳ್ಳಬೇಕಾಗಿರುವ ಒಂದು ದುರ್ಗಮ ದುರಂತ ಭೂಭಾಗ! ಇಂದಿನ ಕವಿಯೂ ಅಂದಿನ

ಕವಿಯಂತೆ ಹಾಡಬಹುದು. ಆದರೆ ಮಲೇರಿಯಾ ಸೊಳ್ಳೆಯ ಗುಂಗಿನ ಘೋರಸತ್ಯದ ಮುಂದೆ ಕವಿಯ ಹೊಂಗನಸಿನ ಹಾಡೆ! ಸಾವು ನೋವು ಬಡತನ ನಿರಕ್ಷರತೆ ಅಜ್ಞಾನ ಅವಿವೇಕ ಇವುಗಳ ಕರ್ಕಶ ನಿಜದೆದುರು ಕವಿಯ ಸಾಲಂಕಾರ ವರ್ಣನೆ ಹೇಗೆ ತಾನೆ ತಲೆಯೆತ್ತಿ ನಿಲ್ಲಬಲ್ಲುದು?

ಹಾಗಾದರೆ ಯಾವುದು ನಿಜ, ಕವಿಯ ವರ್ಣನೆಯೊ ಜನಗಣತಿಯ ವರದಿಯೊ? 'ಎರಡೂ!' ಎಂಬುದೆ ಸದ್ಯಕ್ಕೆ ಸರಿಯಾದ ಉತ್ತರ! ಪ್ರಕೃತಿಯ ಮಲೆನಾಡು ಪಂಪನ ಕಾಲದಲ್ಲಿದ್ದಂತೆಯೆ ಇಂದಿಗೂ ದುರ್ದಮ್ಯವಾಗಿದೆ, ಗಗನೋನ್ನತವಾಗಿದೆ, ರುದ್ರವಾಗಿದೆ, ರಮಣೀಯವಾಗಿದೆ. ಸರಿಸಮಾನಸ್ಕಂಧರಿಗೆ ಹಸ್ತಲಾಘವವೀಯುತ್ತಾ, ಕುಬ್ಜಜೀವವನ್ನು ಕಾಲಡಿ ತುಳಿಯುತ್ತಾ, ಅಲ್ಪಚೇತಸರನ್ನು ಅಪ್ಪಳಿಸಿ ಇಲ್ಲಗೈಯುತ್ತಾ 'ಇದೆ', ಶಂಕರಿಯೂ ಆಗಿ ಭಯಂಕರಿಯೂ ಆಗಿ. ಅದು ಕಲಿಗಳ ಕಣಿವೆ, ಮಲ್ಲರ ಕಣಿವೆ, ಮಲ್ಲರ ಮಲೆ, ಹೇಡಿಗಳ ಸೂಡು, ಅಂಜುಕುಳಿಗಳಿಗೆ ಕಗ್ಗಾಡು!

ಶ್ರೀರಾಮನು ಸೀತಾಲಕ್ಷ್ಮಣರೊಡನೆ ಅತ್ರಿ ಋಷ್ಯಾಶ್ರಮವನ್ನು ಬೀಳ್ಕೊಂಡು ದಂಡಕಾರಣ್ಯವನ್ನು ಪ್ರವೇಶಿಸಿದೊಡನೆ 'ವಿಪಿನದ ವಿಪತ್ತೆ ವಪುವೆತ್ತಂತೆ' ಅರಣ್ಯದ ಭೀತಿಭಯಂಕರತೆಯೆ ಮೈತಾಳಿ ವಿರಾಧರಾಕ್ಷಸನ ಆಕಾರದಿಂದ ಇದಿರಾಗುತ್ತದೆ. ಆ ವಿರಾಧ ಮೊದಲು ಅಪಹರಿಸಿದುದು ಹೆಣ್ಣಾಗಿದ್ದ ಸೀತೆಯನ್ನು: ಸಹಜವಾಗಿಯೆ! ತರುವಾಯ ರಾಮಲಕ್ಷ್ಮಣರನ್ನೂ ಅಪಹರಿಸುತ್ತಾನೆ. ಗಂಡಸರಾದರೂ ಪಟ್ಟಣಿಗ ನಾಗರಿಕರು ಕಾಡಿಗೆ ಅಳುಕದಿರಲಾಗುತ್ತದೆಯೆ? ಆದರೆ ರಾಮಲಕ್ಷ್ಮಣರು ಆ ವಿಪಿನಭಯವನ್ನು ಗೆಲ್ಲುತ್ತಾರೆ; ವಿರಾಧನನ್ನು ಕೊಲ್ಲುತ್ತಾರೆ. ಅದೇ ವಿರಾಧನ ಮೃತದೇಹದಿಂದಲೆ ಒಬ್ಬ ಗಂಧರ್ವ ಮೂಡಿ ಸೀತಾರಾಮಲಕ್ಷ್ಮಣರಿಗೆ ಶುಭವನ್ನು ಕೋರಿ ಅವರ ಮುನ್ನಡೆಗೆ ದಾರಿತೋರಿ ಅಂತರ್ಧಾನವಾಗುತ್ತಾನೆ. ಶಾಪದಿಂದ ರಾಕ್ಷಸನಾಗಿದ್ದ ತುಂಬುರ ಎಂಬ ಹೆಸರಿನ ಆ ಗಂಧರ್ವನು ಶ್ರೀರಾಮನಿಗೆ ನುಡಿದ ದಿವ್ಯವಚನಗಳಲ್ಲಿ ಇದೂ ಒಂದು:

"ದಂಡಕಾರಣ್ಯಮಿದು ಭೀರುಗೆ ಭಯಂಕರಂ;
ರಸಿಕಧೀರಗೆ ಕಲಾಶಂಕರಂ, ನನ್ನಂತೆವೋಲ್!"

ವಿಕಾರಿಯೂ ಅಪಾಯಕಾರಿಯೂ ಕರ್ಕಶನೂ ಆದ ರಾಕ್ಷಸ ವಿರಾಧನಿಂದ ಸ್ಫುರದ್ರೂಪಿಯೂ ಸಹಾಯಕಾರಿಯೂ ಮಾರ್ಗದರ್ಶಿಯೂ ಆದ ಗಂಧರ್ವ ತುಂಬುರನು ಮೂಡಿದಂತೆ ಗಂಡೆದೆಯ ರಸಿಕಧೀರಗೆ ಮಲೆನಾಡು ಕಲಾಶಂಕರವಾಗುತ್ತದೆ, ಭೀರುಗೆ ಭಯಂಕರ ಮಾತ್ರವೇ ಆಗಿರುತ್ತದೆ. ಹೊರನೋಟಕ್ಕೆ ವಿರಾಧನಂತೆ ತೋರಬಹುದಾದ ಇಂದಿನ ಮಲೆನಾಡಿನಲ್ಲಿ ಕವಿಯ ಕಣ್ಣು ತುಂಬುರ ಗಂಧರ್ವನನ್ನು ದರ್ಶಿಸಿದೆ. ಶಾಪಗ್ರಸ್ತನಾಗಿರುವ ರಾಕ್ಷಸನನ್ನು ಸಂಹರಿಸಿ ದೇವಪುರುಷನನ್ನು ಕಡೆದು ಬಿಡಿಸಬೇಕಾದ ಕರ್ತವ್ಯ ನಮ್ಮದಾಗಿದೆ. ಕವಿ ಕಂಡದ್ದನ್ನು ಶಿಲ್ಪಿ ಕಡೆಯಬೇಕು; ಶಿಲ್ಪಿ ಕಡೆದುದನ್ನು ಪ್ರಭುಶಕ್ತಿ ಕಟ್ಟಬೇಕು. ಪ್ರಭುಶಕ್ತಿಗೆ ಬೆಂಬಲವಾಗಿ ನಿಂತು ದುಡಿದು ನಡೆದು ಪ್ರಜಾಶಕ್ತಿ ಆ ದಿವ್ಯ ಶ್ರೇಯಸ್ಸನ್ನು ಮುಟ್ಟಬೇಕು. ಆಗ ಮಲೆನಾಡು ಕರ್ಣಾಟಕದ ಕಾಶ್ಮೀರ ಮಾತ್ರವಲ್ಲ. ಭರತಖಂಡದ ಸ್ವಿಟ್ಜರ್ಲೆಂಡ್ ಮಾತ್ರವಲ್ಲ, ಅವುಗಳಿಗಿಲ್ಲದ ಒಂದು ಅಲೌಕಿಕವಾದ ಸಂಸ್ಕೃತಿಯನ್ನೂ ಆತ್ಮಶ್ರೀಯನ್ನೂ ಪಡೆದು ಭವ್ಯವಾಗುವುದರಲ್ಲಿ ಸಂದೇಹವಿಲ್ಲ.

ಆಗಲೆ ಆ ದಾರಿಯಲ್ಲಿ ನಾವು ತಕ್ಕಮಟ್ಟಿಗೆ ಮುಂದುವರಿಯುತ್ತಿದ್ದೇವೆ. ಯಂತ್ರಜ್ಞರಾದ ಶಿಲ್ಪಿವರೇಣ್ಯರ ತಂತ್ರಶಕ್ತಿಯಿಂದ ಪರ್ವತದ ನೆತ್ತಿ ಯುಗಯುಗದ ನಿದ್ರೆಯಿಂದ ಎಚ್ಚತ್ತು ತನ್ನ ಕಬ್ಬಿಣಗನಸನ್ನು ಹೊರಹಾಕಿ ಭದ್ರಾವತಿಗಳನ್ನು ಸೃಷ್ಟಿಸುತ್ತಿದೆ. ಅನಂತಕಾಲದಿಂದಲೂ ಅರಣ್ಯಗಳಲ್ಲಿ ಅಲೆಯುತ್ತಿದ್ದ ಕಾಡುಹೊಳೆ ತನ್ನ ನೀರೆದೆಯ ಗರ್ಭದಿಂದ ಬೆಂಕಿಮಿಂಚನ್ನು ಮಸೆದು ಹೊರಹೊಮ್ಮಿಸಿ ಜೋಗದಂತಹ ವಿದ್ಯುದ್‌ಯೋಜನೆಗಳನ್ನು ಪಡೆಯುತ್ತಿದೆ. ಸಸ್ಯ ಸಂಪತ್ತನ್ನೂ ಪ್ರಾಣಿಸಂಪತ್ತನ್ನೂ ಅಭಿವೃದ್ಧಿಗೊಳಿಸಿ ಹದವರಿತು ಉಪಯೋಗಿಸಿಕೊಳ್ಳಬೇಕೆಂದು ದೂರದೃಷ್ಟಿಯಿಂದ, ನಿಧಾನವಾಗಿಯಾದರೂ, ಕೆಲಸ ಸಾಗುತ್ತಿದೆ. ಎಲ್ಲಕ್ಕಿಂತಲೂ ಮಿಗಿಲಾಗಿ ಜನಸಂಪತ್ತನ್ನು ರಕ್ಷಿಸದಿದ್ದರೆ

ಉಳಿದುದೆಲ್ಲವೂ ವಿನಷ್ಟವಾಗುತ್ತದೆ, ವ್ಯರ್ಥವಾಗುತ್ತದೆ ಎಂಬ ಮನೋಧರ್ಮ ಜನತೆಯಲ್ಲಿಯೂ ಆಡಳಿತವರ್ಗದಲ್ಲಿಯೂ ಮೂಡಿ ಕಾರ್ಯೋನ್ಮುಖವಾಗಿರುವ ಮಂಗಳಕರ ಸೂಚನೆಗಳು ತೋರುತ್ತಿವೆ. ಸ್ವಾರ್ಥತೆ, ಅಸೂಯೆ, ದ್ವೇಷ, ಅಹಂಕಾರ, ಸ್ವಪ್ರತಿಷ್ಠೆ, ದುರ್ಲಾಭಲೋಭ ಮೊದಲಾದ ಆಸುರೀಶಕ್ತಿಗಳು ಅಡಚಣೆಯೊಡ್ಡದಿದ್ದಲ್ಲಿ ವಿರಾಧನಿಂದ ತುಂಬುರೋದಯವಾಗಲು ಬಹಳ ಕಾಲ ಹಿಡಿಯುವುದಿಲ್ಲ.

ಮಲೆನಾಡಿನ ಸೌಂದರ್ಯವೇನೊ ಸಾವಿರ ವರ್ಷದ ಹಿಂದೆ ಇದ್ದಂತೆಯೆ ಇದೆ. ಅದರ ಸೌಭಾಗ್ಯಕ್ಕೆ ಮಾತ್ರ ಇಳಿಗಾಲ ಬಂದಂತಿದೆ. ಪ್ರಕೃತಿಯ ಸೌಂದರ್ಯ ಮನುಷ್ಯಪ್ರಜ್ಞೆಯ ರಸಾಸ್ವಾದನೆಗೆ ವಿಷಯವಾದಂದು, ನೈಸರ್ಗಿಕವಾದ ಸಂಪತ್ತು ಮನುಷ್ಯಕೃತಿಯ ಅಭ್ಯುದಯಕ್ಕೆ ಅಧೀನವಾದಂದು, ಅಂತಹ ಅಭ್ಯುದಯವು ಸಂಸ್ಕೃತಿಗೂ ನಿಃಶ್ರೇಯಸಕ್ಕೂ ಕೈಂಕರ್ಯವೆಸಗಿದಂದು ಅದು 'ಸೌಭಾಗ್ಯ'ವಾಗುತ್ತದೆ. ಅಂತಹ 'ಸೌಭಾಗ್ಯ'ದ ಪರಿವರ್ತನೆಗೆ ತಪಸ್ಸು ಮಾಡುತ್ತಿರುವಂತಿದೆ, ಮಲೆನಾಡಿನ ಸೌಂದರ್ಯ: ಗಗನಚುಂಬಿಗಳಾದ ಬೆಟ್ಟಗೋಡು; ಶತಮಾನಗಳಿಂದಲೂ ಮರದ ಬುಡದೆಡೆ ಬಿಸಿಲನ್ನೆ ಕಾಣದೆ ಬೆಳೆದು ನಿಂತಿರುವ ದಟ್ಟಕಾಡು; ಬಿತ್ತರವಾದ ಗದ್ದೆಯ ಕೋಗು; ಎತ್ತರವಾದ ತೋಟಗಳು; ತರತರದ ಹಕ್ಕಿಗಳು; ಸಾವಿರ ತರದ ಅರಣ್ಯಜಂತುಗಳು; ಹೂವು, ಹಣ್ಣು, ಜೇನು, ಗಂಧ, ಗೆಡ್ಡೆ, ಗೆಣಸು, ಮೂಲಿಕೆ, ಕಬ್ಬು, ಕಾಫಿ, ಏಲಕ್ಕಿ, ಮೆಣಸು, ಅಡಕೆ, ಬತ್ತ; ಹಾವು, ಮೊಸಳೆ, ಮೀನು, ಹುಲಿ, ಆನೆ, ಜಿಂಕೆ, ದೊಡ್ಡು, ಕಡ; ಮಾಂಸ, ಚರ್ಮ, ಉಗುರು, ಹಲ್ಲು, ಕೊಬ್ಬು, ಗರಿ! ಏನುಂಟು? ಏನಿಲ್ಲ? ಆದರೆ ನಾವು ಎಚ್ಚತ್ತಿಲ್ಲ. ನಮ್ಮ ಸಸ್ಯಶಾಸ್ತ್ರಜ್ಞರೂ ಪ್ರಾಣಿಶಾಸ್ತ್ರಜ್ಞರೂ ಖನಿಜಶಾಸ್ತ್ರಜ್ಞರೂ ಪಾಶ್ಚಾತ್ಯ ಮಾತ್ರವಾದ ಪಠ್ಯಪುಸ್ತಕ ಶಾಸ್ತ್ರಜ್ಞಾನದಿಂದಲೆ ತೃಪ್ತಿಪಟ್ಟುಕೊಳ್ಳದೆ ಈಕಡೆಯೂ ತಿರುಗಿ ಕೆಲಸಮಾಡಿದರೆ ಎಷ್ಟು ಶ್ರೀಮಂತರಾಗುತ್ತೇವೆಯೊ ಹೇಳಬಲ್ಲವರಾರು?

ಆದರೆ ಕವಿದೃಷ್ಟಿ ಅಲ್ಲಿಯವರೆಗೆ ಕಣ್ಣುಮುಚ್ಚಿ ಕುಳಿತುಕೊಳ್ಳಬೇಕಾಗಿಲ್ಲ. ಕುಳಿತುಕೊಂಡೂ ಇಲ್ಲ. ಅದು ಮಲೆನಾಡನ್ನು ಕಂಡುಂಡು ಮೈಗೊಂಡಿದೆ. ಅವನ ರಸದೃಷ್ಟಿಗೂ ರಸಸೃಷ್ಟಿಗೂ ಪ್ರಕೃತಿ ಸೌಭಾಗ್ಯ ಮಾತ್ರವಲ್ಲ ಆತ್ಮಶ್ರೀಪೂರ್ಣವಾದ ಸೌಭಾಗ್ಯವೂ ಸಿದ್ಧಿಯಾಗಿದೆ; ಇತರರಿಗೂ ಆ ಸೌಭಾಗ್ಯವನ್ನು ಹಂಚಲು ಅವನು ನಿರಂತರ ಕಾತರನಾಗಿದ್ದಾನೆ:

ಎಲ್ಲಿ ತಿಂಗಳು ಕಾಡುಮಲೆಗಳ ಮೇಲೆ ಹಾಲ್ಮಳೆ ಸುರಿವುದೋ,
ಕಿವಿಯ ಜಿಹ್ವೆಗೆ ಎಲ್ಲಿ ಜೊನ್ನುಣಿ ತೇನೆ ಜೇನ್ಮಳೆ ಕರೆವುದೋ,
ಎಲ್ಲಿ ಕದ್ದಿಂಗಳಲಿ ತಾರಾಕೋಟಿ ಕಿಡಿಕಿಕ್ಕಿರಿವುದೋ,
ಕಾರಿನಿರುಳಲಿ ಮಿಂಚುಹುಳುಗಳ ಸೇನೆ ಕತ್ತಲೆಗಿರಿವುದೋ,

ಎಲ್ಲಿ ಹಸುರನು ಚಿಮ್ಮಿ ಕಣ್ಣಿಗೆ ಪೈರುಪಚ್ಚೆಯು ಬೆಳೆವುದೋ,
ಎಲ್ಲಿ ಗದ್ದೆಯ ಕೋಗು ಪವನನ ಹತಿಗೆ ತೆರೆತೆರೆಯೊಲೆವುದೋ,
ಬಿಂಗಗಣ್ಗಳ ಮಲೆಯ ಹೆಣ್ಗಳ ದಿಟ್ಟಿಯೆಲ್ಲೆದೆ ಸೆಳೆವುದೋ,
ಎಲ್ಲಿ ಕಾಲವು ತೇಲಿ ಸುಖದಲಿ ತಿಳಿಯದಂತೆಯೆ ಕಳೆವುದೋ,

ಅಲ್ಲಿಗೈದುವೆನಲ್ಲಿಗೈದುವೆನಿಲ್ಲಿ ಬೇಸರವಾಗಿದೆ;
ಕಾಡುಮಲೆಗಳನಲೆವ ಹುಚ್ಚಿನ ಕಿಚ್ಚು ಹೃದಯದಿ ರೇಗಿದೆ!
ಹೋಗುವೆನು ನಾ ಹೋಗುವೆನು ನಾ ನನ್ನ ಒಲುಮೆಯ ಗೂಡಿಗೆ:

ಹಸುರು ಸೊಂಪಿನ ಬಿಸಿಲು ತಂಪಿನ ಗಾನದಿಂಪಿನ ಕೂಡಿಗೆ!
ಅಲ್ಲಿ ಭಾವದ ಬೆಂಕಿಹಕ್ಕಿಯ ಮಿಂಚುರೆಕ್ಕೆಯನೇರುವೆ;

ಧರಣಿ, ದಿನಮಣಿ, ತಾರೆ, ನೀಹಾರಿಕೆಯ ನೇಮಿಯ ಮೀರುವೆ;
ಕಾಲದಾಚೆಗೆ, ದೇಶದಾಚೆಗೆ, ಚಿಂತೆಯಾಚೆಗೆ ಹಾರುವೆ;
ಕಾವ್ಯಕನ್ಯಾ ಶ್ರಾವ್ಯಕಂಠದೊಳಾತ್ಮಭೂತಿಯ ಸಾರುವೆ!

ಮಲೆನಾಡಿನ ನಿಸರ್ಗದ್ದು ರುಂದ್ರಸೌಂದರ್ಯ. ಅಲ್ಲಿ ಮನುಷ್ಯ ಚೇತನ ಗಿರಿ ಅರಣ್ಯಸ್ಪರ್ಧಿಯಾಗಿ ವರ್ಧಿಸಿತೇ ಅವನು ಗೆದ್ದ; ಇಲ್ಲ, ಕ್ರಿಮಿಕೀಟದ ಬಾಳೇ ಅವನಿಗೂ ಸಿದ್ಧ.

## ವಚನಕಾರ ಬಸವೇಶ್ವರರು

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಾವು ಇದಿರುಗೊಳ್ಳುವ ದ್ವಿತೀಯ ನವೋದಯಕ್ಕೆ ಸ್ಫೂರ್ತಿಪ್ರಭಾಪ್ರತಿಮರಾಗಿರುವ ಹಿರಿಯ ವ್ಯಕ್ತಿ ಶ್ರೀ ಬಸವೇಶ್ವರರು. ಅಂದು ಕನ್ನಡನಾಡಿನ ಧರ್ಮಭೂಮಿಕೆಯಲ್ಲಿ ಅವರ ಪ್ರಬುದ್ಧಚೇತನ ಸಂಮಥಿಸಿ ಹೊಮ್ಮಿಸಿದ ತೆರೆತೆರೆಯ ಆಂದೋಲನಗಳಲ್ಲಿ ಮೂರ್ತಿಮತ್ತಾಗಿದೆ ನಾವು ಗುರುತಿಸಬಹುದಾದ ಆ ಕಾಲದ ಯುಗಶಕ್ತಿ. ಸಾಹಿತ್ಯ ಭೂಮಿಕೆಯಲ್ಲಿ ಆ ಶಕ್ತಿ ಹರಿಹರ ರಾಘವಾಂಕರ ಕಾವ್ಯವಾಹಿನಿಗಳಲ್ಲಿ ಮೊದಲುಗೊಂಡು, ಮುಂಬರಿದು, ಅನೇಕ ಕವಿಕೃತಿಗಳಲ್ಲಿ ಮುದ್ರಿತವಾಗಿರುವ ಕ್ರಾಂತಿಯಾತ್ರೆಯನ್ನು ಸಂದರ್ಶಿಸುತ್ತೇವೆ. ಕಾವ್ಯಪುರುಷನು ವೃತ್ತ ಕಂದಗಳ ಪ್ರೌಢ ಚಂಪೂಮಾರ್ಗದ ಜನ್ನಿವಾರವನ್ನು ಹರಿದು ಬಿಸುಟು ಸಾಮಾನ್ಯರಿಗೂ ಸುಲಭವಾಗಿರುವ ರಗಳೆ ಷಟ್ಪದಿಗಳ ಲಿಂಗಧಾರಣೆಮಾಡುವ ಉತ್ಸಾಹದೃಶ್ಯ ನಿಜವಾಗಿಯೂ ಮನೋಲ್ಲಾಸ ಕಾರಿಯಾಗುತ್ತದೆ. ಎಲ್ಲಕ್ಕಿಂತಲೂ ಹೆಚ್ಚಾಗಿ, ಸಾಹಿತ್ಯ ಸಮಾಲೋಚಕನ ವಿಶೇಷವಾದ ಗಮನಕ್ಕೆ ಪಾತ್ರವಾಗುವುದೆಂದರೆ ನಿರಂತರ ನಾಟ್ಯಶೀಲ ಕಾವ್ಯಪುರುಷನ ಪದವಿನ್ಯಾಸವು ತನ್ನ ಕ್ಲುಪ್ತ ಛಂದೋಗಾಂಭೀರ್ಯದ ಸಂಪ್ರದಾಯ ಗದ್ದುಗೆಯಿಂದ ಕೆಳಗಿಳಿದು ಬಂದು, ಗದ್ಯದ ನಡೆಗೆ ನೋಂತು, ಕಡೆಗೆ ವಚನರೀತಿಯಲ್ಲಿ ಸಂತೃಪ್ತಿಗೊಳ್ಳುವ ಅಚ್ಚರಿ!

ಇದುವರೆಗೂ ನಮಗೆ ದೊರೆಯದಿರುವ ಕೃತಿಗಳಲ್ಲಿಯೂ ವಡ್ಡಾರಾಧನೆ ಚಾವುಂಡರಾಯ ಪುರಾಣಗಳಲ್ಲಿಯೂ ಚಂಪೂಕಾವ್ಯಗಳ ಸಂದಿಗೊಂದಿಗಳಲ್ಲಿಯೂ ಇಣುಕಿ ಮಿಣುಕಿ ಹಣುಗಿ ಜಣುಗಿ ಪಯಣಬಂದ ಗದ್ಯವಿಧಾನವು ಹರಿಹರ ಕೈಯಲ್ಲಿ, ಅವನ ರಗಳೆಯ ಕಾವ್ಯಗಳಲ್ಲಿ, ಸ್ಥಲಸ್ಥಲಗಳ ನಡುವೆ ಇಡೀ ಸ್ಥಲಗಳನ್ನೇ ತುಂಬುವಷ್ಟು ಗಣ್ಯವಾಗಿ ಮಾನ್ಯವಾಗಿ ಧನ್ಯವಾಗಿರುವುದನ್ನು ಕಾಣುತ್ತೇವೆ. ಅಲ್ಲಿಯ ಗದ್ಯ ಕ್ಲುಪ್ತಛಂದಸ್ಸನ್ನು ತೊರೆದಿದ್ದರೂ ಅದರ ಮೆಯ್ಕಟ್ಟು ಅಛಂದವಾದುದಲ್ಲ; ಅದು ಗದ್ಯರೂಪಧಾರಣೆ ಮಾಡಿದ್ದರೂ ಕಾವ್ಯತ್ವವನ್ನು ಬಿಟ್ಟಿಲ್ಲ. ಆ ಗದ್ಯದ ಪ್ರಕಾರಾಂತರವೆ ವಚನ ಸಾಹಿತ್ಯವಾಗಿ ಹೂ ಬಿಟ್ಟಿತು. ವಚನಗಳು ಆ ಗದ್ಯದಿಂದ ಹೊಮ್ಮಿದ ಬಿಡಿಬಿಡಿಯ ಕಿಡಿವೂಗಳು.

ವೀರಶೈವಧರ್ಮಕ್ಕೆಂತೊ ಅಂತೆ ವಚನಸಾಹಿತ್ಯಕ್ಕೂ ಬಸವೇಶ್ವರರನ್ನು ಆಚಾರ್ಯಪುರುಷರೆಂದು ಪರಿಗಣಿಸಬಹುದು. ಆದರೆ ಅವರು ಪ್ರಧಾನವಾಗಿ ಆಚಾರ್ಯರು, ಗೌಣವಾಗಿ ವಚನಕಾರರು ಎಂಬುದನ್ನು ಮರೆಯಬಾರದು. ಅವರನ್ನು ವಚನಕಾರ

ಮಾತ್ರರೆಂದು ಪರಿಭಾವಿಸಿದರೆ, ಮರವನ್ನು 'ಎಲೆಗಳನ್ನು ಸಿಕ್ಕಿಸಿಕೊಂಡಿರುವ ಕೋಲು' ಎಂದು ವರ್ಣಿಸಿದಂತಾಗುತ್ತದೆ. ಅವರು ಸಾಹಿತಿಯಲ್ಲ. ಸಾಹಿತ್ಯ ಸೃಷ್ಟಿಮಾಡಲೆಂದು ಅವರು ವಚನರಚನೆಗೆ ಕೈಹಾಕಲಿಲ್ಲ. ಅವರ ವಚನಗಳೂ ಅವರಂತೆಯೆ ಪ್ರಧಾನತಃ ಧರ್ಮಬೋಧನೆ ಮಾಡುವ ಪ್ರಭುಸಮ್ಮಿತಗಳು ಇಲ್ಲವೆ ಮಿತ್ರಸಮ್ಮಿತಗಳು: ರಸಾನುಭವದಾನಮಾಡುವ ಕಾಂತಾಸಮ್ಮಿತಗಳಲ್ಲ. ಅಲ್ಲಲ್ಲಿ ಸಾಹಿತ್ಯಾಂಶದಿಂದ ರಸಾನುಭವವನ್ನುಂಟು ಮಾಡುವನಿತು ರಮಣೀಯವಾಗಿದ್ದರೂ ಅವು ಒಟ್ಟಿನಲ್ಲಿ ಶುದ್ಧ ಸಾಹಿತ್ಯಜಾತಿಗೆ ಸೇರುವುದಿಲ್ಲ. ಹೀಗೆ ಹೇಳುವುದರಿಂದ ಅವರ ವಚನಗಳ ಹಿರಿಮೆಯನ್ನಾಗಲಿ ಅವುಗಳ ಸುಭಗತೆಯನ್ನಾಗಲಿ ಅಲ್ಲಗಳೆದಂತಾಗುವುದಿಲ್ಲ. ಅವುಗಳ ಉಗಮದ ಕಾರಣ ಉದ್ದೇಶ ಪ್ರಯೋಜನಗಳನ್ನು ನಿರ್ದೇಶಿಸಿದಂತಾಗುತ್ತದೆ ಅಷ್ಟೆ.

ಅವರಿಗೂ ಒಮ್ಮೊಮ್ಮೆ ತಮ್ಮ ವಚನರಚನೆಯ ವಿಚಾರದಲ್ಲಿ ಏನೊ ಒಂದು ಅತೃಪ್ತಿಯ ಅಸಮಾಧಾನ ತಲೆದೋರಿ ಹೀಗೆ ಹೇಳಿಕೊಂಡಿದ್ದಾರೆ: "ಹಾಲ ತೊರೆಗೆ ಬೆಲ್ಲದ ಕೆಸರು, ಸಕ್ಕರೆಯ ಮಳಲು, ತವರಾಜದ ನೊರೆತೆರೆಯಂತೆ ಆದ್ಯರ ವಚನವಿರಲು, ಬೇರೆ ಬಾವಿಯ ತೋಡಿ ಉಪ್ಪುನೀರನುಂಬವನ ವಿಧಿಯಂತೆ ಆಯಿತ್ತೆನ್ನ ಮತಿ, ಕೂಡಲ ಸಂಗಮದೇವ." "ಆದ್ಯರ ವಚನ ಪರುಷವೆಂದೆಂಬೆನು. ಆ ಪರುಷವೆನಗೆಂತು ದೊರಕುವುದಯ್ಯ!... ಹೊಲೆಯರ ಮದ್ದಲೆಯಂತೆ ನುಡಿವ ಡಂಭಕ ನಾನಯ್ಯ, ಕೂಡಲ ಸಂಗಮದೇವ." ತಮ್ಮ ವಚನಗಳನ್ನು ಸಾಹಿತ್ಯದ ಒರೆಗಲ್ಲಿಗೆ ಹಚ್ಚಿ ನೋಡುವವರಿಗೆಂಬಂತೆ ಮತ್ತೊಂದು ವಚನದಲ್ಲಿ ಸ್ವಲ್ಪ ವಿಡಂಬನಪೂರ್ವಕವಾಗಿಯೆ ಹೀಗೆ ಎಚ್ಚರಿಸಿದ್ದಾರೆ. "ತಾಳಮಾನ ಸರಸವ ನಾನರಿಯೆ. ವರ್ಜಬಜಾವಣೆಯ ಲೆಕ್ಕವನರಿಯೆ. ಅಮೃತಗಣ ದೇವಗಣನರಿಯೆ. ಕೂಡಲ ಸಂಗಮದೇವ, ನಿನಗೆ ಕೇಡಿಲ್ಲವಾಗಿ, ಆನು ಒಲಿದಂತೆ ಹಾಡುವೆ." ವಿಷಗಣದಲ್ಲಿ ವಚನ ಪ್ರಾರಂಭವಾದರೂ ಚಿಂತೆಯಿಲ್ಲ; ವಿಷಧರಭೂಷಣವಾಗಿ ವಿಷಪಾನಮಾಡಿದ ವಿಷಕಂಠ ಕೂಡಲ ಸಂಗಮದೇವನಿಗೆ ಆಗಿರುವುದಕ್ಕಿಂತಲೂ ಹೆಚ್ಚಿನ ಕೇಡು ಇನ್ನೇನೂ ಆಗಲಾರದೆಂದು ದರಸ್ಮಿತರಾಗಿ ಧೈರ್ಯ ಹೇಳುತ್ತಾರೆ!

ಅವರ ಉದ್ದೇಶ ಕೃತಿಲೋಕದ ರಸಾನುಭವವಲ್ಲ; ಭವಲೋಕಕ್ಕೆ ಅಭವಾಲೋಕವನ್ನು ತರುವ ಗುರುತರಕಾರ್ಯ. ಅವರು ಬಾರಿಸಲು ಆಸೆಪಟ್ಟುದು ವೀಣೆಯನ್ನಲ್ಲ, ಒಡಲನ್ನು. ಅವರು ಹಸನುಗೊಳಿಸಲೆಳಸಿದ್ದು ಕಿನ್ನರಿಯ ತಂತಿಗಳನ್ನಲ್ಲ, ನರನ ನರಗಳನ್ನು. ಗೀತೆ, ಕೀರ್ತನೆ, ಪದ, ವಚನ, ಹಾಡುಗಬ್ಬ, ಬಾಜನೆಗಬ್ಬಗಳ ರಚನೆ ಅವರ ಜನ್ಮೋದ್ದೇಶವಾಗಿರಲಿಲ್ಲ. ಮನುಷ್ಯನ ಹೃದಯದಲ್ಲಿ ಮಹೇಶ್ವರನನ್ನು ಕಡೆದು ರಚಿಸುವ ಮಹತ್ತರವಾದ ಭವ್ಯೋದ್ದೇಶ ಅವರದಾಗಿತ್ತು. ತನ್ನ ಕೆಲಸ ಕಾವ್ಯಲೋಕದ್ದಲ್ಲ; ಕರ್ಮಲೋಕದ್ದು ಎಂಬುದನ್ನು ಕುರಿತು ಹೀಗೆ ಹಾಡಿದ್ದಾರೆ: "ಎನ್ನ ಕಾಯುವ ದಂಡಿಗೆಯ ಮಾಡಯ್ಯ! ಎನ್ನ ಶಿರವ ಸೋರೆಯ ಮಾಡಯ್ಯ! ಎನ್ನ ನರವ ತಂತಿಯ ಮಾಡಯ್ಯ! ಎನ್ನ ಬೆರಳ ಕಟ್ಟಿಯ ಮಾಡಯ್ಯ! ಮೂವತ್ತೆರಡು ರಾಗವ ಹಾಡಯ್ಯ! ಉರದಲೊತ್ತಿ ಬಾರಿಸು, ಕೂಡಲ ಸಂಗಮದೇವ!"

ಬಸವಣ್ಣನವರ ವಚನಕೃತಿಗಳಲ್ಲಿ ಸಾಹಿತ್ಯವನ್ನು ಅರಸುವುದಕ್ಕಿಂತಲೂ ಅವರ ಬದುಕಿನಲ್ಲಿ ಅದನ್ನು ಅರಸಿದರೆ ಹೆಚ್ಚು ಸಫಲವಾಗುತ್ತದೆ. ಕುಂಚಗೈಯಾಗಿ ವಸ್ತ್ರಪಟಕ್ಕೆ ಬಣ್ಣಬಳಿಯುವ ವರ್ಣಶಿಲ್ಪಿಯಂತಲ್ಲ ಅವರು; ಪೊರಕೆ ಹಿಡಿದು ಗುಡಿಸುವ, ಗುದ್ದಲಿ ಹಿಡಿದು ಅಗೆಯುವ,

ನೀರ್ವೊಯ್ದು ಶುಚಿಗೊಳಿಸುವ, ಗೊಬ್ಬರ ಹಾಕಿ ಬೆಳೆಸುವ, ಕಳೆ ಕಿತ್ತು ಹಸನುಮಾಡುವ, ಬೇಲಿ ಕಟ್ಟಿ ಕಾಯುವ, ಅಬ್ಬರಿಸಿ ಹಕ್ಕಿ ಮಿಗಗಳನ್ನೆಬ್ಬಿ ಪೈರನ್ನು ರಕ್ಷಿಸುವ ಮಾನವ ಹೃದಯಕ್ಷೇತ್ರದ ದೇವಕೃಷಿಕನಂತೆ ಅವರು ಕರ್ಮಯೋಗಿ. ಸಾಹಿತ್ಯಕ್ರೀಡೆಯಿಂದ ದೂರ ನಿಂತೇ ಅವರು ನಮ್ಮ ಸಾಹಿತ್ಯದ ದ್ವಿತೀಯ ನವೋದಯಕ್ಕೆ ಪ್ರೇರಕ ಶಕ್ತಿಯಾಗಿದ್ದಾರೆ.

ಆದರೂ ಹೃದಯದಿಂದ ಹೊಮ್ಮಿದುದರಲ್ಲಿ ಭಾವಸಂಚಾರಕ ಶಕ್ತಿ ಇದ್ದೇ ಇರುತ್ತದೆ. ಆದ್ದರಿಂದ ರಸರಮಣೀಯತೆ ಮಿಂಚಿಯೇ ಮಿಂಚುತ್ತದೆ. ಅಂತಹ ಸಹಜಕಲೆ ಬಸವಣ್ಣನವರ ವಚನಗಳಲ್ಲಿ ಅಲ್ಲಲ್ಲಿ ಮನೋಹರವಾಗಿ ಮೈದೋರುತ್ತದೆ. ಆಧ್ಯಾತ್ಮ, ವಿಡಂಬನೆ, ಭಕ್ತಿ, ಸುಧಾರಣೆ, ಜ್ಞಾನ ಪಿಪಾಸೆ, ಆತ್ಮಭರ್ತ್ಸನೆ-ವಿಷಯ ಯಾವುದೆ ಆಗಲಿ ಇಲ್ಲೊಂದು ಅಲಂಕಾರ, ಅಲ್ಲೊಂದು ರೀತಿ, ಮತ್ತೊಂದೆಡೆ ಛಂದಸ್ಸು, ಮಗುದೊಂದೆಡೆ ಉಪಮೆಗಳ ಓಳಿ, ಬೇರೊಂದೆಡೆ ದೃಷ್ಟಾಂತಗಳ ಪಂಕ್ತಿ, ಹೀಗೆ ಅವರ ವಚನನಾಗರಗಳಲ್ಲಿ ಹೆಡೆಮಣಿಯ ಹೊಂಗದಿರುಗಳು ಹೊಮ್ಮಿ ಕಣ್ಮನಂಗೊಳಿಸುವುದನ್ನು ಸಂದರ್ಶಿಸುತ್ತೇವೆ.

"ಉದಕದೊಳಗೆ ಬಚ್ಚಿಟ್ಟ ಬಯಕೆಯ ಕಿಚ್ಚಿನಂತೆ, ನನೆಯೊಳಗಣ ಪರಿಮಳದಂತೆ, ಕನ್ನೆಯ ಸ್ನೇಹದಂತೆ" ಎಂಬುದು ದೇವರ ನಿಲುವಿನ ಬಣ್ಣನೆ.

"ತಮಂಧ ಘನ, ಜ್ಯೋತಿ ಕಿರಿದೆನ್ನಬಹುದೆ? ಮರಹು ಘನ, ನಿಮ್ಮ ನೆನೆವ ಮನ ಕಿರಿದೆನ್ನಬಹುದೆ?" ಎಂಬುದು ಭಕ್ತನ ಧ್ಯಾನದ ಹಿರಿಮೆಯ ಬಣ್ಣನೆ.

"ಕಪ್ಪೆ ಸರ್ಪನ ನೆರಳಲ್ಲಿ ಇರ್ಪಂತೆ ಎನಗಾಯಿತ್ತಯ್ಯ...ಶೂಲದ ಮೇಲಣ
ಭೋಗವೇನಾದೊಡೇನೊ? ನಾನಾವರ್ಣದ ಸಂಸಾರ ಹಾವ ಹಾವಾಡಿಗನ ಸ್ನೇಹದಂತೆ!"

"ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯ...ಚಂದ್ರಂಗೆ ರಾಹು ಅಡ್ಡ ಬಂದಲ್ಲಿ ಅಂಬುಧಿ ಬೊಬ್ಬಿಟ್ಟೀತೆ? ಆರಿಗಾರು ಇಲ್ಲ; ಕೆಟ್ಟವಂಗೆ ಇಲ್ಲ. ಜಗದ ನಂಟ ನೀನೆ."

"ಹೊರಿಸಿಕೊಂಡು ಹೋದ ನಾಯಿ ಮೊಲನನೇನ ಹಿಡಿವುದಯ್ಯ?"

"ಎನ್ನ ಚಿತ್ತ ಅತ್ತಿಯ ಹಣ್ಣು ನೋಡಯ್ಯ ಹಿಕ್ಕಿದರೆ ಹುರುಳಿಲ್ಲವಯ್ಯಾ"

"ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ..."

"ಒಂದು ಮೊಲಕ್ಕೆ ನಾಯಿಗಳನೊಂಬತ್ತು ಬಿಡುವಂತೆ..."

"ಓತಿ ಬೇಲಿಯಂತೆ ಎನ್ನ ಮನವಯ್ಯ..."

"ಓಡುತ್ತ ಬಲ್ಲುದು ಅವಲಕ್ಕಿಯ ಸವಿಯ? ಕೋಡಗವೆತ್ತಬಲ್ಲುದು ಸೆಳೆ ಮಂಚದ ಸುಖವ? ಕಾಗೆ ನಂದನದೊಳಿದ್ದರೇನು ಕೋಗಿಲೆಯಾಗಬಲ್ಲುದೆ? ಕೊಳನ ತಡಿಯಲೊಂದು ಬಕ ಕುಳಿತಿದ್ದರೇನು ಕಳಹಂಸನಾಗಬಲ್ಲುದೆ?"

ಭಕ್ತರ ಸಂಗಕ್ಕೆ ಹಾತೊರೆಯುವ ಹೃದಯದ ತೀವ್ರತೆ ಹೇಗೆ ಅಭಿವ್ಯಕ್ತಿಗೊಂಡಿದೆ ಈ ಕೆಳಗಿನ ವಚನಗಳಲ್ಲಿ:

“ಚಕೋರಂಗೆ ಚಂದ್ರಮನ ಬೆಳಗಿನ ಚಿಂತೆ. ಅಂಬುಜಕೆ ಭಾನುವಿನ ಉದಯದ ಚಿಂತೆ. ಭ್ರಮರಂಗೆ ಪರಿಮಳದ ಬಂಡುಂಬ ಚಿಂತೆ. ಎನಗೆ ಕೂಡಲ ಸಂಗಮದೇವರ ನೆನೆವ ಚಿಂತೆ.”

“ಹೊಲಬುಗೆಟ್ಟ ಶಿಶು ತನ್ನ ತಾಯ ಬಯಸುವಂತೆ, ಬಟ್ಟೆದಪ್ಪಿದ ಕರು ತನ್ನ ಹಿಂಡ ತಾನರಸುವಂತೆ, ಬಯಸುತ್ತಿರ್ದೆನಯ್ಯಾ ನಿಮ್ಮ ಶರಣರ ಬರವನು. ದಿನಕರನುದಯಕ್ಕೆ ಕಮಲ ವಿಕಸಿತವಾದಂತೆ ಎನಗೆ ನಿಮ್ಮ ಶರಣರ ಬರವು ಕೂಡಲ ಸಂಗಮದೇವ.”

“ಸೂರ್ಯನುದಯ ತಾವರೆಗೆ ಜೀವಾಳ. ಚಂದ್ರಮನುದಯ ನೈದಿಲೆಗೆ ಜೀವಾಳ. ಕೂಪರ ಠಾವಿಯಲ್ಲಿ ಕೂಟವೆ ಜೀವಾಳ. ಒಲಿದ ಠಾವಿಯಲ್ಲಿ ನೋಟವೆ ಜೀವಾಳ. ಕೂಡಲ ಸಂಗನ ಶರಣರ ಬರವೆನಗೆ ಪ್ರಾಣ ಜೀವಾಳಯ್ಯ.

“ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯಾ, ತಂದೆ! ಸುತ್ತಿಸುಳಿದು ನೋಡದಂತೆ ಅಂಧಕನ ಮಾಡಯ್ಯಾ, ತಂದೆ! ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯಾ, ತಂದೆ! ನಿಮ್ಮ ಶರಣರ ಪಾದವಲ್ಲದೆ ಅನ್ಯ ವಿಷಯಕ್ಕೆಳಸದಂತೆ ಇರಿಸು, ಕೂಡಲ ಸಂಗಮದೇವ.”

ಈ ವಚನದಲ್ಲಿ ಎಂತಹ ನಗೆಯಾಟಿಯ ಕಿಚ್ಚಾಡುತ್ತಿದೆ? “ಹಾಲ ನೇಮ, ಹಾಲ ಕೆನೆಯ ನೇಮ, ಕೆನೆ ತಪ್ಪಿದ ಬಳಿಕ ಕಿಚ್ಚಡಿಯ ನೇಮ, ಬೆಣ್ಣೆಯ ನೇಮ, ಬೆಲ್ಲದ ನೇಮ! ಅಂಬಲಿಯ ನೇಮದವರನಾರನೂ ಕಾಣೆ....”

ಭಕ್ತನ ನ್ಯೂನತೆಗಳೂ ಭಗವಂತನಿಗೆ ಪ್ರಿಯವಾಗುತ್ತವಂತೆ. “ಹಾವಿನ ಡೊಂಕು ಹುತ್ತಕ್ಕೆ ಸಸಿನ. ನದಿಯ ಡೊಂಕು ಸಮುದ್ರಕ್ಕೆ ಸಸಿನ. ನಮ್ಮ ಕೂಡಲ ಸಂಗನ ಶರಣರ ಡೊಂಕು ಲಿಂಗಕ್ಕೆ ಸಸಿನ.”

ಪರಾಭಕ್ತಿಯ ಐಕ್ಯನುಭವದ ಭಾಗವದ್‌ರತಿಯ ಆನಂದವನ್ನು ಘೋಷಿಸುವ ಈ ವಚನಗಳನ್ನು ಆಲಿಸಿ:

“ವಾರವೆಂದರಿಯೆ, ದಿನವೆಂದರಿಯೆ, ಏನೆಂದರಿಯೆನಯ್ಯಾ! ಇರುಳೆಂದರಿಯೆ, ಹಗಲೆಂದರಿಯೆ, ಏನೆಂದರಿಯೆನಯ್ಯಾ, ನಿಮ್ಮುವ ಪೂಜಿಸಿ ಎನ್ನುವ ಮರೆದೆ.” “ನಿಮ್ಮ ನೋಟವನಂತಸುಖ. ಕೂಟ ಪರಮ ಸುಖವಯ್ಯಾ! ಅಷ್ಟಕೋಟಿ ರೋಮಗಳೆಲ್ಲಾ ಕಂಗಳಾಗಿ ನೋಡುತ್ತಿದ್ದೆ. ನಿಮ್ಮ ನೋಡಿ, ಮನದಲಿ ರತಿಹುಟ್ಟಿ ನಿಮಿರ್ದವೆನ್ನ ಕಂಗಳು!”

“ವಚನದಲ್ಲಿ ನಾಮಾಮೃತ ತುಂಬಿ, ನಯನದಲ್ಲಿ ಮೂರುತಿ ತುಂಬಿ, ಮನದಲ್ಲಿ ನಿಮ್ಮ ನೆನಹು ತುಂಬಿ, ಕಿವಿಯಲ್ಲಿ ನಿಮ್ಮ ಕೀರ್ತಿಯ ತುಂಬಿ, ನಿಮ್ಮ ಚರಣಕಮಲದೊಳು ಸೋಹದ ಬಂಡನುಂಬ ತುಂಬಿಯಾಗಿರ್ಪೆನು.”

ಹೀಗೆ ಒಂದಲ್ಲ ಎರಡಲ್ಲ ಹತ್ತಾರು ವಚನಗಳಲ್ಲಿ ನೂರಾರು ವಚನಭಾಗಗಳಲ್ಲಿ ಸಾಹಿತ್ಯದ ಅನೇಕ ಲಕ್ಷಣಗಳನ್ನು ಎದುರುಗೊಳ್ಳುತ್ತೇವೆ. ನವರಸ ಪರಿಪೂರ್ಣ ಎಂದು ವರ್ಣಿಸಲು ಸಾಧ್ಯವಿಲ್ಲದಿದ್ದರೂ ಎಲ್ಲ ರಸಗಳಿಗೂ ಕಿರೀಟಪ್ರಾಯವಾಗಿ ಎಲ್ಲ ರಸಗಳ ರಸವಾಗಿರುವ ಶಾಂತರಸದ ತೀರ್ಥದಲ್ಲಿ ಮುಳುಗಿ ಮಿಂದು ಪವಿತ್ರಗಾತ್ರರೂ ಪವಿತ್ರಾತ್ಮರೂ ಆಗುತ್ತೇವೆ. ಆದರೆ ಶೃಂಗಾರಾದಿ ಇತರ ರಸಗಳನ್ನು ಸವಿದಂತೆ ಇದು ಬಹುಜನ ಸುಲಭಸಾಧ್ಯವಲ್ಲ. ಬಸವಣ್ಣನವರ ಹೇಳುವಂತೆ "ಆದ್ಯರ ವಚನ ಪರುಷ ಕಂಡಯ್ಯ! ಅಧರಕ್ಕೆ ಕಹಿ, ಉದರಕ್ಕೆ ಸಿಹಿ! ಕೂಡಲ ಸಂಗನ ಶರಣರ ವಚನ ಬೇವ ಸವಿದಂತೆ!" "ಆದ್ಯರ ವಚನ ಆದ್ಯರಿಗಾಯಿತ್ತು. ವೇದ್ಯರಿಗಲ್ಲದೆ ಸಾಧ್ಯವಾಗದು. ಕೂಡಲ ಸಂಗಮದೇವ, ನಿಮ್ಮನುಭಾವದಿಂದೆನ್ನ ಭವ ನಾಸ್ತಿಯಾಯಿತು!" ಸಾಧಕನಿಗೆ ಮುಖ್ಯವಾದುದು ವೇದವಲ್ಲ, ವಚನವಲ್ಲ, ಅನುಭಾವ!

ಬಸವಣ್ಣನವರ ವಚನವಾಹಿನಿ ನಾಡಿನ ಮೇಲೆ ಹರಿದಾಗ ಅಮೃತ ಭಾಗೀರಥಿಯೆ ಹರಿದಂತಾಯಿತೆಂದು ತೋರುತ್ತದೆ. ಅವರ ತರುವಾಯ ಕನ್ನಡ ನಾಡಿನಲ್ಲಿಯೂ ಭರತಖಂಡದಲ್ಲಿಯೂ ಪ್ರಪಂಚದ ಇತರ ಭಾಗಗಳಲ್ಲಿಯೂ ಎಷ್ಟೆಷ್ಟೋ ಮಹಾನುಭಾವರು ಮೂಡಿ ಆಡಿ ಮಾಡಿ ಹೋಗಿರುವುದರಿಂದ ಆ ಎಲ್ಲ ಬೆಳಕುಗಳನ್ನೂ ಕಾಣುತ್ತಿರುವ ನಮಗೆ ನಮ್ಮ ಬೆಳಕು ಸೂರ್ಯನಂತೆ ಕಾಣಿಸದೆ ಸೊಡರಾಗಿ ಕಾಣಿಸಬಹುದು. ಆಗ ನಮ್ಮ ಅಭಿಮಾನ ಮುನಿದೆದ್ದು ಸೊಡರನ್ನು ಆಕಾಶಕ್ಕೆ ಬೀಸಿ ಅದನ್ನೂ ಒಂದು ಸೂರ್ಯನನ್ನಾಗಿ ಮಾಡುವ ಬಾಲಸಾಹಸಕ್ಕೆ ಕೈಹಾಕಬಹುದು. ಅಂತಹ ಅಹಂಕಾರ, ಭ್ರಾಂತಿಯ ಉಲ್ಬಣಾವಸ್ಥೆ, ನಮಗೆ ಅನಾವಶ್ಯಕ. ಮನೆಯ ಪ್ರಪಂಚಸೌಂದರ್ಯಸ್ಪರ್ಧೆಯಲ್ಲಿ ಬಹುಮಾನ ಪಡೆದ ಹೊರತೂ ನಮ್ಮ ಪೂಜೆಗೆ ಪ್ರೀತಿಗೆ ಗೌರವಕ್ಕೆ ಪಾತ್ರಗಳಾಗುವುದಿಲ್ಲ ಎನ್ನುವುದು ಅವಿವೇಕದ ಪರಮಾವಧಿ. ಮಕ್ಕಳಿಗೆ ಹಿಡಿದಿರುವ "ಕೀರ್ತಿ ಶನಿ"ಯಿಂದ ತಾಯಿಗೆ ಅಮೇರಿಕದ ಬೀದಿಗಳಲ್ಲಿ ಅಗೌರವವಾಗದಂತೆ ನೋಡಿಕೊಳ್ಳಬೇಕು. ಬಸವಣ್ಣನವರು ನಮ್ಮ ಮನೆಯ ಗುಡಿಯ ದೇವರಡಿಯ ತಣ್ಸೊಡರು. ನಮ್ಮ ಕತ್ತಲೆಯನ್ನು ಬೆಳಗಲು ಸಾಕು ಆ ಪ್ರದೀಪ. ಅದರ ಪುಣ್ಯಜ್ಯೋತಿಗೆ ಕೈಮುಗಿದು ಧನ್ಯರಾಗುವವರು ಮತ್ತೊಂದಕ್ಕೆ ಖಂಡಿತ ಕರುಬಬೇಕಾಗಿಲ್ಲ. ಏಕೆಂದರೆ ಎಲ್ಲೆಲ್ಲಿಯೂ ಇರುವಂತೆ ಇಲ್ಲಿಯೂ ಇರುವುದೆಲ್ಲ. ಅನಂತವು ಪೂರ್ಣದಲ್ಲಿ ಎಂತೋ ಅಂತೆ ಅಂಶದಲ್ಲಿಯೂ ಪೂರ್ಣವಾಗಿಯೆ ಅನಂತ!

# ಶ್ರೀ ರಾಮಾಯಣ ದಿವ್ಯಶಿಲ್ಪಿ

ಶ್ರೀ ರಾಮಾಯಣ ಪ್ರೇಮಿಗಳಲ್ಲಿ ವಿಜ್ಞಾಪನೆ, ನಮಸ್ಕಾರ.

ನಾವೆಲ್ಲರೂ ಇಂದು ಇಲ್ಲಿ ಒಂದು ಮಹತ್ತರವಾದ ಪೂಜಾ ಕಾರ್ಯಕ್ಕಾಗಿ ನೆರೆದಿದ್ದೇವೆ. ಅದರ ಉತ್ಸವರೂಪ ಅದರ ಭಗವತ್‌ಸ್ವರೂಪವನ್ನು ಮರೆಮಾಡುವುದಿಲ್ಲವೆಂದು ಭಾವಿಸುತ್ತೇನೆ. ಯಾರ ಬದುಕಿನ ಶ್ವಾಸೋಚ್ಛ್ವಾಸ ರಾಮನಾಮದ ಛಂದೋಗತಿಯನ್ನೇ ಅನುಸರಿಸುತ್ತಿತ್ತೋ, ಯಾರು ಜೀವನದ ಸಾರ್ತಕತೆಯನ್ನೂ ಪರಮಸಿದ್ಧಿಯನ್ನೂ ರಾಮನಾಮದಲ್ಲಿ ಕಂಡರೋ, ಯಾರು ಇರುಳಿನಲ್ಲಿ ಕಂಡ ರಾಮರಾಜ್ಯದ ಕನಸನ್ನು ಹಗಲಿನಲ್ಲಿಯೂ ಕಂಡು ಕಟ್ಟಲು ನಿರಂತರವೂ ನೋಂತರೋ, ಯಾರು ತಮ್ಮ ವೈದ್ಯಕೀಯವಾದ ಸೇವೆಯನ್ನು ಮಾಡುವುದರಲ್ಲಿಯೂ ಕೂಡ, ಆಧುನಿಕ ವೈಜ್ಞಾನಿಕ ಮನೋಧರ್ಮದ ಡಾಕ್ಟರಗಳು ಬೆಬ್ಬರಗಾಗುವಂತೆ, ಎಲ್ಲ ರೋಗಕ್ಕು ಮೊತ್ತಮೊದಲನೆಯ ಔಷಧ ರಾಮನಾಮ ಎಂದು ಸಾರಿದರೋ, ಯಾರು ಮತದ್ವೇಷ ಮತ್ತು ಭ್ರಾಂತಿ ಇವುಗಳಿಂದಾಗಿ ನವಕಾಲಿನಲ್ಲಿ ಹರಿದ ರಕ್ತಸಮುದ್ರದಲ್ಲಿ ಒಂದು ಕ್ಷೀರಪಥವನ್ನು ರಚಿಸುತ್ತಾ ರಾಮನಾಮದ ಮಹಿಮೆಯನ್ನು ಜಗತ್ತಿಗೆ ಪ್ರದರ್ಶಿಸಿದರೋ, ಕೊನೆಯದಾಗಿ, ಯಾರ ಎದೆಗೆ ಗುಂಡು ತಗುಲಿದಾಗ 'ಹೇ ರಾಮ್ ರಾಮ್!' ಎಂದು ರಾಮನಾಮವನ್ನೇ ಜಪಿಸುತ್ತಾ ಕಣ್ಮರೆಯಾದರೋ ಅಂತಹ ವಿಭೂತಿ ಪುರುಷನೊಬ್ಬನ ಜನ್ಮದಿನ ಇದು.

[1] ಆ ವಿಭೂತಿ ಪುರುಷನಿಗೂ ರಾಮ, ರಾಮರಾಮ, ರಾಮಾಯಣಕ್ಕೂ ಅತ್ಯಂತ ನಿಕಟವಾದ ಸಂಬಂಧವಿದೆ. ಆಧುನಿಕ ನಾಗರಿಕತೆಯಲ್ಲಿ ಆಧುನಿಕ ವೈಜ್ಞಾನಿಕವಾದ ಜಗತ್ತಿಗೆ ರಾಮನ ಮಹಿಮೆಯನ್ನೂ ರಾಮನಾಮದ ಮಹಿಮೆಯನ್ನೂ ಎತ್ತಿಹಿಡಿದು ಸಾರಿ ತೋರಿ ಹೋದ ಮಹಾವಿಭೂತಿ ಆತನು. ಬಹುಶಃ ಆತನ ಆತ್ಮದ ವಿಕಾಸಕ್ಕೆ ರಾಮ, ರಾಮನಾಮ, ರಾಮಾಯಣ ಹೇಗೆ ಕಾರಣವಾದುವೋ ಹಾಗೆಯೆ ರಾಮ, ಹಾಗೆಯೆ ರಾಮ, ರಾಮನಾಮ, ರಾಮಾಯಣದ ಪ್ರಕಾಶನಕ್ಕೆ ಆತನ ಜೀವನವೂ ಪ್ರಧಾನಕಾರಣವಾಯಿತು. ಆದ್ದರಿಂದ ಆತನ ಜನ್ಮೋತ್ಸವವನ್ನು ಇದಕ್ಕಿಂತಲೂ ಉತ್ಕೃಷ್ಟವಾಗಿ ಹೇಗೆ ತಾನೆ ನೆರವೇರಿಸಿಯೇವು? ಇಂದು ವಯಸ್ಕರ ಶಿಕ್ಷಣ ಸಮಿತಿ ಕೈಗೊಂಡಿರುವ ಈ ಜನಪ್ರಿಯ ರಾಮಾಯಣದ ಪ್ರಕಟಣೆ ಮಹಾತ್ಮಾ ಗಾಂಧೀಜಿ ನಿಜವಾಗಿಯೂ ಪ್ರೀತಿಯಾಗುವಂತೆ ನಾವು ಸಲ್ಲಿಸುವ ಶ್ರೇಷ್ಠವಾದ ಕಾಣಿಕೆ.

ಮಹಾತ್ಮಾ ಗಾಂಧೀಜಿ ರಾಜಕೀಯ ವ್ಯಕ್ತಿಯಲ್ಲ, ಅವರು ನೂರಕ್ಕೆ ನೂರು ಭಾಗ ಆಧ್ಯಾತ್ಮ ವ್ಯಕ್ತಿ. ಅಂದರೆ ಅವರ ಮಧ್ಯಾಹ್ನ ಎಲ್ಲವನ್ನೂ ಒಳಗೊಂಡ ಅಧ್ಯಾತ್ಮ. ಅವರು ಕಂಡ ರಾಮರಾಜ್ಯದ ಕನಸು ಬಹುಶಃ ರಾಜಕೀಯ ಶಾಸ್ತ್ರಜ್ಞರಿಗೆ, ವೈಜ್ಞಾನಿಕ ತತ್ತ್ವವೇತ್ತರಿಗೆ ಮತ್ತು ನವನಾಗರಿಕತೆಯೆಂದು ಕರೆಯಲ್ಪಡುವ ಒಂದು ಮನೋಭ್ರಾಂತಿಯನ್ನೆ ಧರ್ಮವಾಗುಳ್ಳ ಮನಸ್ಸುಳ್ಳವರಿಗೆ ವಿಚಿತ್ರವಾಗಿ ತೋರಬಹುದು. ಆದರೆ ರಾಮಾಯಣವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಿದವರಿರೆ, ಸ್ವಲ್ಪಮಟ್ಟಿಗಾದರೂ ಧ್ಯಾನ ಯೋಗ ಮೊದಲಾದ ಸಾಧನೆಗಳನ್ನು ಮಾಡಿದವರ ಚರಣತಲದಲ್ಲಿ ಕುಳಿತುಕೊಳ್ಳುವ ಒಂದು ಸೌಭಾಗ್ಯವನ್ನು ಪಡೆದವರಿಗೆ ಅವರು ಕಂಡ ಕನಸು ಸದ್ಯಕ್ಕೆ ಅತೀತವಾಗಿರುವ ಒಂದು ನನಸು ಎನ್ನುವುದು ಗೋಚರಿಸದೆ ಇರದು.

ಈ ಕನಸನ್ನು ಮಾನವ ಪ್ರಾರಂಭದಿಂದಲೂ ಪ್ರಾರಂಭದಿಂದಲೂ ಕಾಣುತ್ತಿದ್ದಾನೆ. ಏಕೆಂದರೆ ಅವನ ಪ್ರಾರಂಭವೂ ಆ ಮೂಲದಿಂದಲೇ ಆಗಿದೆ. ಅನೇಕ ಪುರಾಣಗಳಲ್ಲಿ ಕಾವ್ಯಗಳಲ್ಲಿ ಈ ಕನಸು ಕಥೆಯ ರೂಪದಲ್ಲಿ. ಕಲ್ಪನೆಯ ರೂಪದಲ್ಲಿ, ಪ್ರತಿಮಿತವಾಗುತ್ತಾ ಬರುತ್ತಿದೆ. ಗಾಂಧೀಜಿ ಕಂಡಿರುವ ಕಟ್ಟಿರುವ ಕನಸು, ಈಗಾಗಲೂ ಅವರು ಅದಕ್ಕಾಗಿ ಶ್ರಮಿಸುತ್ತಿರುವ- ಅತೀತಲೋಕಗಳಲ್ಲಿ ಶ್ರಮಿಸುತ್ತಿರುವ ಆ ಕನಸು, ಇಂದಲ್ಲ ಮುಂದೆ ನನಸೇ ಆಗುತ್ತದೆ ಎನ್ನುವ ಅಭಿಪ್ರಾಯವನ್ನೇ ಇಂದಿನ ಪೂರ್ಣಯೋಗಿ ಮಹಾಮಹರ್ಷಿ ಶ್ರೀ ಅರವಿಂದರು ಕೂಡ ತಮ್ಮ ಆಧ್ಯಾತ್ಮಕವಾದ ಮತ್ತು ತತ್ತ್ವಶಾಸ್ತ್ರೀಯವಾದ ರೀತಿಯಲ್ಲಿ ಪ್ರತಿಪಾದಿಸಿ ಲೋಕಕ್ಕೆ ಸಾರುತ್ತಿದ್ದಾರೆ. ಅವರು **'The discent of the Gnostic B**eing' 'The Emergence of the Superman' ಎಂದುಕೊಳ್ಳುವ, ಅಥವಾ ನಾವು ಗೀತೆಯಲ್ಲಿ ಪ್ರಜ್ಞಾಪ್ರತಿಷ್ಠಿತಾ ಅಥವಾ ಬ್ರಾಹ್ಮೀಸ್ಥಿತಿ ಎನ್ನುವ ಮಾತಿನಲ್ಲಿ, ಅಥವಾ ಕರ್ಮಯೋಗಿ ಎನ್ನುವ ರೂಪದಲ್ಲಿ ಮತ್ತು ಅದರ ಸಂಪೂರ್ಣಾರ್ಥದಲ್ಲಿ ಅದೇ ಸತ್ಯವನ್ನು ಕಾಣುತ್ತೇವೆ. ಅಂದರೇನು**?** ಈ ರಾಮಾಯಣ ವಾಚನ, ಈ ರಾಮಾಯಣದ ಪ್ರಕಟಣೆ, ಈ ರಾಮಾಯಣದ ಆರಾಧನೆ, ರಾಮಾಯಣದ ತತ್ತ್ವಶಕ್ತಿಗಳ ಉಪಾಸನೆ ಮತ್ತು ಸಾಧನೆ, ಇವು ಬರಿಯ ಆಧ್ಯಾತ್ಮಿಕ ಕ್ಷೇಮವನ್ನು ಮಾತ್ರ ತಂದುಕೊಡುತ್ತದೆ ಎಂದಲ್ಲ. ಧರ್ಮ, ಅರ್ಥ, ಕಾಮ, ಎಲ್ಲವನ್ನೂ ನಮಗೆ ತಂದುಕೊಡಬಲ್ಲವು. ಅಂದರೇನು**?** ರಾಜಕೀಯವಾಗಿ ಹೊಸಹೊಸದಾಗಿ ಕಾನೂನು ಮೊದಲಾದವುಗಳನ್ನು ಅಥವಾ ರಾಜ್ಯಾಂಗಘಟನೆಯನ್ನು ನಿರ್ಮಾಣಮಾಡಿದರೆ ಏನು ಕೆಲಸವಾಗುತ್ತದೆಯೋ ಅದಕ್ಕಿಂತಲೂ ಇನ್ನೂ ಅತಿಶಯವಾದ ಕಾರ್ಯ ಇಂತಹ ಮಹಾಕೃತಿಗಳಿಂದ ಆಗಬಲ್ಲುದು. ಏಕೆಂದರೆ ನಾವೇನೊ ಈಗ ರಾಜಕೀಯವಾಗಿ ಅಖಿಲ ಭರತಖಂಡವನ್ನು ಒಂದುಮಾಡಿದ್ದೇವೆ ಎಂಬ ಅಭಿಪ್ರಾಯ ಇಟ್ಟುಕೊಂಡಿದ್ದೇವೆ. ಆದರೆ ಈ ರಾಜಕೀಯದ ಅಂತರಾಳದಲ್ಲಿ, ಎಂದರೆ ಅದರ ಮೂಲದಲ್ಲಿ, ಒಂದು ಸಾಂಸ್ಕೃತಿಕ ಐಕ್ಯತೆಯಿಲ್ಲದಿದ್ದರೆ ಎಷ್ಟು ಸೈನ್ಯವನ್ನು ಇಟ್ಟು ಈ ರಾಜಕೀಯ ಭದ್ರತೆಯನ್ನು ರಕ್ಷಿಸಬಲ್ಲಿರಿ**?** ವಾಲ್ಮೀಕಿ, ವ್ಯಾಸ, ಕಾಳಿದಾಸ, ವೇದ ಉಪನಿಷತ್ತುಗಳು, ದೇಶಭಾಷೆಗಳಲ್ಲಿ ಇವುಗಳನ್ನು ಪ್ರತಿಬಿಂಬಿಸುವ ಮತ್ತು ಪುಷ್ಟಿಗೊಳಿಸುವ ಇತರ ಹಲವಾರು ಕೃತಿಗಳು-ಇವು ನಮ್ಮ ನಿತ್ಯ ಮಂತ್ರಿಮಂಡಲಗಳಾಗಿ, ನಮ್ಮ ನಿತ್ಯ ಅಧ್ಯಕ್ಷರಾಗಿ ಭರತಖಂಡದ ಐಕ್ಯತೆಯನ್ನು ಸಾಧಿಸುತ್ತಾ ಇವೆ, ರಕ್ಷಿಸುತ್ತಾ ಇವೆ. ಆ ಶಕ್ತಿಗಳ ಪ್ರತೀಕವಾಗಿ ಪ್ರತಿಮೆಗಳಾಗಿ ಮಹಾತ್ಮಾ ಗಾಂಧೀಜಿ. ನೆಹರು ಮೊದಲಾದವರು ಇರಬಹುದು. ಆದರೆ ಆ ಮೂಲಶಕ್ತಿಗಳು ಇಲ್ಲದಿದ್ದರೆ ಪಾಶ್ಚಾತ್ಯ ರಾಜಕೀಯ ಭಾವನೆಗಳಿಂದ ಮಾತ್ರವೇ ಇದನ್ನು ಸಂಘಟಿಸುತ್ತೇವೆ ಎನ್ನುವುದು ಬರಿಯ ಭ್ರಾಂತಿ. ಆದ್ದರಿಂದಲೆ ಮಹಾತ್ಮಾ ಗಾಂಧೀಜಿ ನಮಗೆ ರಾಜಕೀಯ ಸ್ವಾತಂತ್ರ್ಯವನ್ನು ತಂದು ಕೊಡುವುದರಲ್ಲಿ ತಮ್ಮ ಜೀವನದಲ್ಲಿಯೆ ಈ ತತ್ತ್ವಗಳನ್ನು ಸಾಧಿಸಿ ಹೋಗಿದ್ದಾರೆ.

ಬಹುಶಃ ಆ ಶಕ್ತಿಯ ಅನೇಕ ಬಾಹ್ಯಪ್ರಕಾರಗಳಲ್ಲಿ ಒಂದಾಗಿ ಇಂತಹ ರಾಮಾಯಣ ಪ್ರಕಟನೆಗಳು ನಡೆಯುತ್ತಾ ಇವೆ. ಬಹುಶಃ ಇದರ ಅರ್ಥ ಏನು, ವ್ಯಾಪ್ತಿ ಏನು ಎನ್ನುವುದು ವಯಸ್ಕರ ಶಿಕ್ಷಣಸಮಿತಿಗಾಗಲಿ ನನಗಾಗಲಿ ನಿಮಗಾಗಲಿ ಗೊತ್ತಿಲ್ಲದಿರಬಹುದು. ಆದರೆ ಅಪೂರ್ವ ಮುಹೂರ್ತಗಳಲ್ಲಿ ನಮ್ಮ ಕಲ್ಪನಾರೂಪವಾದ ಒಂದು ಮೇಧಾಶಕ್ತಿಗೆ ಆ ಶಕ್ತಿ ಅನುಸರಿಸುತ್ತಿರುವ ರೀತಿ ವ್ಯಾಪಾರಗಳು ಸ್ವಲ್ಪಮಟ್ಟಿಗೆ ಸ್ಫುರಿಸುತ್ತವೆ, ಗೋಚರವಾಗುತ್ತವೆ. ರಾಮಾಯಣದ ಇಂದಿನ ಪ್ರಕಟಣೆ ಬರಿಯ ಒಂದು ಗ್ರಂಥ ಪ್ರಕಟಣೆ ಎಂಬ ಭಾವನೆ ಬೇಡ. ಇದು ಒಂದು ಶಕ್ತಿಸಂಸ್ಥಾಪನೆ, ಇದು ಒಂದು ವಿದ್ಯುದಾಗಾರ, ಇದು ಶಾಂತಿಯ ಪರಮಾಶ್ರಯ, ನೆಲೆ.ಯಾವ ಸೈನ್ಯವೂ ಸಾಧಿಸಲಾರದುದನ್ನು ಇದು ಸಾಧಿಸುತ್ತದೆ, ಯಾವ ರಾಜಕೀಯವೂ

ಕೈಗೂಡಿಸಲಾರದುದನ್ನು ಇದು ಬಹುಶಃ ಕೈಗೂಡಿಸುತ್ತದೆ ಎಂಬ ಮನೋಭಾವನೆಯಿಂದ ಇಲ್ಲಿ ನೆರೆದಿದ್ದೇವೆ. ಆದ್ದರಿಂದಲೆ ನಾನು ಹೇಳಿದ್ದು 'ಭುವನ ವಂದನೀಯವಾದ ಪೂಜಾಕಾರ್ಯಕ್ಕಾಗಿ ನೆರೆದಿದ್ದೇವೆ' ಎಂದು.

ವಯಸ್ಕರಿಗೆ ಅಕ್ಷರ ಕಲಿಸುವುದೆಂದರೆ ಅವರು ಇದುವರೆಗೂ ಪ್ರಕೃತಿ ಸಹಜವಾಗಿಯೆ ಪಡೆದಿದ್ದ ಕೈ ಕಾಲು ಮೂಗು ಬಾಯಿ ಕಣ್ಣು ಮೊದಲಾದ ಇಂದ್ರಿಯಗಳ ಜೊತೆಗೆ, ಅವೆಲ್ಲವನ್ನೂ ಮೀರಿದ ಒಂದು ಅಂತರಿಂದ್ರಿಯದ ಸಂಪಾದನೆಗೆ ಅವರಿಂದ ಗುದ್ದಲಿಪೂಜೆ ಮಾಡಿಸಿದಂತೆ. ವಿದ್ಯಾದಾನದಿಂದ ಮನುಷ್ಯಚೇತನಕ್ಕೆ ಒಂದು ಹೊಸ ನಾಲಗೆ ಸೃಷ್ಟಿಯಾಗುತ್ತದೆ; ಅವನ ಬಾಳಿಗೊಂದು ಹೊಸ ಹಸಿವೆ ಹುಟ್ಟುತ್ತದೆ. ಆ ಹೊಸ ನಾಲಗೆಯಿಂದ ಅವನು ಅದಯವರೆಗೂ ಕಾಣದಿದ್ದ, ಕಾಣಲಾರದಿದ್ದ, ಒಂದು ಹೊಸ ರುಚಿಯನ್ನು ಅನುಭವಿಸಲು ಸಮರ್ಥನಾಗುತ್ತಾನೆ. ಮನಸ್ಸಿನ ಆ ಹೊಸ ಹಸಿವೆ ಒಂದು ಹೊಸ ಆಹಾರವನ್ನು ಅಪೇಕ್ಷಿಸುತ್ತದೆ. ಅನ್ನಮಯದ ಹೊಟ್ಟೆ ಅನ್ನವನ್ನು ಬಯಸುವಂತೆ ಮನಸ್ಸಿನ ಹಸಿವು ಮನೋಮಯದ ಆಹಾರವನ್ನು ಹುಡುಕುತ್ತದೆ. ಹೊಸ ರುಚಿಯನ್ನೂ ಹೊಸ ಹಸಿವನ್ನೂ ಹುಟ್ಟಿಸುವಾತನು ಅದಕ್ಕೆ ಅರ್ಹವಾದ ರಸವನ್ನೂ ಅನ್ನವನ್ನೂ ಒದಗಿಸದಿದ್ದರೆ ಲೇಸನೆಸಗಲು ಹೋಗಿ ಕೇಡು ಮಾಡಿದಂತಾಗುತ್ತದೆ. ಏಕೆಂದರೆ ಸವಿಯಬಾರದುದನ್ನು ಸವಿದು, ತಿನ್ನಬಾರದುದನ್ನು ತಿಂದು, ಹೊಸದಾಗಿ ಸಾಕ್ಷರನಾದವನ ಚೇತನ ಮೇಲಕ್ಕೇರುವ ಬದಲು ಕೆಳಕ್ಕಿಳಿದು, ನಾಶವಾಗುವುದರ ಜತೆಗೆ ವಿನಾಶಕರವೂ ಆಗಿ, ರಾಕ್ಷಸವಾಗುವ ಸಂಭವವುಂಟು. ಆದ್ದರಿಂದ ಅಕ್ಷರ ಪ್ರಚಾರದಷ್ಟೇ ಮುಖ್ಯವಾಗುತ್ತದೆ ಅದಕ್ಕೆ ಅವಶ್ಯಕವೂ ಅರ್ಹವೂ ಅನ್ವಿತವೂ ಆರೋಗ್ಯಕರವೂ ಆಗಿರುವ ಸಾಹಿತ್ಯಸೃಷ್ಟಿ.

ಹೊಸದಾಗಿ ಓದು ಕಲಿತ ನಮ್ಮ ಜನ "ಸ್ವಾಮಿ, ಓದುವುದನ್ನೇನೋ ಕಲಿಸಿಕೊಟ್ಟಿರಿ. ಏನೇನೋ ಪುಸ್ತಕಗಳನ್ನೂ ಓದುವುದಕ್ಕೆ ಕೊಡುತ್ತಿದ್ದೀರಿ. ಆದರೆ ರಾಮಾಯಣ ಮಹಾಭಾರತಗಳನ್ನು ಓದದಿದ್ದ ಮೇಲೆ ಓದನ್ನೇಕೆ ಕಲಿಯಬೇಕು? ಸಂತೋಷದ ಜೊತೆಗೆ ಪುಣ್ಯವೂ ಬರುತ್ತಿತ್ತು ನಮಗೆ. ಓದು ಕಲಿತುದಕ್ಕೆ ನಮ್ಮ ಜನ್ಮ ಸಾರ್ಥಕವಾಗುತ್ತಿತ್ತು" ಎಂದು ಹೇಳಿದರೆಂದು ವಯಸ್ಕರ ಶಿಕ್ಷಣ ಸಮಿತಿಯವರಿಂದ ಕೇಳಿದಾಗ ನಾನು ತುಂಬಾ ಹಿಗ್ಗಿದೆ. 'ಧನ್ಯ ನಮ್ಮ ಜನ; ಸಾರ್ಥಕ ಅವರ ಬಾಳು!' ಎಂದುಕೊಂಡು. ಜನಪ್ರಿಯವಾಗುವಂತೆಯೂ ವಾಲ್ಮೀಕಿ ರಾಮಾಯಣದ ಕಥೆಯ ಮೈ ಒಂದಿನಿತೂ ಅತ್ತ ಇತ್ತ ಆಗಿ ಕೆಡದಂತೆಯೂ ಸಾಧ್ಯವಾದಮಟ್ಟಿಗೆ ಸುಲಭವಾದ ಗದ್ಯದಲ್ಲಿ ರಾಮಾಯಣವನ್ನು ಬರೆಯಲೊಪ್ಪಿದೆ. ಹಲವು ಗೆಳೆಯರ ಹಲವು ತೆರನಾದ ನೆರವಿನಿಂದ ಅದು 'ಜನಪ್ರಿಯ ವಾಲ್ಮೀಕಿ ರಾಮಾಯಣ'ವಾಗಿ ಈಗ ಸಿದ್ಧವಾಗಿದೆ. ಹೆಸರು ನನ್ನೊಬ್ಬನದೇ ಇದ್ದರೂ ಅವರೆಲ್ಲರ ಉಸಿರೂ ನನ್ನುಸಿರಿಗೆ ಬೆಂಬಲವಾಗಿರುವುದನ್ನು ನಾನು ಮರೆಯಲಾರೆ. ಆ ಕೃತಜ್ಞತೆಯ ಸಂಕೇತವಾಗಿ ಇದರಿಂದ ಒದಗುವ ಎಲ್ಲ ಶ್ರೇಯಸ್ಸನ್ನೂ ಅವರೆಲ್ಲರ ಶ್ರೇಯಸ್ಸಿಗಾಗಿ ಸಮರ್ಪಿಸುತ್ತೇನೆ.

ನಮ್ಮ ಜನರ ಬಾಳು ಮೇಲೆ ಮೇಲೆ ಎಷ್ಟು ಕೆಟ್ಟಂತೆ ಕಾಣುತ್ತಿದ್ದರೂ ಅದರ ಅಂತರಾಳದಲ್ಲಿ ಪೂರ್ವಿಕರ ಪುಣ್ಯದ ತಪಃಪ್ರಭಾವದ ನಂದಾದೀಪ ನಂದದೆ ಮಿನುಗುತ್ತಿದೆಯೆಂದು ತೋರುತ್ತದೆ. ಇಲ್ಲದಿದ್ದರೆ ಅಕ್ಷರ ಕಲಿತವರು ಕಾಸಿನ ಕಾದಂಬರಿಗಳನ್ನು ರೋಮಾಂಚನಕರವಾದ ನವೀನ ಚಲಚ್ಚಿತ್ರ ಶೃಂಗಾರ ಕಥಾನಕಗಳನ್ನೂ ಅಪೇಕ್ಷಿಸುವ ಬದಲು-ಅಥವಾ ಅಪೇಕ್ಷಿಸುವುದರ ಜೊತೆಗೆ ಎಂದಾದರೂ ಚಿಂತೆಯಿಲ್ಲ-ರಾಮಾಯಣ

ಮಹಾಭಾರತಗಳಂತಹ ಹಳೆಯ 'ಕಗ್ಗದ ಪುರಾಣಕಥೆಗಳನ್ನು' ಬಯಸುತ್ತಿದ್ದರೆ? ಏನಾದರಾಗಲಿ ಪಟ್ಟಣಿಗ ನಾಗರಿಕರನ್ನು ಮೆಚ್ಚಿ, ಅವರನ್ನು ಎಲ್ಲದರಲ್ಲಿಯೂ ಅನುಕರಿಸಿ ಶ್ರೇಷ್ಠತೆಗೇರಬೇಕೆಂಬ ಗೀಲು ಈ ಒಂದು ವಿಚಾರದಲ್ಲಿ ಹಳ್ಳಿಯವರಿಗಿನ್ನೂ ಸಂಪೂರ್ಣವಾಗಿ ಸೋಂಕಿಲ್ಲ ಎಂದು ಸಮಾಧಾನವಾಗುತ್ತದೆ. ಅದೂ ಸೋಂಕಾಗಿಬಿಡುವ ಮೊದಲೇ ಅವರು ಹೊಸದಾಗಿ ಪಡೆದ ಓದಿನ ರುಚಿ ಕೆಸರುಹಾದಿಗೆ ಬೀಳದಂತೆ ನೋಡಿಕೊಳ್ಳುವುದು ನಾಡಿನ ಒಳ್ಳಿಗೆ ಅತ್ಯಂತ ಆವಶ್ಯಕ ಕರ್ತವ್ಯ.

ಅಂತಹ ಉತ್ಥಾನದ ಮತ್ತು ಉದ್ಧಾರದ ಕಾರ್ಯಕ್ಕೆ ಆಶೀರ್ವಾದವೂ ಶಕ್ತಿಯೂ ಆಗಿ ನಮಗೆ ನೆರವಾಗುವ ದಿವ್ಯಗ್ರಂಥಗಳಲ್ಲಿ ರಾಮಾಯಣ ಮಹಾಭಾರತಗಳಿಗಿಂತಲೂ ಉತ್ತಮವೂ ಜನಪ್ರಿಯವೂ ಆಗಿರುವ ಚರಕೃತಿಗಳು ಮತ್ತಾವಿದೆ?

ರಾಮಾಯಣ ಆದಿಕಾವ್ಯ; ಅದರ ಕವಿ ಆದಿಕವಿ. ಆತನು ಮಹರ್ಷಿಯೂ ಆಗಿರುವುದರಿಂದ ದ್ರಷ್ಟಾರನೂ ಅಹುದು. ಆತನ ಪೂರ್ಣದೃಷ್ಟಿ ಲೋಕಾತಿಕ್ರಾಂತ ಗೋಚರವೂ ಆಗಿರುವುದರಿಂದ ಆತನು ಕ್ರಾಂತದರ್ಶಿ. ಮತ್ತು ಪ್ರತಿಭೆ ನಿತ್ಯಸತ್ಯ ಸಂಸ್ಪರ್ಶಿ. ಆ ಋಷಿಕವಿ ವಾಲ್ಮೀಕಿಯ ಸಮುದ್ರೋಪಮವಾದ ಮಹಾಗಾನಕ್ಕೆ ಜಗತ್ತು ಮಹಾಕಾವ್ಯದ ಪಟ್ಟಕಟ್ಟಿದೆ. ಏಕೆಂದರೆ ರಾಮಾಯಣವು ಪುರಾಣವಾದರೂ ಅದೊಂದು ಬೃಹದ್ ಭಾವಗೀತೆಯಂತಿದೆ. ಅದು ಏಕಕವಿ ಕೃತಿಯೂ ಆಗಿದೆ: ಬಹುಕಾಲದ ಸಂಸ್ಕೃತಿಯ ಬಹು ದೊಡ್ಡ ಜನಾಂಗದ ಮನಃಕೃತಿಯೂ ಆಗಿದೆ. ಮೊದಲನೆಯ ಕಾರಣಕ್ಕಾಗಿ ಅದು ಭಾವಗೀತೆಯಂತಿದ್ದರೆ ಎರಡನೆಯ ಕಾರಣಕ್ಕಾಗಿ ಪುರಾಣದಂತಿದೆ. ಆದ್ದರಿಂದಲೆ ಅದಕ್ಕೆ ಮಹಾಕಾವ್ಯ ಎಂಬ ಬಿರುದು ಸರ್ವಾಂಗ ಸುಂದರವಾಗಿ ಒಪ್ಪುತ್ತದೆ. ಏಕಾಗ್ರತೆ, ಏಕ ಮುಖತೆ, ಐಕ್ಯತೆ, ರಾಗತೀಕ್ಷ್ಣತೆ, ಆದರ್ಶಪ್ರಿಯತೆ, ರಸಾವೇಶ ಇವುಗಳ ದೃಷ್ಟಿಯಿಂದ ಅದೊಂದು ಭಾವಗೀತೆ. ವಿಪುಲತೆ, ಬಹುಳತೆ, ವಿವಿಧತೆ, ದೇವತ್ವ, ದೈತ್ಯತ್ವ, ಮಹತ್ವ ಇವುಗಳ ದೃಷ್ಟಿಯಿಂದ ಅದೊಂದು ಪುರಾಣ. ಅದರ ಸೂತ್ರ ಭಾವಗೀತೆಯದು; ಗಾತ್ರ ಪುರಾಣದ್ದು. ಕವಿಕೋಕಿಲ ವಾಲ್ಮೀಕಿಯ ಹೈಮಾಚಲ ಸಂಗೀತದಲ್ಲಿ ಸರೋವರದ ಸೌಂದರ್ಯವಿದೆ; ಸರಿತ್ಪತಿಯ ಗಾಂಭೀರ್ಯವಿದೆ. ಚಾರುಲಾಲಿತ್ಯ ಮತ್ತು ರುಂಧ್ರಭವ್ಯತೆ ಎರಡೂ ಸಮನ್ವಯಗೊಂಡಿರುವ ಆ ಮಹತ್ಕತಿ ಲೋಕಪೂಜಾಭಾಜನವಾಗಿರುವುದರಲ್ಲಿ ಏನಾಶ್ಚರ್ಯ?

ಅಂತಹ ಕವಿಯೂ ಅಂತಹ ಕೃತಿಯೂ ಲಭಿಸಿರುವುದು ನಮ್ಮ ಹೆಮ್ಮೆ, ನಮ್ಮ ಪುಣ್ಯ. ಮತ್ತೆ ಭುವನದ ಭಾಗ್ಯ! ಕವಿಯೂ ಕೃತಿಯೂ ಎಂದು ಬೇರೆಬೇರೆಯಾಗಿ ಹೇಳಿದರೂ ನಮ್ಮ ಪಾಲಿಗೆ ಅವರೆಡಕ್ಕೂ ಭೇದವಿಲ್ಲ. ಕವಿ ತನ್ನ ಕೃತಿಯಲ್ಲಿ ಲೀನವಾಗಿಹೋಗಿದ್ದಾನೆ, ಭಗವಂತನು ತನ್ನ ಸೃಷ್ಟಿಯಲ್ಲಿ ಒಂದಾಗಿರುವಂತೆ. ಲೋಕಸಂಗ್ರಹಕ್ಕಾಗಿ ಕವಿಯೇ ಕೃತಿಯಾಗಿ ಅವತರಿಸಿದ್ದಾನೆ. ಕವಿಯ ಜೀವನಕಥೆಯೂ ರಾಮಾಯಣದಲ್ಲಿ ಒಂದಂಶವಾಗಿಬಿಟ್ಟಿದೆ. ಅವನ ಜೀವಿತಕ್ಷೇತ್ರದಿಂದಲೆ ಅದು ಹೊಮ್ಮಿ ಬೆಳೆಯುತ್ತದೆ. ಅವನ ಬಾಳಿನ ಸರ್ವಸ್ವದ ಸಾರಸ್ವರೂಪವಾಗಿ ಅದು ಮೈವೆತ್ತು ನಿಂತಿದೆ. ನಿಷಾದನಾಗಿದ್ದ ಆತನನ್ನು ಮಹರ್ಷಿತ್ವಕ್ಕೆ ಏರಿಸಿದೆ. ವ್ಯಾಧನನ್ನು ಆದಿಕವಿಯನ್ನಾಗಿ ಪರಿವರ್ತಿಸಿದೆ. ವಾಲ್ಮೀಕಿ ರಾಮಾಯಣವನ್ನು ರಚಿಸುತ್ತಿದ್ದಾಗಲೆ ರಾಮಾಯಣವೂ ವಾಲ್ಮೀಕಿಯನ್ನು ಸೃಜಿಸುತ್ತಿತ್ತು, ಕಡೆಯುತ್ತಿತ್ತು, ಪಡೆಯುತ್ತಿತ್ತು. ಗುರುವಿನ ಅನುಗ್ರಹವೂ ಭಗವಂತನ ಕೃಪೆಯೂ ದೊರೆತರೆ ಬೇಡನಂತಹ

ಸಾಮಾನ್ಯನೂ ಮಹರ್ಷಿಯಂತಹ ಮಹೋನ್ನತಿಗೆ ಏರಬಹುದು ಎಂಬುದುಕ್ಕೆ ವಾಲ್ಮೀಕಿಯ ಜೀವನಕಥೆಯೆ ಒಂದು ಆಶಾದಾಯಕ ಅಗ್ನಿಸಾಕ್ಷಿಯಾಗಿದೆ.

ವಾಲ್ಮೀಕಿ ನಿಷಾದರ ಕಾಲದಲ್ಲಿ ಹುಟ್ಟಿದನು.

ನಿಷಾದರು ಅತ್ಯಂತ ಆಜ್ಞರೆಂದಾಗಲಿ ಕ್ರೂರಿಗಳಾದ ಕಾಡುಜನರೆಂದಾಗಲಿ ಭಾವಿಸಬೇಕಾಗಿಲ್ಲ. ಶ್ರೀರಾಮನ ಪ್ರಿಯಸ್ನೇಹಿತನಾದ ಗುಹನೂ ಬೇಡರ ದೊರೆ ಎಂಬುದನ್ನು ಗಮನಿಸಿದರೆ ನಿಷಾದರಿಗೂ ಅವರ ನೆಲದ ಕುಲದ ವಿದ್ಯೆ ಸಂಸ್ಕೃತಿ ಇದ್ದುವೆಂದು ಒಪ್ಪಿಕೊಳ್ಳಬೇಕಾಗುತ್ತದೆ.

ವ್ಯಾಧರ ಕುಲದಲ್ಲಿ ಹುಟ್ಟಿದ ವಾಲ್ಮೀಕಿ ವ್ಯಾಧವೃತ್ತಿಯಿಂದಲೆ ಬಾಳುತ್ತಿದ್ದನೆಂದರೆ ಅಧರ್ಮವೂ ಅಲ್ಲ, ಆಶ್ಚರ್ಯವೂ ಅಲ್ಲ. ಅರಣ್ಯಗಳಲ್ಲಿ ಬಿಲ್ಲುಬಾಣ ಕತ್ತಿ ಈಟಿಗಳನ್ನು ಹಿಡಿದು ತನ್ನವರ ಕೂಡೆ ನಡೆದು ಹುಲಿ ಸಿಂಹ ಆನೆ ಕಡವೆ ಮಿಗ ಮೊದಲಾದ ವನ್ಯಜಂತುಗಳನ್ನು ಬೇಟೆಯಾಡಿರಬೇಕು: ದಂತ ಚರ್ಮ ಉಗುರು ಮೊದಲಾದವುಗಳನ್ನು ಶೇಖರಿಸಿರಬೇಕು. ಹೊಳೆ ಕೆರೆಗಳಲ್ಲಿ ಬಲೆ ಬೀಸಿಯೋ ಗಾಳ ಹಾಕಿಯೋ ಸಿಡಿಯೊಡ್ಡಿಯೋ ಮೀನು ಹಿಡಿದಿರಬೇಕು; ಈಸಾಡಿರಬೇಕು. ತರತರದ ಮರಗಳಲ್ಲಿ ತರತರದ ರುಚಿಯ ಹಣ್ಣುಹಂಪಲುಗಳನ್ನು ಕಿತ್ತಿರಬೇಕು; ವಿಧವಿಧವಾದ ಗಿಡಬಳ್ಳಿಗಳನ್ನು ಹುಡುಕಿ ಗೆಡ್ಡೆಗೆಣಸುಗಳನ್ನು ಅಗೆದು ತನಗೂ ತನ್ನವರಿಗೂ ಆಹಾರ ಒದಗಿಸಿರಬೇಕು. ಬದುಕಿನ ಈ ಎಲ್ಲ ಅನಿವಾರ್ಯವಾದ ಲೌಕಿಕ ನಿಮಿತ್ತಗಳಿಂದಾಗಿ ವಾಲ್ಮೀಕಿ ಪ್ರಕೃತಿದೇವಿಯ ಸೌಂದರ್ಯದ ಸಾಮ್ರಾಜ್ಯದ ವಿವಿಧ ಸಂಪತ್ತುಗಳನ್ನು ವಿವರವಾಗಿ ಹೃದಯಂಗಮವಾಗಿ ಅನುಭವಿಸಿರಬೇಕು.

ಮೊದಲ ಕವಿಯಾಗುವ ತನ್ನ ಮೆಚ್ಚಿನ ಕಂದನನ್ನು ವ್ಯಾಧನನ್ನಾಗಿ ಹುಟ್ಟಿಸುವಂತೆ ವಾಗ್ದೇವಿ ತನ್ನ ಪತಿಯನ್ನು ಪ್ರೇರೆಪಿಸಿದಳು ಎಂದು ತೋರುತ್ತದೆ. ಇಲ್ಲಿದ್ದರೆ ರಾಮಾಯಣ ಈಗಿರುವುದಕ್ಕಿಂತಲೂ ಸಂಪೂರ್ಣವಾಗಿ ಅನ್ಯಪ್ರಕಾರದಲ್ಲಿ ನಮಗೆ ದೊರೆಯುತ್ತಿತ್ತು ಎಂದು ಧೈರ್ಯವಾಗಿ ಊಹಿಸಬಹುದು. ವಾಲ್ಮೀಕಿಯ ಬಾಲ್ಯ ಮತ್ತು ತಾರುಣ್ಯಗಳ ಅರಣ್ಯ ಪರಿಚಯದ ಪೂರ್ಣಫಲ ಅವನ ದಿವ್ಯಕೃತಿಯಲ್ಲಿ ಪ್ರತಿಫಲಿತವಾಗಿರುವುದನ್ನು ನಾವು ಕಾಣುತ್ತೇವೆ. ಆ ಕಾಡಿನ ಒಲವು, ಆ ಮರಮರದ ಗಿಡಗಿಡದ ಬಳ್ಳಿಬಳ್ಳಿಯ ಆತ್ಮೀಯವಾದ ಪರಿಚಯ, ಹೂವು ಹಕ್ಕಿ ಹಣ್ಣು ಮೊದಲಾದವುಗಳ ಸೌಂದರ್ಯದಲ್ಲಿರುವ ಆ ಆವೇಶಪೂರ್ಣವಾದ ಆಸಕ್ತಿ, ಅವುಗಳ ಒಂದೊಂದು ವಿವರದಲ್ಲಿಯೂ ನಿಕಟವೂ ದೀರ್ಘವೂ ಆದ ಅನುಭವದಿಂದಲೆ ಒದಗುವ ಆ ರಸರುಚಿ, ಋತುಋತುಗಳಲ್ಲಿ ವ್ಯತ್ಯಸ್ತವಾಗುವ ಪ್ರಕೃತಿಸೌಂದರ್ಯದ ಆ ವಿವರಜ್ಞಾನ,-ಇವು ವ್ಯಾಧ ವೃತ್ತಿಗಲ್ಲದೆ ಅಷ್ಟು ಆತ್ಮೀಯವಾಗಿ ಲಭಿಸುವುದು ಸುಲಭವಲ್ಲ. ವಾಲ್ಮೀಕಿಯ ನಾಳನಾಳಗಳಲ್ಲಿ ಬಾನು ಮುಗಿಲು ಬೆಟ್ಟ ಕಾಡು ಮಿಗ ಹಕ್ಕಿ ಮಳೆ ಬಿಸಿಲು ಚಳಿ ಮಂಜು ಬೆಳಗು ಬೈಗು ನೇಸರು ತಿಂಗಳು ಇವೆಲ್ಲವೂ ನೆತ್ತರಾಗಿ ಹರಿಯುತ್ತಿರುವುದು ಅವನು ನಿಷಾದವಾಗಿ ಸಂಭವಿಸಿದ ಪುಣ್ಯದಿಂದಲ್ಲದೆ ಬೇರೆ ಅಲ್ಲ.

ಹೀಗೆ ಹುಟ್ಟಿನಿಂದಲೆ ಕವಿಯಾಗಿದ್ದ ವ್ಯಾಧರ ತರುಣನಿಗೆ 'ನಾರದ'ರಂತಹ ಗುರುವಿನ ಅನುಗ್ರಹವೂ ದೊರೆಯಿತು. ನಾರದ ಎಂಬ ಮಾತಿಗೆ ಜ್ಞಾನವನ್ನು ದಯಪಾಲಿಸುವಾತನು ಎಂಬರ್ಥವಿರುವುದನ್ನು ಗಮನಿಸಿದರೆ ಯಾವ ದಿವ್ಯ ಗುರುವನ್ನಾದರೂ ಕಾವ್ಯದ ಪ್ರತಿಮಾವಿಧಾನ ಆ ಹೆಸರಿನಿಂದ ಕರೆಯುವುದರಲ್ಲಿ ಔಚಿತ್ಯವಿದೆ.

ಗುರುಕೃಪೆ ದೊರೆತ ಮೇಲೆ ಬೇಡರ ತರುಣನು ವಲ್ಮೀಕಾಶ್ರಮದಲ್ಲಿ ಪಾಠ ಪ್ರವಚನ ಅಧ್ಯಯನ ಧ್ಯಾನರೂಪವಾದ ಉಗ್ರತಪಸ್ಯೆಯಲ್ಲಿ ಹಲವು ವರ್ಷಗಳನ್ನು, ಹೆಚ್ಚಾಗಿ ಹೊರಗೆಲ್ಲಿಯೂ ಬಾರದೆ ತೋರದೆ, ಕಳೆದಿರಬೇಕು. ಅವನ ಮೇಲೆ ಹುತ್ತ ಬೆಳೆದಿತ್ತು ಎಂಬ ಪ್ರತಿಮೆಯಲ್ಲಿ ಅದು ಸೂಚಿತವಾಗುತ್ತದೆ. ಗುರು ನಾರದರ ಪ್ರಸಾದದಿಂದ ರಾಮಮಂತ್ರ ಮತ್ತು ರಾಮಾಯಣದ ಕತೆ ಎರಡರ ಸಿದ್ಧಿಯೂ ದೊರೆತು ಕೊನೆಗೆ ವಾಕ್ಯವಿಶಾರದನಾದ ವ್ಯಾಧನು ಮಹರ್ಷಿಯಾದನು.

ಅಂತಹ ಅನರ್ಘ್ಯದಿವ್ಯವಾದ ಲೋಕೋತ್ತರ ರಸಭಾರದಿಂದ ಪರಿಪೂರ್ಣವಾಗಿದ್ದ ಅವನ ಕವಿಚೇತನ ಭುವನಭಾಗ್ಯಕಾರಣವಾಗಿ ಕಾವ್ಯ ರೂಪದಲ್ಲಿ ಅವತರಿಸುವುದಕ್ಕೆ ಒಂದು ನಿಮಿತ್ತ ಮಾತ್ರ ಘಟನೆ ಸಂಭವಿಸಿತು. ಒಮ್ಮೆ ಆತನು ತನ್ನ ಆಶ್ರಮದ ಬಳಿಯ ತಮಸಾನದಿಗೆ ಬೆಳಗಿನ ಹೊತ್ತು ಅಕರ್ದಮವೂ ರಮಣೀಯವೂ ಪ್ರಸನ್ನಾಂಬುವೂ ಆಗಿದ್ದ ತೀರ್ಥದಲ್ಲಿ ಮೀಯಲು ಹೋಗಿದ್ದರು. ಕ್ರೌಂಚ ಪಕ್ಷಿಗಳೆರಡು ಅಲ್ಲಿಯ ವಿಪುಲ ವನವಿಸ್ತೀರ್ಣದ ಮೇಲುಗಡೆ ತಿಳಿಯಾದ ವಾಯುಮಂಡಲದಲ್ಲಿ ಉಲಿದು ಹಾರಾಡುತ್ತಿದ್ದುವು, ತಮ್ಮ ದಾಂಪತ್ಯಮಾಧುರ್ಯವನ್ನು ಲೋಕಕ್ಕೆ ತೋರಿ ಸಾರುವಂತೆ. ವಾಲ್ಮೀಕಿ ಅರಸುಖಪುಲಕಿತನಾಗಿ ಅವುಗಳ ಆನಂದದಲ್ಲಿ ಭಾಗಿಯಾಗಿ ನೋಡುನೋಡುತ್ತಿದ್ದಂತೆಯೆ ಮರಗಳ ಮರೆಯಲ್ಲಿ ಹೊಂಚಿದ್ದ ಬೇಡನೊಬ್ಬನು ಬಿಟ್ಟ ಬಾಣಕ್ಕೆ ಗಂಡುಕೊಂಚೆ ಬಲಿಯಾಗಿ ರಕ್ತಮಯವಾಗಿ ಬಾಣಸಹಿತವಾಗಿ ಆತನ ಸಮೀಪದಲ್ಲಿಯೆ ಉರುಳಿತು. ಹೆಣ್ಣು ಹಕ್ಕಿ ಹಾರಾಡಿ ರೋದಿಸತೊಡಗಿತು. ವಾಲ್ಮೀಕಿಗೆ ಕರುಣವುಕ್ಕಿ ಸ್ವಧರ್ಮಚಾರಿಯಾದ ಆ ಶಬರನನ್ನು ಅಧರ್ಮಚಾರಿಯೆಂದು ಬಗೆದು ಇಂತು ಶಪಿಸಿದನು:

"ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ
ಯತ್ ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಮ್!"

"ಹೇ ನಿಷಾದ, ಕಾಮಮೋಹಿತವಾದ ಕ್ರೌಂಚದಂಪತಿಯಲ್ಲಿ ಒಂದನ್ನು ಕೊಂದೆಯಲ್ಲಾ;
ಎಂದೆಂದಿಗೂ ನಿನಗೆ ಏಳಿಗೆಯಾಗದಿರಲಿ!"

ಒಡನೆಯ ಋಷಿ ತನ್ನ ಕಠಿನವಾಕ್ಯಕ್ಕೆ ತಾನೆ ನೊಂದುಕೊಂಡು 'ಹಕ್ಕಿಯ ದುಃಖಕ್ಕೆ ಮರುಗಿ ಕೋಪವಶವಾಗಿ ಏನುಮಾಡಿಬಿಟ್ಟೆ!' ಎಂದು ತನ್ನ ವೈರ ಗ್ರಹಣಬುದ್ಧಿಗಾಗಿ ಪಶ್ಚಾತ್ತಾಪಪಟ್ಟು ಸಮೀಪದಲ್ಲಿದ್ದ ಶಿಷ್ಯನಿಗೆ ತಾನೆಂಬುದು ಶ್ಲೋಕಮಾತ್ರವಾಗಲಿ, ಶಾಪವಾಗುವುದು ಬೇಡ ಎಂಬ ಮನಸ್ಸಿನಿಂದ ಹೀಗೆ ಹೇಳಿದನಂತೆ:

"ಪಾದಬದ್ಧೋಽಕ್ಷರ ಸಮಸ್ತಂತ್ರೀ ಲಯ ಸಮನ್ವಿತಃ
ಶೋಕಾರ್ತಸ್ಯ ಪ್ರವೃತ್ತೋ ಮೇ ಶ್ಲೋಕೋ ಭವತು ನಾನ್ಯಥಾ"

ನದೀತೀರ್ಥದಲ್ಲಿ ಯಥಾವಿಧಿಯಾಗಿ ಸ್ನಾನಮಾಡಿ ಆಶ್ರಮಕ್ಕೆ ಹಿಂತಿರುಗಿ ಆ ಮಹರ್ಷಿ ಧ್ಯಾನಕ್ಕೆ ಕುಳಿತನು. ಆಗ ಲೋಕಕರ್ತನೂ ಸ್ವಯಂಪ್ರಭುವೂ ಚತುರ್ಮುಖನೂ ಮಹಾತೇಜನೂ ಆದ ಬ್ರಹ್ಮದೇವನು ಗೋಚರವಾಗಿ ತನ್ನ ಕೋಪಕ್ಕೂ ಕೊಟ್ಟ ಶಾಪಕ್ಕೂ ಚಿಂತಾಕ್ರಾಂತನಾಗಿದ್ದ ಮಹಾಮುನಿಗೆ ಸಮಾಧಾನ ಹೇಳಿ ಇಂತು ಆದೇಶವಿತ್ತನಂತೆ:

"ಶ್ಲೋಕ ಏವ ತ್ವಯಾ ಬದ್ಧೋ ನಾತ್ರ ಕಾರ್ಯಾ ವಿಚಾರಣಾ
ಮಚ್ಛಂದಾದೇವ ತೇ ಬ್ರಹ್ಮನ್ ಪ್ರವೃತ್ತೇಯಂ ಸರಸ್ವತೀ
ರಾಮಸ್ಯ ಚರಿತಂ ಕೃತ್ಸ್ನಂ ಕುರು ತ್ವಮೃಷಿಸತ್ತಮ
ಧರ್ಮಾತ್ಮನೋ ಗುಣವತೋ ಲೋಕೇ ರಾಮಸ್ಯ ಧೀಮತಃ
ವೃತ್ತಂ ಕಥಯ ವೀರಸ್ಯ ಯಥಾ ತೇ ನಾರದಾಚ್ಛ್ರುತಮ್
ರಹಸ್ಯಂ ಚ ಪ್ರಕಾಶಂ ಚ ಯದ್ವೃತ್ತಂ ತಸ್ಯ ಧೀಮತಃ
ರಾಮಸ್ಯ ಸಹಸೌಮಿತ್ರೇ ರಾಕ್ಷಸಾನಾಂ ಚ ಸರ್ವಶಃ
ವೈದೇಹ್ಯಾಶ್ಚೈವ ಯದ್ ವೃತ್ತಂ ಪ್ರಕಾಶಂ ಯದಿ ವಾ ರಹಃ
ಯಚ್ಚಾಪ್ಯವಿದಿತಂ ಸರ್ವ ವಿದಿತಂ ತೇ ಭವಿಷ್ಯತಿ
ನ ತೇ ವಾಗನೃತಾ ಕಾವ್ಯೇ ಕಾಚಿದತ್ರ ಭವಿಷ್ಯತಿ
ಕುರು ರಾಮಕಥಾಂ ಪುಣ್ಯಾಂ ಶ್ಲೋಕಬದ್ಧಾಂ ಮನೋರಮಾಮ್
ಯಾವತ್ ಸ್ಥಾಸ್ಯಂತಿ ಗಿರಯಃ ಸರಿತಶ್ಚ ಮಹೀತಲೇ
ತಾವತ್ ರಾಮಾಯಣಕಥಾ ಲೋಕೇಷು ಪ್ರಚರಿಷ್ಯತಿ
ಯಾವತ್ ರಾಮಾಯಣಕಥಾ ತ್ವತ್ ಕೃತಾ ಪ್ರಚರಿಷ್ಯತಿ
ತಾವದೂರ್ಧ್ವಮಧಶ್ಚ ತ್ವಂ ಮಲ್ಲೋಕೇಷು ನಿವತ್ಸ್ಯಸಿ"

"ನೀನು ಆ ನಿಷಾದನನ್ನು ಕುರಿತೆಂದುದರಲ್ಲಿ ಒಂದು ರಚಿತವಾಗಿದೆ. ಅದಕ್ಕಾಗಿ ಶೋಕವೇಕೆ? ಆ ನನ್ನ ಛಂದಸ್ವರೂಪಿಣಿ ನಿನ್ನಲ್ಲಿ ಅವತರಿಸಿದ್ದಾಳೆ. ಧೀಮಂತನೂ ಧರ್ಮಾತ್ಮನೂ ವೀರನೂ ಆಗಿರುವ ರಾಮನ ಚರಿತ್ರೆಯನ್ನು ನೀನು ನಾರದ ಮಹರ್ಷಿಯಿಂದ ಕೇಳಿದಂತೆ ಶ್ಲೋಕಬದ್ಧವನ್ನಾಗಿ ಮಾಡು. ಆ ಚರಿತೆಯಲ್ಲಿ ಲೋಕಕ್ಕೆ ಗೋಚರವಾಗುವಂತೆ ಪ್ರಕಾಶವಾದ ವೃತ್ತವಾಗಲಿ ಅಥವಾ ಅಗೋಚರವಾಗಿ ರಹಸ್ಯವಾಗಿರುವ ವೃತ್ತವಾಗಲಿ, ಅವಿದಿತವಾಗಿದ್ದರೂ ಸರ್ವವೂ ನಿನಗೆ ವಿದಿತವಾಗಲಿ. ಸೀತಾ ರಾಮಲಕ್ಷ್ಮಣರಿಗೆ ಸಂಬಂಧಪಟ್ಟಿರಲಿ ರಾಕ್ಷಸರಿಗೆ ಸಂಬಂಧಪಟ್ಟಿರಲಿ, ಯಾರ ವೃತ್ತವಾಗಲಿ ಯಾರ ಚಿತ್ತವಾಗಲಿ ಎಲ್ಲವೂ ನಿನಗೆ ಸಂಪೂರ್ಣವಾಗಿ ದರ್ಶನ ಪ್ರತ್ಯಕ್ಷವಾಗುತ್ತದೆ. ನಿನ್ನ ವಾಣಿಯಲ್ಲಿ ಅನೃತವೆಂಬುದು ಒಂದಿನಿತೂ ಪ್ರವೇಶಿಸುವುದಿಲ್ಲ. ಪೃಥ್ವಿಯಲ್ಲಿ ಎಲ್ಲಿಯ ವರೆಗೆ ಗಿರಿನದಿಗಳಿರುತ್ತವೆಯೋ ಆ ವರೆಗೆ ಲೋಕಲೋಕಗಳಲ್ಲಿ ರಾಮಾಯಣ ಕಥೆ ಪ್ರಚುರವಾಗಿರುತ್ತದೆ. ಎಲ್ಲಿಯ ವರೆಗೆ ನಿನ್ನ ರಾಮಾಯಣ ಕಥಾಕೃತಿ ಪ್ರಚುರವಾಗಿರುತ್ತದೆಯೊ ಅಲ್ಲಿಯ ವರೆಗೆ ನೀನು ನನ್ನ ಕೃತಿಯಾಗಿರುವ ಈ ಮೇಲಣ ಮತ್ತು ಕೆಳಗಣ ಹದಿನಾಲ್ಕು ಲೋಕಗಳಲ್ಲಿಯೂ ಸರ್ವವ್ಯಾಪ್ತಿಯಾಗಿ ಸರ್ವತೋಮುಖವಾಗಿ ಸರ್ವೋದಯಕಾರಣವಾಗಿ ಸರ್ವರಸಾನಂದರೂಪನಾಗಿ ಇರುತ್ತೀಯೆ."

ಬ್ರಹ್ಮನ ಪ್ರತ್ಯಕ್ಷದ ಮತ್ತು ಆದೇಶದ ಈ ಪ್ರತಿಮೆಯಲ್ಲಿ ಇಂಗಿತವಾಗಿರುವ ದರ್ಶನ ಧ್ವನಿಯನ್ನು ನಾವು ಹೃದಯತಃ ಅರಿಯಬೇಕು. ಬ್ರಹ್ಮನ ಇಚ್ಛೆಯೆ ವಾಲ್ಮೀಕಿಯಲ್ಲಿ ಪ್ರವಹಿಸಿತು ಎಂಬುದರ ಸಂಪೂರ್ಣಾರ್ಥವನ್ನು ಮನನ ಮಾಡಬೇಕು. ಕವಿಕೃತಿ ಬ್ರಹ್ಮಕೃತಿ ಅಲ್ಲದಿದ್ದರೂ ಬ್ರಹ್ಮನು ಸಂಪೂರ್ಣವಾಗಿ ತನ್ನದನ್ನಾಗಿ ಒಪ್ಪಿಕೊಂಡದ್ದು ಎಂಬುದನ್ನು ಗ್ರಹಿಸಬೇಕು. ಅದಕ್ಕೆ, ಎಂದರೆ ಕವಿ ಕೃತಿಗೆ, ಕನಿಷ್ಠವೆಂದರೆ ಬ್ರಹ್ಮಕೃತಿಗೆ ಸಮನಾದ ಗೌರವ ಸಲ್ಲುತ್ತದೆ. 'ಯಾವತ್ ಸ್ಥಾಸ್ಯಂತಿ ಗಿರಯಃ ಸರಿತಶ್ಚ ಮಹೀತಲೇ ತಾವತ್ ರಾಮಾಯಣಕಥಾ ಲೋಕೇಷು ಪ್ರಚರಿಷ್ಯತಿ' ಎಂಬಲ್ಲಿ ಬ್ರಹ್ಮಕೃತಿಗಳಾದ ಪರ್ವತಾರಣ್ಯನದಿಗಳಂತೆ

ಕವಿಕೃತಿಯಾದ ರಾಮಾಯಣವೂ ಪ್ರಕೃತಿ ಸತ್ಯಾಂಶವಾಗಿರುತ್ತದೆ ಎಂಬ ಆಶ್ವಾಸನೆಯಿದೆ. ಅದಕ್ಕಿಂತಲೂ ಅತಿಶಯವಾಗಿ ಈ ಪೃಥ್ವಿಯ ಪರ್ವತಾರಣ್ಯಗಳ ಸತ್ಯ ಈ ಒಂದು ಲೋಕದಲ್ಲಿ ಮಾತ್ರ ಪ್ರಚುರವಾಗಿರುವುದಾದರೆ ಋಷಿಕವಿಕೃತಿಯ ಸತ್ಯ ಅನೇಕಲೋಕಚರವಾಗಿರುತ್ತದೆ ಎಂಬ ಅತೀಂದ್ರಿಯವೂ ಯೌಗಿಕವೂ ಆಗಿರುವ ಸತ್ಯಸ್ಯ ಸತ್ಯವೂ ಪ್ರತಿಬೋಧಿತವಾಗಿರುವಂತೆ ಭಾಸವಾಗುತ್ತದೆ, 'ಮಹೀತಲೇ' 'ಲೋಕೇಷು' ಎಂಬ ಪದಗಳಲ್ಲಿ. ಮುಂದಿನ ಎರಡು ಪಂಕ್ತಿಗಳಲ್ಲಿ ಬ್ರಹ್ಮನಂತೆ ವಾಲ್ಮೀಕಿಯೂ ಲೋಕಲೋಕಾಂತರ ವ್ಯಾಪ್ತನಾಗಿರುತ್ತಾನೆ ಎಂಬ ಧ್ವನಿಯಿದೆ. ರಾಮಾಯಣ ಬರಿಯ ಲೌಕಿಕವಾದ ಚರಿತ್ರೆಯಂತಲ್ಲ ಎಂಬುದು 'ರಹಸ್ಯಂ ಚ ಪ್ರಕಾಶಂ ಚ' ಎಂಬಲ್ಲಿಯೂ 'ಯಚ್ಚಾಪ್ಯ-ವಿದಿತಂ ಸರ್ವಂ ವಿದಿತಂ ತೇ ಭವಿಷ್ಯತಿ' ಎಂಬಲ್ಲಿಯೂ ಸ್ಪಷ್ಟವಾಗುತ್ತದೆ. ಅಲ್ಲದೆ ಅದು ಸತ್ಯಾಧಾರವಿಲ್ಲದ ಬರಿಯ ಬಾಲಿಶ ಕಲ್ಪನಾನೋದದ ಕಟ್ಟು ಕಥೆಯಂತೆ ಅನೃತಸೃಷ್ಟಿಯಲ್ಲ; ಅದೂ ಒಂದು ಋತಚಿದ್ವಿನ್ಯಾಸ. ವಾಲ್ಮೀಕಿಯ ಕೃತಿಯಲ್ಲಿ ಎಲ್ಲಿಯೂ ಸುಳ್ಳುಹೊಳ್ಳು ಹುಸಿ ಹೋಗುವುದಿಲ್ಲ. ಮಾತ್ರವಲ್ಲ, ಋಷಿಯ ವಾಕ್‌ಶಕ್ತಿ ಬ್ರಹ್ಮನ ವಾಕ್‌ಶಕ್ತಿಯಿಂದ ಸಮನ್ವಿತವಾಗಿರುವುದರಿಂದ ಅದು ಏನನ್ನು 'ವಚಿಸಿ'ದರೂ ಅದು 'ರಚಿತ'ವಾಗಿಯೆ ಸತ್ಯವಾಗುತ್ತದೆ. 'ನ ತೇ ವಾಕ್ ಅನೃತಾ ಕಾವ್ಯೇ ಕಾಚಿದತ್ರ ಭವಿಷ್ಯತಿ' 'ಕಾವ್ಯವಾಗುವ ನಿನ್ನ ವಾಕ್ಕಿನಲ್ಲಿ ಅಪ್ಪಿ ತಪ್ಪಿಯೂ ಅನೃತವುಂಟಾಗುವುದಿಲ್ಲ' ಎಂಬ ಬ್ರಹ್ಮವಾಣಿಯಲ್ಲಿ ಸುಸ್ಪಷ್ಟವಾಗಿದೆ, ಕವಿಕೃತಿಯ ಮೇಲೆ ಸಂಸ್ಥಾಪಿತವಾಗಿರುವ ಸಾಕ್ಷಾತ್ ಬ್ರಹ್ಮಮುದ್ರೆ.

ವಾಲ್ಮೀಕಿಯ ಕೃತಿ ಅದು ಹುಟ್ಟಿದಂದು 'ಕವಿಕೃತಿ'ಯಾಗಿತ್ತು; ಇಂದು 'ಪ್ರಕೃತಿ' ಯಾಗಿದೆ. ಭಾರತೀಯರ ಬಾಳುವೆಯ ಲೋಕದಲ್ಲಿ ಪರ್ವತ, ಅರಣ್ಯ, ಸಮುದ್ರ, ಆಕಾಶಗಳಿರುವಂತೆ ರಾಮಾಯಣವೂ 'ಇದೆ.' ಬಹುಶಃ ಅವುಗಳಿಗಿಂತಲೂ ಸುಸ್ಥಿರವಾಗಿ, ಸಮಧಿಕವಾಗಿ, ಸತ್ಯತರವಾಗಿ, ಬಾಹ್ಯಾಭ್ಯಂತರಗಳನ್ನೂ ಲೋಕಾಲೋಕಗಳನ್ನೂ ಆಕ್ರಮಿಸಿ, ವ್ಯಾಪಿಸಿ, ಸೃಷ್ಟಿಯ ವಿಕಾಸ ರೂಪವಾದ ಪರಿಣಾಮಪಥದಲ್ಲಿ ಒಂದು ಪರಿವರ್ತನಾಸಮರ್ಥವಾದ ಸಾರಥಿ-ಶಕ್ತಿಯಾಗಿದೆ. ಪ್ರಕೃತಿಯ ಪರ್ವತಾರಣ್ಯಗಳನ್ನು ಯಥಾಶಕ್ತಿಯಾಗಿ ಉಪಯೋಗಿಸಿಕೊಳ್ಳುವಂತೆ ರಾಮಾಯಣವನ್ನು ಉಪಯೋಗಿಸಿಕೊಳ್ಳಬಹುದು. ಆ ಪರ್ವತದ ಬಂಡೆಗಳಲ್ಲಿ ಸಾಮರ್ಥ್ಯವಿರುವವರು ಯಾರುಬೇಕಾದರೂ ತಮ್ಮ ತಮ್ಮ ಪ್ರತಿಭೆಯ ಕಲ್ಪನಾಕೃತಿಗಳನ್ನು ಕಾಣಬಹುದು, ಶಿಲ್ಪಕೃತಿಗಳನ್ನು ಕಡೆಯಬಹುದು. ಆ ಅರಣ್ಯದ ಅಂಶದಿಂದ ತಮ್ಮತಮ್ಮ ದರ್ಶನಕ್ಕೆ ಅನುರೂಪವಾಗಿ ಎಂತಹ ನಂದನೋದ್ಯಾನಗಳನ್ನು ಬೇಕಾದರೂ ರಚಿಸಿಕೊಳ್ಳಬಹುದು. ವಾಲ್ಮೀಕಿಯ ದಿವ್ಯಕೃತಿ ಪ್ರಕೃತಿಯ ಮೂಲಭೂತ ವಸ್ತುಗಳಂತೆ, ಶಕ್ತಿಗಳಂತೆ. ಅಪೌರುಷೇಯವಾಗಿ ಹೋಗಿದೆ. ಆದ್ದರಿಂದಲೆ ಅದು ವೇದ ಪಟ್ಟಕ್ಕೂ ಏರಿದೆ.

ಕವಿಮಹರ್ಷಿ ಅಂದು ಹಾಡಿದ ರಾಮಾಯಣ ಇಂದು ಮತ್ತೊಮ್ಮೆ ನಮ್ಮಲ್ಲಿ ಮೂಡಿದ ಹೊರತು ಸಾರ್ಥಕವಾಗುವುದಿಲ್ಲ. ಏಕೆಂದರೆ ಕೃತಿಯ ರಸಾಸ್ವಾದನೆಯೂ ಕೃತಿರಚನೆಯಂತೆ ಒಂದು ಸೃಷ್ಟಿಕಾರ್ಯ. ಓದುವ ಅಥವಾ ಆಲಿಸುವ ನಮ್ಮ ಒಬ್ಬೊಬ್ಬರ ಹೃದಯದಲ್ಲಿಯೂ ರಾಮಾಯಣದ ಪುನಃಸೃಷ್ಟಿಯಾಗಬೇಕು. ಹಾಗೆ ಒಂದೊಂದು ಚೇತನದಲ್ಲಿಯೂ ರಾಮಾಯಣಾವತಾರವಾಗುವುದರಲ್ಲಿಯೆ ವಾಲ್ಮೀಕಿಯ ಕೃತಿ ಸಾರ್ಥಕತೆ ಪಡೆಯುತ್ತದೆ; ನಮ್ಮ ಬಾಳುವೆಗೂ ಪುರುಷಾರ್ಥ ಸಿದ್ಧಿಯಾಗುತ್ತದೆ.

ಅಂತಹ ರಸಸಾಧನೆಗೆ ನಮಗೆ ಬೇಕಾದುದು ಲೌಕಿಕವಾದ ಪ್ರತಿಕೃತಿದೃಷ್ಟಿಯಲ್ಲ. ಸರ್ವಗ್ರಾಹಿಯಾದ ಪ್ರತಿಮಾದೃಷ್ಟಿ.**[2]** ಏಕೆಂದರೆ ರಾಮಾಯಣವು ಬರಿಯ ಲೌಕಿಕ ಚರಿತ್ರೆಯಲ್ಲ. ಲೀಲಾಸತ್ಯಗಳ ಹಿಂದಿರುವ ನಿತ್ಯಸತ್ಯಗಳನ್ನು ಪ್ರತಿಮಿಸುವ ಅದು ಒಂದು ದರ್ಶನಕೃತಿ.**[3]**

ಒಮ್ಮೆ ಆಗಿಹೋದ ಚರಿತ್ರೆ ಮತ್ತೆ ನಡೆಯಲಾರದು; ಆದರೆ ವಾಲ್ಮೀಕಿಯ ಮಹಾಕೃತಿ ಚರಿತ್ರೆಯಲ್ಲ, ಕಾವ್ಯ. ಆ ಚರಿತ್ರೆ ವಾಲ್ಮೀಕಿಯ ಚಿದ್ರಂಗದಲ್ಲಿ ನಡೆದದ್ದು. ಕಾಲದೇಶಾತೀತವಾಗಿರುವುದರಿಂದ ನಿರಂತರವಾಗಿ ನಡೆಯುತ್ತಿರುವ ಆ ಶಾಶ್ವತ ಘಟನಾಪರಂಪರೆ ಮತ್ತೆ ಇನ್ನಾವ ಸಹೃದಯನ ಚಿದ್‌ರಂಗದಲ್ಲಿಯಾದರೂ ಮತ್ತೆಮತ್ತೆ ನಡೆಯಬಹುದು.

ಅಕ್ಷರ ಆಳ್ವಿಕೆಯೊಡನೆ ಆಂಜನೇಯನ ಸಮುದ್ರಲಂಘನವನ್ನು ಚಾರಿತ್ರಕವಾಗಿ ಹೋಲಿಸಿದರೆ ಎಂತಹ ಅವಿವೇಕವಾಗುತ್ತದೆ. ಒಂದು ಚರಿತ್ರೆ, ಮತ್ತೊಂದು ಕಾವ್ಯ. ಚರಿತ್ರೆ ಒಂದುವೇಳೆ ಕವಿಯ ಅನುಭವವಾಗಿ ಕಾವ್ಯವಾಗಬಹುದು. ಆದರೆ ಕಾವ್ಯ ನಡೆದ ಚರಿತ್ರೆಯಾಗಲಾರದು. ಅದನ್ನು ಚರಿತ್ರೆ ಓದುವ ದೃಷ್ಟಿಯಿಂದ ಓದಬಾರದು, ಹಾಗೆ ಮಾಡಿದರೆ ಚರಿತ್ರೆಯ ಅಧ್ಯಯನದಿಂದ ಒದಗಬಹುದಾದ ಅಭ್ಯುದಯದಿಂದಲೂ ದೂರವಾಗಿ ಕಾವ್ಯಪಾರಾಯಣದಿಂದ ಲಭಿಸುವ ನಿಃಶ್ರೇಯಸದಿಂದಲೂ ವಂಚಿತರಾಗುವ ಉಭಯ ನಷ್ಟಕ್ಕೆ ಪಕ್ಕಾಗುತ್ತೇವೆ.

ವಾಲ್ಮೀಕಿಯ ರಾಮಾಯಣದಲ್ಲಿ ಲೋಕಚರಿತ್ರೆಯನ್ನು ಅರಸಿ ಕಾಣಲೆಳಸುವ ಸಂಶೋಧನೆಯ ವಿದ್ವತ್ತು. ಕಬ್ಬಿನಲ್ಲಿ ದೊಣ್ಣೆಯನ್ನು ಮಾತ್ರ ಕಾನುವ ಗಾಂಪನಂತೆ, ಮುಖ್ಯ ಪ್ರಯೋಜನದಿಂದ ಸಂಪೂರ್ಣವಾಗಿ ವಂಚಿತವಾಗಿ, ತಾನೂ ದಾರಿತಪ್ಪಿ ದಿಕ್ಕುಗೆಡುವುದಲ್ಲದೆ ಇತರರನ್ನೂ ಕಂಗೆಡಿಸಿ ಹಾನಿಗೀಡು ಮಾಡುತ್ತದೆ. ಕಬ್ಬಿನ ಕೋಲಿನಲ್ಲಿ ದೊಣ್ಣೆಯತನ ಇಲ್ಲ ಎಂದಲ್ಲ. ಅದನ್ನು ಎಮ್ಮೆ ಹೊಡೆಯುವುದಕ್ಕೆ ಉಪಯೋಗಿಸಲು ಸಾಧ್ಯವಲ್ಲ ಎಂದೂ ಅಲ್ಲ. ಆದರೆ ಕಬ್ಬಿನ ಪ್ರಧಾನೋದ್ದೇಶ ರಸಮಾಧುರ್ಯ. ಅದರ ಮುಖ್ಯ ಸತ್ಯವೂ ಅದರ ಸಿಹಿಯಲ್ಲಿಯೆ ನಿಷ್ಠಿತ. ಬೆಲ್ಲವೆ ಅದರ ಸತ್ಯಸ್ಯ ಸತ್ಯ. ಉಳಿದುದೆಲ್ಲ ಮುಖ್ಯೋದ್ದೇಶ ಮತ್ತು ಪರಮ ಪ್ರಯೋಜನದ ದೃಷ್ಟಿಯಿಂದ ಅಪ್ರಕೃತ; ಹೊರಗೆಸೆಯಬೇಕಾದ ಹಿಪ್ಪೆ; ನೀರು ಕಾಯಿಸಲು ಬಚ್ಚಲೊಲೆಗೆ ಹಾಕಬಹುದಾದ ಅಳ್ಳಟ್ಟೆ. ಕಬ್ಬಿನಲಿ ಅಳ್ಳಟ್ಟೆ ಇಲ್ಲವೆಂದಲ್ಲ; ಆ ಅಳ್ಳಟ್ಟೆ ಉಪಯೋಗಕ್ಕೆ ಬಾರದು ಎಂದೂ ಅಲ್ಲ. ಅದನ್ನೂ ಶೇಖರಿಸಿ ಕಟ್ಟಿಗೆ ಮಾಡಿ ಮಾರುವವರು ಮಾರಲಿ: ಅದಕ್ಕೂ ಬೆಲೆ ಇದೆ. ಆದರೆ ಅಂತಹರು ತಮ್ಮ ಅಳ್ಳಟ್ಟೆಯ ಸತ್ಯದಿಂದ ಬೆಲ್ಲವನ್ನು ಮಿಥ್ಯಗೊಳಿಸುವ ಆತ್ಮಹಾನಿಕರವಾದ ನಷ್ಟಕಾರ್ಯಕ್ಕೆ ಕೈ ಹಾಕಬಾರದು. ರಾಮಾಯಣದಲ್ಲಿ ಉತ್ತರ ದಕ್ಷಿಣ ಸಂಸ್ಕೃತಿಗಳ ಸಂಘಟ್ಟಣೆಯಾಗಲಿ, ಆರ್ಯದ್ರಾವಿಡ ನಾಗರಿಕತೆಗಳಿಗೆ ಒದಗಿದ ಹೋರಾಟವನ್ನಾಗಲಿ ಕೆದಕುವುದು ವಾಲ್ಮೀಕಿಯ ಕಾವ್ಯೋದ್ದೇಶಕ್ಕೆ ಅನ್ಯ. ಕೈಕೆಯಂತಹರ ವರ್ತನೆಯನ್ನು ನಿರ್ಲಕ್ಷಿಸಿ ಅಯೋಧ್ಯೆಯ ಆರ್ಯರ ಸಾಮಾಜಿಕ ಸಂಸ್ಕೃತಿಯನ್ನು ರಾಮನ ಚಾರಿತ್ರದಿಂದ ಮಾತ್ರವೆ ಅಳೆಯುವುದೂ, ಆಂಜನೇಯರಂತಹರ ಮಹದ್ವ್ಯಕ್ತಿತ್ವವನ್ನು ಗಮನಿಸದೆ ಕಿಷ್ಕಿಂಧೆಯ ವಾನರ ಸಾಮಾಜಿಕ ಸಂಸ್ಕೃತಿಯನ್ನು ವಾಲಿ ತಾರೆಯರ ಚಾರಿತ್ರದಿಂದ ಮಾತ್ರವೆ ನಿರ್ಧರಿಸಲೆಳಸುವುದೂ, ವಿಭೀಷಣನಂತಹರ ಸಾತ್ವಿಕಶ್ರೀಯನ್ನು ಬೆನ್ಮರೆಗೆ ತಳ್ಳಿ ಲಂಕೆಯ ಸಂಸ್ಕೃತಿಯನ್ನು ರಾವಣನ

ನಡತೆಯಿಂದ ಮಾತ್ರವೆ ನಿರ್ಣಯಿಸುವುದೂ ಲೌಕಿಕವಾದ ಐತಿಹಾಸಿಕ ಸಂಶೋಧನೆಗೂ ಮಾನ ತರುವ ರೀತಿಯಲ್ಲ!

ಒಮ್ಮೆ ದಕ್ಷಿಣೇಶ್ವರದ ಭವತಾರಿಣಿಯ ವಿಗ್ರಹವನ್ನು ಕುರಿತು ಮಾತನಾಡುತ್ತಾ ಅದರ ಅಂದ ಚೆಂದ ಕಲೆಗಳನ್ನು ಪ್ರಶಂಸಿಸುತ್ತಾ ನೆರೆದಿದ್ದ ಭಕ್ತರಲ್ಲೊಬ್ಬರು ಅದನ್ನು ಇಂತಹ ಶಿಲ್ಪಿಮಾಡಿದನೆಂದೂ ಆ ಕಲ್ಲು ಇಂತಹ ಕಡೆಯಲ್ಲಿ ದೊರೆಯಿತೆಂದೂ ಅದು ಇಂತಹ ಜಾತಿಗೆ ಸೇರಿದ ಶಿಲೆಯೆಂದೂ ಆ ವಿಗ್ರಹದ ಚರಿತ್ರೆಯನ್ನು ವಿವರಿಸಿದರಂತೆ. ಆಲಿಸುತ್ತಾ ಕುಳಿತಿದ್ದ ಪರಮಹಂಸರು "ನನಗದೊಂದೂ ಗೊತ್ತಿಲ್ಲ. ನನಗವಳು ತಾಯಿ, ಜಗನ್ಮಾತೆ, ಚಿನ್ಮಯೀಭಗವತಿ!" ಎಂದು ಭಾವದಿಂದ ಕುಳಿತಲ್ಲಂದಲೆ ನಮಿಸಿದರಂತೆ. ಪರಮಹಂಸರಿಗೆ ಆ ವಿಗ್ರಹದ ಚಿನ್ಮಯತೆ ಪ್ರತ್ಯಕ್ಷಾನುಭೂತಿ. ಆದರೆ ಇತರರ ಭಾಗಕ್ಕೆ ಅದು ಅತಿಕ್ರಾಂತಗೋಚರ; ಅವರಿಗೆ ಅದು ಮೃಣ್ಮಯ. ಇತರ ವಸ್ತುಗಳಂತೆ ಅದೂ ಒಂದು ಮೃದ್ವಸ್ತು. ಅದಕ್ಕೊಂದು ಲೋಕಚರಿತ್ರೆಯಿದೆ. ಅದನ್ನೆ ಆ ಭಕ್ತರು ವಿವರಿಸಿದ್ದು. ಆ ವಿವರಣೆ ಅಸತ್ಯವಲ್ಲ. ಆ ಸ್ಥಾನದಲ್ಲಿ, ದೇವಸ್ಥಾನದಲ್ಲಿ ಅಪ್ರಕೃತ, ಅಷ್ಟೆ. ಆ ವಿಗ್ರಹ ಮ್ಯೂಸಿಯಂ ರೀತಿಯ ವಸ್ತು ಸಂಗ್ರಹಶಾಲೆಯಲ್ಲಾಗಲಿ ಅಥವಾ ಕಲಾಪ್ರದರ್ಶನ ಮಂದಿರದಲ್ಲಾಗಲಿ ಇದ್ದಿದ್ದರೆ ಆ ವಿವರಣೆ ಪರಮಸತ್ಯವೂ ಆಗಬಹುದಿತ್ತು. ಏಕೆಂದರೆ ಅಲ್ಲಿ ಆ ವಿಗ್ರಹದ ಉದ್ದೇಶ ಮತ್ತು ಪ್ರಯೋಜನ ಅಷ್ಟರಲ್ಲಿಯೆ ಪರ್ಯವಸಾನವಾಗಿ, ಅಷ್ಟರಿಂದಲೆ ಪರಿಸಮಾಪ್ತಿಗೊಳ್ಳುತ್ತಿತ್ತು. ಆದರೆ ಇಲ್ಲಿ ಹಾಗಲ್ಲ. ಆ ವಿಗ್ರಹ ದೇವಸ್ಥಾನದಲ್ಲಿ ಪ್ರತಿಷ್ಠಿತವಾದಂದಿನಿಂದ ಅದರ ಉದ್ದೇಶ ಬೇರೆ, ಪ್ರಯೋಜನ ಬೇರೆ. ಅದು, ಅಲ್ಲ, ಆಕೆ ಚಿನ್ಮಯೀಭಗವತಿ ಪುಜೆ ಸಲ್ಲುವುದೂ ಕಲ್ಲಿನ ವಿಗ್ರಹಕಲ್ಲ; ಚಿನ್ಮಯೀಭಗವತಿಗೆ. ಭಕ್ತನು ಕಾಣಬೇಕಾದುದೂ ಕಲ್ಲಿನ ಪ್ರತಿಮೆಯನ್ನಲ್ಲ, ಚಿನ್ಮಯೀ ಮಾತೆಯನ್ನು. ಎಲ್ಲರಿಗೂ ಹಾಗೆ ಕಾಣದಿರಬಹುದು. ಕಾಣಿಸದಿದ್ದಮಾತ್ರಕ್ಕೆ ಅವರು ಕಂಡದ್ದೇ, ಎಂದರೆ ಇಲ್ಲಿ ಕಲ್ಲಿನ ಪ್ರತಿಮೆಯೇ ಪರಮ ಸತ್ಯವಾಗುವುದಿಲ್ಲ. ಚಿನ್ಮಯೀಭಗವತಿಯನ್ನು ಕಾಣುವವರೆಗೂ ಬೆಳೆಯಬೇಕಾದ್ದು ಭಕ್ತನ ಕರ್ತವ್ಯ. ಕಲ್ಲಿನಲ್ಲಿ ಚಿನ್ಮಯೀಭಗವತಿಯನ್ನು ಕಾಣುವುದು ಎಂಬರ್ಥದಲ್ಲಿ ಅಲ್ಲ. ಕಲ್ಲು ಕಾಣಲೇಬಾರದು. ಕಲ್ಲು ಕಾಣಿಸುವುದೇ ಇಲ್ಲ. ಚಿನ್ಮಯೀಭಗವತಿಯ ಹೊರತು ಇನ್ನೇನೂ ಇರುವುದೂ ಇಲ್ಲ, ಕಾಣಿಸುವುದೂ ಇಲ್ಲ. ಆ ಅನುಭೂತಿಯ ಸಿದ್ಧಿಯೆ ದೇವಸ್ಥಾನದಲ್ಲಿ ಭಗವತಿಯ ವಿಗ್ರಹವನ್ನು ಪ್ರತಿಷ್ಠಿಸಿದುದರ ಮುಖ್ಯೋದ್ದೇಶ. ಅದೇ ಪರಮ ಪ್ರಯೋಜನ. ಉಳಿದುದೆಲ್ಲ ಅನ್ಯ, ಅಪ್ರಕೃತ, ಅನರ್ಥ, ವ್ಯರ್ಥ.

ರಾಮಾಯಣದ ಮೂಲವಸ್ತುವಿನಲ್ಲಿ ಲೌಕಿಕವಾದ ಚರಿತ್ರೆ ಭೂಗೋಳಗಳೇನಾದರೂ ಇರಲಿ, ಭವತಾರಿಣಿಯ ವಿಗ್ರಹದ ಕಲ್ಲು ಅದಾವುದೊ ಬೆಟ್ಟದಲ್ಲಿ ಅದಾವುದೊ ಕೆರೆಯ ಪಕ್ಕದಲ್ಲಿ ಅದಾವುದೊ ಮರದ ಬುಡದಲ್ಲಿ ಸಿಕ್ಕಿದಂತೆ. ಆದರೆ ಸಹೃದಯರಾದ ನಮಗೆ ಅದೆಲ್ಲ ಸಂಪೂರ್ಣವಾಗಿ ಅಪ್ರಕೃತ. ಅನಾವಶ್ಯಕ; ರಸಾಸ್ವಾದನೆಯ ದೃಷ್ಟಿಯಿಂದಂತೂ ಅತ್ಯಂತ ತಿರಸ್ಕೃತ; ಮಾತ್ರವಲ್ಲ, ಶ್ರದ್ಧೆಯ ಏಕಾಗ್ರತೆಗೆ ಭಂಗ ತರುವುದರಿಂದ ಹಾನಿಕರ. ಏಕೆಂದರೆ ಲೋಕಧರ್ಮಿಯಾದ ಚರಿತ್ರೆಯ ಒರೆಗಲ್ಲಿಗೆ ಹಚ್ಚಿದರೆ ರಾಮಾಯಣದ ಮುಕ್ಕಾಲುಪಾಲು ಕಥೆ ಮಕ್ಕಳ ಮನೋರಂಜನೆಯ ಕಟ್ಟುಕಥೆಯಾಗುತ್ತದೆ ಮಾಡಲು ಕೆಲಸವಿರುವ ಬೆಳೆದ ಮನಸ್ಸಿನ ಗೌರವಕ್ಕೂ ಆಸಕ್ತಿಗೂ ಪಾತ್ರವಾಗಲು ಅನರ್ಹವಾಗಲೂ ಬಹುದು. ಪುತ್ರಕಾಮೇಷ್ಟಿಯಲ್ಲಿ ಅಗ್ನಿಪುರುಷನು ಮೈದೋರಿದುದಾಗಲಿ, ದಿವ್ಯಪಾಯಸಸೇವನೆಯಿಂದ ಕೌಸಲ್ಯಾದಿ ಸತಿಯರು ಗರ್ಭಧಾರಣೆ ಮಾಡಿದುದಾಗಲಿ, ಸೀತೆ ಅಯೋನಿಜೆಯಾದ ಭೂಮಿಸಂಭವಯೆಂಬುದಾಗಲಿ,

ವಿರಾಧಾದಿ ರಾಕ್ಷಸರ ಚಿತ್ರವಾಗಲಿ, ಕಪಿಗಳೂ ಹದ್ದುಗಳೂ ಕರಡಿಗಳೂ ಮಾತನಾಡಿ ಮನುಷ್ಯರಂತೆ ವ್ಯವಹರಿಸಿದುವು ಎಂಬುದಾಗಲಿ, ಕೋತಿಯೊಂದು ಆಕಾಶಕ್ಕೆ ಬೆಳೆದು ಸಮುದ್ರವನ್ನು ನೆಗೆಯಿತು ಎಂಬುದಾಗಲಿ, ಹತ್ತು ತಲೆಯ ರಕ್ಕಸನಿದ್ದನೆಂಬುದಾಗಲಿ, ಒಂದಲ್ಲ ಎರಡಲ್ಲ ಇಂತಹ ನೂರಾರು ಸಂಗತಿಗಳು ಬರಿಯ ಕಲ್ಪನಾವಿನೋದದ ಸ್ವಾರಸ್ಯ ಸೃಷ್ಟಿಗಳಾಗುತ್ತವೆಯೆ ಹೊರತು ನಮ್ಮ ಗಂಭೀರಪ್ರಜ್ಞೆಗೆ ಧ್ಯಾನವಿಷಯಗಳಾಗುವಷ್ಟು ಗೌರವಾಸ್ಪದವಾಗಲಾರವು ನಮ್ಮ ಹೃತ್ಪೂರ್ವಕವಾದ ಪೂಜೆಗಂತೂ ಬಹು ದೂರವಾಗಿಯೆ ಉಳಿಯುತ್ತವೆ. ಆದ್ದರಿಂದ ನಾವು ವಾಲ್ಮೀಕಿಯ ಶ್ರೀಮದ್ರಾಮಾಯಣವನ್ನೂ ಲೌಕಿಕವಾದ ಪ್ರತಿಕೃತಿಯ ದೃಷ್ಟಿಯಿಂದ ನೋಡುವ ವಿಚಿಕಿತ್ಸೆಗೆ ಹೋಗದೆ 'ದರ್ಶನ ಧ್ವನಿ'ಯ ಪ್ರತಿಮಾದೃಷ್ಟಿಯಿಂದ ಮಾತ್ರ ನೋಡಬೇಕಾಗುತ್ತದೆ.**[4]**

ನಮ್ಮ ದೇಶಕ್ಕೆ ರಾಜಕೀಯರೂಪವಾದ ಸ್ವಾತಂತ್ರ್ಯಸಿದ್ಧಿಯಾದ ಈ ಸಂಧಿ ಸಮಯದಲ್ಲಿ, ಎಲ್ಲ ವಲಯಗಳಲ್ಲಿಯೂ ಜನರ ಸತ್ಯ ಸೌಜನ್ಯ ನಿಷ್ಠಾಭಕ್ತಿಗಳು ಶಿಥಿಲವಾಗುತ್ತಿವೆ ಎಂಬ ಶಂಕೆಗೆ ಆಸ್ಪದವಾಗುತ್ತಿರುವಲ್ಲಿ, ದೇವರು ಸತ್ಯ ಧರ್ಮ ಆತ್ಮ ಕರ್ಮ ಜನ್ಮಾಂತರ ಪುಣ್ಯ ಮೊದಲಾದ ತತ್ತ್ವ ಮತ್ತು ಪುರುಷಾರ್ಥಗಳಲ್ಲಿ ನಂಬುಗೆಯೂ ಭರವಸೆಯೂ ಕುಗ್ಗುತ್ತಿರುವ ಈ ದುರಂತ ಸನ್ನಿವೇಶದಲ್ಲಿ, ಸ್ವಪ್ರತಿಷ್ಠೆ ಸ್ವಾರ್ಥಗಳೇ ತಮ್ಮ ಸರ್ವಸ್ವವೋ ಎಂಬಂತೆ ಮುಂದಾಳುಗಳಾಗಿರುವ ಶ್ರೇಷ್ಠರೆಂಬುವರು ಕೂಡ ವರ್ತಿಸುತ್ತಿರುವ ಈ ದುರ್ಮೂಹೂರ್ತದಲ್ಲಿ ರಾಮಾಯಣದ ದಿವ್ಯಹಸ್ತ ನಮ್ಮನ್ನು ನಿಜವಾಗಿಯೂ ಮೇಲೆತ್ತಬಲ್ಲುದು; ಅದರ ಅಮರಸಂಗೀತ ನಮ್ಮ ಶುಷ್ಕಜೀವನದಲ್ಲಿ ಅಮೃತರಸ ಸಂಚಾರವಾಗುವಂತೆ ಮಾಡಬಲ್ಲುದು; ಶಾಪಗ್ರಸ್ತವಾದ ನಮ್ಮ ಹೃದಯದ ಅಹಲ್ಯೆಯನ್ನು ತನ್ನ ಪಾವನ ಪಾದಸ್ಪರ್ಶನದಿಂದ ಉದ್ಧಾರಮಾಡಬಲ್ಲುದು; ನಮ್ಮ ಸ್ವಾರ್ಥದ ದುಷ್ಟವಿರಾಧನನ್ನು ಸಂಹರಿಸಿ ಅವನಿಂದಲೆ ನಮಗೆ ದಾರಿತೋರುವ ಪರಾರ್ಥತೆಯ ಬೃಂದಾರಕನನ್ನು ಮೂಡಿಸಬಲ್ಲುದು; ನಮ್ಮಲ್ಲಿ ಹುದುಗಿರುವ ಆಂಜನೇಯ ಶಕ್ತಿಯನ್ನು ಎಚ್ಚರಿಸಿ, ಉಬ್ಬಿಸಿ, ಸಾಗರೋಲ್ಲಂಘನದ ಸಾಹಸಕ್ಕೆ ಅದನ್ನು ಪ್ರಚೋದಿಸಿ, ಹತ್ತಲ್ಲ ಸಾವಿರ ತಲೆಯ ನಮ್ಮ ಅವಿದ್ಯಾಹಂಕಾರ ರಾವಣನ್ನು ಕತ್ತರಿಸಿ, ಸೆರೆಸಿಕ್ಕಿ ತತ್ತರಿಸುತ್ತಿರುವ ನಮ್ಮ ಜೀವನದೇವತಾ ಸೀತೆ ತನ್ನ ಶ್ರೀರಾಮನನ್ನು ಮತ್ತೆ ಸೇರುವಂತೆ ಬದುಕನ್ನು ಆಸುರೀಶಕ್ತಿಗಳಿಂದ ಬಿಡಿಸಿ ದೈವೀಶಕ್ತಿಗಳ ಕಡೆಗೆ ಕೊಂಡೊಯ್ಯಬಲ್ಲುದು. ಕೊನೆಯದಾಗಿ ವ್ಯಕ್ತಿ ವ್ಯಕ್ತಿಯಲ್ಲಿಯೂ ಶ್ರೀರಾಮ ಪಟ್ಟಾಭಿಷೇಕವಾಗುವಂತೆ ಮಾಡಿ, ಸದ್ಯಕ್ಕೆ ನಿತ್ಯಸ್ಥಿತಿಯಲ್ಲಿ ಅತೀತವಾಗಿರುವ ರಾಮರಾಜ್ಯವು ಕ್ರಮ ಕ್ರಮೇಣ ಈ ಲೀಲಾಲೋಕಕ್ಕೂ ಅವತರಿಸಿ ಇಲ್ಲಿಯ ಉಪಾಧಿಗಳಲ್ಲಿಯೆ ಅ ಋತುಶಕ್ತಿ ನಿರುಪಾಧಿಕವಾಗಿ ಆವಿರ್ಭವಿಸಿ, ಮರ್ತ್ಯವನ್ನೆ ಅಮರ್ತ್ಯವನ್ನಾಗಿಯೂ ಭೂಮಿಯನ್ನೆ ವೈಕುಂಠವನ್ನಾಗಿಯೂ ಪರಿವರ್ತಿಸುವ ದೇವತಾ ಕಾರ್ಯದಲ್ಲಿ ದಿವ್ಯಶಿಲ್ಪಿಯಾಗಬಲ್ಲುದು.**[5]**

ಹಿಂದೆ ಊಹೆಗೂ ವಿಸ್ತಾರವಾದಂತಿದ್ದ ಭೂಮಂಡಲವು ವೈಜ್ಞಾನಿಕವಾದ ಪ್ರಗತಿಯಿಂದ ಇಂದು ಮುದುರಿ ಕುಗ್ಗಿ ಕಿರಿದಾಗಿದೆ. ಪ್ರಪಂಚ ನಿಜವಾಗಿಯೂ ಒಂದು ಎಂಬುದು ಹೆಚ್ಚು ಹೆಚ್ಚು ಅನುಭವಕ್ಕೆ ಬರುತ್ತಿದೆ. ವಿಮಾನ ರೇಡಿಯೋ ಪತ್ರಿಕೆ ಸಿನಿಮಾ ಮೊದಲಾದ ವೇಗಯಂತ್ರಗಳೂ ಸಲಕರಣೆಗಳೂ ಲೋಕದ ಸುದ್ದಿಯನ್ನೆಲ್ಲ ದಿನಬೆಳಗಾದರೆ ನಮ್ಮ ಮನೆಯ ಬಾಗಿಲಿಗೆ ತಂದು ಹಾಕುತ್ತವೆ. ಜಗತ್ತಿನ ತಾಪತ್ರಯವೆಲ್ಲ ನಮ್ಮ ಸ್ವಂತ ತಾಪತ್ರಯವಾಗತೊಡಗಿದೆ. ಹಿಂದೆ ಒಂದು ಮನೆಯಲ್ಲಿಯೊ, ಒಂದು ಹಳ್ಳಿಯಲ್ಲಿಯೊ, ಒಂದು

ಹೋಬಳಿಯಲ್ಲಿಯೊ, ಹೆಚ್ಚು ಎಂದರೆ ಒಂದು ಸಂಸ್ಥಾನದಲ್ಲಿಯೊ ಸುಳಿದು ಸುತ್ತಿ ತೃಪ್ತಿಪಟ್ಟುಕೊಳ್ಳುತ್ತಿದ್ದ ನಮ್ಮ ಕುತೂಹಲ ಇಂದು ದೇಶವಿದೇಶಗಳಲ್ಲಿ ಖಂಡಖಂಡಗಳಲ್ಲಿ ಕಡಲಾಚೆಯ ಬಹುದೂರದ ಭೂಭಾಗಗಳಲ್ಲಿ ಬಹು ಸುಲಭವಾಗಿ ನಿರಪಾಯವಾಗಿ ಸುಳಿದು ಸುತ್ತಿದರೂ ಸಂತೃಪ್ತಿ ಹೊಂದಲಾರದಷ್ಟು ಕೆರಳಿ ನಿಂತಿದೆ. ಹಿಂದೆ ನಮ್ಮ ಮನಃಶಕ್ತಿ ಒಂದೊ ಎರಡೊ ಮೂರೊ ವಿಷಯಗಳಲ್ಲಿ ನಿಂತು ಅವುಗಳಲ್ಲಿಯೆ ಆಳವಾಗಿ ಪ್ರವೇಶಿಸುತ್ತಿತ್ತು. ಈಗಲಾದರೊ ತಿಳಿಯಬೇಕಾದ ವಿಷಯಗಳ ಸಂಖ್ಯೆಗೆ ಪರಿಮಿತಿಯೆ ಇಲ್ಲ ಎಂಬಂತೆ ತೋರುತ್ತಿದೆ. ಪರಿಣಾಮವಾಗಿ ಯಾವ ವಿಷಯದಲ್ಲಿಯೂ ಆಳವಾಗಿ ಪ್ರವೇಶಿಸಲು ಸಮಯವಾಗಲಿ ಶಕ್ತಿಯಾಗಲಿ ಆಸಕ್ತಿಯಾಗಲಿ ಬಹುಜನರ ಪಾಲಿಗೆ ಇಲ್ಲದಂತಾಗಿದೆ, ನಶಿಸಿಹೋಗಿದೆ. ನಮ್ಮ ಆಸಕ್ತಿ ಶಾಖೋಪಶಾಖೆಗಳಾಗಿ ಕವಲೊಡೆದು ಬರಲುಬರಲಾಗಿ ನಿಂತಿದೆ. ಯಾವ ಕೊಂಬೆಗೂ ಬಲ್ಪಿಲ್ಲ. ತೊಲೆಯಾಗುವ ತೋರವಿಲ್ಲ; ಕಂಭವಾಗುವ ಭಾರವಿಲ್ಲ; ಹೊರೆಹೊರುವ ಚೈತನ್ಯವಿಲ್ಲ. ಇನ್ನು ಪೊರಕೆಯಾಗಲು ಮಾತ್ರ ಅರ್ಹವಾಗಿರುವ ಆ ಬರಲು ಕಡ್ಡಿಗಳಿಂದ ಬದುಕಿಗೆ ಉಪಯೋಗವಾಗುವಂತೆ ನಾಲ್ಕಾರು ಕಾಲ ಬಾಳುವ ಮನೆಯನ್ನಾಗಲಿ ಗುಡಿಯನ್ನಾಗಲಿ ಕಟ್ಟುವುದೆಂತು? ಆ ಬಡಕಲು ಆಸಕ್ತಿಗೂ ತನ್ನ ಸುತ್ತಮುತ್ತಣದರಲ್ಲಿ ತಾತ್ಸಾರ, ತಿರಸ್ಕಾರ. ವೇಗಸೌಕರ್ಯ ದೊರಕಿರುವುದರಿಂದ ಅದು ಆರ್ಜೆಂಟೈನ ಭೂಕಂಪದ ವಿಚಾರದಲ್ಲಿ ಅನುಕಂಪ ತಾಳುವ ಹೊರೆಹೊಣೆಯಿಲ್ಲದ ಕರುಣರಸಾನುಭವದ ಸೊಗಸಿಗೆ ಶರಣಾಗಲು ಇಷ್ಟ ಪಡುತ್ತದೆಯೆ ಹೊರತು ಪತ್ರಿಕೆಗಳಿಗೆ ವಿಷಯವಾಗದ ಅನಾಮಧೇಯರಾದ ನೆರೆಹೊರೆಯವರ ಹತ್ತಿರದವರ ಕಷ್ಟಸಂಕಟಗಳನ್ನು ಅಲಕ್ಷಿಸುತ್ತದೆ. ಮನೆಯ ಹಿಂಭಾಗದ ಗಿರಿನೆತ್ತಿಯಿಂದ ಸುರ್ಯೋದಯವನ್ನು ಈಕ್ಷಿಸಲಾರದ ಅದು ಯಾವುದೊ ನೂರಾರು ಮೈಲಿ ದೂರವಿರುವ ಬೆಟ್ಟದಮೇಲಿಂದ ಸೂರ್ಯಾಸ್ತ ನೋಡಲು ಕೃತಕ ರಸಾವೇಶದಿಂದ ಧಾವಿಸುತ್ತದೆ: ಕಾರಣ-ಮೋಟಾರು ಕಾರಿದೆ, ಪೆಟ್ರೋಲಿದೆ! ಸಾಮಾನ್ಯದಲ್ಲಿ ಸಮೀಪದಲ್ಲಿ ಪರಿಚಿತವಾದುದರಲ್ಲಿ ದೈನಂದಿನ ಜೀವನದ ದೃಶ್ಯ ಘಟನೆ ವ್ಯಕ್ತಿ ವ್ಯಾಪಾರಗಳಲ್ಲಿ ನಮ್ಮ ಆಸಕ್ತಿಗೆ ಅರುಚಿಯಾಗಿದೆ. ಇದನ್ನೆಲ್ಲ ಗಮನಿಸಿದರೆ ನಮಗೇನೋ ಒಂದು ಅತೃಪ್ತಿಯ ಅಸ್ವಸ್ಥತೆಯ ಅಶಾಂತಿಯ ಸಾಂಕ್ರಾಮಿಕ ರುಜಿ ತಗುಲಿರುವಂತೆ ಭಾಸವಾಗುತ್ತದೆ.

ಭ್ರಮಾಶೀಲವಾಗಿ ಪರಿಭ್ರಮಿಸುತ್ತಿರುವ ಇಂತಹ ನಮ್ಮ ಚಿತ್ತಕ್ಕೆ ಒಂದು ಸ್ಥೈರ್ಯ, ಒಂದು ಶಮ, ಒಂದು ತುಷ್ಟಿ, ಒಂದು ಪ್ರಸನ್ನತೆ, ಮತಿಗೌರವ, ಆತ್ಮ ಪ್ರತ್ಯಯ ಇವುಗಳನ್ನು ಸಂಪಾದಿಸಬೇಕಾದರೆ ರಾಮಾಯಣದಂತಹ ಋಷಿ ಕೃತಿಗಳನ್ನು ನಾವು ಆಶ್ರಯಿಸಬೇಕಾಗುತ್ತದೆ. ಋಷಿದರ್ಶನ ನಮ್ಮ ಚೈತನ್ಯವನ್ನು ದೀಪ್ತಗೊಳಿಸುತ್ತದೆ; ಬರಿಯ ದೂರವಾದುದಕ್ಕೆ ಬೆಪ್ಪು ಬೆಪ್ಪಾಗಿ ಮಾರುಹೋಗಿ ಬೆರಗಾಗುವ ಲಘುಚೇತನಕ್ಕೆ ತನ್ನ ದಿವ್ಯ ಗುರುತ್ವವನ್ನು ಅನುಗ್ರಹಿಸುತ್ತದೆ. ಬರಿಯ ರಾಜಕೀಯವಾದ ಪ್ರಖ್ಯಾತಿಯಾಗಲಿ ವೈಭವಕ್ಕಾಗಲಿ ದೀನ ವೃತ್ತಿಯಿಂದ ಸಾಷ್ಟಾಂಗ ನಮಸ್ಕಾರಮಾಡುವ ಗ್ರಾಮೀಣತೆಯಿಂದ ನಮ್ಮನ್ನು ಪಾರುಮಾಡುತ್ತದೆ. ನಮ್ಮ ಆಸಕ್ತಿಯನ್ನು ಸರ್ವತೋಮುಖವನ್ನಾಗಿಯೂ ವಿಶ್ವವ್ಯಾಪಕವನ್ನಾಗಿಯೂ ಮಾಡಿದರೂ ಅಸ್ಥಿರತೆಗೂ ಅನಾವಶ್ಯಕವಾದ ಅಲಸ ಕುತೂಹಲಕ್ಕೂ ಅವಕಾಶವೀಯುವುದಿಲ್ಲ. ಅದನ್ನು ಔಚಿತ್ಯದ ಅಂಕೆಯಲ್ಲಿಟ್ಟು ಆತ್ಮೋದ್ಧಾರಕ್ಕೆ ಆತ್ಮವಿಕಾಸಕ್ಕೆ ಆತ್ಮಸಾಕ್ಷಾತ್ಕಾರಕ್ಕೆ ಆತಂಕ ಒದಗದ ರೀತಿಯಲ್ಲಿ ನಮ್ಮನ್ನು ಮುನ್ನಡೆಯಿಸುತ್ತದೆ. ನಿಃಶ್ರೇಯಸಕರವಾದ ಆತ್ಮಶ್ರೀಗೆ ಮೊದಲನೆಯ ಸ್ಥಾನವನ್ನೂ, ರಸಪೂರ್ಣವಾದ ಸಂಸ್ಕೃತಿಗೆ ಎರಡನೆಯ ಸ್ಥಾನವನ್ನೂ, ಅಭ್ಯುದಯಕರವಾದ ಸಾಮಾಜಿಕ

ನಾಗರಿಕತೆಗೆ ಮೂರನೆಯ ಸ್ಥಾನವನ್ನೂ, ಇವು ಮೂರಕ್ಕೂ ಆಧಾರವೂ ನಿವಾಸವೂ ಆಗಿ ಅತ್ಯಂತ ಆವಶ್ಯಕವಾದರೂ ಭಿತ್ತಿಸದೃಶ ಮತ್ತು ಸಾಧನರೂಪಮಾತ್ರವಾಗಿರುವ ರಾಜಕೀಯಕ್ಕೆ ಕೊನೆಯ ನಾಲ್ಕನೆಯ ಸ್ಥಾನವನ್ನೂ ನಿರ್ಣಯಿಸುವ ಪೂರ್ಣದೃಷ್ಟಿಯನ್ನೂ ಅನುಗ್ರಹಿಸಿ, ನಮ್ಮನ್ನು ಪೂರ್ಣಸಿದ್ಧಿಯ ಕಡೆಗೆ ತಪ್ಪದೆ ಕರೆದೊಯ್ಯುತ್ತದೆ.**[6]**

ಮೇಲೆ ವರ್ಣಿಸಿದ ಧ್ಯೇಯಸಾಧನೆಯೆ ಎಲ್ಲ ವಿದ್ಯೆಯ ಚರಮೋದ್ದೇಶ. ಅಕ್ಷರ ಪ್ರಚಾರ ಮತ್ತು ವಯಸ್ಕರ ಶಿಕ್ಷಣಗಳೂ ಅದಕ್ಕಾಗಿಯೇ ಸರ್ವಾದರಣೀಯ. ಉಳಿದ ಉಪಯೋಗಗಳೆಲ್ಲ ಸವು ಎಷ್ಟೇ ಆವಶ್ಯಕವಾಗಿರಲಿ ಎಷ್ಟೇ ಅನಿವಾರ್ಯವಾಗಿರಲಿ ಗೌಣ, ಎರಡನೆಯ ಸ್ಥಾನಕ್ಕೆ ಸೇರುತ್ತದೆ. ಬಂದ ನೋಟೀಸನ್ನು ಓದುವುದಾಗಲಿ, ಪತ್ರಿಕೆ ನೋಡುವುದಾಗಲಿ, ಅರ್ಜಿ ಬರೆಯುವುದಾಗಲಿ ಅಥವಾ ಇನ್ನಾವ ವ್ಯಾವಹಾರಿಕವಾದ ಉಪಯೋಗವಾಗಲಿ ಮೊದಮೊದಲ ಪ್ರಯೋಜನವಾಗಬಹುದೆ ಹೊರತು ಮುಖ್ಯ ಪ್ರಯೋಜನವಾಗಲಾರದು. ಮುಖ್ಯಪ್ರಯೋಜನ ಹೃದಯವಿಕಾಸಕ್ಕೆ ಸಂಬಂಧಪಟ್ಟುದು, ಅಂತಃ ಸಂಸ್ಕೃತಿಗೆ ಸೇರಿದುದು: ವಿನಯಕ್ಕೆ ಸೌಜನ್ಯಕ್ಕೆ ಶುಚಿಗೆ ಕರುಣೆಗೆ ಭಕ್ತಿಗೆ ನಿಷ್ಠೆಗೆ ಸತ್ಯಕ್ಕೆ ಧರ್ಮಕ್ಕೆ ಆತ್ಮಕಲ್ಯಾಣಕ್ಕೆ. ಅಂತಹ ಪ್ರಜ್ಞೆಯ ಪರಿಪಕ್ವತೆಗೆ, ಅಂತಹ ಕೃತಕೃತ್ಯತೆಯ ದಿವ್ಯಸ್ಥಿತಿಗೆ, ಅಂತಹ ಸಂಪೂರ್ಣ ವ್ಯಕ್ತಿತ್ವದ ಪೂರ್ಣ ಸರ್ವೋದಯಕ್ಕೆ ನಮ್ಮೆಲ್ಲರನ್ನೂ ಏರಿಸಲಿ ಈ ಜನಪ್ರಿಯ ವಾಲ್ಮೀಕಿ ರಾಮಾಯಣ. ಎಲ್ಲ ಕನ್ನಡಿಗರೂ ಅಕ್ಷರಜ್ಞರಾಗಿ ಸುಶಿಕ್ಷಿತರಾಗಿ, ಕರ್ಣಾಟಕದ ಮೊದಲ ಚಕ್ರವರ್ತಿಸಾಹಿತಿ ನೃಪತುಂಗನು ಸಾವಿರ ವರ್ಷಗಳ ಹಿಂದೆ ಅಂದಿನವರನ್ನು ಕುರಿತು ಹಾಡಿದುದು ಇಂದಿನವರಿಗೂ ಅನ್ವಯಿಸುವಂತಾಗಲಿ:

"ಪದನ್ ಅಱಿದು ನುಡಿಯಲುಂ, ನುಡಿದುದನ್‌ಅರಿದು ಆರಯಲುಂ ಆರ್ಪರ್ ಆ ನಾಡವರ್ಗಳ್. ಚದುರರ್ ನಿಜದಿಂ. ಕುರಿತೋದದೆಯುಂ ಕಾವ್ಯ ಪ್ರಯೋಗಪರಿಣಿತ ಮತಿಗಳ್. ಕುರಿತವರಲ್ಲದೆ ಮತ್ತಂ ಪೆರರುಂ ತಂತಮ್ಮ ನುಡಿಯೊಳ್ ಎಲ್ಲರ್ ಜಾಣರ್. ಕಿರುವಕ್ಕಳುಂ ಆ ಮೂಗರುಂ ಅರಿಪಲ್ಕರಿವರ್ ವಿವೇಕಮಂ ಮಾತುಗಳಂ."

ಆ ಕನ್ನಡ ನಾಡಿನವರು ಪದವನ್ನು ಅರಿತು 'ಹದವರಿತು' ನುಡಿಯಲೂ, ನುಡಿದುದನ್ನು ಅರಿತು ವಿಚಾರಮಾಡಲೂ ಸಮರ್ಥರು. ಹುಟ್ಟಿನಿಂದಲೆ ಬುದ್ಧಿವಂತರು. ಶಾಸ್ತ್ರೀಯವಾಗಿ ಪಂಡಿತಪ್ರವೀಣರಂತೆ ಸಾಹಿತ್ಯಾಭ್ಯಾಸ ಮಾಡದಿದ್ದರೂ ಅವರ ಹೃದಯ ಉತ್ತಮವಾದ ಕಾವ್ಯಗಳನ್ನು ಓದಿ ರಸಾಸ್ವಾದನೆ ಮಾಡಬಲ್ಲುದಾಗಿತ್ತು. ಶಾಸ್ತ್ರಜ್ಞರಾದ ವಿದ್ವಾಂಸರ ಮಾತಂತಿರಲಿ, ಉಳಿದ ಸಾಮಾನ್ಯರನ್ನು ಪರಿಗಣಿಸಿದರೂ ಸ್ವಭಾಷಾಜ್ಞಾನದಲ್ಲಿ ಜಾಣರಲ್ಲದವರು ಯಾರೊಬ್ಬರೂ ಇಲ್ಲ. ಕಿರಿಮಕ್ಕಳೂ, ಕಡೆಗೆ ಮೂಗರು ಕೂಡ, ವಿವೇಕದ ಮಾತುಗಳನ್ನು ಬೋಧಿಸಬಲ್ಲವರು.-ಅಃ! ನೃಪತುಂಗನ ಈ ವರ್ಣನೆಗೆ ಕನ್ನಡಮ್ಮನ ಮಕ್ಕಳು ಮತ್ತೊಮ್ಮೆ ಪಾತ್ರರಾಗುವ ಪುಣ್ಯಸಮಯ ಬಹು ಬೇಗನೆ ಸಮೀಪಿಸಲಿ! ಕನ್ನಡ ನುಡಿ ನಮ್ಮೆದೆಯ ನುಡಿಯಾಗಿ, ನಮ್ಮರಸುಮುಡಿಯಾಗಿ. ನಮ್ಮ ಬಾಳ್ನುಡಿಯಾಗಿ ಕನ್ನಡಿಗರ ಹೃದಯ ಭಿನ್ನಭಾವನೆಗಳನ್ನು ತೊರೆದು ಒಂದುಗೂಡಿ, ಕನ್ನಡನಾಡು ಒಂದಾಗಿ, ಕರ್ನಾಟಕಮಾತೆ ತನ್ನಮ್ಮ ಭರತಮಾತೆಗೆ ಸಂತೋಷದಿಂದ ಹೆಮ್ಮೆಯಿಂದ ಸೇವೆ ಸಲ್ಲಿಸುವ ಭಾಗ್ಯದ ಕಾಲ ಬೇಗನೆ ಬರುವಂತಾಗಲಿ.

“ಜೈ ಭಾರತಜನನಿಯ ತನುಜಾತೆ,
ಜಯ ಹೇ ಕರ್ಣಾಟಕಮಾತೆ!”

---

[1] ೨-೧೦-೧೯೫೦ರಲ್ಲಿ ‘ಜನಪ್ರಿಯ ವಾಲ್ಮೀಕಿ ರಾಮಾಯಣ’ದ ಉದ್ಘಾಟನೋತ್ಸವ ಸಂದರ್ಭದಲ್ಲಿ.

[2] ‘ಕುವೆಂಪು’ ಅವರ “ತಪೋನಂದನ” ಗ್ರಂಥದಲ್ಲಿ ‘ಪ್ರತಿಮಾ ಮತ್ತು ಪ್ರತಿಕೃತಿ’ ಎಂಬ ಪ್ರಬಂಧವನ್ನು ನೋಡಿ.

[3] ‘ಕುವೆಂಪು’ ಅವರ “ತಪೋನಂದನ” ಗ್ರಂಥದಲ್ಲಿಯ ‘ಋಷಿ ವಾಲ್ಮೀಕಿಯ ಕಾವ್ಯಜಾಹ್ನವಿ’ ಎಂಬ ಪ್ರಬಂಧವನ್ನು ನೋಡಿ.

[4] ‘ತಪೋನಂದನ’ದಲ್ಲಿರುವ ಹಿಂದೆ ಹೇಳಿದೆರಡು ಪ್ರಬಂಧಗಳ ಜೊತೆಗೆ ‘ಕಾವ್ಯ ವಿಮರ್ಶೆಯಲ್ಲಿ ಪೂರ್ಣದೃಷ್ಟಿ’ ಎಂಬ ಪ್ರಬಂಧವನ್ನೂ ನೋಡಿ.

[5] ಅದೆಂತಹ ಸೈನ್ಯವಾಗಲಿ ಅದೆಂತಹ ರಾಜಕಾರಣನೈಪುಣ್ಯವಾಗಲಿ ಹಿಂದೆಂದೂ ಸಾಧಿಸಿ ರಕ್ಷಿಸಲಾರದಿದ್ದ ಭರತವರ್ಷದ ಅಖಂಡತೆಯನ್ನೂ ಐಕ್ಯತೆಯನ್ನೂ ಶತಶತಮಾನಗಳಿಂದಲೂ ಸಾಧಿಸಿ ರಕ್ಷಿಸಿಕೊಂಡು ಬಂದಿರುವಂತೆಯೆ ಇಂದೂ ಮುಂದೂ ಸಾಧಿಸಿ ರಕ್ಷಿಸಿಕೊಂಡು ಬಂದಿರುವಂತೆಯೆ ಇಂದೂ ಮುಂದೂ ಸಾಧಿಸಿ ರಕ್ಷಿಸಿಕೊಂಡು ಬರುವುದರಲ್ಲಿ ಸಂದೇಹವಿಲ್ಲ. ಅಲೋಕ ಸಾಮಾನ್ಯವಾದ ಈ ಶ್ರೀರಾಮಾಯಣ ದಿವ್ಯಶಿಲ್ಪಿ.

[6] ಆ ದರ್ಶನವನ್ನು ಕಂಡುಂಡು ಬೆಳೆಯಬೇಕೆಂಬಾಶೆ ಬಲಿತವರು ಮಹಾಛಂದಸ್ಸಿನ ‘ಶ್ರಿ ರಾಮಾಯಣದರ್ಶನಂ’ ಎಂಬ ಮಹಾಕಾವ್ಯವನ್ನು ಓದಲಿ.

# ಪ್ರಖ್ಯಾತ ಪೌರಾಣಿಕ ಯುದ್ಧಗಳು

## ವಾಲಿ – ಸುಗ್ರೀವ

ಪುರಾಣಗಳನ್ನು ಒಂದು ಜನಾಂಗದ ಪ್ರಾಚೀನ ಲೋಕಚರಿತ್ರೆ ಎಂದು ವರ್ಣಿಸುವುದಕ್ಕಿಂತಲೂ ಒಂದು ಜನಾಂಗದ ಮನೋಲೋಕಚರಿತ್ರೆ ಎಂದು ವರ್ಣಿಸಿದರೆ ಅವು ಸತ್ಯತರವೂ ಅರ್ಥಪೂರ್ಣವೂ ಆಗಿ ಆದರಿಂದ ಬದುಕಿಗೆ ಹೆಚ್ಚು ಪ್ರಯೋಜನ ದೊರೆಯುವುದರಲ್ಲಿ ಸಂದೇಹವಿಲ್ಲ. ವಾಚ್ಯಾರ್ಥಮಾತ್ರ ನಿಷ್ಠವಾದ ಪ್ರತಿಕೃತಿಯ ದೃಷ್ಟಿಗೆ ಅಸಂಭವ ಅಸತ್ಯ ಎಂದು ತೋರುವ ಘಟನೆ ವ್ಯಂಗ್ಯಾರ್ಥನಿಷ್ಠವಾದ ದರ್ಶನಧ್ವನಿಗೆ ಪ್ರತಿಮಾವಿಧಾನದಿಂದ ರೂಪಧಾರಣೆ ಮಾಡಿದ ಮನೋಮಯ ಸತ್ಯವೆ ಆಗಿ ತೋರುತ್ತದೆ.

ಈ ಕಾರಣಕ್ಕಾಗಿಯೆ ಪೌರಾಣಿಕವಾದ ಕಥೆಯನ್ನೂ ವ್ಯಕ್ತಿಯನ್ನೂ ಘಟನೆಯನ್ನೂ ಲೌಕಿಕ ಕಾಲದೇಶದ ಚೌಕಟ್ಟಿನಲ್ಲಿ ಇಟ್ಟು ಐತಿಹಾಸಿಕವಾದ ವ್ಯಾಪಾರವನ್ನು ಪರಿಶೀಲಿಸುವಂತೆ ವಿಮರ್ಶೆಮಾಡದಿರುವುದು ಲೇಸು. ಹಾಗೇನಾದರೂ ಮಾಡಿದರೆ ಅನೇಕ ತೊಡಕುಗಳಿಗೆ ಸಿಕ್ಕಿಕೊಳ್ಳಬೇಕಾಗುತ್ತದೆ. ಅಂತಹ ಯಾವ ತೊಡಕನ್ನೂ ಲೌಕಿಕವಾದ ಚರಿತ್ರೆಯ ಮಟ್ಟದಲ್ಲಿ ಬಿಡಿಸಿ ಪರಿಹರಿಸಲು ಅಸಾಧ್ಯವಾಗುತ್ತದೆ.

ಉದಾಹರಣೆಗೆ ಪ್ರಖ್ಯಾತ ಪೌರಾಣಿಕ ಯುದ್ಧಗಳನ್ನು ತೆಗೆದುಕೊಳ್ಳೋಣ. ಆ ಯುದ್ಧಗಳನ್ನು ಚರಿತ್ರೆಯ ಪ್ರಸಿದ್ಧ ಯುದ್ಧಗಳಂತೆ ಪರಿಗಣಿಸಲು ಸಾಧ್ಯವೆ? ಆ ಪೌರಾಣಿಕ ಘಟನೆಗಳಲ್ಲಿ ಕೆಲವಕ್ಕಾದರೂ ಯಾವುದೋ ಒಂದು ರೀತಿಯ ಲೋಕಘಟನಾಧಾರವಿರಬಹುದೆಂದು ಊಹಿಸುವುದು ತಪ್ಪಲ್ಲ. ಆದರೆ ಪುರಾಣದಲ್ಲಿ ಅದು ಸಂಪೂರ್ಣವಾಗಿ ಪರಿವರ್ತಿತವಾಗಿ ಲೋಕದೂರವೂ 'ಲೋಕ ಸತ್ಯ' ದೂರವೂ ಆಗಿರುವುದರಿಂದ, ಆಧಾರವೋ ನಿಮಿತ್ತಮಾತ್ರವೋ ಆಗಿರಬಹುದಾದ ಆ ಘಟನೆ, ಅತ್ಯಂತ ಅಮುಖ್ಯವಾಗುತ್ತದೆ. ಅಂತಹ ಘಟನೆಗಳ ಚಾರಿತ್ರಕತೆಯನ್ನು ಅರಸಿ ಹುಡುಕುವ ಪ್ರಯತ್ನವನ್ನೇನೊ, ಅದು ಸಫಲವಾಗಲಿ ವಿಫಲವಾಗಲಿ, ಮಿಮರ್ಶಕನು ಮಾಡಬಹುದು. ಅಂತಹ ವಿಮರ್ಶೆ ಸಂಶೋಧನಾತ್ಮಕ ಎಂಬ ಗೌರವಕ್ಕೆ ಪಾತ್ರವಾಗುತ್ತದೆ. ಆದರಿಂದ ಬುದ್ಧಿಗೆ ವ್ಯಾಯಾಮವೂ ದೊರೆಕೊಳ್ಳಬಹುದು; ಆದರೆ ಹೃದಯಕ್ಕೆ ರಸಾನಂದ ದೊರೆಯಲಾರದು; ಅಲ್ಲದೆ ಬಿಸಿಲ್ಗುದುರೆಯ ಬೇಟೆಯೂ ಆಗಬಹುದು.

ಸಂಶೋಧನಾತ್ಮಕ ವಿಮರ್ಶದೃಷ್ಟಿಯನ್ನು ಬಿಟ್ಟು ವರ್ಣನಾತ್ಮಕ ವಿಮರ್ಶ ದೃಷ್ಟಿಯಿಂದ ಪರಿಶೀಲಿಸಿದರೆ ಹೆಚ್ಚಿನ ರಸಪ್ರಯೋಜನ ದೊರೆಯುವುದರಲ್ಲಿ ಸಂದೇಹವಿಲ್ಲ. ಆದರೆ ಇಲ್ಲಿ ಲೋಕಾಶ್ರಯವನ್ನು ತ್ಯಜಿಸಿದ ನಾವು ಕವಿಮನೋಲೋಕಾಶ್ರಯವನ್ನು ನೆಮ್ಮಿ ಮುಂಬರಿಯಬೇಕಾಗುತ್ತದೆ. ಏಕೆಂದರೆ ಪುರಾಣ ಕಥೆ ಚರಿತ್ರೆಯಲ್ಲಿ ಎಂದ ಮೇಲೆ ಅಲ್ಲಿ ಬರುವ ಯುದ್ಧವರ್ಣನೆ ಲೋಕನಿಷ್ಠವಾಗದೆ ಕವಿಪ್ರತಿಭಾನಿಷ್ಠವಾಗುತ್ತದೆ. ರಾಮರಾವಣರ ಯುದ್ಧ. ಕರ್ಣಾರ್ಜುನರ ಯುದ್ಧ, ಸ್ಕಂದತಾರಕರ ಯುದ್ಧ ಇತ್ಯಾದಿ ಯುದ್ಧಗಳನ್ನು ಅನೇಕ ಕವಿಗಳು ಬೇರೆಬೇರೆ ಕಾಲಗಳಲ್ಲಿ ಬೇರೆಬೇರೆ ದೇಶಗಳಲ್ಲಿ ಬೇರೆಬೇರೆ ಭಾಷೆಗಳಲ್ಲಿ ಅವರವರ ಪ್ರತಿಭೆ ವಿದ್ವತ್ತು ದರ್ಶನೋದ್ದೇಶಗಳಿಗನುಸಾರವಾಗಿ ಚಿತ್ರಿಸಿದ್ದಾರೆ, ಬಣ್ಣಿಸಿದ್ದಾರೆ; ತಮ್ಮತಮ್ಮ ಮನಕ್ಕೊಪ್ಪುವ ರೀತಿಯಲ್ಲಿ ಎನಿತೆನಿತೊ ಮಾರ್ಪಾಡುಗಳನ್ನೂ ಮಾಡಿಕೊಂಡಿದ್ದಾರೆ. ಹೀಗಿರುವಾಗ ಯಾವ ಕವಿಯ ಕಾವ್ಯವನ್ನು ನಮ್ಮ ವರ್ಣನಾತ್ಮಕ ವಿಮರ್ಶೆಗೆ ಆಧಾರವನ್ನಾಗಿ ಇಟ್ಟುಕೊಳ್ಳೋಣ? 'ಪಂಚರಾತ್ರ' ನಾಟಕದ ಕವಿ ಭಾರತಯುದ್ಧವೇ ನಡೆಯದಂತೆ ಎಗರಿಹೋಗುವ ಅವಕಾಶವನ್ನೆ ಕಲ್ಪಿಸಿದ್ದಾನೆ. ಜೈನರಾಮಾಯಣದ ಕವಿ ವಾಲ್ಮೀಕಿ ರಾಮಾಯಣದ ವ್ಯಕ್ತಿಗಳನ್ನೂ ಘಟನೆಗಳನ್ನೂ ಕೆಲವೊಮ್ಮೆ ನಾಮವಿನಾ ಗುರುತು ಸಿಕ್ಕದಂತೆ ಮಾರ್ಪಡಿಸುತ್ತಾನೆ. ಆದ್ದರಿಂದ ವರ್ಣನಾತ್ಮಕ ವಿಮರ್ಶೆಗಿರುವುದು ಒಂದೆ ದಾರಿ: ಬೇರೆಬೇರೆ ಕಾವ್ಯಗಳಲ್ಲಿ ಈ ಯುದ್ಧಗಳನ್ನು ಆಯಾ ಕವಿಗಳು ಹೇಗೆ ಚಿತ್ರಿಸಿದ್ದಾರೆ? ಒಂದಕ್ಕಿಂತ ಒಂದರ ಸೊಗಸೇನು? ಮೇಲ್ಮೆಯೇನು? ಇತ್ಯಾದಿ ಇತ್ಯಾದಿ.

ಆದರೆ ಮೂರನೆಯ ದಾರಿಯೂ ಒಂದಿದೆ: ಅದು ದರ್ಶನಾತ್ಮಕ ವಿಮರ್ಶೆಯ ದಾರಿ, ಅದು ಚಾರಿತ್ರಕವಾದ ಸಂಶೋಧನೆಗೂ ಹೊರಡುವುದಿಲ್ಲ; ಬೇರೆಬೇರೆ ಕವಿಗಳ ಬೇರೆಬೇರೆ ಕಾವ್ಯಗಳಲ್ಲಿ ಹೇಗೆಹೇಗೆ ಚಿತ್ರಿತವಾಗಿದೆ ಎಂಬ ವರ್ಣನೆಗೂ ಹೊರಡುವುದಿಲ್ಲ.

ದರ್ಶನಧ್ವನಿಯಿರುವ ಪ್ರತಿಮಾವಿಧಾನದ ಅತ್ಯುತ್ತಮ ಕವಿಕೃತಿಯನ್ನು ಆರಿಸಿಕೊಂಡು ಕಾವ್ಯಘಟನೆಯ ಹೃದಯದಲ್ಲಿ ಸ್ಪಂದಿಸುವ ನಿತ್ಯರಸಸತ್ಯವು ಸಹೃದಯ ಹೃದಯ ಸಂವೇದ್ಯವಾಗುವಂತೆ ದರ್ಶನಾತ್ಮಕ ವಿಮರ್ಶೆಗೆ ಹೊರಡುತ್ತದೆ.

ಹಾಗೆ ಹೊರಡುವುದಾದರೆ ವಾಲಿಸುಗ್ರೀವರ ಯುದ್ಧವನ್ನು- (ಯುದ್ಧ ಎನ್ನುವುದಕ್ಕಿಂತಲೂ ಕಾಳಗ ಎನ್ನುವುದು ಮೇಲು. ಏಕೆಂದರೆ ಯುದ್ಧ ಬಹು ವಿಸ್ತಾರವಾದ ದೊಡ್ಡ ಘಟನಾಪರಂಪರೆಯಾದರೆ, ಕಾಳಗ ಅದರ ಒಂದು ಸಣ್ಣ ಅಂಗ.)-ವಾಲಿಸುಗ್ರೀವರ ಕಾಳಗವನ್ನು ಯಾವ ದೃಷ್ಟಿಯಿಂದ ಪರಿಶೀಲಿಸಬಹುದು? ಅದಕ್ಕೇನು ಅರ್ಥಕೊಡಬಹುದು? ಯಾವ ಕವಿಯ ಯಾವ ಕಾವ್ಯವನ್ನು ನಾವು ನಿದರ್ಶನವಾಗಿ ಅತ್ಯಂತ ಮುಖ್ಯವಾಗಿ ಸ್ವೀಕರಿಸಬಹುದು?

ವಾಲಿಸುಗ್ರೀವರ ಕಾಳಗವನ್ನು ಪರಿಶೀಲಿಸಲು ಹೊರಡುವ ವಿಮರ್ಶಕನಿಗೆ ಆದಿ ಕವಿಯ ಆದಿಕಾವ್ಯವೇ ಅತ್ಯಂತ ಆದಿಯ ಆಧಾರವಾಗಿ ನಿಲ್ಲಬೇಕಾಗುತ್ತದೆ, ಉಳಿದೆಲ್ಲಕ್ಕೂ ಮೂಲವಾಗಿ.

ವಾಲ್ಮೀಕಿ ರಾಮಾಯಣದಲ್ಲಿ ವಾಲಿಸುಗ್ರೀವರ ಕಾಳಗಕ್ಕೆ ಪ್ರಖ್ಯಾತಿ ದೊರೆತಿದ್ದ ಪಕ್ಷದಲ್ಲಿ ಅದು ಯುದ್ಧದೃಷ್ಟಿಯಿಂದಲ್ಲ. ವಾಸ್ತವವಾಗಿ ಅಲ್ಲಿ ಯುದ್ಧ ವರ್ಣನೆ ಅತ್ಯಲ್ಪ ಮತ್ತು ಅತ್ಯಂತ ಅಮುಖ್ಯ. ಯುದ್ಧಕಾಂಡದಲ್ಲಿ ಬರುವ ವರ್ಣನೆಗಳಿಗೆ ಹೋಲಿಸಿದರೆ ಏನೇನೂ ಇಲ್ಲ. ಕೊನೆಗೆ ಘಟನಾ ದೃಷ್ಟಿಯಿಂದ ಅಷ್ಟೇನೂ ಪ್ರಮುಖವಲ್ಲದ ಖರದೂಷಣ ಸಂಹಾರಕಾಲದ ಯುದ್ಧವರ್ಣನೆ ಕೂಡ ವಾಲಿಸುಗ್ರೀವ ಯುದ್ಧವರ್ಣನೆಗಿಂತ ಎನಿತೊ ಪಾಲು ವಿವರವೂ ಆಗಿದೆ. ವಾಲಿಸುಗ್ರೀವರ ಕಾಳಗದಲ್ಲಿ ನಮ್ಮ ಆಸಕ್ತಿ ಕಾಳಗದಲ್ಲಿ ನಟ್ಟಿರುವುದಕ್ಕಿಂತಲೂ ವಿಶೇಷವಾಗಿ ವ್ಯಕ್ತಿಗಳಲ್ಲಿ ನಟ್ಟಿರುತ್ತದೆ. ಚೆನ್ನಾಗಿ ಬೆಳೆಸಿ ಕಾಳಗಕ್ಕಾಗಿಯೆ ಅಣಿಮಾಡಿದ ಎರಡು ಗೂಳಿಗಳಿಗೆ ಹಣಾಹಣಿಯಾಗುತ್ತಿದರೆ ನಮ್ಮ ಆಸಕ್ತಿ ಅವುಗಳ ಶಾರೀರಕ ಬಲಪ್ರದರ್ಶನದ ಮತ್ತು ಆ ಬಲದ ಯುಕ್ತಿ ವಿನ್ಯಾಸಗಳ ವೀರಲೀಲೆ ಇವುಗಳಲ್ಲಿ ಮಾತ್ರ ನಟ್ಟು ರಸಾಸ್ವಾದಿಯಾಗುತ್ತದೆ. ಆದರೆ ಇಲ್ಲಿ ನಾವು ವಾಲಿಸುಗ್ರೀವರ ದೈಹಿಕ ಬಲಪ್ರದರ್ಶನ ಚಾತುರ್ಯವನ್ನು ವೀಕ್ಷಿಸುವ ಪ್ರೇಕ್ಷಕರಾಗುವುದಿಲ್ಲ. ನಮ್ಮ ಕುತೂಹಲ ವಿಶೇಷವಾಗಿ ಸುಗ್ರೀವ ವಾಲಿ ರಾಮ ಇವರ ಮನೋವ್ಯಾಪಾರ ಮತ್ತು ಅದರಿಂದಾಗುವ ಪರಿಣಾಮಗಳ ಕಡೆಗೆ ಹೊರಳಿರುತ್ತವೆ. ಇಲ್ಲಿ ವೈರದ ನಡುವೆ ಅಣ್ಣತಮ್ಮಂದಿರ ಅಕ್ಕರೆ ಸಿಕ್ಕಿರುವುದನ್ನು ನಾವು ಮರೆಯುವುದಿಲ್ಲ. ಇಲ್ಲಿಯ ಗೆಲವು ಸೋಲುಗಳ ನಡುವೆ ಧರ್ಮಾಧರ್ಮದ ತಕ್ಕಡಿ ತೂಗುತ್ತಿರುವುದನ್ನು ಕಾಣುತ್ತಲೆ ಇರಬೇಕಾಗುತ್ತದೆ. ಇಲ್ಲಿಯ ಜಯೋತ್ಕರ್ಷದಲ್ಲಿಯೆ ಹೇಡಿತನಕ್ಕೂ ಕ್ಷಾತ್ರತೇಜಕ್ಕೂ ದ್ವಂದ್ವಯುದ್ಧ ನಡೆಯುತ್ತಿರುವುದನ್ನು ನಾವು ಅನುಭವಿಸಬೇಕಾಗುತ್ತದೆ. ಕಾಳಗದ ನಡುವೆಯೆ ಕಾಳಗಕ್ಕೆ ನೇರವಾಗಿ ಸಂಬಂಧವಿರದ ಸುಗ್ರೀವನ ವರ್ತನೆಯ ಕಡೆಗೂ ವಾಲಿಯ ಕಡೆಗೂ ರಾಮನ ವರ್ತನೆಯ ಕಡೆಗೂ ನಮ್ಮ ಮನಸ್ಸು ಓಲಾಡುತ್ತದೆ. ಇಲ್ಲಿಯ ಜಯಾಪಜಯ ಬರಿಯ ಜಯಕ್ಕಾಗಿಯಾಗಲಿ ಅಪಜಯಕ್ಕಾಗಿಯಾಗಲಿ ಮಾನ್ಯ ಅಥವಾ ಅವಮಾನ್ಯವಾಗುವುದಿಲ್ಲ. ನ್ಯಾಯಾನ್ಯಾಯಗಳು ನಡುವೆ ತಲೆಹಾಕಿ ತಕ್ಕಡಿಯ ಸಮತೆಯನ್ನು ತಲೆಕೆಳಗುಮಾಡಿ ನಮ್ಮ ಬುದ್ಧಿಗೆ ಗಡಿಬಿಡಿ ಉಂಟುಮಾಡದಿರುವುದಿಲ್ಲ.

ಸೀತಾಪಹರಣದ ಮಹಾದುಃಖದಿಂದ ಉನ್ಮತ್ತ ಪ್ರಾಯನಾಗಿದ್ದ ಶ್ರೀರಾಮಚಂದ್ರನು ಕಬಂಧನಿಂದಲೂ ಶಬರಿಯಿಂದಲೂ ಮುಂದೆ ತನಗೊದಗಲಿರುವ ನೆರವನ್ನು ತಿಳಿದು ಹಾರೈಸಿ ಋಷ್ಯಮೂಕದ ಬಳಿಯ ಪಂಪಾ ಸರೋವರದೆಡೆಗೆ ಬಂದಿದ್ದನು. ತನ್ನಂತೆಯೆ ಭಾರ್ಯಾಪಹರಣ ಕಾರಣದಿಂದಲೆ ಸಮದುಃಖಿಯಾಗಿದ್ದ ಸುಗ್ರೀವನ ಸಖ್ಯ ಆಂಜನೇಯನ ಮೂಲಕ ದೊರೆತೊಡನೆಯೆ ಅವನಿಗೊದಗಿದ ದುಃಖದ ಕತೆಯನ್ನು ಏಕಪಕ್ಷೀಯವಾಗಿ ಕೇಳಿ

"ವಾಲಿನಂ ತಂ ವಧಿಷ್ಯಾಮಿ ತವ ಭಾರ್ಯಾಪಹಾರಿಣಮ್"

ಎಂದು ಆಶ್ವಾಸನೆ ಕೊಟ್ಟುಬಿಡುತ್ತಾನೆ. ಆ ಸಂದರ್ಭದಲ್ಲಿಯೆ ಕವಿಯೂ

"ಸೀತಾ ಕಪೀಂದ್ರ ಕ್ಷಣದಾಚರಾಣಾಂ
ರಾಜೀವಹೇಮಜ್ವಲನೋಪಮಾನಿ
ಸುಗ್ರೀವ ರಾಮ ಪ್ರಣಯ ಪ್ರಸಂಗೇ
ವಾಮಾನಿ ನೇತ್ರಾಣಿ ಸಮಂ ಸ್ಫುರನ್ತಿ"

ಎಂದು ರಾಮನ ಪೂಣ್ಕೆಗೆ ವಿಧಿಯ ವಜ್ರಮುದ್ರೆಯನ್ನೊತ್ತುತ್ತಾನೆ. ತರುವಾಯವೆ ವಾಲಿಗೂ ಸುಗ್ರೀವನಿಗೂ ಒದಗಿದ ವೈರಕ್ಕೆ ಕಾರಣವಾದ ಕಥೆಯನ್ನೂ ಮುಂದೊದಗಿದ ವ್ಯಥೆಯನ್ನೂ ಅರಿತುಕೊಳ್ಳುತ್ತಾನೆ.

ತಮ್ಮನ್ನು ಬಿಲದ್ವಾರದಲ್ಲಿ ಕಾವಲಾಗಿರಿಸಿ, ಬಿಲಪ್ರವೇಶಮಾಡಿದ ರಕ್ಕಸನನ್ನು ಕೊಲಲೆಂದು ಬೆಂಬತ್ತಿ ಹೊಕ್ಕ ವಾಲಿ ಬಹಳಕಾಲ ಬರದಿರಲು, ಬಿಲದಿಂದುಕ್ಕಿದ ರಕ್ತಕ್ಕೆ ತನ್ನದೇ ಆದ ವ್ಯಾಖ್ಯಾನಮಾಡಿ, ಬಿಲದ ಬಾಯಿಗೆ ದೊಡ್ಡ ಬಂಡೆಯನ್ನು ಜಡಿದು ಮುಚ್ಚಿ ಹಿಂದಿರುವ ಸುಗ್ರೀವನು ಪದ್ಧತಿಯಂತೆ ಕಿಷ್ಕಂಧೆಗೆ ರಾಜನಾಗುತ್ತಾನೆ. ಸುಗ್ರೀವನ ಕಾರಣ ಎಷ್ಟೇ ಸಮರ್ಪಕವಾಗಿರಲಿ ಬಿಲದ ಬಾಯಿಗೆ ಹೆಬ್ಬಂಡೆಯನ್ನು ಇಡುಕಿ ಬಂದುದು ವಾಲಿಯ ಸಂಶಯಕ್ಕೂ ಕ್ರೋಧಕ್ಕೂ ಕಾರಣವಾದುದು ಸ್ವಾಭಾವಿಕವೆ. ವಾಲಿಯೇನೋ ದುಡುಕಿದನು. ಆದರೆ ಇಲ್ಲಿ ರಾಮನೂ ದುಡುಕಿದಂತೆ ತೋರುತ್ತದೆ. ಮುಂದೆ ನಿರ್ವಿವಾದವಾಗಿ ತನಗೆ ಅಪರಾಧವೆಸಗಿದ ರಾವಣವನ್ನೂ ಕೂಡ ತಿದ್ದಲೂ ಒಳ್ಳೆಯ ದಾರಿಗೆ ತರಲೂ ಪ್ರಯತ್ನ ನಡೆಸಿದಂತೆ ಇಲ್ಲಿ ವಾಲಿಗೆ ತಿಳುಹುವ ಯಾವ ಪ್ರಯತ್ನವೂ ನಡೆಯದಿರುವುದನ್ನು ನೋಡಿದರೆ ಸೋಜಿಗವಾಗುತ್ತದೆ. ತಮ್ಮನ ಹೆಂಡತಿಯನ್ನು ಅಪಹರಿಸಿ ಭೋಗಿಸಿದುದು ಮಹಾಪರಾಧವೆಂದೂ ಅದಕ್ಕೇ ಶಿಕ್ಷೆಯೊದಗಿತೆಂದೂ ಮುಂದೆ ಶ್ರೀರಾಮನು ವಾಲಿಯ ಪ್ರಶ್ನೆಗೆ ಉತ್ತರ ಕೊಡುತ್ತಾನೆ. ಆದರೆ ವಾಲಿಯ ಮರಣಾಂತರ ತಾರೆಯನ್ನು ಎಂದರೆ ಅಣ್ಣನ ಹೆಂಡತಿಯನ್ನು ಸುಗ್ರೀವ ಎಂದರೆ ತಮ್ಮನೆ ಭೋಗಿಸುವುದನ್ನು ಶ್ರೀರಾಮನು ನಿಷೇಧಿಸದಿರುವುದನ್ನು ನೋಡಿದರೆ ನಮ್ಮ ನೀತಿದೃಷ್ಟಿ ದಿಗ್ಭ್ರಾಂತವಾಗದಿರುವುದಕ್ಕೆ ಸಾಧ್ಯವಿಲ್ಲ. ರಾಮನ ಕಡೆಯಿಂದ ಒಂದಿನಿತಾದರೂ ಸಂಧಾನಪ್ರಯತ್ನ ನಡೆದಿದ್ದರೆ ಬಹುಶಃ ದುರಂತ ತಪ್ಪುತ್ತಿತ್ತೋ ಏನೋ ಎನ್ನಿಸುತ್ತದೆ, ಓದುಗರ ಲೋಕಸಾಮಾನ್ಯಮತಿಗೆ.

ಸುಗ್ರೀವರಾಯರ ಸಖ್ಯವು ಅಗ್ನಿಸಾಕ್ಷಿಕವಾಗಿ ಪ್ರತಿಜ್ಞಾಮುದ್ರಿತವಾದ ತರುವಾಯ ಮುಂದಿನ ಕೆಲಸಕ್ಕಾಗಿ ಎಲ್ಲರೂ ಕಿಷ್ಕಿಂದೆಗೆ ಹೊರಡುತ್ತಾರೆ. 'ವೃಕ್ಷೈರಾತ್ಮಾನಮಾವೃತ್ಯ ವ್ಯತಿಷ್ಠನ್

ಗಹನೇ ವನೇ' ದಟ್ಟಡವಿಯಲ್ಲಿ ಮರಗಳ ಮರೆಯಲ್ಲಿ ಅಡಗಿಕೊಳ್ಳುತ್ತಾರೆ. ಆಹ್ವಾನಕಾರಣವಾದ ಸುಗ್ರೀವನ ಕಾಕನ್ನು ವಾಲಿ 'ಬಾಸ್ಕರೋ ಅಸ್ತತಟಾದಿವ' ಕ್ಷುದ್ರನಾಗಿ ಯುದ್ಧಸನದನದ್ಧನಾಗಿ ಬರುತ್ತಾನೆ. ಕವಿ ನಾಲ್ಕೇ ಪಂಕ್ತಿಗಳಲ್ಲಿ ಯುದ್ಧವನ್ನೆಲ್ಲ ಪೂರೈಸುತ್ತಾನೆ:

"ತತಃ ಸುತುಮುಲಂ ಯುದ್ಧಂ ವಾಲಿ ಸುಗ್ರೀವಯೋರಭೂತ್|
ಗಗನೇ ಗ್ರಹಯೋಘೋರ್ೞರಂ ಬುಧಾಂಗಾರಕಯೋರಿವ||
ತಲೈರಶನಿಕಲ್ಪೈಶ್ಚ ವಜ್ರಕಲ್ಪೈಶ್ಚ ಮುಷ್ಟಿಭಿಃ|
ಜಘ್ನತುಃ ಸಮರೇಽನ್ಯೋನ್ಯಂ ಭ್ರಾತರೌ ಕ್ರೋಧಮೂರ್ಛಿತೌ"||

ವಾಲಿ ಸುಗ್ರೀವರ ಅನ್ಯೋನ್ಯ ಸಾದೃಶ್ಯದಿಂದ ದಿಕ್ಕುತೋರದೆ ಶ್ರೀರಾಮನು ತಟಸ್ಥನಾಗುತ್ತಾನೆ. ಜರ್ಜರೀಕೃತನಾದ ಸುಗ್ರೀವ ರಾಮ ಮೋಸಮಾಡಿದ ಎಂದು ತಿಳಿದು ಓಡಿಹೋಗಿ ಮತಂಗ ಮಹಾವನದಲ್ಲಿ ರಕ್ಷೆಪಡೆಯುತ್ತಾನೆ, ವಾಲಿ ಶಾಪಭಯದಿಂದ ಅದನ್ನು ಪ್ರವೇಶಿಸದೆ 'ಬದುಕಿಕೊಂಡೆ ಹೋಗು!' (ಮುಕ್ತೋ ಹ್ಯಸಿ ತ್ವಂ) ಎಂದು ಕಿಷ್ಕಿಂಧೆಗೆ ಹಿಂತಿರುಗುತ್ತಾನೆ.

ಆಮೇಲೆ ರಾಮನು ಮತಂಗವನಕ್ಕೆ ಹೋಗಿ ಸುಗ್ರೀವನನ್ನು ಕಂಡು ಕದ್ದಡಗಿದ ತಾನು ಬಾಣಪ್ರಯೋಗಮಾಡದೆ ಇದ್ದುದಕ್ಕೆ ಕಾರಣ ಹೇಳುತ್ತಾನೆ:

"ಅಲಂಕಾರೇಣ ವೇಷೇಣ ಪ್ರಮಾಣೇನ ಗತೇನ ಚ|
ತ್ವಂ ಚ ಸುಗ್ರೀವ ವಾಲೀ ಚ ಸದೃಶೌ ಸ್ಥಃ ಪರಸ್ಪರಮ್||
ತತೋಽಹಂ ರೂಪಸಾದೃಶ್ಯಾನ್ಮೋಹಿತೋ ವಾನರೋತ್ತಮ|
ನೋತ್ಸೃಜಾಮಿ ಮಹಾವೇಗಂ ತಂ ಶತ್ರುನಿಬರ್ಹಣಂ||...
ತಸ್ಮಾದ್ ಯುಧ್ಯಸ್ವ ಭೂಯಸ್ತ್ವಂ ಮಾ ಮಾ ಶಂಕೀಶ್ಚ ವಾನರ|"

'ಮತ್ತೆ ಯುದ್ಧಮಾಡು; ಶಂಕಿಸಬೇಡ' ಎಂದು ಭರವಸೆ ಕೊಡುತ್ತಾನೆ. ಕಾಳಗದ ಸಮಯದಲ್ಲಿ ಸುಗ್ರೀವನನ್ನು ಗುರುತಿಸುವುದಕ್ಕಾಗಿ 'ಗಜಪುಷ್ಪ'ವೆಂಬ ಕಾಡು ಹುವಿನ ಬಳ್ಳಿಯೊಂದನ್ನು 'ಮಾಲಯೇವ ಬಲಾಕಾನಾಂ ಸಸಂಧ್ಯಾ ಇವತೋಯದಃ' ಅವನ ಕೊರಳಿಗೆ ತೊಡಿಸುತ್ತಾನೆ.

ಮತ್ತೆ ಎಲ್ಲರೂ ಕಿಷ್ಕಿಂಧೆಯ ಬಳಿಗೆ ಬರುತ್ತಾರೆ: ಮುನ್ನಿನಂತೆಯೆ ರಾಮಾದಿಗಳು ಅಡಗಿ ನಿಲ್ಲುತ್ತಾರೆ. ಸುಗ್ರೀವನ ಗರ್ಜನೆ ವಾಲಿಯನ್ನು ರಣಕ್ಕೆ ಆಹ್ವಾನಿಸುತ್ತದೆ. ತಾರೆ ಕಾಳಗ ಬೇಡವೆಂದು ಹಿತವಚನ ಹೇಳುತ್ತಾಳೆ.

'ನ ಹಿ ತೇನ ಸಮಂ ಬಂಧುಂ ಭುವಿ ಪಶ್ಯಾಮಿ ಕಂಚನ'

ತಮ್ಮನಿಗಿಂತಲೂ ಹೆಚ್ಚಿನ ಬಂಧು ಭೂಮಿಯಲ್ಲಿಲ್ಲ ಎಂದು ಅಂಗಲಾಚುತ್ತಾಳೆ. ಅದರ ವೀರವ್ರತದ ವಾಲಿ "ಯುದ್ಧಕ್ಕೆ ಕರೆ ಬಂದಾಗ ಒಗೊಡದಿರುವುದೆಂತು? ...ನಾನು ತಮ್ಮನನ್ನು ಗೆದ್ದು, ಅವನ ದರ್ಪವನ್ನು ಇಳಿಸಿ ಹಿಂತಿರುಗುತ್ತೇನೆಯೆ ಹೊರತು ಎಂದಿಗೂ ಅವನನ್ನು ಕೊಲ್ಲುವುದಿಲ್ಲ. 'ದರ್ಪಮಸ್ಯ ವಿನೇಷ್ಯಾಮಿ ನ ಚ ಪ್ರಾಣೈರ್ವಿಯೋಕ್ಷತೇ.' ರಾಮನಿಂದ ನನಗೆ ಅಪಾಯವಾಗುತ್ತದೆಂದು ಶಂಕಿಸಬೇಡ. 'ನ ಚ ಕಾರ್ಯೋ ವಿಷಾದಸ್ತೇ ರಾಘವಂ ಪ್ರತಿ

ಮತ್ಕೃತೇ| ಧರ್ಮಜ್ಞಶ್ಚ ಕೃತಜ್ಞಶ್ಚ ಕಥಂ ಪಾಪಂ ಕರಿಷ್ಯತಿ||' ಧರ್ಮಜ್ಞನಾದ ಶ್ರೀರಾಮನು ಹೇಗೆ ತಾನೆ ಪಾಪಕಾರ್ಯ ಮಾಡುತ್ತಾನೆ" ಎಂದೆಲ್ಲ ಸಮಾಧಾನ ಹೇಳಿ 'ಶತ್ರುದರ್ಶನಕಾಂಕ್ಷಿ'ಯಾಗಿ ಸುಗ್ರೀವನೆಡೆಗೆ ಧಾವಿಸುತ್ತಾನೆ. ಅಣ್ಣತಮ್ಮಂದಿರಿಗೆ ಎರಡನೆಯ ಸಾರಿ ಕೊನೆಯದಾಗಿ ದ್ವಂದ್ವಯುದ್ಧ ಪ್ರಾರಂಭವಾಗುತ್ತದೆ.

ಕವಿ ಆ ಯುದ್ಧವನ್ನು ಹದಿನೆಂಟಿಪ್ಪತ್ತು ಪಂಕ್ತಿಗಳಲ್ಲಿ ಸಾಂಪ್ರದಾಯಿಕವಾಗಿ ವರ್ಣಿಸುತ್ತಾನೆ. ಅವರು ವಾನರರಾದುದರಿಂದ ಅಸ್ತ್ರ ಶಸ್ತ್ರ ಧನುರ್ಬಾಣಾದಿಗಳ ಪ್ರಯೋಗದ ವರ್ಣನೆಯಿಲ್ಲ. ಕ್ಲಿಷ್ಟಮುಷ್ಟಿ, ಸಶಾಖವೃಕ್ಷ, ವಜ್ರನಖ, ಇವೇ ಆಯುಧಗಳಾಗಿ ಕಾಳಗ ಸಾಗುತ್ತದೆ. ಸಾಲತಾಡನ ವಿಹ್ವಲನಾಗಿ ವಾಲಿ ಸಾಗರದ ಮಧ್ಯೆ ಗುರುಭಾರಸಮಾಕ್ರಾಂತವಾದ ನೌಕೆಯಂತೆ ತತ್ತರಿಸುತ್ತಾನೆ. ವಾಲಿಯ ಪೆಟ್ಟಿಗೆ ಸುಗ್ರೀವನ ಮೈ ನೆತ್ತರುಕಾರಿ ಝರಿಹರಿಯುವ ಕೆಮ್ಮಣ್ಣು ಬೆಟ್ಟದಂತೆ ತೋರುತ್ತಾನೆ. ಬರಬರುತ್ತಾ ಮಂದವಿಕ್ರಮನಾದ ಸುಗ್ರೀವನು ರಾಮನು ಅಡಗಿ ನಿಂತಿದ್ದ ಅರಣ್ಯದ ದಿಕ್ಕಿಗೆ ಪದೇಪದೇ ನೋಡತೊಡಗುತ್ತಾನೆ.

"ವೃಕ್ಷೈಃ ಸಶಾಖೈಃ ಸಶಿಖೈರ್ವಜ್ರಕೋಟಿನಿಭೈರ್ನಖೈಃ|
ಮುಷ್ಟಿಭಿರ್ಜಾನುಭಿಃ ಪದ್ಭಿರ್ಬಾಹುಭಿಶ್ಚ ಪುನಃ ಪುನಃ|
ತಯೋರ್ಯುದ್ಧಮಭೂದ್ ಘೋರಂ ವೃತ್ರವಾಸವಯೋರಿವ"||

ಇಲ್ಲಿ ಯಾರು ಗೆಲ್ಲುತ್ತಾರೆ, ಯಾರು ಸೋಲುತ್ತಾರೆ ಎನ್ನುವುದೂ ನಮಗೆ ಮುಖ್ಯವಾಗುವುದಿಲ್ಲ. ಶ್ರುತಪೌರುಷನಾದ ವಾಲಿಯ ವಿಚಾರವಾಗಿ ಸುಗ್ರೀವನಿಂದಲೆ ನಾವೆಲ್ಲವನ್ನೂ ತಿಳಿದಿದ್ದೇವೆ. ಸುಗ್ರೀವ ಸೋಲುವ ವಿಚಾರದಲ್ಲಿ ನಮಗೆ ಸಂಶಯವೆ ಇರುವುದಿಲ್ಲ. ಆದ್ದರಿಂದ ಕವಿ ಈ ಯುದ್ಧವನ್ನು ಏನೇನು ಉಪಮಾನಗಳಿಂದ ಎಷ್ಟೆಷ್ಟು ಬಣ್ಣಿಸಿದರೂ ನಮ್ಮ ಕಣ್ಣು ಅತ್ತ ತಿರುಗದೆ ಸುಗ್ರೀವನ ಕಣ್ಣಿನಂತೆ ಮತ್ತೆ ಮತ್ತೆ 'ಮಹಾತೇಜ'ನಾದ ಕ್ಷತ್ರಿಯ ಧನುರ್ಧರನು ಅಡಗಿ ನಿಂತಿದ್ದ ಅಡವಿಯ ಕಡೆಗೇ ತಿರುಗಿ ತಿರುಗಿ ಅಲ್ಲಿಯೆ ನಟ್ಟು ಕಾತರವಾಗುತ್ತದೆ. ಅದೋ ಆ ಮರದ ಸಂಧಿಯಲ್ಲಿ ಹೆದೆಯೇರಿ ಸರಳು ಹೂಡಿದ ಬಿಲ್ಲನ್ನು ಸೆಳೆದು ಹಿಡಿದ ಭಯಂಕರ ಬಾಹುಮುಷ್ಟಿ! ಅಲ್ಲಿ ನಟ್ಟಿದೆ ನಮ್ಮ ಕಾತರದೃಷ್ಟಿ!

"ತಸ್ಯ ಜ್ಯಾತಲಘೋಷೇಣ ತ್ರಸ್ತಾಃ ಪತ್ರರಥೇಶ್ವರಾಃ|
ಪ್ರದುದ್ರುವುರ್ ಮೃಗಾಶ್ಚೈವ ಯುಗಾಂತ ಇವ ಮೋಹಿತಾಃ||
ಮುಕ್ತಸ್ತು ವಜ್ರನಿರ್ಘೋಷಃ ಪ್ರದೀಪ್ತಾಶನಿ ಸಂನಿಭಃ|
ರಾಘವೇಣ ಮಹಾಬಾಣೋ ವಾಲಿವಕ್ಷಸಿ ಪಾತಿತಃ||

ರಾಘವನ ಮಹಾಬಾಣ ವಾಲಿಯ ವಕ್ಷದಲ್ಲಿ ನಟ್ಟಿತು! ವಾಲಿ ಉರುಳಿದನು ಗತಶ್ರೀಯಾಗಿ, ವಿಚೇತನನಾಗಿ!

ಮುಗಿಯಿತಿಲ್ಲಿಗೆ ಯುದ್ಧ! ಪ್ರಖ್ಯಾತ ಪೌರಾಣಿಕ ಯುದ್ಧ! ವಿಮರ್ಶಕನಿಗೆ ಏಕೊ ಸಂಕೋಚವಾಗುತ್ತದೆ, ತಾನು ವರ್ಣಿಸಿದುದನ್ನು 'ಪ್ರಖ್ಯಾತ ಪೌರಾಣಿಕ ಯುದ್ಧ! ವಿಮರ್ಶಕನಿಗೆ ಏಕೊ ಸಂಕೋಚವಾಗುತ್ತದೆ, ತಾನು ವರ್ಣಿಸಿದುದನ್ನು 'ಪ್ರಖ್ಯಾತ ಪೌರಾಣಿಕ ಯುದ್ಧ' ಎಂದು ಕರೆಯುವುದಕ್ಕೆ. ವಾಸ್ತವವಾಗಿ ವಾಲಿ ಸುಗ್ರೀವರ ಯುದ್ಧ ಯುದ್ಧಕ್ಕಾಗಿ ಪ್ರಖ್ಯಾತವಾಗಿಲ್ಲ.

ರಾಮನ ಪಾತ್ರದ ಮೇಲೆ ಆಗಿರುವ ಪರಿಣಾಮಕ್ಕಾಗಿಯೆ ಅದು ಪ್ರಖ್ಯಾತವಾಗಿದೆ. ಆದರ್ಶ ಪುರುಷನಾದ ಶ್ರೀ ರಾಮನ ಆ ವರ್ತನೆ ನೀತಿಯ ಧರ್ಮದ ಅನೇಕ ಸಮಸ್ಯೆಗಳಿಗೆ ಎಡೆಗೊಡುತ್ತದೆ. ಆ ವಿಚಾರವಾಗಿ ಸ್ವಯಂ ವಾಲಿಯೆ ರಾಮನನ್ನು ಕಟು ವಿಚಾರಣೆಗೆ ಒಳಪಡಿಸಿ ಮೂದಲಿಸಿದ್ದಾನೆ. ಶ್ರೀರಾಮನು ಕೊಟ್ಟಿರುವ ಉತ್ತರಗಳಲ್ಲಿ ಬಹುಪಾಲು 'ಹಿಟ್ಲರ್ ಮುಸೊಲಿನಿ'ಗಳು ಕೊಡಬಹುದಾದ ಉತ್ತರಗಳಂತೆ ಸರ್ವಾಧಿಕಾರ ಮನೋಭಾವದಿಂದ ತುಂಬಿವೆ. ಯಾರೆ ಆಗಲಿ ಎಷ್ಟೆ ಪ್ರಯತ್ನಿಸಲಿ ಲೋಕಸಾಮಾನ್ಯವಾದ ನೀತಿಯ ಮತ್ತು ಧರ್ಮದ ದೃಷ್ಟಿಗೆ ವಾಲ್ಮೀಕಿ ರಾಮಾಯಣದ ಶ್ರೀರಾಮನ ಈ ಸಂದರ್ಭ ವರ್ತನೆಯನ್ನು ಆದರ್ಶಪ್ರಾಯವೆಂದು ಸಮರ್ಥಿಸಲು ಸಾಧ್ಯವಾಗುವುದಿಲ್ಲ. ಬಹುಶಃ ಅನಿರ್ವಚನೀಯವಾದ ಭಗವಂತನ ಎಲ್ಲ ವ್ಯಾಪಾರಗಳಿಗೂ ಲೋಕಸಾಮಾನ್ಯ ರೀತಿಯಲ್ಲಿ ನಿರ್ವಚನ ಹೇಳಲು ಸಾಧ್ಯವಿಲ್ಲ ಎಂಬುದಕ್ಕೆ ಇದನ್ನೊಂದು ನಿದರ್ಶನವಾಗಿ ಇಟ್ಟುಕೊಂಡು ಸಮಾಧಾನ ಪಟ್ಟುಕೊಳ್ಳಬಹುದು! ಸಾಧ್ಯಾವಾದರೆ?

ಆದರೆ ಪ್ರತಿಮಾವಿಧಾನದ ದರ್ಶನಧ್ವನಿಯನ್ನು ಆಶ್ರಯಿಸುವ ಪೂರ್ಣದೃಷ್ಟಿಗೆ ಅರ್ಥಸಾಧ್ಯವಾಗುವ ರೀತಿಯೂ ಒಂದಿವೆ ಎಂಬುದನ್ನು ನಾವು ಒಪ್ಪುತ್ತೇವೆ.

[1]

---

[1] 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯದಲ್ಲಿ ಕಾಣಬಹುದು.

# ಬಾಪೂಜಿಗೆ ಬಾಷ್ಪಾಂಜಲಿ[1]

"ಮತ್ತೆ ಇದೇನು?
ಎಂದೆಂದಿಗೂ ನಿನಗಿದೆ ಗತಿಯೇನು?"
- 'ಅವತಾರ' ಕವನದಿಂದ

ಏಕಾಕಿಯಾಗಿ ನಿಂತು ಅನಂತ ನೀಲಾಕಾಶವನ್ನು ನೋಡುವಾಗ ನಮಗೊದಗುವ ಒಂದು ಭವ್ಯಶಾಂತಿಯ ಆಶೀರ್ವಾದವನ್ನು ಮನಸ್ಸಿಗೆ ತರುತ್ತದೆ ಪೂಜ್ಯ ಗಾಂಧೀಜಿಯ ಜೀವನ ಸ್ಮೃತಿ. ಅಲೆ ಅಲೆ ಅಲೆಯಾಗಿ, ಮಲೆ ಮಲೆಗಳನ್ನು ಹಬ್ಬಿತಬ್ಬಿ, ದಿಗಂತಗಳಲ್ಲಿಯೂ ಅವಿಶ್ರಾಂತವಾಗಿ ಶೋಭಿಸುವ ಮಹಾರಣ್ಯ ಶ್ರೇಣಿಯಿಂದ ಉದ್ದೀಪನವಾಗುವ ಒಂದು ಭೂಮಭಾವದಂತೆ ಭಕ್ತಿ ಗೌರವಗಳಿಗೆ ಆಸ್ಪದವಾಗಿದೆ ಆ ಲೋಕವಂದ್ಯನ ಬಾಳಿನ ರುಂದ್ರ ವಿಸ್ತೀರ್ಣ. ಬಾನಲ್ಲದೆ ಬೇರೆ ಅಂಚಿಲ್ಲದ ಹೆಗ್ಗಡಲಿನ ತೆರೆತೆರೆತೆರೆಯ ಸುದೃಢಚಂಚಲವಾದ ಬಹುಕರ್ಮಮಯ ಜೀವನದಂತೆ ನಿರಂತರ ನವೀನವಾದ ಸಾಹಸೋಲ್ಲಾಸದಿಂದ ಆತ್ಮಶ್ರೀದ್ಯೋತಕವಾಗಿದೆ ಆ ಚಿರಂಜೀವಿಯ ಅಮೃತಾತ್ಮಚರಿತೆ.

ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯ ಬದುಕು ಸಾಮಾನ್ಯ ಮಾನವ ಕಲ್ಪನೆ ಸೋಲುವನಿತು ಯೋಜನ ಯೋಜನ ಯೋಜನ ಹಬ್ಬಿರುವ ಹಿಮಾಲಯ ಮಹಾಪರ್ವತ ಪಂಕ್ತಿಯೂ ಹಣೆಮಣಿಯುವಂತೆ ವಿಸ್ತಾರವಾದುದು, ದೀರ್ಘಾಯುತವಾದುದು, ಮಹೋತ್ತುಂಗವಾದುದು. ಆದರೆ ಅವರ ಬದುಕಿಗಿಂತಲೂ ಮಹೋನ್ನತವಾದುದು ಅವರ ಸಾವು. ಅವರ ಬದುಕಿನ ಬೃಹದ್ದೇವತಾಮಂದಿರಕ್ಕೆ ಕಲಶವಿಟ್ಟಂತಿದೆ ಅವರ ಸಾವು. ಅವರ ಬದುಕು ಹಿಮವತ್‌ಪರ್ವತದಂತಿದ್ದರೆ ಅವರ ಸಾವು ಅದರ ಅತ್ಯುನ್ನತ ಶಿಖರಗಳಾದ ಗೌರೀಶಂಕರ ಧವಳಗಿರಿಗಳನ್ನೂ ಮೀರಿ ಮೇಘಚುಂಬಿಯಾಗಿ ವ್ಯೋಮಾತೀತವಾಗಿ ದಿವೌಕಸವಾಗಿದೆ. ಆ ಜಗದ್ಗುರು ಮೃತಿಯಿಂದಲೆ ಅಮೃತರಾಗಿದ್ದಾರೆ. ಅವರನ್ನು ಪಡೆದು ಮೃತ್ಯು ಧನ್ಯವಾಗಿದೆ, ಅತ್ಯಂತ ಶ್ರೀಮಂತವಾಗಿದೆ. ಅವರಿರುವ ಆ ಲೋಕ ನಮಗೆ ಇನ್ನೆಂದಿಗೂ ಅಪ್ರಿಯವಾಗಲಾರದು. ಆ ಲೋಕದಲ್ಲಿ ನಾವು ಇನ್ನೆಂದಿಗೂ ತಬ್ಬಲಿಗಳಲ್ಲಿ. ನಮಗಿನ್ನು ಮೃತ್ಯುಭಯ ಇಲ್ಲ; ನಮಗಿನ್ನು ಮರಣಭಯ ಸಲ್ಲ.

ಯಾರ ಬದುಕು ಆತ್ಮಯಜ್ಞಪರಂಪರೆಗಳಿಂದ ವಿರಾಜಿತವಾಗಿದೆಯೋ ಆ ತ್ಯಾಗಮೂರ್ತಿಗೆ ಸಾವು ವಿನಷ್ಟಿಯಲ್ಲ. ಯಾರ ಬದುಕೆಲ್ಲ ಒಂದು ಸುದೀರ್ಘ ಕ್ಷಮಾಸೇತುವೆಯ ಕೋಟಿ ಕಮಾನುಗಳಂತೆ ರಂಜಿಸುತ್ತಿದೆಯೋ ಅಂತಹ ದಯಾಮೂರ್ತಿಗೆ ಸಾವು ಎಂದಿಗೂ ಹತ್ಯೆಯಲ್ಲ. ಯಾರ ಜೀವಿತ ಸರ್ವವೂ ಸತ್ಯ ಅಹಿಂಸೆ ಪ್ರೇಮ ಶಾಂತಿಗಳ ಪುಣ್ಯಪ್ರಸರಣದಲ್ಲಿಯೆ ವ್ಯಯವಾಯಿತೋ ಅಂತಹ ಶಾಂತಸಿದ್ಧನಿಗೆ ಮೃತ್ಯು ಎಂದಿಗೂ ಅಶಾಂತಿಯಲ್ಲ. ಅಂತಹ ಚೇತನಕ್ಕೆ ಶಾಂತಿ ಕೋರುವುದು ಬರಿಯ ಒಂದು ಮಾನುಷ್ಯಮಾತ್ರ ಶಿಷ್ಟಾಚಾರ. ನಾವಿಲ್ಲಿ ಇಂದು ನೆರೆದಿರುವುದು ಅವರ ಮಂಗಳಮಯ ಪುಣ್ಯಸ್ಮರಣೆಗೆ ಭಕ್ತಿ ಗೌರವಗಳನ್ನು ಸಮರ್ಪಿಸಿ "ಹೇ ಲೋಕಗುರು, ನಮ್ಮ ಮುನ್ನಡೆಗೆ ಮಾರ್ಗದರ್ಶಕ ಪರಂಜ್ಯೋತಿಯಾಗು. ಕವಿದಿರುವ ಈ ಕತ್ತಲೆಯಲ್ಲಿ ನಿನ್ನ ಕಿರಣ ಹಸ್ತದಿಂದ ನಮ್ಮನ್ನು ಕೈಹಿಡಿದು ನಡಸು. ನಮ್ಮ ಹೃದಯದಲ್ಲಿ ಹೆಡೆಯೆತ್ತುವ ಕ್ರೋಧ ಹಿಂಸೆ ಪ್ರತೀಕಾರಾದಿ ಅಹಂಕಾರ ಸರ್ಪಗಳಿಗೆ ಗರುಡಮಣಿಯಾಗಿ ನಮ್ಮನ್ನು ರಕ್ಷಿಸು. ಆಸತ್ತಿನಿಂದ ಸತ್ತಿಗೆ. ತಮಸ್ಸಿನಿಂದ ಜ್ಯೋತಿಗೆ, ಮೃತ್ಯುವಿನಿಂದ ಅಮೃತಕ್ಕೆ ನಮ್ಮನ್ನು ಕೊಂಡೊಯ್" ಎಂದು ಅವರನ್ನು ಪ್ರಾರ್ಥಿಸುವುದಕ್ಕೆ. ಸರ್ವ ಧರ್ಮ ಸಮನ್ವಯಕ್ಕಾಗಿ, ಸರ್ವ ಜಾತೀಯ ಸೌಹಾರ್ದಕ್ಕಾಗಿ, ಸರ್ವ ಜನತಾ ಹೃನ್ಮೈತ್ರಿಗಾಗಿ ಅನವರತವೂ ತಪಸ್ವಿಗಳಾಗಿದ್ದ ಜಗದ್‌ವಿಭೂತಿ ಗಾಂಧೀಜಿಯ ಇಹಜೀವನದ ಕೊಟ್ಟಕೊನೆಯ ಮರಣರೂಪದ ಉತ್ತಮೋತ್ತಮ ಯಜ್ಞದ ದಿವ್ಯ ಸ್ಮರಣೆಗೆ ನಮ್ಮ ಆರಾಧನೆಯ ಕಾಣಿಕೆಯನ್ನು ಸಲ್ಲಿಸಿ ಧನ್ಯರಾಗುವುದಕ್ಕಾಗಿ ನಾವಿಲ್ಲಿ ನೆರೆದಿದ್ದೇವೆ.

ಅಷ್ಟಲ್ಲದೆ ಮತ್ತೇನು? ಮಹಾತ್ಮಾಜಿಯ ಮರಣವನ್ನು ದುರ್ಮರಣ ಎಂದು ಕರೆಯುವುದು ಅಜ್ಞಾನದ ಮಾತು. ಲೋಕದಲ್ಲಿ ಅಂತಹ ಸಾವಿನ ಸುಕೃತ ಲಭಿಸುವುದು ಭಗವತ್‌ಕೃಪೆಯಿಂದ ಎಲ್ಲಿಯೋ ಒಬ್ಬಿಬ್ಬರಿಗೆ ಮಾತ್ರ. ಅವರು ರೋಗಗ್ರಸ್ತರಾಗಿ ಸತ್ತವರಲ್ಲ; ಚಿಕಿತ್ಸೆಗೊಳಗಾಗಿ ವೈದ್ಯರಿಂದಾಗಲಿ ಔಷಧಿಗಳಿಂದಾಗಲಿ ಪೀಡಿತರಾಗಿ ಮಡಿಯಲಿಲ್ಲ. ಲೋಭವಿಷಯಾಸಕ್ತರಾಗಿರುವಾಗ ಹೃದಯಸ್ತಂಭನದಿಂದ ಸಾಯಲಿಲ್ಲ. ಸಂಕುಚಿತಭಾವ ಪ್ರೇರಿತವಾದ ಪಕ್ಷ ವಿಪಕ್ಷಗಳ ಕ್ಷುದ್ರವಾದ ಹೋರಾಟದಲ್ಲಿ ಸಿಕ್ಕಿ ಪ್ರಾಣತ್ಯಾಗ ಮಾಡಿದವರಲ್ಲ. ಹಿಟ್ಲರನಂತೆ ಸತ್ತವರಲ್ಲ; ಮುಸ್ಸೋಲಿನಿಯಂತೆ ಮಡಿಯಲಿಲ್ಲ. ಸಾಕ್ರಟೀಸನಂತೆ ಸಾವನ್ನಪ್ಪಿದರು; ಯೇಸು ಕ್ರಿಸ್ತನಂತೆ ಶಿಲುಬೆಗೇರಿದರು. ಲೋಕಸೇವೆಯಲ್ಲಿ ತೊಡಗಿರುವಾಗ,

ಪ್ರಾರ್ಥನಾ ಸಭೆಗೆ ಹೋಗುತ್ತಿರುವಾಗ, ಸಮಸ್ತ ಪ್ರಜ್ಞೆಯೂ ಮಾನವ ಕಲ್ಯಾಣಕ್ಕಾಗಿ ಭಗವನ್ಮುಖವಾಗುತ್ತಿರುವಾಗ, ಏನು ನಡೆದರೂ ಈಶ್ವರೇಚ್ಛೆ ಎಂದು ಎದೆತೆರೆದು ನಿಂತಿರುವಾಗ, ರಾಮ ರಾಮ ಎಂದು ತಮ್ಮ ನಚ್ಚಿನ ಮಹಾಮಂತ್ರವನ್ನು ಉಚ್ಚರಿಸುತ್ತಾ, ಲೋಕಕಂಠದ ದುಃಖ ದಿಗ್ಭ್ರಾಂತಿ ಜನ್ಯ ಚೀತ್ಕಾರ ಹಾಹಾಕಾರಗಳ ಮಧ್ಯೆ, ತಮ್ಮ ಬಾಳುವೆಯನ್ನು ದಿವ್ಯಾಗ್ನಿಗೆ ಬೇಳುವೆಯಾಗಿ ನೀಡಿದರು. ಬೆನ್‌ದಿರುಹದೆ ರಣವೀರನಂತೆ ಗುಂಡಿಗೆ ಗುಂಡಿಗೆಯೊಡ್ಡಿ ದೇಹವಿಸರ್ಜನೆ ಮಾಡಿದರು. ಎಂತಹ ವೀರ ಯೋಧನ ವಕ್ಷವೂ ಕರುಬುವಂತಿತ್ತಂತೆ ಬಾಪೂಜಿಯ ರಕ್ತಾಂಕಿತವಾದ ಪಕ್ಷ. ಅವರ ಬದುಕಿನ ವಿಷಯದಲ್ಲಿಯೂ ಅದೇ ಮಾತನ್ನು ಹೇಳಬಹುದು. ಎಂತಹ ತ್ರಿಲೋಕ ವೀರಯೋಧನೂ ಕರುಬುವಂತಿದೆ ಅವರ ಜೀವನ ಕಥೆ! ದೇವರು ಇಚ್ಛಿಸಿದಾಗಲೆ ಅವರನ್ನು ಕರದೊಯ್ದಿದ್ದಾನೆ. ತಾತ್ಕಾಲಿಕವಾದ ನಮ್ಮ ಕುಬ್ಜ ದೃಷ್ಟಿಗೆ ಭಯಂಕರ ದುರ್ಘಟನೆಯಾಗಿ ತೋರುವ ಈ ಲೋಕ ಶೋಕದ ಅಪಮೃತ್ಯುವಿನ ಬದ್ಧಾಂಜಲಿಯಲ್ಲಿ ಯಾವ ಅಮೃತಕುಂಭ ಗುಪ್ತವಾಗಿದೆಯೋ ಹೇಳಬಲ್ಲವರಾರು?

ಅವರು ದೇಹತ್ಯಾಗ ಮಾಡಿದ ಈ ಹನ್ನೆರಡು ಹದಿಮೂರು ದಿವಸಗಳಲ್ಲಿಯೆ ಅವರ ಹೃದಯದಿಂದ ಚಿಮ್ಮಿದ ರಕ್ತಧಾರೆಯಿಂದ ಅಮೃತ ಭಾಗೀರಥಿಯರು ಮೂಡುತ್ತಿರುವುದನ್ನು ನೋಡುತ್ತಿದ್ದೇವೆ. ತಾತ್ಕಾಲಿಕವೋ ಚಿರಕಾಲಿಕವೋ ಹೇಳಲು ಸಾಧ್ಯವಿಲ್ಲವಾದರೂ ಹಿಂಸೆ ದ್ವೇಷ ಅಸೂಯೆ ಅಪನಂಬಿಕೆಯ ಅಸುರೀ ಶಕ್ತಿಗಳು ನಾಚಿ ತಲೆತಗ್ಗಿಸಿ ದೈವೀಶಕ್ತಿಗಳಾದ ಸ್ನೇಹ ಸೌಹಾರ್ದ ಸಹಾನೂಭೂತಿಗಳಿಗೆ ಎಡೆಗೊಡುತ್ತಿರುವ ಮಂಗಳವಾರ್ತೆಯನ್ನು ಪತ್ರಿಕೆಗಳು ದಿನ ದಿನವೂ ಘೋಷಿಸುತ್ತಿವೆ. ಭರತಖಂಡದ ರಾಜಧಾನಿಯಲ್ಲಿ ರಾಜಗೌರವಪೂರ್ವಕವಾಗಿ ನಡೆದ ಗಾಂಧೀಜಿಯ ಕಳೇಬರದ ಶ್ಮಶಾನಯಾತ್ರೆಯಲ್ಲಿ ಹಿಂದೂವಿನ ಕಣ್ಣೀರು ಮುಸಲ್ಮಾನನ ಕಣ್ಣೀರಿನೊಡನೆ ಸಂಗಮಿಸಿ, ಮುಸಲ್ಮಾನನ ಕಂಬನಿ ಸಿಖ್ಖನ ಕಂಬನಿಯೊಡನೆ ಸಂಗಮಿಸಿ, ಹಿಂದು ಮುಸಲ್ಮಾನ ಸಿಖ್ಖರು ತಮ್ಮ ಶೋಕಾಶ್ರುಗಳಿಂದಲೆ ಪಾವನತರವಾದ ತ್ರಿವೇಣೀ ಸಂಗಮವನ್ನು ನಿರ್ಮಿಸಿದ್ದಾರೆ. ಆ ತ್ರಿವೇಣಿತೀರ್ಥದಲ್ಲಿ ಎಲ್ಲ ಮತದವರೂ ಮಿಂದು ಪರಿಶುದ್ಧರಾಗುತ್ತಿದ್ದಾರೆ. ಇಂದು ಪೂಜ್ಯ ಗಾಂಧೀಜಿಯ ಭಸ್ಮಾಸ್ಥಿರೂಪವಾದ ಅವಶೇಷವನ್ನು ಒಳಕೊಂಡು ಸುತೀರ್ಥವಾದ ಪ್ರಯಾಗಕ್ಷೇತ್ರದ ತ್ರಿವೇಣೀ ತೀರ್ಥವು ಆ ದಿವ್ಯತರ ಅಶ್ರು ತ್ರಿವೇಣೀ ಸಂಗಮಕ್ಕೆ ಪ್ರತಿಮಾಮಾತ್ರವಾಗಿದೆ. ಪ್ರಪಂಚದ ಪ್ರಥಮ ಶಾಂತಿದೂತನಿಗಾದ ಗತಿಯೇ ಅದರ ದ್ವಿತೀಯ ಶಾಂತಿದೂತನಿಗೂ ಆಯಿತೆಂದು ಕ್ರೈಸ್ತ ಬಾಂಧವರು ವಿನಮ್ರರಾಗಿದ್ದಾರೆ. ದೆಹಲಿಯ ಮುಸಲ್ಮಾನ ಸಹೋದರರು ತಮ್ಮ ಕ್ಷೇಮಕ್ಕಾಗಿಯೇ ಪ್ರಾಣಾರ್ಪಣ ಮಾಡಿದ ಹುತಾತ್ಮಾ ಗಾಂಧೀಜಿಯ ಭಸ್ಮಾವಶೇಷವನ್ನು ಜುಮ್ಮಾ ಮಸೀದಿಯೆಡೆಯಲ್ಲಿ ಸಮಾಧಿ ಮಾಡಿ ಚೈತ್ಯಮಂದಿರವನ್ನು ರಚಿಸಲು ಸಂಕಲ್ಪಮಾಡಿದ್ದಾರೆಂಬ ವಾರ್ತೆಯನ್ನು ಕೇಳಿ ಎಂತಹವನ ಹೃದಯದಲ್ಲಿಯೂ ಹಾಲುಕ್ಕದಿರುವುದಿಲ್ಲ. ಎಲ್ಲ ಮತಗಳವರೂ, ತಮ್ಮ ಭೇದಗಳೇನೆ ಇರಲಿ, ಏಕಕಂಠದಿಂದ ತಂತಮ್ಮ ಕೃತಜ್ಞತೆಯನ್ನೂ ಸತ್ಯ ಪ್ರತಿಜ್ಞೆಯನ್ನು ಘೋಷಿಸುತ್ತಿದ್ದಾರೆ. ಪ್ರಪಂಚದ ಮೂಲೆಮೂಲೆಗಳಿಂದ, ಬಹುದೂರದ ಅಜ್ಞಾತ ಪ್ರಾಂತಗಳಿಂದ, ರೈತ ರಾಜ ಚಕ್ರವರ್ತಿ ರಾಷ್ಟ್ರಾಧ್ಯಕ್ಷ ಕಾರ್ಮಿಕ ಧಾರ್ಮಿಕ ಎಂಬ ಭೇದವಿಲ್ಲದೆ ಲಕ್ಷಲಕ್ಷ ದುಃಖದಗ್ಧ ಹೃದಯಗಳಿಂದೆದ್ದ ಕೋಟಿಕೋಟಿ ಶೋಕವಾಣಿಗಳು ಹಿಂಸೆಗೆ ಆಹುತಿಯಾದ ಅಹಿಂಸಾ ಪ್ರವಾದಿಯ ಸ್ತೋತ್ರಗಾನಗೆಯ್ಯುತ್ತಿವೆ. ಆಳಾಳಿನ ಎದೆಗುಹೆಯಲ್ಲಿ ಹುದುಗಿರುವ ದೈವೀಶಕ್ತಿ ತನ್ನನ್ನು ಅಪ್ಪಳಿಸಿದ ಆಸುರೀಶಕ್ತಿಯನ್ನು ದಮನಮಾಡಲು ದೃಢಪ್ರತಿಜ್ಞಾ ರೂಢವಾಗುತ್ತಿದೆ.

ಬಹುಶಃ ಮಹಾತ್ಮರು ಹುತಾತ್ಮರೂ ಅದಲ್ಲದೆ ನರಚೇತನ ತನ್ನ ತಮೋನಿದ್ರೆಯಿಂದ ಎಚ್ಚರಲಾರದೆಂದು ತೋರುತ್ತದೆ. ಮಹಾತ್ಮರು ತಮ್ಮ ಜೀವಿತಕಾಲದಲ್ಲಿ ಹೊತ್ತಿಸಿದ ಧರ್ಮಜ್ಯೋತಿ ಹುತಾತ್ಮರಾದ ಅವರ ರಕ್ತತೈಲದಿಂದಲೆ ಪೋಷಿತವಾಗಿ, ಉಜ್ವಲತರವಾಗಿ, ತನ್ನ ಭಗವದ್‌ದೀಪ್ತಿಯನ್ನು ಬೀರುತ್ತಾ, ಲೋಕದ ತಮಸ್ಸು ಸತ್ಯಕ್ಕೆ ಶರಣಾಗುವವರೆಗೂ ವಿಶ್ರಮಿಸುವುದಿಲ್ಲ. ಆಸುರೀಶಕ್ತಿ ತನ್ನ ಕ್ರೂರವರ್ತನೆಯಿಂದಲೆ ದೈವಿಶಕ್ತಿಯನ್ನು ಪ್ರೋಜ್ವಲಗೊಳಿಸುತ್ತದೆ. ನಾವೆಲ್ಲರೂ, ಸಾಮೂಹಿಕವಾಗಿಯೂ ವೈಯಕ್ತಿಕವಾಗಿಯೂ, ಅಸುರೀಶಕ್ತಿಗಳ ದಮನಕ್ಕೂ ದೈವೀಶಕ್ತಿಗಳ ಉತ್ಥಾನಕ್ಕೂ ಶ್ರಮಿಸುತ್ತೇವೆ ಎಂದು ಪ್ರಾರ್ಥನಾಬದ್ಧರಾದರೆ ಮಾತ್ರ ಗಾಂಧೀಜಿಯ ಮಹಾತ್ಯಾಗ ಸಾರ್ಥಕವಾಗುತ್ತದೆ; ಅವರ ಮಹಜ್ಜೀವನ ಸಫಲವಾಗುತ್ತದೆ; ಸಂತುಷ್ಟವಾದ ಅವರ ದಿವ್ಯಚೇತನ ನಮಗೆ ಕೃಪಾಪೂರ್ಣವಾಗುತ್ತದೆ. ಯಾರ ಉಸಿರು ದಿನವೂ ನಾವು ತಿನ್ನುವ ಉಪ್ಪು ಅನ್ನದಿಂದ ಹಿಡಿದು ನಾವು ಧ್ಯಾನಿಸುವ ಪರಮಾತ್ಮನವರೆಗೂ ವ್ಯಾಪಿಸಿ, ನಮ್ಮ ಬಾಳ್‌ಬಟ್ಟೆಯ ಎಳೆಎಳೆಯಲ್ಲೂ ಹಾಸುಹೊಕ್ಕಾಗಿದೆಯೊ ಅಂತಹವರ ದೇಹತ್ಯಾಗ ಸಾವಲ್ಲ ಎಂಬುದನ್ನು ನಮ್ಮ ವರ್ತನೆಯಿಂದ ಸ್ಥಾಪಿಸಿ ಧನ್ಯರಾಗೋಣ.

ಅಲ್ಪಗಾತ್ರವಾಗಿದ್ದ ಗಾಂಧೀಜಿಯ ಕಳೇಬರ ಇಂದು ಭೂಮವಾಗಿದೆ; ವಿರಾಡ್ರೂಪಿಯಾಗಿದೆ. ಅದು ಭರತಖಂಡವನ್ನೆಲ್ಲ ಆಕ್ರಮಿಸಿ ತನ್ನ ಪ್ರಭಾವಳಿಯಿಂದ ಪ್ರಪಂಚವನ್ನೂ ಆಲಿಂಗಿಸಿದೆ. ನಮ್ಮ ರಾಷ್ಟ್ರದ ಪುಣ್ಯನದಿಗಳೆಲ್ಲ ಅವರ ಅವಶೇಷವನ್ನು ಹೊತ್ತ ಹೆಮ್ಮೆಗೆ ಹಿಗ್ಗಿ ಉಲ್ಲೋಲಕಲ್ಲೋಲವಾಗಿ ಸಾಗರೇಶ್ವರನೆಡೆಗೆ ಸಾಗುತ್ತಿವೆ. ಅವರ ದಿವ್ಯ ಚಿತೆಯ ಬೂದಿ ಎಲ್ಲೆಲ್ಲಿಯೂ ಹರಡಿ ಭರತವರ್ಷದ ಮೃತ್ತಿಕೆಯನ್ನು ಪವಿತ್ರತರವನ್ನಾಗಿ ಮಾಡಿದೆ. ಮಹಾತ್ಮರು ಬೂದಿಯಲ್ಲಿಯೂ ಬೆಂಕಿ ಎಂಬುದನ್ನು ನೆನೆದರೆ ಆ ಅಗ್ನಿಕುಂಡದಲ್ಲಿ ನಮ್ಮ ಕೊಳೆಕಸಗಳೆಲ್ಲ ಸುಟ್ಟುಹೋಗುವುದರಲ್ಲಿ ಸಂದೇಹವಿಲ್ಲ. ಅಸ್ಪೃಶ್ಯತೆ, ಜಾತಿಮಾತ್ಸರ್ಯ, ವರ್ಣದ್ವೇಷ, ಆವಶ್ಯಕವಾಗಿರುವುದಕ್ಕಿಂತಲೂ ಹೆಚ್ಚಾದ ಪ್ರಾಂತೀಯತಾಸ್ಪರ್ಧೆ, ಶ್ರೀಮಂತ ದರಿದ್ರ ಭಿನ್ನತೆ, ಕ್ರೌರ್ಯಪ್ರತೀಕಾರ ಮನೋಧರ್ಮ-ಇವೆಲ್ಲವೂ ಅವರ ಚಿತಾಗ್ನಿಯಲ್ಲಿ ದಹಿಸಿಹೋಗಲಿ ಎಂದು ಪ್ರಾರ್ಥಿಸೋಣ.

ನಮ್ಮ ಪುಣ್ಯನದಿಗಳಿಂದು ಗಾಂಧಿ ಗಾಂಧಿ ಗಾಂಧಿ ಎಂದು ಕಲ್ಲೋಲರವದಿಂದ ಹರಿಯುತ್ತಿವೆ. ನಮ್ಮ ಹಕ್ಕಿಗಳೆಲ್ಲ ಮಹಾತ್ಮಾ ಗಾಂಧಿಗೆ ಜಯ್ ಎಂದು ಉಲಿಯುತ್ತಿವೆ. ನಮ್ಮ ಅನಿಲದೇವ ಗಾಂಧೀಜಿಯ ಗಂಧಚಿತೆಯ ಸುಗಂಧವನ್ನು ಹೊತ್ತು ಆನಂದೋನ್ಮತ್ತನಾಗಿ ಬೀಸುತ್ತಿದ್ದಾನೆ. ನಮ್ಮ ಅಗ್ನಿದೇವ ಮಹಾತ್ಮರ ಪವಿತ್ರ ಕಳೇಬರವನ್ನು ದಹಿಸಿದ ಪುಣ್ಯಕರ್ತವ್ಯಕರ್ಮದಿಂದ ಕೃತನಾಗಿ ಭವ್ಯತರನಾಗಿದ್ದಾನೆ! ಪುತ್ರಸರ್ವೋತ್ತಮನಾದ ಗಾಂಧೀಜಿಯನ್ನು ಹೆತ್ತು ಹೊತ್ತು ಭಾರತಾಂಬೆಯ ಪಾದಪ್ರಕ್ಷಾಲನ ಪುಣ್ಯಕಾರ್ಯದಿಂದ ಭಾವೋನ್ಮತ್ತನಾಗಿ ಸಮುದ್ರರಾಜನು ತರಂಗತರಂಗಗಳಲ್ಲಿಯೂ ಸಗದ್ಗದ ಕಂಠನಾಗಿದ್ದಾನೆ. ಏಕೆಂದರೆ, ಇದು ದಿಟವಾಗಿಯೂ ವಿರಾಡ್‌ಘಟನೆ, ಸಮಸ್ತ ಪೃಥ್ವೀಚೇತನವನ್ನೂ ಊರ್ಧ್ವಮುಖವಾಗಿಸುವ ವಿರಾಡ್‌ಘಟನೆ!

ಭಕ್ತಿಮಹಿಮೆಯನ್ನು ಕಂಡು ಹೇಳುವ ನಾರದಮಹರ್ಷಿಗಳ ಪೂಜ್ಯವಾಣಿ ಪ್ರಮಾಣಪುರುಷರಾದ ಮಹಾತ್ಮಾ ಗಾಂಧೀಜಿಗೆ ಸಂಪೂರ್ಣವಾಗಿ ಅನ್ವಯಿಸುತ್ತದೆ. "ತೀರ್ಥೀಕುರ್ವಂತಿ ತೀರ್ಥಾನಿ; ಸುಕರ್ಮೀ ಕುರ್ವಂತಿ ಕರ್ಮಾಣಿ; ಸಚ್ಛಾಸ್ತ್ರೀ ಕುರ್ವಂತಿ ಶಾಸ್ತ್ರಾಣಿ. ನಾಸ್ತಿ ತೇಷು ಜಾತಿ ವಿದ್ಯಾ ರೂಪ ಕುಲಧನ ಕ್ರಿಯಾದಿ ಭೇದಃ."

"ತೀರ್ಥಗಳನ್ನು ಸುತೀರ್ಥಗಳನ್ನಾಗಿ ಮಾಡುತ್ತಾರೆ; ಕರ್ಮಗಳನ್ನು ಸುಕರ್ಮಗಳನ್ನಾಗಿ ಮಾಡುತ್ತಾರೆ; ಶಾಸ್ತ್ರಗಳನ್ನು ಸಚ್ಛಾಸ್ತ್ರಗಳನ್ನಾಗಿ ಮಾಡುತ್ತಾರೆ; ಅವರಲ್ಲಿ ಜಾತಿ ವಿದ್ಯೆ ರೂಪ ಕುಲ ಧನ ಕ್ರಿಯಾದಿ ಭೇದಗಳಿಲ್ಲ."

ಆರು ತಿಂಗಳ ಹಿಂದೆ ಭರತವರ್ಷದ ಸ್ವಾತಂತ್ರ್ಯೋದಯದ ಮಹಾ ಮುಹೂರ್ತದಲ್ಲಿ ಸ್ವಾತಂತ್ರ್ಯ ಶಿಲ್ಪಿ ಮಹಾತ್ಮ ಗಾಂಧೀಜಿಯನ್ನು ನಿರ್ದೇಶಿಸಿ ಬರೆದ ಕವನಪಂಕ್ತಿಗಳನ್ನೋದಿ ನನ್ನ ಈ ಭಾಷಣರೂಪದ ಭಕ್ತಿಕಾಣಿಕೆಯನ್ನು ಬಾಪೂಜಿಯ ಸಿರಿಯಡಿಗೆ ಸಾಷ್ಟಾಂಗ ನಮಸ್ಕಾರಪೂರ್ವಕವಾಗಿ ಸಮರ್ಪಿಸುತ್ತೇನೆ:

"ಮರೆವುದೆಂತಾ ನಮ್ಮ ಸ್ವಾತಂತ್ರ್ಯ ಶಿಲ್ಪಿಯಂ
ದಿವ್ಯದಿನದೀ ಶುಭ ಮುಹೂರ್ತದಲ್ಲಿ?
ಮರೆವುದೆಂತಯ್ ಭುವನ ಗೌರವ ಮಹಾತ್ಮನಂ
ಸ್ವಾತಂತ್ರ್ಯದೀ ಸುಪ್ರಭಾತದಲ್ಲಿ?
ಹೆಜ್ಜೆ ಹೆಜ್ಜೆಯನಿಡಿಸಿ ಕೈಹಿಡಿದು ನಡೆಗಲಿಸಿ
ಬಿಡುಗಡೆಗೆ ತಂದ ಆ ತಂದೆಯೆಲ್ಲಿ?
ಎಲ್ಲಿ? ಓ ಅವನೆಲ್ಲಿ? ನಿಚ್ಚವೂ ನಮ್ಮೆದೆಯ
ನಂಜೀಂಟುವಾ ನೀಲಕಂಠನೆಲ್ಲಿ?

ಜನಮನದ ಹಗೆತನದ ರೋಷಹಾಲಾಹಲದಿ
ಹಾಲುದಿಸಿ ಬರುವಂತೆ ಮೂಡಿ ಬಂದೆ!
ಕ್ರಿಸ್ತಬುದ್ಧರ ಮೈತ್ರಿಯಂ ಸಾರಿ ಸಾಧಿಸುತೆ
ವಿಶ್ವ ಸೇವಕರ ಪಂಕ್ತಿಯಲ್ಲಿ ನಿಂದೆ!
ಯಂತ್ರ ನಾಗರಿಕತೆಯ ರಾಜಕೀಯದ ಕುಟಿಲ
ತಂತ್ರಕಧ್ಯಾತ್ಮ ಮಂತ್ರವನ್ನು ತಂದೆ!
ಇಂದಿನುತ್ಸವಕೆಮ್ಮನುಳಿದೆಲ್ಲಿ ಹೋದೆ, ಹೇ
ಸ್ವಾತಂತ್ರ್ಯ ಕನ್ಯೆಯಂ ಪಡೆದ ತಂದೆ?

*　　*　　*

ಇಲ್ಲಿ ಉತ್ಸವದೊಳವನಿಲ್ಲ; ಆ ದೂರದಲಿ
ಕ್ರೋಧಕಾರ್ಪಣ್ಯ ರೋದನಗಳೊಡನೆ,
ಕೆನ್ನೀರು ಕಣ್ಣೀರುಗಳ ಹೊನಲ ಗೋಳ್ ನಡುವೆ
ದಾರಿದ್ರ್ಯದೈನ್ಯ ಧನಮದಗಳೊಡನೆ
ವಾದಿಸುತೆ ಬೋಧಿಸುತೆ ಕರುಣೆಯಂ ಸಾಧಿಸುತೆ
ಭಕ್ತಿಯಿಂ ದೇವನಂ ಪ್ರಾರ್ಥಿಸುತ್ತೆ
ನಿರಶನ ವ್ರತನಿಷ್ಠನಾಗಿಹನು ನೋಡಲ್ಲಿ
ಧರ್ಮ ಶಕ್ತಿಯ ಕೃಪೆಯನರ್ಥಿಸುತ್ತೆ!

ಈಶ್ವರ ಕೃಪಾಬಲದ ಯಾಚನೆಯ ಸಲುವಾಗಿ
ಭೂಮಾತೆ ಕಳುಹಿಸಿಹ ದೂತಭಿಕ್ಷು:
ಈ ಲೋಕಮಂ ನಿರ್ನಿಮೇಷಮವಲೋಕಿಸುವ
ಆ ಲೋಕ ಋತದೊಂದಲೋಕ ಚಕ್ಷು;
ಸೃಷ್ಟಿಕರ್ತಂ ಸೃಷ್ಟಿ ತಾನಾಗಿ ಸೃಷ್ಟಿಯೊಳೆ
ದುಡಿಯುತಿರ್ಪುದಕವನೆ ದಿವ್ಯಸಾಕ್ಷಿ!
ಗಾಂಧಿಯೆಂಬಾ ಪೆಸರೆ ನಾಂದಿಯಾಗಲಿ ನಮ್ಮ
ಸ್ವಾತಂತ್ರ್ಯಸಂಭ್ರಮಕೆ: ಹಾಡು, ಪಕ್ಷಿ!”

---

[1] ಮಹಾತ್ಮಾಜಿಯವರ ಅಸ್ಥಿವಿಸರ್ಜನಾನಂತರ ಮೈಸೂರು ನಗರದಲ್ಲಿ ತಾ.೧೨-೨-೪೮ರಲ್ಲಿ ನಡೆದ ಪ್ರಚಂಡ ಬಹಿರಂಗ ಸಭೆಯಲ್ಲಿ ಮಾಡಿದ ಭಾಷಣ.

## ದಿವಂಗತ ರಾಷ್ಟ್ರಪಿತ ![1]

ರಾಷ್ಟ್ರಪಿತ ದಿವಂಗತ
ಉನ್ಮತ್ತ ಹಸ್ತ ಹತ!
ನರಹೃದಯದ ವಿಷವಾರ್ಧಿಗೆ
ಜೀವಾಮೃತ ಸಮರ್ಪಿತ!
ಕ್ಷಮಿಸು, ಓ ಜಗತ್‌ಪಿತಃ
ಅದೃಷ್ಟ ಹೀನ ಭಾರತ!

ನಮ್ಮ ರಾಷ್ಟ್ರದ ಪಿತಾಮಹನು ರಣರಂಗದ ಮಧ್ಯೆ ಶರಶಯ್ಯೆಯಲ್ಲಿ ಅಸ್ತಂಗತನಾದನು. ನಮ್ಮ ಸಾಕ್ರೆಟೀಸನಿಗೆ ವಿಷಪಾನ ಮಾಡಿಸಿಯಾಯಿತು. ನಮ್ಮ ಯೇಸು ಕ್ರಿಸ್ತನು ಶಿಲುಬೆಗೇರಿದನು. ಜಗದ್ವಂದ್ಯ ಲೋಕಗುರು ಪೂಜ್ಯ ಮಹಾತ್ಮಾಗಾಂಧಿ ತಲೆಕೆಟ್ಟ ಕೊಲೆಗಾರನೊಬ್ಬನ ಕ್ರೂರ ಹಸ್ತದಿಂದ ಪ್ರಾರ್ಥನಾ ಸಭೆಯ ವೇದಿಕೆಯ ಮೇಲೆ, ತಮ್ಮಿಬ್ಬರು ಮೊಮ್ಮಕ್ಕಳ ಪ್ರೇಮ ಬಾಹುಗಳ ನಡುವೆ ನಿಂತು, ತಮ್ಮನ್ನು ಸ್ವಾಗತಿಸುತ್ತಿದ್ದ ವಿಪುಲಜನವೃಂದಕ್ಕೆ ತಮ್ಮೆರಡು ಕೈಗಳನ್ನೂ ಹಣೆಗೆತ್ತಿ ನಮಸ್ಕರಿಸುತ್ತಿದ್ದಾಗಲೇ ಮೃತ್ಯು ರಾಹುವಿಗೆ ತುತ್ತಾದರು. ವೇದಿಕೆಯ ಮೇಲೆ ಅತಿ ಸಮೀಪದಲ್ಲಿ ಕುಳಿತ ಹಿಂದೂ ಯುವಕನೊಬ್ಬನು ಚಿಮ್ಮಿ ನಿಂತು ಅವರ ತೆರೆದೆದೆಗೆ ಗುಂಡಿಟ್ಟು ಕೊಂದನಂತೆ. ಹಿಂದೆಂದೂ ಭರತಖಂಡದಲ್ಲಿ ನಡೆಯದಂತಹ ಇಂತಹ ಅಸಹ್ಯವಾದ ಘೋರ ಪಾತಕವನ್ನು ಇಂದು ನಡೆಸಿ ನಮ್ಮ ದೇಶಕ್ಕೆ ದೇಶವೇ ಜಗತ್ತಿನ ಮುಂದೆ ಮಹಾಪರಾಧಿಯಾಗಿದೆ; ಅವಮಾನಿತವಾಗಿದೆ; ನಾವು ತಲೆಯೆತ್ತಿ ನಡೆಯದಂತಾಗಿದೆ. ನಮ್ಮ ದೇಶ ತಿರಸ್ಕಾರಕ್ಕೊ

ಶಾಪಕ್ಕೂ ಪಕ್ಕಾಗಿದೆ. ಈ ಪಾಪಕರ್ಮಕ್ಕೆ ತಕ್ಕ ತಪಸ್ಯೆಯಿಂದ ಪಶ್ಚಾತ್ತಾಪದಿಂದ ಪ್ರಾಯಶ್ಚಿತ್ತಮಾಡಿಕೊಳ್ಳದಿದ್ದರೆ ನಮಗೆ ಯೇಸು ಕ್ರಿಸ್ತನನ್ನು ಮೊಳೆಹೊಡೆದು ಕೊಂದ ಜನಾಂಗಕ್ಕಾಗಿರುವ ದುರ್ಗತಿಯೇ ಒದಗುತ್ತದೆಯೋ ಏನೋ ಎಂದು ಹೆದರಿಕೆಯಾಗುತ್ತಿದೆ.

ಮತ್ತೇನಿದ್ದೀತು ನಾವು ಕೈಕೊಳ್ಳುವ ಆ ಪ್ರಾಯಶ್ಚಿತ್ತ? ಯಾವ ಮಹಾಪುರುಷನ ಪ್ರೇಮಮಯ ಹೃದಯವು ಗುಂಡು ತಗುಲಿ ಬಿರಿಯಿತೋ ಆ ಹೃದಯದ ಆಶೆ ಆಕಾಂಕ್ಷೆ, ಆದರ್ಶಗಳನ್ನು ಅಚಂಚಲವಾದ ದೃಢತೆಯಿಂದ ಆಚರಿಸಿ ಸಾಧಿಸುವುದೊಂದೇ ನಮಗೆ ಮುಂದಿರುವ ಶ್ರೇಯೋಮಾರ್ಗ. ಶಿಲುಬೆಗೇರಿದ ಯೇಸು ಕ್ರಿಸ್ತನಿಗೆ 'ಕ್ಷಮಿಸು, ತಂದೆ!' ಎಂದು ಮಾನವರ ಪರವಾಗಿ ಭಗವಂತನನ್ನು ಬೇಡಲು ಸ್ವಲ್ಪ ಪ್ರಜ್ಞೆಯಾದರೂ ಇತ್ತಂತೆ. ನಿನ್ನೆ ಮಡಿದ ನಮ್ಮ ಕ್ರಿಸ್ತನಿಗೆ ಅಷ್ಟಕ್ಕೂ ಅವಕಾಶಕೊಡದಷ್ಟು ಬೇಗನೆ ಪ್ರಜ್ಞೆ ಹೋಯಿತಂತೆ. ಆದರೂ ಆತನ ಮುಖಮುದ್ರೆ ಪ್ರಶಾಂತವಾಗಿ, ಕ್ಷಮಾಶೀಲವಾಗಿ, ಧ್ಯಾನ ಪೂರ್ಣಶಾಂತಿಯಿಂದ ತುಂಬಿ, 'ಕ್ಷಮಿಸು ತಂದೆ!' ಎನ್ನುವಂತಿತ್ತೆಂದು ಆ ವರ್ಣನೆಯನ್ನು ಕೇಳಿದವರೆಲ್ಲರಿಗೂ ವೇದ್ಯವಾಗಿರಬೇಕು. ಮೃತಸ್ಥಿತಿಯಲ್ಲಿಯೂ ಅಮೃತವನ್ನೇ ಪ್ರೋಕ್ಷಿಸುತ್ತಿದ್ದ ಆ ಮುಖನಿದ್ರೆಯ ಸಂದೇಶ-ಕ್ಷಮೆ, ಪ್ರೇಮ, ಸತ್ಯ, ಅಹಿಂಸೆ ಇವು ನಮಗೆ ರಕ್ಷಾಮಂತ್ರಗಳಾಗಬೇಕು. ಹಾಗಾದರೆ ಮಾತ್ರವೆ ನಮ್ಮ ದೇಶದ ಸದ್ಯೋಜಾತ ಸ್ವಾತಂತ್ರ್ಯಕ್ಕೆ ರಕ್ಷಾಯಂತ್ರ ಸಿದ್ಧವಾಗುತ್ತದೆ.

ಎಷ್ಟು ಅನಿರೀಕ್ಷಿತ, ಎಷ್ಟು ಆಕಸ್ಮಿಕ, ಎಷ್ಟು ಭಯಂಕರವಾಗಿತ್ತು ನಿನ್ನೆ ಬಂದ ಆ ಘೋರ ವಾರ್ತೆ! ಮೊನ್ನೆತಾನೆ ಆಮರಣ ಪರ್ಯಂತ ಕೈಕೊಂಡ ಉಪವಾಸ ವ್ರತದಿಂದ ದೆಹಲಿಯ ವಿಷಸಮುದ್ರವನ್ನೂ ಕ್ಷೀರಸಾಗರವಾಗಿ ಪರಿವರ್ತಿಸಿ, ಲೋಕದ ಪ್ರಶಂಸೆಗೂ ಪೂಜೆಗೂ ಕೃತಜ್ಞತೆಗೂ ಪಾತ್ರರಾಗಿದ್ದರು. ಅಲ್ಲದೆ ನಮ್ಮೆಲ್ಲರಲ್ಲಿ ಮತ್ತೊಂದು ಹೊಸ ಆಶೆಯನ್ನೂ ಪ್ರಚೋದಿಸಿದ್ದರು. ನೂರಿಪ್ಪತ್ತೈದುವರ್ಷದ ಹೊಂಗನಸು ಎಪ್ಪತ್ತೆಂಟಕ್ಕೇ ಬಿರಿಯುವಂತೆ ಮಾಡಿದ ಈಶ್ವರೇಚ್ಛೆಯ ಕಟುಲೀಲೆಗೆ ಏನು ಹೇಳುವುದು? ತಲೆಬಾಗಿ ಮೂಕರಾಗುವುದೊಂದೇ ದಾರಿ. ಆ ವಾರ್ತೆ ಕಿವಿಗೆ ಬಿದ್ದಾಗ ಜನ ನಕ್ಕುಬಿಟ್ಟರು. ಅದನ್ನು ತಿಳಿಸಿದವರಿಗೆ ಛೀ ಮಾಡಿದರು. ಸತ್ತರೆಂದು ನಂಬುವುದಾದರೂ ಎಂತು? ಗುಂಡು ಬಿದ್ದು ಸತ್ತರೆಂದಾಗಲಂತೂ ಯಾರೂ ನಂಬದೆಹೋದರು. ಏನು? ಗಾಂಧೀಜಿಗೆ? ಗುಂಡಿನೇಟು? ಅಸಾಧ್ಯ! ಅಸಂಭವ? ಅವಿವೇಕ! ಸುಳ್ಳು! ಖಂಡಿತ ಸುಳ್ಳು! ಅಕಾಶವಾಣಿ ಶೋಕವಾರ್ತೆಯನ್ನು ಮತ್ತೆ ಮತ್ತೆ ಒತ್ತಿಯೊತ್ತಿ ಹೇಳಿದಾಗ ನಂಬಲೇಬೇಕಾಗಿ ಬಂತು. ಆಗಂತೂ ಜನರಲ್ಲುಂಟಾದ ಕಳವಳ ಭೀತಿ, ನಿರಾಶೆ, ಸಂಕಟ ಇವುಗಳನ್ನು ಹೇಳತಿರದು. ಬದುಕಿನ ಅರ್ಥವೇ ಇದ್ದಕ್ಕಿದ್ದಂತೆ ಶೂನ್ಯವಾದಂತಾಯಿತು, ಜೀವನದ ಪ್ರಯೋಜನವೇ ಕೊನೆಮುಟ್ಟಿದಂತೆ ತೋರಿತು. ಗಾಂಧಿ ಇಲ್ಲದ ಜಗತ್ತು! ತೆಗೆ ತೆಗೆ ಅದೆಲ್ಲಿಯ ಮಾತು! ಎರಡು ತಲೆಮಾರುಗಳಿಂದ ಪ್ರಪಂಚದ, ಅದರಲ್ಲಿಯೂ ಭರತ ಖಂಡದ, ಬಾಳನ್ನೆಲ್ಲ ಆವರಿಸಿ, ಉಸಿರನ್ನೆಲ್ಲ ತುಂಬಿ ಚೇತನಕ್ಕೆ ಶಕ್ತಿಯಾಗಿ, ಕಣ್ಣಿಗೆ ಬೆಳಕಾಗಿ, ದಾರಿಗೆ ಸಂಗಾತಿಯಾಗಿ, ಕೆಳೆಯನಾಗಿ, ನಾಯಕನಾಗಿ, ಸುಧಾರಕನಾಗಿ, ಮಾರ್ಗದರ್ಶಿಯೂ ಗುರುವೂ ಆಗಿದ್ದ ಗಾಂಧಿಯಿಲ್ಲದ ಜಗತ್ತು ಜಗತ್ತೆ? ಅದೊಂದು ಅಮಂಗಲ ವಿಪತ್ತು! ಉಳಿದವರ ಮಾತಿರಲಿ! ನೆಹರು, ಪಟೇಲ್, ಅಜಾದ್‌ಅಂಥವರಿಗೂ ಏನಾಯಿತೆಂಬುದನ್ನು ರೇಡಿಯೋದಿಂದ ಕೇಳಿದ್ದೇವೆ. ಭಾರತದ ಪ್ರಧಾನಿ ಮತ್ತು ಉಪಪ್ರಧಾನಿ ಇಬ್ಬರೂ ದೆಹಲಿಯಿಂದ ಮಾಡಿದ ಪ್ರಸಾರ ಭಾಷಣಗಳಲ್ಲಿ ತಮ್ಮ ತಮ್ಮ ಸಹಜ ಧೈರ್ಯವನ್ನೂ ಒತ್ತಿ ಮೀರಿಬಂದ ದುಃಖಾತಿಶಯಕ್ಕೆ ಗದ್ಗದ ಧ್ವನಿ ನೀಡಿದುದನ್ನು ನಾವೆಲ್ಲರೂ ಆಲಿಸಿ ಮರುಗಿದ್ದೇವೆ.

ನಿಜ, ನಮ್ಮ ದುಃಖಕ್ಕೆ ತೀರವಿಲ್ಲ; ನಮ್ಮ ನಷ್ಟಕ್ಕೆ ಅಳತೆಯಿಲ್ಲ. ಎಂದೆಂದಿಗೂ ಪಡೆಯಲಾಗದ ಒಡವೆ ಚ್ಯುತವಾಗಿದೆ. ನಮ್ಮ ಆಧ್ಯಾತ್ಮಿಕ ರಿಕ್ತತೆಯೋ ಪಾತಾಳದಂತೆ ಗಭೀರವಾಗಿದೆ; ಆಕಾಶದಂತೆ ವಿಸ್ತಾರವಾಗಿದೆ. ನಿನ್ನೆ ಸರ್ವದೇಶಗಳನ್ನೂ ನಗುವಂತೆ ಶ್ರೀಮಂತರಾಗಿದ್ದವರು ಇಂದು ಎಲ್ಲ ನಾಡುಗಳೂ ನಗುವಂತೆ ದಟ್ಟದರಿದ್ರರಾಗಿದ್ದೇವೆ. ಆದರೂ, ಪಂಡಿತ ನೆಹರೂ ತಮ್ಮ ಭಾಷಣದಲ್ಲಿ ಹೇಳಿದಂತೆ, ಕ್ಲೈಬ್ಯಕ್ಕಿದು ಕಾಲವಲ್ಲ; ಅಧೈರ್ಯಕ್ಕಿದು ಅವಕಾಶವಲ್ಲ; ಅಸ್ಥಿರತೆಗೆ ಸಮಯವಲ್ಲ. ಗಾಂಧೀಜಿಗಾಗಿ ನಾವು ಅಳಬೇಕಾಗಿಲ್ಲ. ನಮ್ಮ ದುರದೃಷ್ಟಕ್ಕಾಗಿಯಾದರೂ ಅಳುತ್ತಾ ಕೂರುವುದು ಅವಿವೇಕವೆ. ಈಶ್ವರನ ಲೀಲೆಯಲ್ಲಿ ಇಂತಹ ಘಟನೆ ಮೊತ್ತಮೊದಲನೆಯದಲ್ಲವೆಂದೂ ತೋರುತ್ತದೆ. ಶ್ರೀಕೃಷ್ಣನು ಎಂತಹ ದುರಂತ ಸನ್ನಿವೇಶದಲ್ಲಿ ಮೃತನಾದನೆಂಬುದನ್ನು ಊಹಿಸಿಕೊಳ್ಳಿ. ಶ್ರೀ ರಾಮಚಂದ್ರನಿಗೆ ಕೊನೆ ಬಂದ ಪರಿಯನ್ನು ನೆನೆಯಿರಿ. ಶ್ರೀ ಕ್ರಿಸ್ತನು ಎಂತಹ ದುರ್ಮರಣಕ್ಕೀಡಾದನು ಎಂಬುದನ್ನು ಪರ್ಯಾಲೋಚಿಸಿ. ನಮಗೆ ಅನರ್ಥವಾಗಿ ತೋರುವುದು ಈಶ್ವರನ ಸಮಷ್ಟಿದೃಷ್ಟಿಗೆ ಅರ್ಥಪೂರ್ಣವೂ ಸಾರ್ಥಕವೂ ಆಗಿರಬಾರದೇನು? ಮಹಾತ್ಮರೇ ಹೇಳುತ್ತಿದ್ದರು: ‘ನನ್ನನ್ನು ಕೊಲ್ಲುವ ಸಾಮರ್ಥ್ಯ ಈಶ್ವರನೊಬ್ಬನಿಗೇ ಇದೆ’ ಎಂದು. ಕೊಂದವನು ಯಃಕಶ್ಚಿತ ಮನುಷ್ಯನಾದರೂ ಅಲ್ಲಿಯೂ ರುದ್ರನ ಹಸ್ತವನ್ನು ಕಾಣಬಹುದು. ಸರ್ವಮಂಗಲ ನಿಧಿಯಾದ ಭಗವಂತನ ಇಚ್ಛೆಯಲ್ಲಿ ಶ್ರದ್ಧೆಯಿಟ್ಟು ಸಮಾಧಾನ ತಂದುಕೊಂಡು ಮುಂದಿನ ಕಾರ್ಯಕ್ಕೆ ಸೊಂಟ ಕಟ್ಟಿ ನಿಲ್ಲಬೇಕು. ಆತ್ಮದ ಅಮೃತತ್ವದಲ್ಲಿಯೂ ಅವತಾರಗಳಲ್ಲಿಯೂ ಜನ್ಮಾಂತರ ಮತ್ತು ಪುನರ್ಜನ್ಮಗಳಲ್ಲಿಯೂ ಶ್ರದ್ಧಾಲುಗಳಾದ ನಮಗೆ ಪೂಜ್ಯ ಗಾಂಧೀಜಿಯ ದೇಹಾವಸಾನವು ಪುನರುತ್ಥಾನಕ್ಕೆ ಪ್ರಚೋದನವಾಗಬೇಕು. ಸ್ಥಿತಿಪ್ರಜ್ಞರಾದ ಗಾಂಧೀಜಿ ಮೃತರಾದರು ಎಂಬುದು ಲೋಕೋಪಚಾರದ ಮಾತು. ನಿಜವಾದ ನಿಜವಲ್ಲ. ಏಕ ದೇಹಸ್ಥವಾಗಿದ್ದ ಚೇತನ ಈಗ ಸರ್ವತ್ರವಾಗಿದೆ. ಆ ಶಕ್ತಿಗೆ ಅಂತ್ಯವಿಲ್ಲ. ಕಾಲ ಕಳೆದಂತೆಲ್ಲ ಅದು ಬಹುಗುಣಿತವಾಗುತ್ತ ಹೋಗುತ್ತದೆ. ಭಕ್ತಿಸೂತ್ರಗಳು ಹೇಳುವಂತೆ ಅಂತಹ ವಿಭೂತಿಗಳ ಆವಿರ್ಭಾವದಿಂದ ‘ಮೋದಂತೇ ಪಿತರೋ ನೃತ್ಯಂತಿ ದೇವತಾಃ ಸನಾಥಾ ಚೇಯಂ ಭೂರ್ಭವತಿ’: ‘ಪಿತೃಗಳು ನಲಿಯುತ್ತಾರೆ, ದೇವತೆಗಳು ಕುಣಿಯುತ್ತಾರೆ. ನಮ್ಮಿ ಪೃಥ್ವಿ ಸನಾಥಳಾಗುತ್ತಾಳೆ.’ ಗಾಂಧೀಜಿಯನ್ನು ನಮ್ಮಿ ಪೃಥ್ವಿ ಎಂದೆಂದಿಗೂ ಅನಾಥೆಯಲ್ಲ, ನಿತ್ಯ ಸನಾಥೆ! ಆ ಪೂಜ್ಯ ಮಹಾತ್ಮನು ನಮ್ಮನ್ನು ಕ್ಷಮಿಸಲಿ; ಆತನ ಕೃಪೆ ನಮ್ಮನ್ನು ಕೈಬಿಡದೆ ಕಾಯಲಿ; ಆ ದೇವಮಾನವನ ದಿವ್ಯಸ್ಮೃತಿ ಕಂಗೆಟ್ಟಿರುವ ನಮ್ಮ ಜನತೆಯ ಮುನ್ನಡೆಗೆ ಗಗನೋನ್ನತ ದೀಪಸ್ತಂಭವಾಗಲಿ!

ಮಹತ್ಮಾ ಗಾಂಧೀಕಿ ಜಯ್!
ಜಯ್ ಹಿಂದ್!

---

[1] ಗಾಂಧೀಜಿಯ ನಿಧನದ ಮರುದಿನ ಸಂಜೆ ಮೈಸೂರು ಆಕಾಶವಾಣಿಯಲ್ಲಿ ಮಾಡಿದ ಪ್ರಸಾರ ಭಾಷಣ (೩೧)

# ಶ್ರೀ ಅರವಿಂದರು : [೧-೫]

**ಇಹಜೀವನ ರೇಖೆ**

**೧**

“ನನ್ನ ಜೀವನವನ್ನು ಕುರಿತು ಬರೆಯಲು ಯಾರಿಗೂ ಸಾಧ್ಯವಿಲ್ಲ; ಏಕೆಂದರೆ ಮನುಷ್ಯದೃಷ್ಟಿಗೆ ಅಗೋಚರವಾದ ಭೂಮಿಕೆಯಲಲ್ಇಯೆ ಅದು ಸಾಗಿದೆ” ಎಮದು ಶ್ರೀ ಅರವಿಂದರು ಹೇಳಿದ್ದಾರೆ. ಯಾರ ಬದುಕಿನಲ್ಲಿ ಧರ್ಮ ಕರ್ಮರಂಗಗಳು ಅತೀಂದ್ರಿಯವೂ ಆಧ್ಯಾತ್ಮಿಕವೂ ಆಗಿರುವ ಲೋಕ ಲೋಕಾಂತರಗಳಲ್ಲಿಯೂ ಸಾಮಾನ್ಯ ಮಾನಸಗ್ರಾಹ್ಯವಲ್ಲದ ಸೂಕ್ಷ್ಮಾತಿ ಸೂಕ್ಷ್ಮವಾದ ಭೂಮಿಕೆಗಳಲ್ಲಿಯೂ ಅಂತರ್ಹಿತವಾಗಿದ್ದುವೋ ಅವರ ಆ ಜೀವನವು ನಮಗೆ “ಚರಿತ್ರೆ”ಯಾಗುವುದಾದರೂ ಎಂತು**?** ಮಾನುಷ್ಯ ಮನೋಮಯದ ವಾಗ್ವಿಧಾನಗಳಿಂದ ಆ ‘ಅತಿಮಾನಸ’ದ ಅನುಭವಗಳನ್ನು ತತ್ತ್ವಗಳನ್ನೂ ಅದರ ಸಂಭೂತಿಯ ಪ್ರಕಾರಗಳನ್ನೂ ಉಕ್ತಿವಶವಾಗುವಂತೆ ವರ್ಣಿಸುವುದಾದರೂ ಎಂತು**?**

“ಕಾ ತೇ ಸ್ತುತಿಃ ಸ್ತವ್ಯಪರಾ ಪರೋಕ್ತಿಃ.”

ಆದರೆ ಮನುಷ್ಯದೃಷ್ಟಿಯಲ್ಲಿ, ಮಾನುಷ್ಯರೀತಿಯಲ್ಲಿ, ಮಾನವ ಬುದ್ಧಿಗ್ರಾಹ್ಯವಾಗುವಂತೆ ಮತ್ತು ಪ್ರತಿಭಾಗೋಚರವಾಗುವಂತೆ ಅವಿರ್ಭಾವಗೊಂಡಷ್ಟನ್ನು ಮಾತ್ರ ನಾವು ನಮ್ಮ ರೀತಿಯಿಂದ ಮುಟ್ಟಿ. ಕಟ್ಟಿ. ಒಂದು “ದೃಷ್ಟಿ”ಯನ್ನು ರೂಪಿಸಿಕೊಳ್ಳಬಹುದು. ಆ ‘ದೃಷ್ಟಿ’ ಪ್ರತಿಮಾ ಮಾತ್ರವಾದುದಾದರೂ ಅದರಿಂದ ನಮ್ಮ ಪ್ರಗತಿಗೆ ವಿಕಾಸಕ್ಕೆ ಉದ್ಧಾರಕ್ಕೆ ಮಹತ್ತರ ಸಹಾಯ ಒದಗುತ್ತದೆ, ಶ್ರೀ ಅರವಿಂದರ ಮರ್ತ್ಯಶರೀರದ ಭಾವಚಿತ್ರದಿಂದ ಸಾಧಕನಿಗೆ ಒದಹಬಹುದಾದ ಒಂದು ವಿಧವಾದ ಸಹಾಯದಂತೆ. ಭಗವಂತನ ವಿಶ್ವರೂಪ ದರ್ಶನವನ್ನು ಕಂಡಳ್ಕಿ ಅರ್ಜುನನೂ ಕೂಗಿಕೊಳ್ಳಲಿಲ್ಲವೆ, “ತೇನೈವ ರೂಪೇಣ ಚತುರ್ಭುಜೇನ ಸಹಸ್ರಬಾಹೋ ಭವ ವಿಶ್ವಮುರ್ತೇ” ಎಂದು**?** ನರತ್ವಕ್ಕೆ ಭಗವಂತನ ಸಹಸ್ರಬಾಹುತ್ವವನ್ನು ನೋಡಬೇಕೆಂಬುದೇನೊ ಬಯಕೆ. ಆದರೆ ಕಂಡೊಡನೆ ಕೂಗಿಕೊಳ್ಳುತ್ತದೆ “ಸಾಕು, ಸ್ವಾಮಿ, ನಿನ್ನ ಚತುರ್ಭುಜವೇ ನನಗೆ ಸಾಕು!” ಎಂದು ಭಗವಂತನ ಆ ಅತಿಮಾನಸದ ಸುದುರ್ದರ್ಶರೂಪದಿಂದ ನಮ್ಮ ಈ ಪ್ರಕೃತಿಯ ಮಾನುಷರೂಪಕ್ಕೆ ಇಳಿದ ಮೇಲೆಯೆ ನಾವು ಸಂವೃತ್ತರೂ ಸಚೇತರೂ ಪ್ರಕೃತಿಗತರೂ ಆಗಿ ಮತ್ತೊಮ್ಮೆ ಎಂದಿನಂತೆ ಉಸಿರಾಡಲು ಸಮರ್ಥರಾಗುತ್ತೇವೆ, ಅರ್ಜುನನಂತೆ:

“ದೃಷ್ಟ್ವೇದಂ ಮಾನುಷಂ ರೂಪಂ ತವ ಸೌಮ್ಯಂ ಜನಾರ್ದನ**|**
ಇದಾನೀಮಸ್ಮಿ ಸಂವೃತ್ತಃ ಸಚೇತಾಃ ಪ್ರಕೃತಿಂ ಗತಃ**||**”

**೨**

ನಮಗೆ ದೃಗ್ಗೋಚರವಾಗುವ ಶ್ರೀ ಅರವಿಂದರ ಇಹಜೀವನದ ರೇಖೆ ಕ್ರಿ.ಶ.೧೮೭೨ನೆಯ ಅಗಸ್ಟ್ ೧೫ರಲ್ಲಿ ಪ್ರಾರಂಭವಾಗಿ, ದೇಶವಿದೇಶಗಳಲ್ಲಿ ಚಿತ್ರವಿಚಿತ್ರ ಮಾರ್ಗಗಳಲ್ಲಿ

ವಿಸ್ಮಯಕಾರಕವಾದ ಅನೇಕ ಪ್ರಕಾರಗಳಲ್ಲಿ ಕ್ಷೇತ್ರಗಳಲ್ಲಿ ರೂಪಗಳಲ್ಲಿ ಮಿಂಚಿ ಮಿಂಚಿ ಸಂಚರಿಸಿ, ಕ್ರಿ.ಶ.೧೯೫೦ರಲ್ಲಿ ತಾನು ಯಾವ ಅತೀತರಿಂದ ಹೊಮ್ಮಿ ಬಂದಿದ್ದಿತೊ ಆ ಅನಿರ್ವಚನೀಯವಾದ ಅತೀತದಲ್ಲಿ ರೂಪವಿಸರ್ಜನೆಮಾಡಿ ಮರ್ತ್ಯದೃಷ್ಟಿಗೆ ತಿರೋಹಿತವಾಗಿರುವುದನ್ನು ಕಾಣುತ್ತೇವೆ. ಅವರು ಹುಟ್ಟಿದ ದೇಶ ಮತ್ತು ಜನಿಸಿದ ಸಮಯ ಎರಡೂ ದೈವೀಶಕ್ತಿಗಳ ವಿಶೇಷ ಕೃಪೆಗೆ ಪಾತ್ರವಾಗಿದ್ದುವು. ಹತ್ತೊಂಬತ್ತನೆಯ ಶತಮಾನದ ವಂಗದೇಶದ ಶ್ರೀಮಂತ ಗರ್ಭದಿಂದ ಸಂಭವಿಸಿದ ಮಹಾ ವಿಭೂತಿಗಳ ದೇದೀಪ್ಯಮಾನವಾದ 'ಪವಿತ್ರಪಂಕ್ತಿ'ಯನ್ನು ಯಾರೂ ಪುಲಕಿತರಾಗದೆ ನೆನೆಯಲು ಸಾಧ್ಯವಿಲ್ಲ. ಅದನ್ನು ಆಕಸ್ಮಿಕ ಎಂದು ಭಾವಿಸುವುದಕ್ಕೂ ಸಾಧ್ಯವಾಗುವುದಿಲ್ಲ. ಯಾವುದೋ ಒಂದು ಮಹತ್ತಾದ ಶಕ್ತಿಯ ಮಹೋದ್ದೇಶವೇ ನಿಗೂಢಕಾರ್ಯದಲ್ಲಿ ತೊಡಗಿದ್ದಂತೆ ಭಾಸವಾಗುತ್ತದೆ.

[1] ಶ್ರೀ. ಅರವಿಂದರ ಜನನ ಕಾಲದಲ್ಲಿ ಶ್ರೀ ರಾಮಕೃಷ್ಣ ಪರಮಹಂಸರಿಗೆ ಮೂವತ್ತಾರು ವರ್ಷ ವಯಸ್ಸಾಗಿತ್ತು. ಆಗಾಗಲೆ ಆ ಅದ್ವಿತೀಯ ಭಗವದ್ವಿಭೂತಿ ತನ್ನ ಸಾಧನೆಗಳನ್ನೆಲ್ಲ ಪೂರೈಸಿ ಸರ್ವೋಚ್ಚಸಿದ್ಧಿಯಲ್ಲಿ ಸಂಸ್ಥಾಪಿತವಾಗಿತ್ತು. ಸ್ವಾಮಿ ವಿವೇಕಾನಂದರೂ ಕವಿ ರವೀಂದ್ರರೂ ಹತ್ತು ಹನ್ನೆರಡು ವರ್ಷದ ಹುಡುಗರಾಗಿದ್ದರು. ದೇವೇಂದ್ರನಾಥ ಠಾಕೂರ ಮತ್ತು ಕೇಶವ ಚಂದ್ರಸೇನರಂತಹ ಸುಧಾರಕವರ್ಗದವರ ಪ್ರಭಾವದಿಂದ ಸಾಮಾಜಿಕ ಮತ್ತು ಧಾರ್ಮಿಕ ವಲಯಗಳಲ್ಲಿ ನವೋದಯದ ಪ್ರಕ್ಷುಬ್ಧತೆ ವ್ಯಾಪಿಸಿತ್ತು. ಬಾಬು ಅರವಿಂದಘೋಷರ ಇಹಜೀವನವು ಅದೇ ಚೈತನ್ಯ ವೃಕ್ಷದ ಬೇರೊಂದು ಕೊಂಬೆಯಲ್ಲಿ ಮೊಗ್ಗಾಗಿ ಮೈದೋರಿತು.
ಆದರೆ ಒಂದಚ್ಚರಿ. ಇತರರ ಬಾಲ್ಯಜೀವನದ ಮೇಲೆ ಅಂದಿನ ಭಾರತೀಯವಾದ ನವಜಾಗ್ರತಿ ಯಾವ ಪ್ರಭಾವವನ್ನು ಎಷ್ಟು ಪ್ರಮಾಣದಲ್ಲಿ ಬೀರಿತೋ ಅಂತಹ ಪ್ರಭಾವವನ್ನು ಅಂತಹ ಪ್ರಮಾಣದಲ್ಲಿ ಅನುಭವಿಸಲು ಸಾಧ್ಯವಾಗಲಿಲ್ಲ, ಕುಮಾರ ಅರವಿಂದರಿಗೆ. ಅದಕ್ಕೆ ಲೌಕಿಕ ಕಾರಣಗಳು ಎರಡು. ಒಂದನೆಯದು, ಅವರ ತಂದೆ ಇಂಡಿಯನ್‌ಮಿಲಿಟರಿ ಸರ್ವಿಸ್‌ನಲ್ಲಿ ಡಾಕ್ಟರಾಗಿದ್ದುದರಿಂದ ಸಂಪೂರ್ಣವಾಗಿ 'ಪಾಶ್ಚಾತ್ಯ'ರಾಗಿದ್ದುದು. ಎರಡನೆಯದು, ಕುಮಾರ ಅರವಿಂದರು ಏಳು ವರ್ಷದವರಾಗಿದ್ದಾಗಲೆ ಅವರನ್ನು ಅವರ ಹಿರಿಯ ಸಹೋದರರೊಡನೆ ಪಾಶ್ಚಾತ್ಯ ರೀತಿಯಲ್ಲಿಯೆ ಸಂಪೂರ್ಣವಾಗಿ ತರಬಿಯತ್ತು ಮಾಡಿಸುವ ಸಲುವಾಗಿ ಇಂಗ್ಲೆಂಡಿಗೆ ಕಳುಹಿಸಿದ್ದು. ತನ್ನ ಏಳನೆಯ ವಯಸ್ಸಿನಲ್ಲಿಯೆ ಮಾತೃಭೂಮಿಯನ್ನು ಬಿಡುವ ಹುಡುಗನೊಬ್ಬನು ಅತಿ ದೂರವಾದ, ಎಲ್ಲ ಅರ್ಥದಲ್ಲಿಯೂ ಅತಿ ದೂರವಾದ, ಪರದೇಶದಲ್ಲಿಯೂ ಪರಭಾಷೆಯಲ್ಲಿಯೆ ವಿದ್ಯಾರ್ಜನೆಮಾಡಿ, ಪರಕೀಯವಾದ ಸಂಸ್ಕೃತಿಯಲ್ಲಿಯೆ ಪರಕೀಯರ ಸಂಗ ಸಹವಾಸಗಳಲ್ಲಿಯೆ ಅತ್ಯಂತ ಪ್ರಭಾವಪೂರ್ಣವಾದ ತಾರುಣ್ಯದ ಹದಿನಾಲ್ಕು ಸಂವತ್ಸರಗಳನ್ನು ಕಳೆದರೆ. ಎಂದರೆ ತನ್ನ ಇಪ್ಪತ್ತೆರಡನೆಯ ವಯಸ್ಸಿನವರೆಗೆ ಅಲ್ಲಿಯೆ ಬೆಳೆದರೆ, ಅತನಿಗೆ ಸ್ವದೇಶದ ಅತ್ಮಶ್ರೀಯ ಅರಿವೂ ಅನುಭವವೂ ಆಗುವುದಾದರೂ ಹೇಗೆ ತಾನೆ ಸಾಧ್ಯ?

**೩**

ಶ್ರೀ ಅರವಿಂದರ ತಂದೆ ಡಾ|| ಕೃಷ್ಣಧನಘೋಷರು; ತಾಯಿ ಶ್ರೀಮತಿ ಸ್ವರ್ಣಲತಾದೇವಿ.

ಡಾ|| ಕೃಷ್ಣಧನಘೋಷರನ್ನು ವಿಶೇಷ ವೈದ್ಯಕೀಯ ವಿದ್ಯಾರ್ಜನೆಗಾಗಿ ಇಂಗ್ಲೆಂಡಿಗೆ ಕಳುಹಿಸಿದಾಗ ಅವರ ಮಾವ (ಬಹುಶಃ ತನ್ನ ಮಗಳ ಹಿತಚಿಂತನೆಯಿಂದಲೂ ಇರಬೇಕು!) ಪಾಶ್ಚಾತ್ಯ ನಾಗರಿಕತಾ ಮೋಹಿನಿಗೆ ಮರುಳಾಗದಂತೆ ನೋಡಿಕೊಳ್ಳಬೇಕೆಂದು ಎಚ್ಚರಿಕೆ ಹೇಳಿದ್ದರೂ ಅಳಿಯನು ಎಲ್ಲ ಪ್ರಶಸ್ತಿಗಳನ್ನು ಸಂಪಾದಿಸಿಕೊಂಡು ಸ್ವದೇಶಕ್ಕೆ ಹಿಂದಿರುಗಿದಾಗ ನಖಶಿಖಾಂತವೂ ಸಂಪೂರ್ಣವಾಗಿ ಪಾಶ್ಚಾತ್ಯ ನಾಗರಿಕತೆಯ ಪರಮಭಕ್ತನೂ ಪರಮಾನುಯಾಯಿಯೂ ಆಗಿದ್ದನು. ಅವರ ಊರಾದ ಕೋನ್ನಗರದ ಸ್ವಜಾತೀಯ ಬಂಧುಗಳು ಮ್ಲೇಚ್ಛದೇಶಕ್ಕೆ ಹೋಗಿಬಂದ ಕೃಷ್ಣಧನಘೋಷರಿಗೆ 'ಶುದ್ಧಿ'ಗಾಗಿ 'ಪ್ರಾಯಶ್ಚಿತ್ತ' ಮಾಡಿಕೊಳ್ಳುವಂತೆ ಹೇಳಿದರು. ಕೃಷ್ಣಧನರು ಅವರನ್ನೆಲ್ಲ ತಿರಸ್ಕರಿಸಿ, ತಮ್ಮ ಮನೆ ಜಮೀನುಗಳನ್ನು ಮಾರಿ, ಊರನ್ನೆ ತ್ಯಜಿಸಿದರು. ಸರಕಾರದ ಸಿವಿಲ್‌ಸರ್ಜನ್‌ಆಗಿ ಅನೇಕ ಜಿಲ್ಲೆಗಳಲ್ಲಿ ಕೆಲಸಮಾಡಿ ಸೇವೆಸಲ್ಲಿಸಿ, ಪರೋಪಕಾರಕ್ಕೂ ಪರಮದುಃಖಕಾತರತೆಗೂ ಹೆಸರುವಾಸಿಯಾದರು. ಇಷ್ಟ, ರುಚಿ, ಅಭಿರುಚಿಗಳಲ್ಲಿ ಪೂರ್ತಿಯಾಗಿ 'ಪಾಶ್ಚಾತ್ಯ'ರಾಗಿದ್ದರೂ ಬಂಕಿಮಚಂದ್ರರ ಕಾದಂಬರಿಗಳಲ್ಲಿಯೂ ಸಮಾಜಸುಧಾರಣೆಗಳಲ್ಲಿಯೂ ಅವರು ತುಂಬ ಆಸಕ್ತರಾಗಿದ್ದರು. ಅವರ ಮನೆ ಐರೋಪ್ಯರಿಗೂ ಭಾರತೀಯರಿಗೂ ಮಧ್ಯೆ ಒಂದು ಸೇತುವೆಯಂತಿತ್ತು. ಅಲ್ಲಿ ಪ್ರತಿಷ್ಠಾವಂತರಾದ ಯೂರೋಪಿಯನ್ನರೂ ಬಂಗಾಳಿಗಳೂ ಕಲೆತು ಸರಸಲ್ಲಾಪಗಳಲ್ಲಿ ಭಾಗಿಗಳಾಗುತ್ತಿದ್ದರು.

ಅರವಿಂದರು ಹುಟ್ಟುವ ಮೊದಲೆ ಮಾತೆ ಸ್ವರ್ಣಲತಾದೇವಿಗೆ ವಿನಯಭೂಷಣ ಮತ್ತು ಮನಮೋಹನ ಎಂಬಿಬ್ಬರು ಗಂಡುಮಕ್ಕಳಾಗಿದ್ದರು. ಅರವಿಂದರು ಮೂರನೆಯ ಮಗನಾಗಿ ಸಂಭವಿಸಿದರು. ಅವರ ತಮ್ಮ ಬರೀಂದ್ರಕುಮಾರ ಹುಟ್ಟಿದ್ದು ಇಂಗ್ಲೆಂಡಿನಲ್ಲಿ, ಏಳು ವರ್ಷದ ಅರವಿಂದರನ್ನೂ ಅವರ ಅಣ್ಣಂದಿರಿಬ್ಬರನ್ನೂ ವಿದ್ಯಾರ್ಜನೆಯ ಸಲುವಾಗಿ ಅಲ್ಲಿ ಬಿಟ್ಟು ಬರಲು ತಾಯಿ ತಂದೆಯರಿಬ್ಬರೂ ಹೋಗಿದ್ದಾಗ.

ಅರವಿಂದರ ಐದನೆಯ ವರ್ಷದಲ್ಲಿ ಅವರನ್ನು ಅಣ್ಣಂದಿರಿಬ್ಬರೊಡನೆ ಡಾರ್ಜಿಲಿಂಗಿನ ಲೊರೆಟೊ ಕಾನ್‌ವೆಂಟ್‌ಸ್ಕೂಲ್‌ಗೆ ಕಳುಹಿಸಲಾಯಿತು. ಅಲ್ಲಿ ಅವರ ಒಡನಾಡಿಗಳು ಸಹಪಾಠಿಗಳು ಎಲ್ಲರೂ ಯೂರೋಪಿಯನ್‌ಮಕ್ಕಳ್! ಶಿಕ್ಷಣಮಾಧ್ಯಮ ಇಂಗ್ಲಿಷ್! ಸಂಭಾಷಣೆ ಇಂಗ್ಲಿಷಿನಲ್ಲಿ! ಪಾಠಪ್ರವಚನಗಳ ವಿಷಯ ಮತ್ತು ವಿಧಾನಗಳೂ ಇಂಗ್ಲಿಷ್! ಸ್ವದೇಶದಲ್ಲಿಯೆ ದೇಶಾಂತರವಾಸ!

ಡಾರ್ಜಿಲಿಂಗ್‌ನಲ್ಲಿ ಎರಡು ವರ್ಷ ಕಳೆದ ಮೇಲೆ ೧೮೭೯ರಲ್ಲಿ ಶ್ರೀಮತಿ ಸ್ವರ್ಣಲತಾದೇವಿಯೊಡನೆ ಡಾ|| ಕೃಷ್ಣಧನಘೋಷರು ತಮ್ಮ ಮೂವರು ಮಕ್ಕಳನ್ನು ಕರೆದುಕೊಂಡು ಇಂಗ್ಲೆಂಡಿಗೆ ಹೋದರು. ಮ್ಯಾಂಚೆಸ್ಟರ್‌ನಲ್ಲಿ ಒಂದು ಇಂಗ್ಲಿಷ್‌ಮನೆತನದ ಆಶ್ರಯದಲ್ಲಿ ಮೂವರೂ ಮಕ್ಕಳೂ ಪಾಶ್ಚಾತ್ಯ ವಿದ್ಯಾಪ್ರವೀಣರಾಗಲು ನಿಂತರು. ಪ್ರಾಚ್ಯದ ಲಜ್ಜಾಸ್ಪದವಾದ ಯಾವ ಸಂಪ್ರದಾಯದ ಸೋಂಕೂ ತಗಲದಂತೆ ಮಕ್ಕಳು ಸಂಪೂರ್ಣವಾಗಿ ಪಾಶ್ಚಾತ್ಯವಾದ ವಿದ್ಯೆ ನಾಗರಿಕತೆ ಸಂಸ್ಕೃತಿ ನಡೆನುಡಿ ಆಚಾರವ್ಯಹಾರಗಳಲ್ಲಿಯೆ ಬೆಳೆಯಬೇಕೆಂಬುದು ಕೃಷ್ಣಧನರ ಆಶಯವಾಗಿತ್ತು.

ಅರವಿಂದರು ಇದ್ದ ಮನೆತನದ ಯಜಮಾನನಿಗೆ ಲ್ಯಾಟಿನ್ ಭಾಷೆ ಚೆನ್ನಾಗಿ ಬರುತ್ತಿದ್ದುದರಿಂದ ಆತನು ಇವರಿಗೆ ಆ ಭಾಷೆಯನ್ನೂ ಹೇಳಿ ಕೊಟ್ಟನು. ನಾಲ್ಕೈದು ವರ್ಷಗಳಲ್ಲಿ ಆ ಮನೆಯವರು

ಊರುಬಿಡಬೇಕಾಗಿ ಬಂದುದರಿಂದ ಅರವಿಂದರು ಲಂಡನ್ನಿನ ಸೈಂಟ್ ಪಾಲ್ಸ್ ಸ್ಕೂಲಿಗೆ ಸೇರಿದರು. ಅರವಿಂದರಿಗೆ ಗ್ರೀಕ್‌ಭಾಷೆಯನ್ನು ಚೆನ್ನಾಗಿ ಕಲಿಸಿಕೊಟ್ಟವರು ಆ ಶಾಲೆಯ ಮುಖ್ಯೋಪಾಧ್ಯಾಯರೆ.

ಮತ್ತೂ ಐದು ವರ್ಷಗಳು ಕಳೆದುವು. ಅರವಿಂದರು ಕೇಂಬ್ರಿಡ್ಜಿನ ಕಿಂಗ್ಸ್ ಕಾಲೇಜ್‌ಗೆ ಸೇರಿದರು. ಅವರ ಮೇಧಾಶಕ್ತಿಗೂ ವಿದ್ವತ್ತಿಗೂ ಬಹುಮಾನ ರೂಪವಾಗಿ ವರ್ಷಕ್ಕೆ ಎಂಬತ್ತು ಪೌಂಡಿನ ಒಂದು ವಿಶೇಷ ವಿದ್ಯಾರ್ಥಿವೇತನ ಅವರಿಗೆ ಸಿಕ್ಕಿತು.

ಅರವಿಂದರು ತಮ್ಮ ತರಗತಿಯ ಪಾಠಗಳಿಗಾಗಿ ಹೆಚ್ಚುಕಾಲ ಕಳೆಯುತ್ತಿರಲಿಲ್ಲ. ಕಾಲದ ಬಹುಭಾಗವನ್ನೂ ಇಂಗ್ಲಿಷ್ ಕಾವ್ಯ, ಕಾದಂಬರಿ, ವಿಚಾರ ಸಾಹಿತ್ಯ ಇವುಗಳ ಅಧ್ಯಯನದಲ್ಲಿಯೂ ಫ್ರೆಂಚ್‌ಸಾಹಿತ್ಯ ಮತ್ತು ಯೂರೋಪಿಯನ ಚರಿತ್ರೆಗಳ ಕೂಲಂಕಷವಾದ ಜ್ಞಾನಸಂಪಾದನೆಯಲ್ಲಿಯೂ ವ್ಯಯಿಸುತ್ತಿದ್ದರು. ಕಿಂಗ್ಸ್‌ಕಾಲೇಜಿನಲ್ಲಿರುವಾಗಲೆ ಅವರು ಲ್ಯಾಟಿನ್‌ಮತ್ತು ಗ್ರೀಕ್‌ಕಾವ್ಯಭಾಗಗಳಿಗಿಟ್ಟಿದ್ದ ಬಹುಮಾನಗಳಿಗೆ ಪಾತ್ರರಾದರಂತೆ.

೧೮೯೦ರಲ್ಲಿ ಅರವಿಂದರು ಇಂಡಿಯನ್‌ಸಿವಿಲ್‌ಸರ್ವಿಸ್‌ಪರೀಕ್ಷೆಗೆ ಕುಳಿತು, ಗ್ರೀಕ್‌ಮತ್ತು ಲ್ಯಾಟಿನ್‌ಭಾಷೆಗಳಲ್ಲಿಯೂ ಹಿಂದೆ ಯಾರೂ ಪಡೆಯದಿದ್ದಷ್ಟು ನಂಬರು ಗಳಿಸಿ ಸರ್ವಶ್ಲಾಘನೀಯರಾಗಿ ತೇರ್ಗಡೆ ಹೊಂದಿದರು. ಆದರೆ ಕೊನೆಯಲ್ಲಿ ಕುದುರೆಸವಾರಿಯ ಪರೀಕ್ಷೆಗೆ ತಪ್ಪಿಸಿಕೊಂಡರು. ಸಿವಿಲ್‌ಸರ್ವಿಸಿನ ದಾರಿ ಅವರಿಗೆ ಇಷ್ಟವಾಗದಿದ್ದುದೇ ಹಾಗೆ ಮಾಡಿದುದಕ್ಕೆ ಮುಖ್ಯಕಾರಣವಂತೆ.

ಈ ಮಧ್ಯೆ ಅರವಿಂದರು ಬಹುಮುಖವಾದ ತಮ್ಮ ಅಧಯಯನದಲ್ಲಿ ಮುಂಬರಿಯುತ್ತಿದ್ದರು. ಇಟ್ಯಾಲಿಯನ್, ಜರ್ಮನ್, ಸ್ಪ್ಯಾನಿಷ್‌ಭಾಷೆಗಳನ್ನು ಅಭ್ಯಾಸಮಾಡಿ ಗಾಯಟೆ, ಡಾಂಟೆ ಇವರ ಕೃತಿಗಳನ್ನು ಮೂಲದಲ್ಲಿ ಓದುವ ಮಟ್ಟಿಗೆ ಪರಿಣಿತರಾದರು. ಅಲ್ಲದೆ ಸಾಧನಪೂರ್ಣವೂ ಸ್ಫೂರ್ತಿದಾಯಕವೂ ಆಗಿದ್ದ ವಿಕ್ಟೋರಿಯಾ ಯುಗದ ಇಂಗ್ಲಿಷ್ ಜೀವನದ ಪೂರ್ಣಪ್ರಭಾವದಿಂದ ರಚಿತವಾದ ಅವರ ವ್ಯಕ್ತಿತ್ವ ವ್ಯೋಮಸಾಹಸಕ್ಕೂ ಗರಿಗೆದರಲು ರೆಕ್ಕೆ ಬಡಿಯತೊಡಗಿತು. ಅದಕ್ಕೆ ಪ್ರೇರಕವಾಗಿಯೊ ಎಂಬಂತೆ ತಂದೆ ಕೃಷ್ಣಧನರು ಒದಗಿಸುತ್ತಿದ್ದ ಧನಸಹಾಯವೂ ಕಡಿಮೆಯಾಯಿತು. ಆದರೂ ವಿದ್ಯಾರ್ಥಿವೇತನದಿಂದಲೂ ಮಿತವ್ಯಯದಿಂದಲೂ ಹೇಗೋ ಬದುಕು ತಳ್ಳುತ್ತಿದ್ದರೂ ಸ್ವಂತ ಸಂಪಾದನೆಯ ಕಡೆಗೂ ಮನಸ್ಸು ಹರಿಯುತ್ತಿತ್ತು.

ಈಗ ಅರವಿಂದರಿಗೆ ವಯಸ್ಸು ಇಪ್ಪತ್ತಾಗಿತ್ತು. ಯೂರೋಪಿಯನ ಹಲವಾರು ಭಾಷೆಗಳಲ್ಲಿ ಅವರು ಪರಿಣಿತರಾಗಿದ್ದಾರೆ. ಭಾರತೀಯ ನಾಗರಿಕತೆ ಮತ್ತು ಸಂಸ್ಕೃತಿಯ ಯಾವ ಸೋಂಕೂ ತಗುಲದಂತೆಯೂ ನೋಡಿಕೊಳ್ಳಲಾಗಿದೆ! ಹೆಚ್ಚೇನು? ಐರೋಪ್ಯ ಸಂಸ್ಕೃತಿಯ ಅಪರಿಮಿತ ಐಶ್ವರ್ಯದ ಅಲಕಾವತಿಯ ಹೆದ್ದಾರಿಯೆ ಅವರ ಸ್ವಾಧೀನವಾಗಿದೆ. ತುಂಬು ತಾರುಣ್ಯ; ತುಂಬಿದ ವಿದ್ವತ್ತು. ಸೌಂದರ್ಯದಲ್ಲಿ ಪ್ರೇಮ; ಆಶಿವದಲ್ಲಿ ಜುಗುಪ್ಸೆ; ಲೋಕದ ದುಃಖ ದಾರಿದ್ರ್ಯಗಳನ್ನು ತೊಡೆದುಹಾಕುವ ಉತ್ಸಾಹ: ಲೋಕದ ಆನಂದದಲ್ಲಿ ಭಾಗಿಯಾಗುವ ಉಲ್ಲಾಸ. ಜೊತೆಗೆ, ಅವರ ಹದಿನೈದನೆಯ ವರ್ಷದಿಂದಲೂ ಮೆಲ್ಲಮೆಲ್ಲನೆ ಮೂಡಿ ಅರೆ

ಅರಳಿ, ಹೃದಯವನ್ನು ಆಕ್ರಮಿಸಿ, ಅಸೀಮದತ್ತ ಅನಂತದೆಡೆಗೆ ಕೈವೀಸಿ ಕರೆಯುತ್ತಿದ್ದ ಕವಿತಾಕಾಮಿನಿಯ ಹೃದಯಮೋಹಕವಾದ ಸುಂದರ ಕಟಾಕ್ಷ ಸಂಜ್ಞೆಯ ಮಿಂಚಿನಾಹ್ವಾನ!

ಅರವಿಂದರ ಮನಸ್ಸನ್ನು ಮೊದಲು ಸೆಳೆದುದು ತತ್ತ್ವಜ್ಞಾನವಲ್ಲ, ಕಾವ್ಯ ಮತ್ತು ರಾಜಕೀಯ. ಇಂಗ್ಲೆಂಡಿನಲ್ಲಿರುವಾಗಲೆ ಐರ್ಲೆಂಡಿನ ಹೋರಾಟದ ವಿಚಾರವಾಗಿ ಅವರು ಬರೆದ ಕವನದಲ್ಲಿ ತಮ್ಮ ದೇಶದಲ್ಲಿಯೂ ಆಗ ಪ್ರಾರಂಭವಾಗಿದ್ದ ಸ್ವಾತಂತ್ರ್ಯ ಸಂಗ್ರಾಮದ ಧ್ವನಿಯೂ ಸೇರಿಕೊಂಡಂತಿದೆ. ಆದರೂ ರಾಜಕೀಯಕ್ಕಿಂತಲೂ ಸಾಹಿತ್ಯವೆ ಅವರ ಪ್ರಥಮ ಪ್ರೇಮವಾಗಿತ್ತೆಂದು ಊಹಿಸಬಹುದು. ಇಂಗ್ಲೆಂಡಿನ ಜರ್ಮನಿಯ ಫ್ರಾನ್ಸಿನ ಇಟಲಿಯ ಮತ್ತಿತರ ಹಿರಿಯ ದೇಶಗಳ ಮಹಾಕವಿಗಳ ಜೀವನವೂ ಕೃತಿಗಳೂ ಖ್ಯಾತಿಯೂ ಅವರ ಹೃದಯವನ್ನೂ ಆ ಕನಕವೈಭವದತ್ತ ಸೆಳೆದಿದ್ದುವೆಂದು ತೋರುತ್ತದೆ. ಅವರು ವಿದೇಶದಲ್ಲಿದ್ದಾಗ ಅಲ್ಲಿಯ ಸಾಹಿತ್ಯ ಸಂಸ್ಕೃತಿ ಐತಿಹ್ಯಗಳ ಪ್ರಭಾವಕ್ಕೆ ವಶವಾಗಿ ಕಟ್ಟಿದ್ದ ಕವನಗಳನ್ನು ನೋಡಿದರೆ ಅಂತಹ ಅನುಕರಣಮಾತ್ರ ರಚನೆಯಲ್ಲಿಯೂ ಅವರ ಸಹಜಸ್ವಭಾವ ಸಾಮರ್ಥ್ಯಗಳು ಹೊಳೆಯುತ್ತಿರುವುದನ್ನು ಕಾಣುತ್ತೇವೆ. ಆದರೂ ಅವರು ಭಾರತಕ್ಕೆ ಬಂದಮೇಲೆ ಸ್ವದೇಶದಲ್ಲಿ ಸ್ವಸಂಸ್ಕೃತಿಯ ಸತ್ತ್ವವನ್ನು ಹೀರಿಕೊಂಡ ತರುವಾಯ ಮೂಡಿದ ಅವರ ಕವನಗಳ ಮುಂದೆ ಅವು ಎಷ್ಟು ಕೃತಕ! ಎಷ್ಟು ನೀರಸ! ಆ ಕವನಸಂಗ್ರಹದ ಕೊನೆಯ ಕವನದಲ್ಲಿ**[2]** ಅವುಗಳ ರಚನೆಗಾಗಿ ಕಳೆದ ಕಾಲ ವ್ಯರ್ಥವಾಯಿತೆಂದೂ ಅವೆಲ್ಲ ಹೆಳವು ಬಡಕಲುಗಳೆಂದೂ ಅವರೇ ಪಶ್ಚಾತ್ತಾಪದಿಂದ ಬೋಳ್ಕೊಂಡಿದ್ದಾರೆ.

ಆದರೆ ವಿಧಿಯ ಉದ್ದೇಶ ಬೇರೆಯಾಗಿತ್ತು. ಯಾವುದು ಮೇಲುನೋಟಕ್ಕೆ ವ್ಯರ್ಥವೆಂದೂ ಅನರ್ಥವೆಂದೂ ತೋರುತ್ತದೆಯೊ ಅದರಿಂದಲೆ ಈಶ್ವರೀಶಕ್ತಿ ತನ್ನ ಮಹತ್ಕಾರ್ಯಸಾಧನೆಗೆ ಅತ್ಯಾವಶ್ಯಕವಾದ ಆಯುಧಗಳನ್ನು ಸಮೆಯುತ್ತಿರುತ್ತದೆ. ಅದನ್ನು ಅರವಿಂದರ ಬದುಕಿನಲ್ಲಿ ಮುಂದೆ ಕಾಣಲಿದ್ದೇವೆ. ಅತಿ ಸಮರ್ಥವಾದ ಯಂತ್ರಶಾಲೆಯಲ್ಲಿ ತನ್ನ ಅದ್ಭುತಾಯುಧ ರಚನೆಯ ಪೂರ್ವಸಿದ್ಧತೆಯೆಲ್ಲ ಮುಗಿದೊಡನೆ ಅದನ್ನು ತನ್ನ ಪ್ರಮುಖ ಸಂಗ್ರಾಮರಂಗಕ್ಕೆ ಸಾಗಿಸುವಂತೆ ವ್ಯೂಹವೊಡ್ಡಿತು, ಆ ಈಶ್ವರೀಶಕ್ತಿ. ೧೮೯೩ರಲ್ಲಿ ಬರೋಡದ ಮಹಾರಾಜರಾಗಿದ್ದ ಸಯ್ಯಾಜಿರಾವ್ ಗಾಯಕವಾಡರು ಲಂಡನ್ನಿಗೆ ಹೋಗಿದ್ದರು. ತರುಣರಾಗಿದ್ದ ಶ್ರೀ ಅರವಿಂದರು ಅವರನ್ನು ಸಂದರ್ಶಿಸಿದರು. ಮೊದಲ ಪರಿಚಯದಿಂದಲೆ ಆಕರ್ಷಿತರಾದ ಮಹಾರಾಜರು ಅವರನ್ನು ತಮ್ಮ ಸಂಸ್ಥಾನದ ಸೇವೆಗೆ ಆಹ್ವಾನಿಸಿದರು. ಅದೇ ವರ್ಷದ ಫೆಬ್ರುವರಿ ತಿಂಗಳಲ್ಲಿ ಶ್ರೀ ಅರವಿಂದರು ಪೂರ್ವ ಪುಣ್ಯಾಭಿಮುಖರಾಗಿ ಹಡಗು ಹತ್ತಿದರು.

**೪**

ಕ್ರಿ.ಶ. ೧೮೯೩ನೆಯ ಸಂವತ್ಸರದ ಪೂರ್ವಾರ್ಧವು ಭರತಖಂಡದ ಚರಿತ್ರೆಯಲ್ಲಿ ಮಾತ್ರವಲ್ಲ, ಪ್ರಪಂಚದ ಇತಿಹಾಸದಲ್ಲಿಯೂ ಒಂದು ಧ್ವನಿಪೂರ್ಣವಾದ ಗಣ್ಯಸ್ಥಾನಕ್ಕೆ ಅರ್ಹವಾಗಿ ಗೌರವಾಸ್ಪದವಾಗಿದೆ. ಆ ವರ್ಷದ ಆ ಆರು ತಿಂಗಳ ಅವಧಿಯಲ್ಲಿಯೆ ಮುಂದೆ ಆಧುನಿಕ ಜಗತ್ತಿನ ಮಹಾವಿಭೂತಿಗಳಾಗಲಿರುವ ಮೂವರು ಮಹದ್ವ್ಯಕ್ತಿಗಳು ತಮ್ಮ ಮತ್ತು ಲೋಕದ ಭವಿಷ್ಯ ಜೀವನವನ್ನೇ ಮಾರ್ಪಡಿಸುವ ಇತ್ಯರ್ಥಕಾರಿ ಘಟನೆಗಳಲ್ಲಿ ತೊಡಗಿರುವುದನ್ನು ಕಾಣುತ್ತೇವೆ. ಮುಂಬಯಿ ಬಂದರೆ ಅದಕ್ಕೆ ವೇದಿಕೆಯಾಯಿತು. ಶ್ರೀ ಅರವಿಂದರು ಪಾಶ್ಚಾತ್ಯ

ವಿದ್ಯಾ ನಾಗರಿಕತೆ ಸಂಸ್ಕೃತಿಗಳ ಸಾರಸರ್ವಸ್ವರೂಪವಾಗಿ ಹಡಗಿನಿಂದಿಳಿದು ಭರತಖಂಡಕ್ಕೆ ಕಾಲಿಟ್ಟ ಸುಮುಹೂರ್ತದಲ್ಲಿಯೆ ಶ್ರೀಮತ್‌ಸ್ವಾಮಿ ವಿವೇಕಾನಂದರು ಪ್ರಾಚ್ಯವಿದ್ಯಾಸಂಸ್ಕೃತಿಯಲ್ಲಿಯೂ ಆಧ್ಯಾತ್ಮಧರ್ಮತತ್ತ್ವಸಿದ್ಧಿಯಲ್ಲಿಯೂ ಸುಪ್ರತಿಷ್ಠಿತರಾಗಿ ಚಿಕಾಗೋದಲ್ಲಿ ನಡೆಯಲಿರುವ ಸರ್ವಧರ್ಮಸಮ್ಮೇಳನಕ್ಕೆ ಹೋಗುವ ಸಲುವಾಗಿಯೂ, ಮಹಾತ್ಮಾ ಗಾಂಧಿಯವರು ಮೊತ್ತಮೊದಲು ದಕ್ಷಿಣ ಆಫ್ರಿಕಕ್ಕೆ ಹೋಗುವ ಸಲುವಾಗಿಯೂ, ಹಡಗು ಹತ್ತಿರುವುದನ್ನು ಗಮನಿಸಿದರೆ ಅದನ್ನೆಲ್ಲ ಆಕಸ್ಮಿಕ ವ್ಯಾಪಾರವೆಂದು ಕಡೆಗಣಿಸುವುದಕ್ಕಾಗುತ್ತದೆಯೆ? ಆದರೆ ಆಗ ಮನುಷ್ಯರಾರೂ ಗಮನಿಸಲಿಲ್ಲ: ಹಡಗು ಹತ್ತಿ ಇಳಿಯುವ ಸಹಸ್ರಾರು ಪ್ರಯಾಣಿಕರಲ್ಲಿ ಗಾಂಧಿ ವಿವೇಕಾನಂದ ಅರವಿಂದರು ಬರಿಯ ಮೂರು ಮಂದಿ!

ಶ್ರೀ ಅರವಿಂದರು ಸ್ವದೇಶಕ್ಕೆ ಮರಳುವನಿತರಲ್ಲಿ ಒಂದು ತಪ್ಪುಸುದ್ದಿಯ ದೆಸೆಯಿಂದಾಗಿ ಅವರ ತಂದೆ ಡಾ|| ಕೃಷ್ಣಧನರು ಮೃತರಾದರು. ತಮ್ಮ ಮಗನು ಹತ್ತಿಬರುತ್ತಿದ್ದ ಜಹಜು ಮುಳುಗಿತು ಎಂಬ ವಾರ್ತೆಯಿಂದ ಅವರಿಗೆ ಸಿಡಿಲೆರಗಿದಂತಾಯಿತು. ಆದರೆ ವಿಧಿಯ ಲೀಲೆ! ಮುಳುಗಿದ್ದ ಜಹಜಿನಲ್ಲಿ ಅರವಿಂದರು ಹತ್ತಿರಲಿಲ್ಲ: ಅವರು ಅದರ ತರುವಾಯ ಹೊರಟ ಮತ್ತೊಂದು ಜಹಜಿನಲ್ಲಿ ಪ್ರಯಾಣಮಾಡುತ್ತಿದ್ದರು.

ಬರೋಡ ಸಂಸ್ಥಾನದ ನೌಕರಿಯಲ್ಲಿ ಶ್ರೀ ಅರವಿಂದರು ೧೮೯೩ ರಿಂದ ೧೯೦೬ರವರೆಗ ಹದಿಮೂರು ವರ್ಷಗಳನ್ನು ಕಳೆದರು. ಮೊದಮೊದಲು ಸ್ಟಾಂಪು, ರೆವಿನ್ಯೂ, ಸೆಕ್ರಿಟೇರಿಯಟ್ ಇಲಾಖೆಗಳಲ್ಲಿ ಕೆಲಸ ಕಲಿತರಾದರೂ ಕಡೆಗೆ ಬರೋಡ ಕಾಲೇಜಿನಲ್ಲಿ ಫ್ರೆಂಚ್‌ಭಾಷೆಯ ಲೆಕ್ಚರರ್ ಆಗಿ ಕೆಲಸಕ್ಕೆ ಸೇರಿದರು. ಆಮೇಲೆ ಅಲ್ಲಿಯೇ ಇಂಗ್ಲಿಷ್ ಪ್ರೊಫೆಸರ್ ಆದರು. ತರುವಾಯ ವೈಸ್‌ಪ್ರಿನ್ಸಿಪಾಲ್‌ಗದ್ದುಗೆಗೂ ಏರಿದರು. ಒಮ್ಮೊಮ್ಮೆ ಇಂಗ್ಲಿಷ್ ಪತ್ರಗಳನ್ನು ಬರೆಯುವುದರಲ್ಲಿಯೂ ಭಾಷಣಗಳನ್ನು ಸಿದ್ಧಗೊಳಿಸುವುದರಲ್ಲಿಯೂ ಮಹಾರಾಜರಿಗೆ ನೆರವಾಗುತ್ತಿದ್ದರು. ಅವರೊಡನೆ ನೈನಿಟಾಲ್ ಮೊದಲಾದ ಪ್ರದೇಶಗಳಿಗೆ ವಿಹಾರಕ್ಕೂ ಹೋಗಿಬರುತ್ತಿದ್ದುಂಟು. ಸ್ಫುರದ್ರೂಪಿಣಿಯಾಗಿದ್ದ ಶ್ರೀಮತಿ ಮೃಣಾಲಿನೀ ದೇವಿಯನ್ನು ಮದುವೆಯಾಗಿ ನೆಮ್ಮದಿಯಾಗಿ ಜೀವನ ಸಾಗಿಸುತ್ತಿದ್ದ ಅರವಿಂದರು, ಹೊರಗಣ ನೋಟಕ್ಕೆ ಯೂರೋಪಿಗೆ ಹೋಗಿಬಂದ ಇತರ ಅನೇಕ ಭಾರತೀಯ ಸಾಹೇಬ್ ಜನಗಳಂತೆ ಪ್ರವರ್ಧಮಾನವಾಗುತ್ತಿದ್ದ ಒಬ್ಬ ಸಮರ್ಥ ಅಧಿಕಾರೀ ಬಾಬುವಿನಂತೆ ತೋರುತ್ತಿದ್ದರೂ, ಬರೋಡೆಯ ಈ ಹದಿಮೂರು ವರ್ಷಗಳು ಇಂಗ್ಲೆಂಡಿನ ಆ ಹದಿಮೂರು ವರ್ಷಗಳಿಗೆ ಸಂವಾದಿಯೆಂಬಂತೆ, 'ಪಾಶ್ಚಾತ್ಯತ್ವ'ದಲ್ಲಿ ಪರಿಪೂರ್ಣತೆಯನ್ನು ಸಾಧಿಸಿದ್ದ ಅವರ ವಿರಾಟ್ ಚೇತನವನ್ನು 'ಪ್ರಾಚ್ಯತ್ವ'ದಲ್ಲಿಯೂ ಸರ್ವತೋಮುಖವಾಗಿ ಸಂಪೂರ್ಣವಾಗಿ ಪರಿಪಕ್ವ ಮಾಡುವ ದಿವ್ಯಕಾರ್ಯದಲ್ಲಿ ತೊಡಗಿದ್ದುದನ್ನು ಕಾಣುತ್ತೇವೆ.

ಮೊದಲು ಸ್ವದೇಶಕ್ಕೆ ಮರಳಿದಾಗ ಅರವಿಂದರಿಗೆ ತತ್ತ್ವಶಾಸ್ತ್ರದಲ್ಲಾಗಲಿ ಯೋಗಸಾಧನೆಯಲ್ಲಾಗಲಿ ಆಸಕ್ತಿಯಿರಲಿಲ್ಲ. ಪ್ಲೇಟೋ, ಎಪಿಕ್ಟಿಟಸ್, ಎಪಿಕ್ಯೂರಸ್ ಮೊದಲಾದ ಗ್ರೀಕ್ ತತ್ತ್ವಶಾಸ್ತ್ರಜ್ಞರ ಬರವಣಿಗೆಗಳನ್ನು ತುಸು ಮಟ್ಟಿಗೆ ಓದಿದ್ದರೂ ಸದ್ಯದ ಬದುಕಿಗೂ ಬೆಳವಣಿಗೆಗೂ ಶಕ್ತಿಪೂರ್ವಕವಾಗಿ ನೆರವಾಗದ ತರ್ಕಶಾಸ್ತ್ರೀಯ ಮಾತ್ರವಾದ ತತ್ತ್ವಜಿಜ್ಞಾಸೆಯಲ್ಲಿ ಅವರಿಗೆ ಅಭಿರುಚಿಯಿರಲಿಲ್ಲ. ಅವರು ಯಾವ ತತ್ತ್ವಶಾಸ್ತ್ರದ ಸಕ್ರಮ ಅಧ್ಯಯನವನ್ನು ಮಾಡಿರಲಿಲ್ಲ. ಯೂರೋಪಿಯನ ತತ್ತ್ವಶಾಸ್ತ್ರಗಳಲ್ಲಿಯೂ ಅವರಿಗಿದ್ದ

ಜ್ಞಾನ ಇತರ ಅಪ್ರವೀಣ ವಿದ್ಯಾವಂತರ ಜ್ಞಾನಕ್ಕಿಂತ ವಿಶೇಷವಾದುದಾಗಿರಲಿಲ್ಲ. ಭಾರತೀಯ ದಾರ್ಶನಿಕ ಸಿದ್ಧಾಂತಗಳನ್ನು ಬಹು ಸ್ಥೂಲವಾಗಿ ಪರಿಚಯ ಮಾಡಿಕೊಂಡಿದ್ದರು. ಅವರಿಗೆ ಭಾರತೀಯ 'ಆಧ್ಯಾತ್ಮ'ದ ಮೊತ್ತಮೊದಲ ಪರಿಚಯವಾದದ್ದು ಶ್ರೀ ರಾಮಕೃಷ್ಣ ಪರಮಹಂಸರ ವಚನಾಮೃತದಲ್ಲಿ ಮತ್ತು ಸ್ವಾಮಿ ವಿವೇಕಾನಂದರ ಭಾಷಣ ಲೇಖನಗಳಲ್ಲಿ. ಶ್ರೀ ವಿವೇಕಾನಂದರಲ್ಲಿ ಅವರಿಗಿದ್ದ ಗೌರವ ಅಸೀಮವಾಗಿತ್ತು; ಮತ್ತು ಶ್ರೀ ರಾಮಕೃಷ್ಣ ಪರಮಹಂಸರಲ್ಲಿ ಅದಕ್ಕಿಂತಲೂ ಸುಗುಭೀರವಾದ ಪೂಜ್ಯಭಾವನೆಯಿತ್ತು.**[3]** ಅನುಭವಮೂಲವಾದ ಆಧ್ಯಾತ್ಮದಲ್ಲಿಯೂ ಆಧ್ಯಾತ್ಮಿಕವಾದ ಅನುಭವಗಳಲ್ಲಿಯೂ ಅವರಿಗೆ ವಿಶೇಷ ಆಸಕ್ತಿಯಿತ್ತು. ಏಕೆಂದರೆ ಇಂಗ್ಲೆಂಡಿನಲ್ಲಿದ್ದಾಗಲೂ, ಅಲ್ಲಿಗಿಂತಲೂ ಹೆಚ್ಚಾಗಿ ಭರತ ವರ್ಷಕ್ಕೆ ಬಂದಮೇಲೂ, ಅವರಿಗೆ ಕೆಲವು ಅಸಾಮಾನ್ಯ ಅನುಭವಗಳಾಗಿದ್ದುವು. ಆದರೆ ಆ ಸ್ವಾನುಭವಗಳಿಗೂ ಯೋಗಕ್ಕೂ ಯಾವ ಸಂಬಂಧಕಲ್ಪನೆಯನ್ನೂ ಮಾಡಿರಲಿಲ್ಲ. ಯೋಗದ ವಿಚಾರವಾಗಿ ಅವರಿಗೇನೂ ತಿಳಿದಿರಲಿಲ್ಲ ಮಾತ್ರವಲ್ಲ, ಅದು ಜೀವನ ವಿಮುಖತೆಯನ್ನು ಬೋಧಿಸುತ್ತದೆ ಎಂಬ ತಪ್ಪುಕಲ್ಪನೆಯಿಂದ ತಿರಸ್ಕರಿಸುತ್ತಲೂ ಇದ್ದರಂತೆ!

ಅಂತೂ ಬರೋಡೆಯಲ್ಲಿದ್ದ ಹದಿಮೂರು ವರ್ಷಗಳಲ್ಲಿ ಸಂಸ್ಕೃತ, ಬಂಗಾಳಿ, ಗುಜರಾತಿ, ಮರಾಠಿ ಭಾಷೆಗಳನ್ನು ಕಲಿತರು. ಪ್ರಾಚೀನ ಮಹಾಋಷಿಗಳ ಮತ್ತು ಮಹಾಕವಿಗಳ ಮಾನಸಸರೋವರಗಳಲ್ಲಿ ತಮ್ಮ ಹೃದಯತೃಷ್ಣೆ ಇಂಗುವಂತೆ ರಸಪಾನಮಾಡಿದರು. ಭರ್ತೃಹರಿಯ 'ನೀತಿಶತಕ'ವನ್ನೂ ಕಾಳಿದಾಸನ 'ವಿಕ್ರಮೋರ್ವಶೀಯ' 'ಋತುಸಂಹಾರ'ಗಳನ್ನೂ ಇಂಗ್ಲಿಷಿಗೆ ಭಾಷಾಂತರಿಸಿದರು. ವಾಲ್ಮೀಕಿ ವ್ಯಾಸ ಕಾಳಿದಾಸರು ಡಾಂಟೆ ಹೋಮರ್ ಷೇಕ್ಸ್‌ಪಿಯರುಗಳ ಸ್ಥಾನವನ್ನು ಆಕ್ರಮಿಸಿದರು. ಮಾತೃಹೃದಯದ ಅನರ್ಘ್ಯ ಐಶ್ವರ್ಯದ ಪರಿಚಯ ಹೆಚ್ಚಿದಂತೆಲ್ಲ ಮುಂದೆ ಮುಂದೆ ನುಗ್ಗಿ ಕೊನೆಗೆ ಶ್ರೀ ಅರವಿಂದರು ಭಾರತೀಯ ವಿದ್ಯಾಸಂಸ್ಕೃತಿ ದರ್ಶನಗಳ ಉತ್ತುಂಗ ಶಿಖರಗಳ ಹಿಮಾಲಯ ವೇದಿಕೆಗೂ ಏರಿ ನಿಂತರು.

**೫**

ಬರೋಡೆಯಲ್ಲಿ ಶ್ರೀ ಅರವಿಂದರು ಯಾವುದು ಹುಟ್ಟಿನಿಂದಲೆ ತಮ್ಮದಾಗಿದ್ದಿತೋ ಮತ್ತು ಈ ನಡುವೆ ಯಾವುದನ್ನು ಕಳೆದುಕೊಂಡಿದ್ದರೋ ಆ ತಮ್ಮತನವನ್ನು ಮತ್ತೆ ಪಡೆಯುತ್ತಿದ್ದ ಆ ಕಾಲವಂತೂ ಭರತಖಂಡದಲ್ಲಿ ಇತಿಹಾಸದಲ್ಲಿ ಅತಿ ಮಹತ್ತಾದುದಾಗಿತ್ತು. ಯಾವ ಸ್ವಸಂಸ್ಕೃತಿಯನ್ನು ಸ್ವಧರ್ಮವನ್ನೂ ಸ್ವಭಾವವನ್ನೂ ಸ್ವಸ್ವರೂಪವನ್ನೂ ತಮ್ಮ ವ್ಯಷ್ಟಿಜೀವನದಲ್ಲಿ ಉತ್ಥಾನಗೊಳಿಸಲು ಅವರು ಅನುಸಂಧಾನತತ್ಪರರಾಗಿದ್ದರೋ ಆ ಧರ್ಮದೇವತೆ ಭರತ ವರ್ಷದ ಸಮಷ್ಟಿಜೀವನದಲ್ಲಿ ಆಗಾಗಲೆ ಆವಿರ್ಭೂತೆಯಾಗಿ ತನ್ನ ಚಿತ್ತತಪಸ್ಸಿನಿಂದ ಜನಹೃದಯದ ಚೈತನ್ಯ ಸಮುದ್ರದಲ್ಲಿ ಪ್ರಪ್ರಚಂಡವಾದ ತರಂಗಗಳನ್ನು ಎಬ್ಬಿಸಿದ್ದಳು. ಒಂದು ಕಡೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ಪೂರ್ವಸಿದ್ಧತಾರೂಪವಾದ ರಾಜಕೀಯ ಕಾರ್ಯಕಲಾಪಗಳು ನಡೆಯುತ್ತಿದ್ದರೆ ಮತ್ತೊಂದು ಕಡೆ ಎಲ್ಲ ಉತ್ಥಾನಕ್ಕೂ ಮೂಲ ಶಕ್ತಿಸ್ವರೂಪವಾದ ಆಧ್ಯಾತ್ಮಿಕ ತೇಜಸ್ಸಿನ ಆವಿರ್ಭಾವನೆಗೆ ಸ್ವಾಮಿ ವಿವೇಕಾನಂದರಂತಹ ವಿಭೂತಿಗಳು ಕ್ರತುಕಾರ್ಯದಲ್ಲಿ ದೀಕ್ಷಿತರಾಗಿದ್ದರು. ಆ ದೈವೀಶಕ್ತಿಯ ಪ್ರಭಾವಕ್ಕೆ ಸಿಲುಕದಿರಲು ಅತ್ಯಂತ ಜಡರಿಗಲ್ಲದೆ ಅನ್ಯರಿಗೆ ಸಾಧ್ಯವಾಗುವಂತೆಯೆ ಇರಲಿಲ್ಲ. ವಿವೇಕಾನಂದರ ತರುವಾಯ ರಾಜಕೀಯ ರಂಗದಲ್ಲಿಯೆ ಆಗಲಿ, ಇತರ ಯಾವ ರಂಗದಲ್ಲಿಯೆ

ಆಗಲಿ, ಸುಪ್ರಸಿದ್ಧರಾಗಿಯಾಗಲಿ ಅಪ್ರಸಿದ್ಧರಾಗಿಯಾಗಲಿ ಕಾರ್ಯಸಾಧನೆ ಮಾಡಿದ ಎಲ್ಲ ವ್ಯಕ್ತಿಗಳೂ ಶ್ರೀ ರಾಮಕೃಷ್ಣ ವಿವೇಕಾನಂದರ ಆತ್ಮಶ್ರೀಗೆ ಋಣಿಗಳಾಗಿರುವುದನ್ನು ಕಾಣುತ್ತೇವೆ. ಇನ್ನು ಶ್ರೀ ಅರವಿಂದರಂತಹರು ಅದರ ದಿವ್ಯಪ್ರಯೋಜನದಿಂದ ವಂಚಿತರಾಗುತ್ತಾರೆಯೆ?

ಶ್ರೀ ಅರವಿಂದರು ಸ್ವದೇಶಕ್ಕೆ ಮರಳಿದ ೧೮೯೩ನೆಯ ಸಂವತ್ಸರದ ಸೆಪ್ಟೆಂಬರ್ ತಿಂಗಳಿನಲ್ಲಿ ಶ್ರೀ ವಿವೇಕಾನಂದರು ಚಿಕಾಗೋ ನಗರದ ಸರ್ವಧರ್ಮ ಸಮ್ಮೇಳನದಲ್ಲಿ ಭಾರತೀಯವಾದ ಆರ್ಷೇಯ ದರ್ಶನದ ಸರ್ವವರ್ಣಗ್ರಾಸಿಯಾದ ಶ್ವೇತ ಧ್ವಜವನ್ನು ನಭಕ್ಕೆತ್ತಿ ಜಗತ್ತನ್ನು ಬೆರಗುಗೊಳಿಸಿದರು. ಭಾರತೀಯರ ಮೇಲೆ ಅದರ ಪರಿಣಾಮ ಏನಾಯಿತೆಂಬುದು ಈಗಾಗಲೆ ನಿರ್ವಿದಿತವಾದ ಇತಿಹಾಸ ವಿಷಯವಾಗಿದೆ.[4] ಅಲ್ಲದೆ ೧೮೯೭ರಲ್ಲಿ ಸ್ವಾಮಿ ವಿವೇಕಾನಂದರು ಸ್ವದೇಶಕ್ಕೆ ಹಿಂತಿರುಗಿ ಬಂದು, ಕೊಲಂಬೋದಿಂದ ಆಲ್ಮೋರದವರೆಗೂ ತಮ್ಮ ಜಿವ್ಹಾಗ್ನಿಯಿಂದ ದೇಶದ ಚೇತನದಲ್ಲಿ ಶಕ್ತಿಯನ್ನೂ ಧೈರ್ಯವನ್ನೂ ಆತ್ಮಗೌರವವನ್ನೂ ಪ್ರೋಜ್ವಲಗೊಳಿಸಿದರು. ಆ ಭಾಷಣಗಳಿಂದಲೂ ಲೇಖನಗಳಿಂದಲೂ ತಮ್ಮ ಹೃದಯಪ್ರದೀಪಗಳನ್ನು ಹೊತ್ತಿಸಿಕೊಂಡ ಅಸಂಖ್ಯೇಯರಲ್ಲಿ ಶ್ರೀ ಅರವಿಂದರೂ ಒಬ್ಬರು.

ಒಬ್ಬರು; ಆದರೆ, ಅದೆಂತಹ ಒಬ್ಬರು!

"ಅವರ ಒಂದು ಪತ್ರದ ಸಾರಾಂಶ ಹೀಗಿದೆ:

"ನಾನು ನನ್ನ ಯೋಗಸಾಧನೆಯನ್ನು ಪ್ರಾರಂಭಿಸಿದ್ದು ೧೯೦೪ರಲ್ಲಿ. ಆಗ ನನಗೆ ಯಾವ ಮನುಷ್ಯಗುರುವೂ ಇರಲಿಲ್ಲ. ನಾಲ್ಕು ವರ್ಷಗಲ ತರುವಾಯ ಎಂದರೆ ೧೯೦೮ರಲ್ಲಿ ಮಹಾರಾಷ್ಟ್ರ ಯೋಗಿಯೊಬ್ಬನಿಂದ ಬಹು ಮುಖ್ಯವಾದ ಸಹಾಯ ದೊರೆಯಿತು. ಆಗ ನನ್ನ ಸಾಧನೆಯ ಮೂಲಸ್ವರೂಪವನ್ನು ಕಂಡುಕೊಂಡೆ. ಅಲ್ಲಿಂದ ಮುಂದೆ, 'ತಾಯಿ' ಭರತ ಖಂಡಕ್ಕೆ ಬರುವವರೆಗೂ ಮತ್ತಾರಿಂದಲೂ ನನ್ನ ಸಾಧನೆಗೆ ಸಹಾಯ ದೊರೆಯಲಿಲ್ಲ. ಹಿಂದೆಯೂ ಆಮೇಲೆಯೂ ನನ್ನ ಸಾಧನೆಗೆ ಸಹಾಯ ದೊರೆತುದು ಪುಸ್ತಕಗಳಿಂದಲ್ಲ; ನನ್ನ ಅಂತಃಕರಣದಲ್ಲಿ ಮೇಲಿಂದ ಮೇಲೆ ಮೂಡಿ ನುಗ್ಗಿಬರುತ್ತಿದ್ದ ಸ್ವಾನುಭವಗಳಿಂದ. ಅದರೆ ನಾನು ಜೈಲಿನಲ್ಲಿದ್ದಾಗ ನನ್ನ ಬಳಿ 'ಗೀತೆ' 'ಉಪನಿಷತ್ತು' ಇದ್ದುವು, ಏನಾದರೂ ಪುಸ್ತಕಸಹಾಯ ಪಡೆದಿದ್ದರೆ ಅವುಗಳಿಂದ ಮಾತ್ರ ಪಡೆದಿದ್ದೇನೆ. ಭಗವದ್‌ಗೀತೆಯಿಂದ ನನ್ನ ಯೋಗಸಾಧನೆಗೂ ಉಪನಿಷತ್ತುಗಳಿಂದ ನನ್ನ ಧ್ಯಾನಕ್ಕೂ ಮಾರ್ಗದರ್ಶನ ಒದಗಿದೆ. ಕೆಲಕಾಲದ ಅನಂತರ ನಾನು ಪಾಂಡುಚೇರಿಯಲ್ಲಿ ವೇದಗಳನ್ನು ಅಭ್ಯಸಿಸಲು ತೊಡಗಿದಾಗ ನನಗೆ ಆಗಲೆ ಆಗಿದ್ದ ಅನುಭವಗಳಿಗೆ ಅವುಗಳಿಂದ ಸಮರ್ಥನೆ ದೊರಕಿತೇ ಹೊರತು ಹೇಳಿಕೊಳ್ಳುವಂತಹ ಮಾರ್ಗದರ್ಶನವೇನೂ ದೊರೆಯಲಿಲ್ಲ... ಇನ್ನೊಂದು ವಿಷಯ. ನಾನು ಜೈಲಿನಲ್ಲಿ ಇದ್ದಾಗ ಸುಮಾರು ಹದಿನೈದು ದಿನಗಳು ಎಡೆಬಿಡದೆ ಶ್ರಿ ವಿವೇಕಾನಂದರ ವಾಣಿ ನನ್ನ ಧ್ಯಾನದ ಕಿವಿಗಳಿಗೆ ಒಂದೇ ಸಮನಾಗಿ ಕೇಳಿಸುತ್ತಿತ್ತು. ಅಲ್ಲದೆ ಅವರ ಸಾನ್ನಿಧ್ಯವೂ ನನ್ನ ಅನುಭವಕ್ಕೆ ಸುಸ್ಪಷ್ಟವಾಗಿ ಗೋಚರವಾಗಿತ್ತು. ಆ ವಾಣಿ ಯೋಗಾನುಭವದ ಒಂದು ಬಹು ಮುಖ್ಯ ಕ್ಷೇತ್ರವನ್ನು ಮಾತ್ರ ಕುರಿತು ನನಗೆ ಉಪದೇಶ ಕೊಡುತ್ತಿತ್ತು. ಆ ಕ್ಷೇತ್ರದ ವಿಚಾರವಾಗಿ ಹೇಳಬೇಕಾದುದನ್ನೆಲ್ಲ ಹೇಳಿಯಾದ ಮೇಲೆ ಅದು ನಿಂತು ಹೋಯಿತು."[5]

ಶ್ರೀ ಅರವಿಂದರ ಜೀವನವನ್ನು ಸಮೀಕ್ಷಿಸಿದರೆ ಅವರು ಕಾವ್ಯಾನುಭವದ ಮಾರ್ಗವಾಗಿಯೆ ಯೋಗಾನುಭವಕ್ಕೆ ಕಾಲಿಟ್ಟರೆಂಬುದು ಸ್ಪಷ್ಟವಾಗುತ್ತದೆ. ಅವರು ಕವಿಮಾತ್ರರಾಗಿದ್ದಾಗಲೆ ಅಪ್ರಯತ್ನವಾಗಿಯೆ ಅನೇಕಾನುಭವಗಳನ್ನು ಪಡೆದಿದ್ದರು. ಆದರೆ ಮಹಾರಾಷ್ಟ್ರದ ಯೋಗಿ ಲೇಲೆಯ ಸಹಾಯದಿಂದ ಆತನ ಸಾನ್ನಿಧ್ಯದಲ್ಲಿ ಸಕ್ರಮ ಸಾಧನೆಗೆ ಮೊದಲುಮಾಡಿದ ಮೂರು ದಿನಗಳಲ್ಲಿಯೆ ಅವರಿಗೆ 'ನಿರ್ವಿಕಲ್ಪಾನುಭವ' ಸಿದ್ಧಿಸಿತಂತೆ.**[6]** ಆ 'ಬ್ರಹ್ಮ ಸತ್ಯಂ ಜಗನ್ಮಿಥ್ಯಾ' ಪ್ರಜ್ಞಾಸ್ಥಿತಿಯ ನಿಸ್ತರಂಗ ನಿರ್ವಿಕಾರ ನಿರ್ಗುಣಶಾಂತಿ ಅವರನ್ನು ಸಂಪೂರ್ಣವಾಗಿ ವ್ಯಾಪಿಸಿತು. ಅವರು ಉಪನ್ಯಾಸ, ಬರೆಹ, ವಾದ ವಿವಾದ ಮೊದಲಾದ ರಾಜಕೀಯ ಕಾರ್ಯಗಳಲ್ಲಿ ತೊಡಗಿದ್ದಾಗಲೂ ಆ ಅನುಭವ ಸರ್ವದಾ ಅವರ ಅಂತರಂಗದ ಭಿತ್ತಿಯಾಗಿರುತ್ತಿತ್ತು. ಬೊಂಬಾಯಿ ನಗರದಲ್ಲಿ ಅವರು ರಾಜಕೀಯವಾದ ಚಟುವಟಿಕೆಗಳಲ್ಲಿ ತೊಡಗಿದ್ದಾಗಲೆ ಅವರಿಗೆ ಸಿದ್ಧಿಯಾದ ಆ ಅನುಭವವನ್ನು 'ನಿರ್ಮಾಣ' ಎಂಬ ಒಂದು ಅದ್ಭುತವಾದ ಕವನ**[7]**ದಲ್ಲಿ ನಿರೂಪಿಸಿದ್ದಾರೆ.

---

[1] ಇದೇ ಲೇಖಕನ 'ಪೂರ್ಣದೃಷ್ಟಿಗೆ ಗಾಂಧೀಜಿ' ಮತ್ತು 'ಕವಿ ರವೀಂದ್ರರು' ಎಂಬ ಲೇಖನಗಳನ್ನೂ 'ಸ್ವಾಮಿ ವಿವೇಕಾನಂದ' ಮತ್ತು ಶ್ರೀ ರಾಮಕೃಷ್ಣ ಪರಮಹಂಸ ಎಂಬ ಗ್ರಂಥಗಳನ್ನೂ ನೋಡಿ.

[2] Songs to myrtilla: `Envoi' —

Pale poems, weak and few. who vainly use
Your wings towards the unattainable spheres,
Offspring of the Divine Hellenic Muse.
Poor maimed children born of six disastrous years!
Depart and live for seasons many or few
If live you may, but stey not here to pain
My heart with hopeless passion and renew
Visions of beauty that my lips shall never attain.

[3] ಶ್ರೀ ಅರವಿಂದರ ರಾಜಕೀಯವಾದ ಭಾಷಣಗಳನ್ನು ಓದಿದವರಿಗೆ ಆ ಭಾಷಣಗಳಲ್ಲಿ ಸ್ವಾಮಿ ವಿವೇಕಾನಂದರ ವಾಣಿಯ ಪ್ರತಿಧ್ವನಿ ಎಷ್ಟು ಸ್ಪಷ್ಟವಾಗಿ ಕೇಳಿಸುತ್ತದೆ ಎಂಬುದನ್ನು ಗಮನಿಸದಿರುವುದಕ್ಕೆ ಆಗುವುದಿಲ್ಲ. ಅಲ್ಲದೆ ಶ್ರೀ ಅರವಿಂದರ ಬರವಣಿಗೆಗಳಲ್ಲಿ ಪತ್ರಗಳಲ್ಲಿ ಶ್ರೀ ರಾಮಕೃಷ್ಣರ ಹೆಸರೂ ಮಾತುಕತೆಗಳ ನಿದರ್ಶನಗಳೂ ಮತ್ತೆ ಮತ್ತೆ ಬರುವುದನ್ನು ವಾಚಕರು ಗಮನಿಸಬಹುದು.

[4] ಕುವೆಂಪು ಅವರ 'ಶ್ರೀ ರಾಮಕೃಷ್ಣ ಪರಮಹಂಸ' ಮತ್ತು 'ಸ್ವಾಮಿ ವಿವೇಕಾನಂದ' ಎಂಬ ಎರಡು ಗ್ರಂಥಗಳನ್ನು ನೋಡಿ.

[5] ಸ್ವಾಮಿ ವಿವೇಕಾನಂದರು ಇದಕ್ಕೆ ಮೊದಲೇ ೧೯೦೨ರಲ್ಲಿ ದೇಹತ್ಯಾಗ ಮಾಡಿದ್ದರು.

[6] 'ಶ್ರೀ ರಾಮಕೃಷ್ಣ ಪರಮಹಂಸ'-ಕುವೆಂಪು, 'ಜೈನಯಾತ್ರೆ'ಯನ್ನು ನೋಡಿ.

[7] Only the illimitable Permanent
Is here. A Peace Stupendous. featureless. still
Replaces all.-what once was I. in it
A silent unnamed emptiness content
Either to fade in the Unknowable
Or thrill with the luminous seas of the Infinite.

[8] 'ಶ್ರೀ ರಾಮಕೃಷ್ಣ ಪರಮಹಂಸ'-ಕುವೆಂಪು 'ಅನಂತರ' ಎಂಬ ಅಧ್ಯಾಯವನ್ನು ನೋಡಿ.

[9] ಕುವೆಂಪು ಅವರ 'ಬಲಿದಾನ' ನಾಟಕದ ೨ನೆಯ ದೃಶ್ಯವನ್ನು ನೋಡಿ.

[10] ಅವರು ಶರೀರ ತ್ಯಾಗಮಾಡುವುದಕ್ಕೆ ಮೊದಲೆ ಈ ಎಲ್ಲ ಸಂಕಲ್ಪಗಳೂ ಸಿದ್ಧಿಯಾಗಿರುವುದನ್ನು ನಾವು ಗಮನಿಸಬೇಕು.

[11] ಕುವೆಂಪು ಅವರ 'ಅಗ್ನಿಹಂಸ' ಎಂಬ ಕವನಸಂಗ್ರಹದಲ್ಲಿರುವ ಫ್ರಾನ್ಸಿಸ್ ಥಾಮ್‌ಸನ್‌ಕವಿಯ **'The Hound of Heaven'** ಕವನದ ಕನ್ನಡ ರೂಪಾಂತರವಾದ 'ದೇವಕೇತು' ಎಂಬ ಕವನವನ್ನು ನೋಡಿ.

[12] 'ಉತ್ತರಪರ ಭಾಷಣದಿಂದ.'

[13] ಆ ದೇವದೂತನು ದಕ್ಷಿಣ ಆಫ್ರಿಕದ ಕುಲುಮೆಯಲ್ಲಿ ಹದಗೊಂಡು ಸಿದ್ಧನಾಗುತ್ತಿದ್ದನಲ್ಲವೆ?

[14] 'Thought the Paraclete', 'Transformation', 'Shiva', 'The bird of Fire', 'The heavens', ಮತ್ತು **'Jivanmukta'** ಎಂಬ ಕವನಗಳಲ್ಲಿ.

[15] ಅದರ ಮಹೋದ್ದೇಶವನ್ನು ಕುರಿತ ಪರಿಚಯವನ್ನೂ ವಿವರಗಳನ್ನೂ ಈ ಲೇಖಕರು ಮುಂದೆ ಬರೆಯಬೇಕೆಂದಿರುವ ಬರಹಗಳಲ್ಲಿ ಓದುಗರು ನಿರೀಕ್ಷಿಸಬಹುದು. 'ಆರ್ಯ' ಪತ್ರಿಕೆಯ ಸಾಗರದಿಂದ ಉದ್ಭವಿಸಿರುವ ಹಿಮಾಲಯಗಳೆಂದರೆ ಇವು: **(1) The Life Divine. (2) The Synthesis of Yoga. (3) The Secret of the Veda. (4) Essays on the Gita. (5) The Psychology of Social Development. (6) The Ideal of Human Unity. (7) The Future Poetry. (8) A defence of Indian Culture.**

[16] 'Savitri-A Legend and a Symbol' ಎಂಬ ಅವರ ಮಹಾಕಾವ್ಯ **(Epic)** ಇನ್ನೂ ಪೂರ್ತಿಯಾಗಿ ಹೊರಬಿದ್ದಿಲ್ಲ, ಅದು ಕಾವ್ಯಲೋಕಕ್ಕೆ ಒಂದು ನೂತನ ಪ್ರಪಂಚವನ್ನೆ ಗೆದ್ದುಕೊಡುವುದರಲ್ಲಿ ಸಂದೇಹವಿಲ್ಲ. -ಈಗ ಹೊರಬಂದಿದೆ.

[17] ಸುಮಾರು ಎಂಟೊಂಬತ್ತು ವರ್ಷಗಳ ಕಾಲ ದಿನಕ್ಕೆ ಎಂಟು ಹತ್ತು ಗಂಟೆಗಳಂತೆ ಪ್ರತಿದಿನವೂ ಪತ್ರಗಳನ್ನು ಬರೆದಿದ್ದಾರಂತೆ. ಅವುಗಳಲ್ಲಿ ಕೆಲವೇ ಕೆಲವು ಭಾಗಗಳು ಈಗಾಗಲೆ ಮೂರು ದೊಡ್ಡ ಸಂಪುಟಗಳಲ್ಲಿ ಅಚ್ಚಾಗಿವೆ.

[18] Only to bring God's forces to waiting Nature.
To help with wide-winged peace her tormented labour
And heal with joy her ancient sorrows.
Casting down light on the inconscient darkness.
He acts and lives....(Jivanmukta)

[19] ಶ್ರೀ ಅರವಿಂದರು ದೇಹತ್ಯಾಗಮಾಡಿದ ಹದಿಮೂರನೆಯ ದಿನ ಪ್ರಾತಃಕಾಲ ಅವರು 'ತಾಯಿ'ಯವರಿಗೆ ಇತ್ತ ಭರವಸೆಯೂ ಇದನ್ನೇ ಘೋಷಿಸುತ್ತದೆ.

# ಶ್ರೀ ಅರವಿಂದರು : [೬-೧೦]

**೬**

ಇತರ ದೇಶಗಳಂತೆ ಭರತಖಂಡದಲ್ಲಿಯೂ ರಾಜಕೀಯ ಮಾತ್ರವಾಗಿ ಆ ರೂಪದಿಂದಲೆ ಆ ವಿಧಾನಗಳನ್ನು ಅನುಸರಿಸಿಯೆ ಸ್ವಾತಂತ್ರ್ಯದ ಹೋರಾಟವು ಪ್ರಾರಂಭವಾಯಿತು. ಆ ಸಾಧನೆಗೆ ಆಧ್ಯಾತ್ಮಿಕ ಶ್ರೀಯನ್ನೂ ಧಾರ್ಮಿಕ ರೂಪವನ್ನೂ ಮೊತ್ತಮೊದಲು ದಾನಮಾಡಿದವರು ಸ್ವಾಮಿ ವಿವೇಕಾನಂದರು. ಅವರ ವಿದ್ಯುನ್ಮಯವಾದ ಭಾಷಣಗಳಲ್ಲಿ 'ಮಾತೆ' 'ಭರತಮಾತೆ' 'ಭುವನೇಶ್ವರಿ' 'ಮಹಾಕಾಳಿ' ಎಂಬ ಪದಗಳು ಪರ್ಯಾಯಪದಗಳಾಗಿ ಸಮಾನಾರ್ಥದಲ್ಲಿ ಮತ್ತೆ ಮತ್ತೆ ಪ್ರಯೋಗವಾಗುತ್ತವೆ:

"ನಮ್ಮೀ ಭರತಭೂಮಿ ಯುಗಯುಗಗಳ ನಿದ್ರೆಯಿಂದ ಮೇಲೇಳುತ್ತಿದೆ. ಆಕೆಯನ್ನು ಇನ್ನಾರೂ ತಡೆಯಬಲ್ಲವರಿಲ್ಲ; ಇನ್ನಾಕೆ ನಿದ್ದೆಮಾಡುವುದಿಲ್ಲ. ಯಾವ ಶಕ್ತಿಯೂ ಆಕೆಯನ್ನು ಬಗ್ಗಿಸಲಾರದು. ಏಕೆಂದರೆ, ಅದೋ ನೋಡಿ: ಮಹಾಕಾಳಿ ಮತ್ತೊಮ್ಮೆ ಎಚ್ಚತ್ತು ಮೈಕೊಡವಿ ಉಸಿರೆಳೆದು ನಿಲ್ಲುತ್ತಿದ್ದಾಳೆ!... ಪ್ರತಿಯೊಂದು ಜನಾಂಗಕ್ಕೂ ಪ್ರತಿಯೊಬ್ಬ ವ್ಯಕ್ತಿಗಿರುವಂತೆಯೆ ಒಂದೊಂದು ಜೀವನೋದ್ದೇಶವಿದೆ. ಆ ಉದೇಶವೆ ಅದರ ಹೃದಯ. ಉಳಿದುದೆಲ್ಲ ಗೌಣ. ಯಾವ ಜನಾಂಗವಾದರೂ ಶತಮಾನಗಳಿಂದ ತನ್ನ ನಾಡಿನಲ್ಲಿ ಪ್ರವಹಿಸಿ ಬಂದ ಆದರ್ಶವನ್ನು ಕಿತ್ತೊಗೆದರೆ ಸರ್ವನಾಶವಾಗುತ್ತದೆ. ರಾಜಕೀಯ ಒಂದರ ಹೃದಯ; ಕಲಾಜೀವನ ಮತ್ತೊಂದರದು; ಭರತಖಂಡದ ಹೃದಯವೆಂದರೆ ಧರ್ಮ. ಅದನ್ನು ವರ್ಜಿಸಿದೆವಾದರೆ ನಮ್ಮ ಸಂಸ್ಕೃತಿ ಅಳಿದುಹೋಗುತ್ತದೆ... ಪ್ರಪಂಚಕ್ಕೀಗ ಬೇಕಾಗಿರುವುದು ಆತ್ಮದ ಅಮೃತತತ್ವದ ಸಂದೇಶ; ಆತ್ಮದ ಐಕ್ಯದ ಸಂದೇಶ. ಆ ಸಂದೇಶವನ್ನು ಸಾರುವ ಭಾರ ಆರ್ಯಾವರ್ತದ ಮೇಲಿದೆ".

[8]
ವಿವೇಕಾನಂದರ ತರುವಾಯ ಆ ಸಂದೇಶವನ್ನು ರಾಜಕೀಯ ರಂಗದಿಂದಲೆ ಸಮರ್ಥವಾಗಿ ಸಾರಿದವರೆಂದರೆ ಮುಖ್ಯವಾಗಿ ಶ್ರೀ ಅರವಿಂದರು. ಅವರು ರಾಜಕೀಯವೇದಿಕೆಯಿಂದ ಇಳಿದು ಯೋಗವೇದಿಕೆಗೆ ಏರಿದ ತರುವಾಯ ಅದನ್ನು ಸರ್ವಲೋಕಪ್ರಚುರವಾಗಿ ಸಾರಿದವರು ಮಹಾತ್ಮಾ ಗಾಂಧೀಜಿ.

ಶ್ರೀ ಅರವಿಂದರಿಗೆ ದೇಶದ ದಾಸ್ಯವನ್ನೂ ದಾರಿದ್ರ್ಯವನ್ನು ಪರಾನುಕರಣದಿಂದುಂಟಾದ ಸತ್ತ್ವಹೀನತೆಯನ್ನೂ ಕಂಡು ಸಹಿಸಲಾಗಲಿಲ್ಲ. ಮೊದಮೊದಲು ಅತ್ಯಂತ ವಿಚಾರಗರ್ಭಿತವಾದ ಲೇಖನಗಳನ್ನು ಬರೆದು ಜನರನ್ನು ಎಚ್ಚರಿಸಲು ಪ್ರಯತ್ನಿಸಿದರು. ಕೊನೆಗೆ ಬಹಿರಂಗವಾಗಿಯೆ ರಾಜಕೀಯ ರೂಪದಿಂದಲೆ ಸ್ವಾತಂತ್ರ್ಯ ಸಂಗ್ರಾಮರಂಗಕ್ಕೆ ಧುಮುಕಿದರು. ಆ ಭಾಷಣ ಲೇಖನಗಳ ಸತ್ತ್ವ, ರೀತಿ, ವಿಧಾನ, ಶೈಲಿ, ಶಕ್ತಿ ಎಲ್ಲವೂ ಅರವಿಂದ ವಿಶಿಷ್ಟವಾಗಿವೆ. ಎಲ್ಲ ರಾಜಕೀಯ ಮಾತ್ರವಾದ ಭಾಷಣಗಳಿಗೂ ಅನಿವಾರ್ಯವಾಗಿರುವ ತಾತ್ಕಾಲಿಕತೆಯನ್ನು ಮೀರಿ ಅವುಗಳಲ್ಲಿ ಚಿರಕಾಲಿಕವಾಗಬಹುದಾದ ವಿಷಯಗಳೂ ಅಡಕವಾಗಿವೆ. ಜನರು ಮುಂದೆ ಮಹಾತ್ಮಾ ಗಾಂಧೀಜಿಯವರ ಭಾಷಣಗಳಲ್ಲಿ ಯಾವ ಆಧ್ಯಾತ್ಮಿಕವಾದ ತೇಜಸ್ಸನ್ನು ಗುರುತಿಸಿ ಮಣಿದರೋ ಅಂತಹ ತೇಜಸ್ಸನ್ನೇ ಅರವಿಂದರ

ವಾಣಿಯಲ್ಲಿಯೂ ಅನುಭವಿಸಿ ಮಂತ್ರಮುಗ್ಧರಾದರು. ಆದರೆ ಮಹಾತ್ಮರಲ್ಲಿ ಕಾಣಬರದ ಒಂದು ವಾಗ್ಮಿತೆ, ಪರಿಪಂಥಿಯ ವಾದವನ್ನು ಸೀಳಿ ಬಿಸುಡುವ ಸಿಂಹನಖಸದೃಶವಾದ ಒಂದು ಶಕ್ತಿಪೂರ್ವ ತರ್ಕಸೂಕ್ಷ್ಮತೆ, ಕವಿಸಹಜವಾದ ಸಂಮೋಹನೀಯವಾದ ಒಂದು ಸಾಹಿತ್ಯಶೈಲಿ ಇವುಗಳನ್ನು ಅರವಿಂದರ ಭಾಷಣ ಲೆಖನಗಳಲ್ಲಿ ಕಾಣುತ್ತೇವೆ. ಆ ಭಾಷಣ ಲೇಖನಗಳು ವಿವೇಕಾನಂದರ ಜನಪ್ರಿಯ ಭಾಷಣಗಳಂತೆ ಸುಲಭ ಮಟ್ಟಕ್ಕೂ ಇಳಿಯುವುದಿಲ್ಲ. ಆದ್ದರಿಂದಲೇ ಅವು ಸಾಮಾನ್ಯರಿಗೂ ಸುಶಿಕ್ಷಿತರಿಗೂ ಸಮಪ್ರಿಯವಾಗಿ, ಅರವಿಂದರ ಅಲ್ಪಾವಧಿಯ ರಾಜಕೀಯ ಜೀವನವನ್ನು ಚಿರಸ್ಮರಣೀಯವಾಗಿ ಮಾಡಿವೆ.

ಶ್ರೀ ಅರವಿಂದರಿಗೆ ‘ಭರತಮಾತೆ’ ಬರಿಯ ಭೌಗೋಲಿಕವಾದ ಭೂಪ್ರದೇಶ ಮಾತ್ರವಾಗಿರಲಿಲ್ಲ. ಭೂಪ್ರದೇಶ ಎಂಬುದು ಆಕೆಯ ಅನ್ನಮಯಕೋಶದ ಸ್ಥೂಲರೂಪಮಾತ್ರವಾಗಿತ್ತು. ಅನ್ನಮಯದಲ್ಲಿಯೂ ಈ ದೃಗ್ಗೋಚರವಾಗಿರುವ ಸ್ಥೂಲಮಾತ್ರರೂಪವಲ್ಲದೆ ಒಂದು ಸೂಕ್ಷ್ಮರೂಪದ ಶರೀರವೂ ಆಕೆಗಿದೆ. ಆಕೆಗೆ ಪ್ರಾಣಮಯ ಮನೋಮಯಾದಿ ಕೋಶಗಳೂ ಇವೆ. ಆಕೆ ಅಧಿದೇವತೆ, ಅಧಿಷ್ಠಾತ್ರಿ. ಯಾವ ದೇವಿಯನ್ನು ಬಂಕಿಮಚಂದ್ರರು ತಮ್ಮ ‘ವಂದೇ ಮಾತರಂ’ ಮಂತ್ರಗೀತೆಯಲ್ಲಿ ಆವಾಹನಂಗೆಯ್ದಿದ್ದರೊ, ಯಾರನ್ನು ‘ನೀನೆ ವಿದ್ಯೆ, ನೀನೆ ಧರ್ಮ, ಹೃದಯದಲ್ಲಿ ನೀನೆ ಮರ್ಮ, ದೇಹದಲ್ಲಿ ನೀನೆ ಪ್ರಾಣ, ಬಾಹುಗಳಲಿ ನೀನೆ ಶಕ್ತಿ, ಹೃದಯದಲ್ಲಿ ನೀನೆ ಭಕ್ತಿ’ ಎಂದು ಬಣ್ಣಿಸಿದ್ದರೊ ಆ ‘ಚಿದ್ರೂಪಿ ಪರದೇವತಾ ಭಗವತೀ ಶ್ರೀ ರಾಜರಾಜೇಶ್ವರೀ’**[9]** ಜಗದ್ಧಾತ್ರಿಯ ಶ್ರೀ ಅರವಿಂದರಿಗೆ ಭರತಮಾತೆಯೂ ಆಗಿದ್ದಳು.

೧೯೦೫ರಲ್ಲಿ ಅವರು ತಮ್ಮ ಸಹಧರ್ಮಿಣಿಗೆ ಬರೆದ ಒಂದು ಕಾಗದದಲ್ಲಿ ತಮ್ಮ ಶ್ರದ್ಧಾಸಂಕಲ್ಪಗಳನ್ನು ಕುರಿತು ಹೀಗೆಂದಿದ್ದಾರೆ: ಮೊದಲನೆಯದು, ನನ್ನ ಸಂಪಾದನೆಯೆಲ್ಲ ಭಗವತಿಯ ಸೇವೆಗಾಗಿ. ಎರಡನೆಯದು, ಭಗವತ್ ಸಾಕ್ಷಾತ್ಕಾರಕ್ಕಾಗಿ ನನ್ನ ಬದುಕನ್ನೆಲ್ಲ ಮೀಸಲಾಗಿಸುತ್ತೇನೆ. ಮೂರನೆಯದಾಗಿ, ನಾನೊಂದು ಮಹಾವ್ರತಧಾರಣೆ ಮಾಡುತ್ತೇನೆ. ಭಗವತ್ ಸ್ವರೂಪಿಣಿಯಾದ ಭರತಮಾತೆಯ ಬಂಧನ ವಿಮೋಚನಕ್ಕಾಗಿ, ಕ್ಷಾತ್ರತೇಜದ ಮಾರ್ಗದಿಂದಲ್ಲ, ಬ್ರಾಹ್ಮತೇಜದ ಮಾರ್ಗದಿಂದ ಶಕ್ತಿಸಾಧನೆಯನ್ನು ಕೈಕೊಳ್ಳುತ್ತೇನೆ.**[10]**

೧೯೦೫ರ ಹೊತ್ತಿಗಾಗಲೆ ಭಾರತೀಯ ರಾಜಕೀಯರಂಗ ಕುದಿಯತೊಡಗಿತ್ತು. ವಂಗವಿಭಜನೆಯ ಅನಂತರವಂತೂ ಆ ಜ್ವಾಲಾಮುಖಿ ಸಜೀವವಾಗಿ ಅಗ್ನಿವಾರಿಯನ್ನು ಪ್ರವರ್ಷಿಸುತ್ತಾ ಮಹೋಗ್ರರೂಪಧಾರಣೆ ಮಾಡಿತ್ತು. ಆ ಚಳವಳಿಗೆ ವಿಪಿನಚಂದ್ರಪಾಲರಂತಹ ಸುಪ್ರಸಿದ್ಧ ರಾಜಕೀಯ ವ್ಯಕ್ತಿಗಳು ಮಾತ್ರವಲ್ಲದೆ ರವೀಂದ್ರನಾಥ ಠಾಕೂರರಂತಹ ಕವಿಗಳೂ ಧುಮುಕಿದ್ದರು. ಭರತವರ್ಷದ ಪೂರ್ವರಂಗವಾದ ವಂಗದೇಶದಲ್ಲಿ ವಿಪಿನಚಂದ್ರಪಾಲರೂ, ಪಶ್ಚಿಮರಂಗವಾದ ಪಂಜಾಬಿನಲ್ಲಿ ಲಾಲಾ ಲಜಪತರಾಯರೂ, ದಕ್ಷಿಣರಂಗವಾದ ಮಹಾರಾಷ್ಟ್ರದಲ್ಲಿ ಬಾಲಗಂಗಾಧರ ತಿಲಕರೂ ಅದುವರೆಗೆ ಮಂದಗಾಮಿಯಾಗಿ ಉಗುರುಬೆಚ್ಚಗೆ ಹರಿಯುತ್ತಿದ್ದ ಸ್ವಾತಂತ್ರ್ಯಾಪೇಕ್ಷೆಯ ಕಿರುಹೊನಲನ್ನು ಕುದಿಕುದಿಯುವ ಬಿರುಹೊನಲನ್ನಾಗಿ ಮಾರ್ಪಡಿಸಿದ್ದರು. ೧೯೦೬ರಲ್ಲಿ ಶ್ರೀ ಅರವಿಂದರು ತಮ್ಮ ಬರೋಡೆಯ ಸರಕಾರಿ ಕೆಲಸಕ್ಕೆ ಪೂರ್ಣವಿರಾಮವಿಕ್ಕುವ ಪೀಠಿಕೆಯಾಗಿ ಸಂಬಳವಿಲ್ಲದ ದೀರ್ಘರಜಕ್ಕೆ ಬರೆದುಹಾಕಿ ವಂಗದೇಶಕ್ಕೆ ತೆರಳಿದರು. ಅಲ್ಲಿ ಅವರು ಹೊಸದಾಗಿ ಸ್ಥಾಪಿತವಾಗಿದ್ದ ನ್ಯಾಷನಲ್ ಕಾಲೇಜ್ ಒಂದಕ್ಕೆ ಕೊಂಚಕಾಲ ಪ್ರಿನ್ಸಿಪಾಲ್ ಆಗಿದ್ದುಕೊಂಡು ವಿಪಿನಚಂದ್ರಪಾಲರು ಹೊರಡಿಸುತ್ತಿದ್ದ ‘ವಂದೇ ಮಾತರಂ’ ಪತ್ರಿಕೆಯಲ್ಲಿ

ಲೇಖನಗಳನ್ನು ಬರೆಯತೊಡಗಿದರು. ಇದ್ದಕಿದ್ದಂತೆ 'ವಂದೇ ಮಾತರಂ' ಪತ್ರಿಕೆ ಆಗ್ನೇಯಾಸ್ತ್ರವಾಗಿ ಪರಿಣಮಿಸಿ, ವಿದೇಶಿಯ ಸರಕಾರ ದಿಕ್ಕುಗೆಡುವಂತಾಯಿತು. ಒಂದು ಹೊಸ ಧ್ವನಿ, ಒಂದು ಹೊಸಶಕ್ತಿ, ಒಂದು ಹೊಸ ಸ್ಫೂರ್ತಿ, ಒಂದು ದುರ್ದಮನೀಯವಾದ ಹೊಸ ಸ್ಥೈರ್ಯ, ಸಾವನ್ನು ಸಂತೋಷದಿಂದ ಎದುರಿಸುವ ಒಂದು ಹೊಸ ಧೈರ್ಯ ಜನಹೃದಯ ಹೃದಯದಲ್ಲಿಯೂ ಸಂಚಿರಿಸಿ ಸ್ವದೇಶೀ ಆಂದೋಲನ ಉಗ್ರರೂಪಕ್ಕೆ ತಿರುಗಿತು. ಸುಮ್ಮನಿದ್ದರೆ ವಿಪರೀತಕ್ಕಿಟ್ಟುಕೊಳ್ಳಬಹುದೆಂದು ಹೆದರಿದ ಸರಕಾರ ಮುಂಗಾಣದೆ ಕುಂಟು ನೆವ ಹೂಡಿ ಶ್ರೀ ಅರವಿಂದರನ್ನು ರಾಜದ್ರೋಹದ ಆಪಾದನೆಯ ಮೇಲೆ ದಸ್ತಗಿರಿ ಮಾಡಿತು. ಆದರೆ ಅರವಿಂದರು ಅಪರಾಧಿ ಎಂಬುದನ್ನು ಸ್ಥಿರಪಡಿಸಲಾಗದೆ ಇದ್ದುದರಿಂದ ಕೋರ್ಟು ಅವರ ಬಿಡುಗಡೆಗೆ ತೀರ್ಪುಕೊಟ್ಟಿತು.

ಇಷ್ಟರಲ್ಲಿಯೆ ರಾಷ್ಟ್ರಮಹಾಸಭೆಯಾಗಿದ್ದ ಕಾಂಗ್ರೆಸ್ಸಿನಲ್ಲಿ ಬಲಪಕ್ಷ ಎಡಪಕ್ಷಗಳು ಹುಟ್ಟಿಕೊಂಡಿದ್ದುವು. ಸೌಮ್ಯಮಾರ್ಗದ ಮಂದಗಾಮಿಗಳಾದ ವಯಸ್ಕರು ಒಂದು ಕಡೆ, ಉಗ್ರಮಾರ್ಗದ ತೀವ್ರಗಾಮಿಗಳಾದ ಯುವಕರು ಮತ್ತೊಂದು ಕಡೆ. ಅರವಿಂದರು ತೀವ್ರಗಾಮಿಗಳಿಗೆ ಮುಂದಾಳಾದರು. ಕಾಂಗ್ರೆಸ್ಸು ಸೂರತ್ತಿನಲ್ಲಿ ತನ್ನ ಮಹಾಧಿವೇಶನ ನಡಸಿದಾಗ ತಿಲಕರೂ ಅರವಿಂದರೂ ಒಟ್ಟಾಗಿ ನಿಂತು ಮಂದಗಾಮಿಗಳನ್ನೂ ಉಗ್ರವಾಗಿ ಪ್ರತಿಭಟಿಸಿದರು. ಅವರ ಬೆಂಬಲಕ್ಕೆ ಅಗ್ನಿಶಸ್ತ್ರಧಾರಿಗಳಾಗಿದ್ದ ಕ್ರಾಂತಿಕಾರರೂ ಇದ್ದರೆಂಬುದನ್ನು ಇಲ್ಲಿ ನೆನೆಯದಿರಲಾಗುವುದಿಲ್ಲ.

ಸೂರತ್ ಕಾಂಗ್ರೆಸ್ಸನ್ನು ಮುಗಿಸಿ ಅರವಿಂದರು ಬೊಂಬಾಯಿ ಬರೋಡೆಗಳಲ್ಲಿ ಸಂಚರಿಸಿ, ಭಾಷನಗಳಿಂದ ತಮ್ಮ ಉಜ್ವಲಪ್ರಭಾವವನ್ನು ಬೀರಿ, ಜನಮನವನ್ನು ತಮ್ಮ ನೀತಿಗೆ ಒಲಿಸಿಕೊಂಡರು. ಆಗಲೆ ಅವರು ಯೋಗಾಭ್ಯಾಸದಲ್ಲಿ ಮುಂದುವರಿಯುವುದಕ್ಕಾಗಿ ಯೋಗಿ ಲೇಲೆಯಿಂದ ಸಲಹೆಗಳನ್ನು ಪಡೆದುದಲ್ಲದೆ, ಚಿತ್ತವೃತ್ತಿನಿರೋಧದ ಸಾಧನೆಯಲ್ಲಿ ಸಿದ್ಧಿಯನ್ನು ಪಡೆದರು.

ಇಷ್ಟರಲ್ಲಿ ಬಂಗಾಳದಲ್ಲಿ ಕಂಗೆಟ್ಟ ಸರಕಾರವು ಹುಚ್ಚಿಗೆದ್ದು ಅಪರಾಧಿ ನಿರಪರಾಧಿ ಎಂಬ ಭೇದವಿಲ್ಲದೆ ತರುಣ ಬಂಗಾಳಿಗಳನ್ನು ದಸ್ತಗಿರಿಮಾಡಿ ವಿಚಾರಣೆಯ ಆಟ ಹೂಡಿ ಅವರನ್ನು ಉಗ್ರಶಿಕ್ಷೆಗೂ ಗುರಿಮಾಡಿತು. ಸರಕಾರದ ವರ್ತನೆಯಿಂದ ಮುನಿದೆದ್ದ ಕ್ರಾಂತಿಕಾರ ಯುವಕರು ಪ್ರತೀಕಾರ ಕೈಕೊಂಡು ಐರೋಪ್ಯ ಅಧಿಕಾರಿಗಳ ಮೇಲೆ ಬಾಂಬು ಎಸೆದುದರ ಪರಿಣಾಮವಾಗಿ ಒಂದೆರಡು ಸಾವುನೋವುಗಳಾದುವು. ಈ ಚಟುವಟಿಕೆಗಳಲ್ಲಿ ಅರವಿಂದರ ತಮ್ಮ ಬರೀಂದ್ರರೂ ಸೇರಿದ್ದುದರಿಂದ ಸರಕಾರದ ಗುಮಾನಿ ಅರವಿಂದರ ಮೇಲೆಯೂ ಬಿದ್ದಿತ್ತು. ೧೯೦೮ನೆಯ ಮೇ ತಿಂಗಳ ೫ನೆಯ ದಿನ ಬೆಳಗಿನ ಜಾವ ೫ ಗಂಟೆಯಲ್ಲಿ ಪೋಲೀಸರು ಅವರಿದ್ದ ಮನೆಯನ್ನು ಮುತ್ತಿ, ಶೋಧಿಸಿ, ಮಲಗಿದ್ದ ಅರವಿಂದರನ್ನು ಹಾಸಗೆಯ ಮೇಲೆಯೆ ದಸ್ತಗಿರಿಮಾಡಿ, ಕೈಗೆ ಕೊಳಗಳನ್ನು ಹಾಕಿ, ಆಲಿಪುರದ ಜೈಲಿಗೆ ಹಿಡಿದುಕೊಂಡು ಹೋದರು.

ಮುಂದೆ ನಡೆದ ನಾಟಕ ಭಾರತ ಸ್ವಾತಂತ್ರ್ಯ ಸಂಗ್ರಾಮದ ಚರಿತ್ತರೆಯಲ್ಲಿ 'ಆಲಿಪುರದ ಕೇಸು' ಎಂಬ ಹೆಸರಿನಿಂದ ಸುವಿಖ್ಯಾತವಾಗಿದೆ.

೮

ಈ ಘಟನೆಗೆ ಮೊದಲೆ ಒಂದೆರಡು ತಿಂಗಳ ಹಿಂದೆಯೆ ಅರವಿಂದರಿಗೆ ಒಂದು ಒಳಕರೆ ಕೇಳಿಸಿತ್ತಂತೆ; ಆದರೆ ಅವರು ಅದನ್ನು ಪೂರ್ಣವಾಗಿ ಗಮನಿಸಿರಲಿಲ್ಲ. ಕಾವ್ಯ ಮತ್ತು ರಾಜಕೀಯ ಈ ಎರಡರಲ್ಲಿಯೂ ಅವರಿಗೆ ಒಂದು ವಿಶೇಷವಾದ ಮೋಹಾಸಕ್ತಿಯಿತ್ತಂತೆ. ಆದ್ದರಿಂದಲೆ ಅವರು ಯೋಗಸಾಧನೆಯನ್ನು ಕೈಕೊಳ್ಳುವಾಗಲೂ ಯೋಗಿ ಲೀಲೆಗೆ ತಿಳಿಸಿದ್ದರಂತೆ 'ಯೋಗಸಾಧನೆ ಕಾವ್ಯಸೃಷ್ಟಿಗೂ ರಾಜಕೀಯ ಚಟುವಟಿಕೆಗೂ ಅಡ್ಡಬರಬಾರದು' ಎಂದು. ಆದರೆ ವಿಧಿ ಯಾವ ಅಭೂತಪೂರ್ವವಾದ ಬ್ರಾಹ್ಮೀಕಾರ್ಯಕ್ಕಾಗಿ ಅವರನ್ನು ನರಜನ್ಮ ಧಾರಣೆಯ ತಪೋರಂಗಕ್ಕೆ ಕಳುಹಿಸಿದ್ದಿತ್ತೋ ಆ ಕಾರ್ಯವನ್ನು ಅವರು ಧಿಕ್ಕರಿಸಲು ಸಾಧ್ಯವಾದೀತೆ? ಸೃಷ್ಟಿಯ ವಿಕಾಸವಿಧಾನದಲ್ಲಿಯೆ ಬದಲಾವಣೆಯನ್ನು ಪ್ರಚೋದಿಸುವ ಮಹತ್‌ಪರಿಣಾಮಕರವಾದ ಆ ಭಗವನ್ನಿಯಂತ್ರಿತವಾದ ಬ್ರಾಹ್ಮೀಕರ್ತವ್ಯದೆದುರಿನಲ್ಲಿ, ಮನುಷ್ಯದೃಷ್ಟಿಯಿಂದ ಅದೆಷ್ಟೇ ಮಹಿಮಾಮಯವಾಗಿರಲಿ ಕೀರ್ತಿಕರವಾಗಿರಲಿ ಭವ್ಯವಾಗಿರಲಿ, ಅತಿಕ್ಷುದ್ರವಾಗಿ ತೋರುವ ರಾಜಕೀಯ ಚಟುವಟಿಕೆಯ ಮತ್ತು ಕಾವ್ಯಸೃಷ್ಟಿಯ ಸರಸ ಸ್ವಾರಸ್ಯ ಹವ್ಯಾಸಗಳು ಹೆಡೆಯೆತ್ತಿ ನಿಂತು ಪ್ರತಿಸ್ಪರ್ಧಿಗಳಾಗಬಲ್ಲುವೆ? ಭಯಂಕರವಾಗಿ ಕಾಣುವ ಅಮಂಗಳದ ಮಧ್ಯದಲ್ಲಿಯೆ ತನ್ನ ನಿಗೂಢತರವಾದ ಮಂಗಳವನ್ನು ಸಾಧಿಸುವ ಆ ಸರ್ವಜ್ಞ ದೈವೀಶಕ್ತಿಯ 'ದೇವಕೇತು'**[11]** ತನ್ನ ಕಾರ್ಯಕ್ಕಾಗಿ ಮೀಸಲಾಗಿದ್ದ ಶ್ರೀ ಅರವಿಂದರನ್ನು ರಾಜಕೀಯರಂಗದಿಂದ ಯೋಗರಂಗಕ್ಕೆ ಸಾಗಿಸುವ ಸಲುವಾಗಿ, ಅಟ್ಟಿ ಹಿಡಿದು ಕಚ್ಚಿ ಎತ್ತಿಕೊಂಡು ಬಂದು, ಆಲಿಪುರದ ಆಶ್ರಯದಲ್ಲಿ, ಎಂದರೆ ಜೈಲಿನಲ್ಲಿ, ಸೆರೆಯಿಡುವ ನೆವದಲ್ಲಿ ಮರೆಸಿಬಿಟ್ಟಿತು.

ಸಿಡಿಲೆರಗಿದಂತೆ ಎರಗಿದ ಆ ಘಟನೆಗೆ ಅರವಿಂದರು ಪ್ರಾರಂಭದಲ್ಲಿ ಒಂದು ಕ್ಷಣ ವಿಸ್ಮಿತರಾದರು. "ಇದೇನಿದು? ನನಗೊಂದು ಆದೇಶವಿದೆ ಎಂದು ಅರಿತಿದ್ದೆ. ಅದನ್ನು ಸಾಧಿಸುವ ತನಕ ನನಗೆ ನಿನ್ನ ರಕ್ಷೆ ಇರುತ್ತದೆಂದೂ ನಂಬಿದ್ದೆ. ಹೀಗಾಯಿತಲ್ಲಾ!" ಎಂದು ಸಂಶಯಗ್ರಸ್ತರಾದರಂತೆ. ಹಾಗೆಯೆ ಒಂದು, ಎರಡು, ಮೂರು ದಿನಗಳು ಜೈಲಿನಲ್ಲಿ ಉರುಳಿದ್ದುವು. ಆಗ ಒಂದು ಅಂತರ್ವಾಣಿ ಹೇಳಿತಂತೆ: "ಅವಸರ ಬೇಡ. ನೋಡುತ್ತಿರು!" ಎಂದು.

ಸೆರೆಯಲ್ಲಿ ಇವರು ಇಂತಿರುತ್ತಿರಲು, ಅತ್ತ ದೇಶಕ್ಕೆ ದೇಶವೆ ಅವರ ದಸ್ತಗಿರಿಯಿಂದ ಅಲ್ಲೋಲಕಲ್ಲೋಲವಾಯಿತು. ಹೇಗಾದರೂ ಮಾಡಿ ಅರವಿಂದರ ನಿಷ್ಕಳಂಕವಾದ ಜೀವನವನ್ನು ಸಕಳಂಕವನ್ನಾಗಿ ಮಾಡಿ ತೋರಿಸಿ, ಅವರನ್ನು ಅಪರಾಧಿಯನ್ನಾಗಿ ಮಾಡುವ ಪ್ರಪ್ರಯತ್ನದಲ್ಲಿ ಸರಕಾರ ತೊಡಗಿದ್ದಾಗ ಅರವಿಂದರ ದೇಶಬಾಂಧವರು ಅವರ 'ಸಮರ್ಥನೆ'ಗಾಗಿಯೂ 'ರಕ್ಷೆ'ಗಾಗಿಯೂ ಭೀಷ್ಮಪ್ರಯತ್ನ ಮಾಡಿದರು. ಅದಕ್ಕಾಗಿ ಸಹಸ್ರಾರು ರೂಪಾಯಿಗಳ ಧನಸಂಗ್ರಹವಾಯಿತು. ಆಗ ತಾನೆ ತಮ್ಮ ವಕೀಲಿವೃತ್ತಿಯಲ್ಲಿ ಉದಯಮಾನ ಸೂರ್ಯನಾಗಿದ್ದ ಶ್ರೀ ಚಿತ್ತರಂಜನದಾಸರು ಅರವಿಂದರ ಪರವಾಗಿ ವಾದಿಸುವ ಸಮಸ್ತ ಭಾರವನ್ನೂ ಹೊತ್ತುಕೊಂಡು ಜಗನ್ಮಾನ್ಯರಾದರು. ಕೇಸು ಒಂದು ವರುಷ ಎಳೆಯಿತು. ಚಿತ್ತರಂಜನರ ಅದ್ಭುತವಾದ ವಾದ ಸಾಮರ್ಥ್ಯವೂ ಹಿಮದೆ ಇಂಗ್ಲೆಂಡಿನಲ್ಲಿ ಅರವಿಂದರ ಸಹಾಧ್ಯಾಯಿಯಾಗಿದ್ದು ಅವರಿಗೆ ಎರಡನೆಯ ಸ್ಥಾನದಲ್ಲಿ ಉತ್ತೀರ್ಣವಾಗಿ ಅವರ ಪ್ರತಿಭೆಯ ಪರಿಚಯವನ್ನು ಚೆನ್ನಾಗಿ ಅರಿತಿದ್ದ ಬೀಚ್‌ಕ್ರಾಫ್ ಎಂಬ ಆಂಗ್ಲೇಯ ನ್ಯಾಯಾಧೀಶನ

ವಿವೇಕಪೂರ್ಣತೆಯೂ ಶ್ರೀ ಅರವಿಂದರ ಅನಿಂದನೀಯ ಜೀವನ ಚರಿತವೂ ಮುಪ್ಪುರಿಗೊಂಡ ಕಾರಣವಾಗಿ ಅವರು ನಿರಪರಾಧಿಗಳೆಂದು ಇತ್ಯರ್ಥವಾಗಿ ಸೆರೆಯಿಂದ ಬಿಡುಗಡೆ ಹೊಂದಿದರು.

ಆದರೆ ಅಲಿಪುರದ ಸೆರೆಮನೆಯ ಯೋಗದೀಕ್ಷಾಮಂದಿರವಾಗಿ ಶ್ರೀ ಅರವಿಂದರ ಬಾಳ್ವೆಯ ದಿಕ್ಕನ್ನೆ ಬದಲಾಯಿಸಿತ್ತು. ಸೆರೆಯಿಂದ ಹೊರಗೆ ಬಂದ ಮೇಲೆ ಉತ್ತರಪರ ಎಂಬಲ್ಲಿ ಅವರು ಮಾಡಿದ ರೋಮಾಂಚನಕರವಾದ ಭಾಷಣದಲ್ಲಿ ಆ ಅದ್ಭುತ ಕಥೆ ವರ್ಣಿತವಾಗಿದೆ: "ಆಗ ಆ ಪುರುಷೋತ್ತಮನು ತನ್ನ ಗೀತೆಯನ್ನು ನನ್ನ ಕೈಯಲ್ಲಿಟ್ಟನು. ಅವನ ಶಕ್ತಿ ನನ್ನಲ್ಲಿ ಸಂಚರಿಸಿತು. ಗೀತಾಪ್ರಣೀತವಾದ ಸಾಧನೆಯನ್ನು ಮಾಡಲು ನಾನು ಸಮರ್ಥನಾದೆ. ಆಗಲೆ ನನಗಾದದ್ದು ಹಿಂದೂ ಧರ್ಮದ ಕೇಂದ್ರಸತ್ತ್ವದ ಸಿದ್ಧಿ...ನಾನು ತಿರುಗಾಡುತ್ತಿದ್ದೆ. ಇದ್ದಕಿದ್ದಂತೆ ಅವನ ಚೇತನ ನನ್ನಲ್ಲಿ ಚರಿಸಿತು. ಲೋಕಕ್ಕೂ ನನಗೂ ನಡುವೆ ಅಡ್ಡವಾಗಿ ನಿಂತಿದ್ದ ಎತ್ತರವಾದ ಗೋಡೆಗಳ ಕಡೆ ನೋಡಿದೆ. ಅಲ್ಲಿ ಗೋಡೆಗಳಿರಲಿಲ್ಲ; ವಾಸುದೇವನೆ ನನ್ನನ್ನು ಸುತ್ತುವರಿದಿದ್ದ. ಎದುರಿಗಿದ್ದ ಮರದ ಚಾಚುಗೊಂಬೆಗಳ ಅಡಿಯಲ್ಲಿ ಸುತ್ತಾಡಿದೆ. ಅಲ್ಲಿದ್ದುದು ಮರವಾಗಿರಲಿಲ್ಲ; ಪ್ರತ್ಯಕ್ಷ ವಾಸುದೇವನೆ, ಶ್ರೀ ಕೃಷ್ಣನೆ, ಹಬ್ಬಿ ಹರಡಿ ನನಗೆ ನೆರಳು ಹಿಡಿದು ನಿಂತಿದ್ದ! ಕೋವಿ ಹಿಡಿದು ನನ್ನನ್ನು ಕಾಯುತ್ತಿದ್ದ ಕಾವಲುಗಾರನನ್ನು ನೋಡಿದೆ: ಪ್ರತ್ಯಕ್ಷ ನಾರಾಯಣನೆ ಕಾವಲು ನಿಂತಿದ್ದಾನೆ! ನನಗೆ ಕೊಟ್ಟಿದ್ದ ಒರಟು ಕಂಬಳಿಯ ಮೇಲೆ ಮಲಗಿದೆ: ಶ್ರೀ ಕೃಷ್ಣನ ದಿವ್ಯ ಬಾಹುಗಳೆ ನನ್ನನ್ನು ಅಪ್ಪಿರುವ ಪ್ರತ್ಯಕ್ಷಾನುಭವವಾಯಿತು! ಸೆರೆಮನೆಯಲ್ಲಿದ್ದ ಇತರ ಸೆರೆಯಾಳುಗಳನ್ನು ನೋಡಿದೆ: ಕಳ್ಳರು, ಕೊಲೆಗಾರರು, ಸುಲಿಗೆಗಾರರು, ಎಲ್ಲರೂ ವಾಸುದೇವನಂತೆಯೆ ಕಂಡರು. ಕೇಸು ಪ್ರಾರಂಭವಾದಾಗ ನನ್ನನ್ನು ಕೋರ್ಟಿಗೆ ತಂದು ನ್ಯಾಯಾಧೀಶನ ಮುಂದೆ ನಿಲ್ಲಿಸಿದರು...ಅವನು ಹೇಳಿದ: 'ನೋಡು. ನ್ಯಾಯಾಧೀಶನ ಕಡೆಗೆ ನೋಡು. ಪೋಲೀಸಿನವರ ಕಡೆಗೆ ನೋಡು. ಎದುರುಗಡೆಯ ಲಾಯರುಗಳ ಕಡೆ ನೋಡು!' ನೋಡಿದೆ: ಅಲ್ಲಿ ನ್ಯಾಯಾಧೀಶನೂ ಕಾಣಿಸಲಿಲ್ಲ; ಪೋಲೀಸರೂ ಕಾಣಿಸಲಿಲ್ಲ. ವಾಸುದೇವನಲ್ಲದೆ ಅನ್ಯರಾರೂ ಅಲ್ಲಿರಲಿಲ್ಲ! ಬೆಂಚಿನಕಡೆಗೆ ನೋಡಿದೆ: ಎದುರುಗಡೆಯ ವಕೀಲರೂ ಕಾಣಲಿಲ್ಲ. ಅಲ್ಲಿ ಕುಳಿತ್ತದ್ದದ್ದು ನಾರಾಯಣ! ನನ್ನ ಸರ್ವಜೀವನ ಸಖ ಶ್ರೀ ಕೃಷ್ಣನೆ ಅಲ್ಲಿ ಕುಳಿತು ಮುಗುಳುನಗುತ್ತಿದ್ದ!..."**[12]**

'ಈಶಾವಾಸ್ಯಮಿದಂ ಸರ್ವಂ' ಎಂಬ ಉಪನಿಷತ್ತಿನ ಮಂತ್ರದಲ್ಲಿಯೂ 'ವಾಸುದೇವಃ ಸರ್ವಂ' ಎಂಬ ಭಗವದ್ಗೀತೆಯ ಶ್ಲೋಕದಲ್ಲಿಯೂ ಯಾವ ವಿರಾಡ್ದರ್ಶನದ ಅನುಭವ ಸೂಚಿತವಾಗಿದೆಯೋ ಆ 'ಸರ್ವಂ ಖಿಲ್ವಿದಂ ಬ್ರಹ್ಮ'ತ್ವವು ಅರವಿಂದರಿಗೆ ಸಿದ್ಧಿಯಾಗಿತ್ತು. ಹಿಂದೆ ಅವರಿಗೆ ಬೊಂಬಾಯಿಯಲ್ಲಿ ಲೀಲೆಯೊಡನೆ ಸಾಧನೆಯಲ್ಲಿ ತೊಡಗಿದ್ದಾಗ ಆಗಿದ್ದ 'ಬ್ರಹ್ಮಸತ್ಯಂ ಜಗನ್ಮಿಥ್ಯಾ' ಅನುಭವಕ್ಕೆ ಈ 'ಸರ್ವಂ ಖಿಲ್ವಿದಂ ಬ್ರಹ್ಮ' ಅನುಭವವು ಸಂವಾದಿಯೂ ಸಂಪೂರಕವೂ ಆಗಿ ಒದಗಿತು. ಮೊದಲನೆಯದು ನಿರ್ವಿಕಲ್ಪ ಮತ್ತು ನಿರ್ಗುಣ. ಅದು ನೇತಿ ನೇತಿ ಎಂದು ಏರುತ್ತದೆ. ಎರಡನೆಯದು ಸವಿಕಲ್ಪ ಮತ್ತು ಸಗುಣ. ಅದು ಇತಿ ಇತಿ ಎಂದು ಇಳಿಯುತ್ತದೆ. ಮುಂದೆ ಶ್ರೀ ಅರವಿಂದರ 'ಪೂರ್ಣಯೋಗದರ್ಶನ'ದಲ್ಲಿ ಈ ಏರಿಕೆ ಮತ್ತು ಇಳಿಕೆಗಳ ಸಂಪೂರ್ಣಾರ್ಥವನ್ನೂ ಮತ್ತು ಪರಮ ಪ್ರಯೋಜನವನ್ನೂ ಸಂದರ್ಶಿಸುತ್ತೇವೆ.

ಶ್ರೀ ಅರವಿಂದರು ಸೆರೆಯಿಂದ ಮಾತ್ರವಲ್ಲದೆ ಮಾಯೆಯಿಂದಲೂ ಮುಕ್ತರಾಗಿ ಹೊರಗೆ ಬಂದು ನೋಡುತ್ತಾರೆ: ತಿಲಕ ಮೊದಲಾದ ದೇಶದ ಮುಖಂಡರು ಕಾರಾಗೃಹವಾಸದಲ್ಲಿದ್ದಾರೆ. ನಾಡಿನಲ್ಲೆಲ್ಲ ಏನೋ ಒಂದು ಅಕರ್ಮಕತೆ ವ್ಯಾಪಿಸಿದೆ. ಆಲಿಸಿದರೆ, ಹಿಂದೆ ದಿಗ್ದಿಗಂತ ಕಂಪನಕಾರಿಯಾಗಿ ವಾಯುಮಂಡಲವನ್ನು ಭೇದಿಸಿಕೊಂಡು ಕೇಳಿಬರುತ್ತಿದ್ದ "ವಂದೇ ಮಾತರಂ" ಮಂತ್ರಘೋಷವೂ ಕೂಡ ನಿಶ್ಶಬ್ದವಾಗಿದೆ. ಒಂದು ವರ್ಷದಲ್ಲಿ ಎಂತಹ ಬದಲಾವಣೆ! ಸಾಧಾರಣ ಹೃದಯವಾಗಿದ್ದರೆ ಎದೆಗೆಡುತ್ತಿತ್ತೇನೊ! ಆದರೆ ಶ್ರೀ ಅರವಿಂದರು ಒಕ್ಕಯ್ಯಾಗಿಯೆ ಸಮಸ್ತ ಭಾರತೀಯ ಸ್ವಾತಂತ್ರ್ಯ ಸಂಗ್ರಾಮರಂಗದ ರಣಚೇತನ ರಕ್ಷೆಗೆ ದೀಕ್ಷಿತರಾಗಿ ನಿಂತರು. ಇಂಗ್ಲಿಷಿನಲ್ಲಿ 'ಕರ್ಮಯೋಗಿ' ಮತ್ತು ಬಂಗಾಳಿಯಲ್ಲಿ 'ಧರ್ಮ' ಎಂಬ ಎರಡು ಪತ್ರಿಕೆಗಳನ್ನು ಪ್ರಾರಂಭಿಸಿದರು. ಮತ್ತೆ ಜನತಾಹೃದಯಕ್ಕೆ ಶಕ್ತಿ ಧೈರ್ಯ ಕಾರ್ಯೋತ್ಸಾಹಗಳನ್ನು ತುಂಬುವಂತೆ ಪ್ರಚಂಡವಾದ ಲೇಖನ ಭಾಷಣಗಳ ಪ್ರಸಾರಕಾರ್ಯದಲ್ಲಿ ತೊಡಗಿದರು. "ಕ್ಲೇಶ, ಕಷ್ಟ, ಸಂಕಟ-ಇವು ಭಗವಂತನ ಸುತ್ತಿಗೆಯೇಟುಗಳು. ಅವು ಬಿದ್ದಲ್ಲದೆ ನಮ್ಮ ರಾಷ್ಟ್ರಚೇತನಕ್ಕೆ ಮಹತ್ತಾಗಲಿ, ರಾಷ್ಟ್ರಜೀವನಕ್ಕೆ ಭದ್ರಾಕಾರವಾಗಲಿ ಲಭಿಸುವುದಿಲ್ಲ. ಅವನ ಅಡಿಗಲ್ಲಿನ ಮೇಲೆ ನಾವು ಕಬ್ಬಿಣ; ಬಡಿತದ ಮೇಲೆ ಬಡಿತಗಳು ನಮ್ಮ ಮೇಲೆ ಮಳೆಗರೆಯುತ್ತಿವೆ; ನಾಶಕ್ಕಲ್ಲ, ಸೃಷ್ಟಿಗಾಗಿ. ದುಃಖಭೋಗವಿಲ್ಲದೆ ಪ್ರಗತಿಯೋಗವಿಲ್ಲ."

ಇನ್ನು ಮುಂದೆ ಅರವಿಂದರ ರಾಜಕೀಯ ಕರ್ಮವೂ ಯೋಗದ ಹಾದಿಯನ್ನೆ ಹಿಡಿದುದನ್ನು ನೋಡುತ್ತೇವೆ. ಜೀವನ್ಮುಕ್ತರಾಗಿದ್ದ ಅವರು ಸಮರ್ಪಣ ಯೋಗದಲ್ಲಿ ಸಂಪೂರ್ಣವಾಗಿ ಪ್ರತಿಷ್ಠಿತರಾಗಿದ್ದರು. 'ಕರ್ಮಯೋಗಿ' ಮಾಸ ಪತ್ರಿಕೆಯಲ್ಲಿ ಆಧ್ಯಾತ್ಮ ರಾಜಕೀಯಗಳು ಅದ್ವೈತಸಿದ್ಧಿಯನ್ನು ಪಡೆದಂತೆ ತೋರಿತು. ಈಶ, ಕೇನ ಮತ್ತು ಕಠೋಪನಿಷತ್ತುಗಳ ಅದ್ಭುತ ಭಾಷಾಂತರಗಳೂ ಆ ಪತ್ರಿಕೆಯಲ್ಲಿಯೆ ಮೊದಲು ಬೆಳಕು ಕಂಡದ್ದು.

ಅರವಿಂದರೂ ತಿಲಕರೂ ಸೆರೆಯಲ್ಲಿದ್ದಾಗ ದೇಶದ ರಾಜಕೀಯ ಸ್ಥಿತಿಯನ್ನು ನೋಡಿ ಸರಕಾರ ತೃಪ್ತಿಪಟ್ಟುಕೊಂಡಿತ್ತು. ಇನ್ನೇನು ಎಲ್ಲ ತಣ್ಣಗಾಗುತ್ತದೆ ಎಂದು ಹಾರೈಸಿತ್ತು. ಆದರೆ ಬಿಡುಗಡೆ ಹೊಂದಿದ ಅರವಿಂದರು ಮತ್ತೆ ಬಿರುಗಾಳಿಗಳನ್ನೆ ಎಬ್ಬಿಸುತ್ತಿರುವುದನ್ನು ಕಂಡು ಅಪ್ರತಿಭವಾಯಿತು. ಮತ್ತೊಮ್ಮೆ ಏನಾದರೂ ಮಾಡಿ ಹೇಗಾದರೂ ಅವರನ್ನೂ ತಿಲಕರನ್ನೂ ದೀರ್ಘಕಾಲದ ಸೆರೆಗೆಳೆಯಬೇಕೆಂದು ನಿಶ್ಚಯಿಸಿತು. ಅದಕ್ಕೆ ಬೇಕಾದ ಸಿ.ಐ.ಡಿ.ಗಳ ವ್ಯೂಹಜಾಲವೂ ಸಿದ್ಧವಾಯಿತು. ಅವರಿಗೆ ನೆವವೊದಗಿಸಲೆಂಬಂತೆ ಬಂಗಾಲದ ಕ್ರಾಂತಿಕಾರರೂ ಉಗ್ರಚಟುವಟಿಕೆಗಳನ್ನು ಮತ್ತೆ ಪ್ರಾರಂಭಿಸಿದರು. ೧೯೧೦ನೆಯ ಜನವರಿ ತಿಂಗಳಲ್ಲಿ ಒಬ್ಬ ಬಂಗಾಳಿ ಕ್ರಾಂತಿಕಾರ ತರುಣನು ಕಲ್ಕತ್ತೆಯ ಹೈಕೋರ್ಟಿನ ಆವರಣದಲ್ಲಿಯೆ ಒಬ್ಬ ಪೋಲೀಸ್ ಅಧಿಕಾರಿಯನ್ನು ಹಗಲಿನಲ್ಲಿಯೆ ಗುಂಡಿಕ್ಕಿ ಕೊಂದನು. ಅರವಿಂದರು ಆ ಕಾರ್ಯವನ್ನು ತಮ್ಮ ಪತ್ರಿಕೆಯಲ್ಲಿ ಉಗ್ರವಾಗಿ ಖಂಡಿಸಿದರೂ ಸರಕಾರದ ಭಯೋತ್ಪಾದಕವಾದ ನೀತಿಯೇ ಇಂತಹ ಉನ್ಮತ್ತ ಪ್ರತೀಕಾರಗಳಿಗೆ ತರುಣರನ್ನು ಉದ್ರೇಕಿಸುತ್ತದೆ ಎಂದೂ ಪ್ರತಿಪಾದಿಸಿದರು. ಅಲ್ಲದೆ ಆಗಿನ ರಾಜಕೀಯ ಸ್ಥಿತಿಯನ್ನು ಚೆನ್ನಾಗಿ ಪರಿಶೀಲಿಸಿ ತಮಗದು ಸಕಾಲವಲ್ಲವೆಂದೂ ನಿರ್ಣಯಿಸಿದರು. ಜೊತೆಗೆ ಅಂತರ್ವಾಣಿಯೂ ಅವರನ್ನು ಬಹುದಿನಗಳಿಂದ ಬೇರೆಯ ದಿಕ್ಕಿಗೆ ಕರೆಯತೊಡಗಿತ್ತು. ತಮ್ಮ ಸಂದೇಶವನ್ನು "ದೇಶ ಬಾಂಧವರಿಗೊಂದು ಬಹಿರಂಗಪತ್ರ" ಎಂಬ ಲೇಖನದಲ್ಲಿ ಪ್ರಕಟಿಸಿದರು. ಆ ಪತ್ರದಲ್ಲಿ ಸದ್ಯದ ರಾಜಕೀಯ ಸ್ಥಿತಿಯನ್ನೂ ಮುಂದೆ ಕೈಕೊಳ್ಳಬೇಕಾದ ಮಾರ್ಗವನ್ನೂ ನೀತಿಯನ್ನೂ

ಸೂಚಿಸಿ, "ನನ್ನನ್ನು ಗಡಿಪಾರು ಮಾಡಿದರೆ, ನಾನು ಮತ್ತೆ ರಾಜಕೀಯಕ್ಕೆ ಹಿಂತಿರುಗದಿದ್ದರೆ 'ರಾಷ್ಟ್ರೀಯ ಪಕ್ಷ'ವು ಹತಾಶವಾಗಲೂ ಬಾರದು; ಎದೆಗೆಡಲೂ ಬಾರದು. ಏಕೆಂದರೆ ಭಗವಂತನು ಇಂದಾಗಲಿ ನಾಳೆಯಾಗಲಿ ಮುಂದಾಳಾಗಿ ನಿಂತು ದೇಶವನ್ನು ಸ್ವಾತಂತ್ರ್ಯಕ್ಕೆ ಕೊಂಡೊಯ್ಯುವ ತನ್ನ ಅಭಿಷಿಕ್ತ ದೂತನೊಬ್ಬನನ್ನು ಕಳುಹಿಸಿಯೆ ಕಳುಹಿಸುತ್ತಾನೆ."**[13]**

ಹೀಗೆ ಶ್ರೀ ಅರವಿಂದರು 'ಆಲಿಪುರ ಜ್ಯೈಲಿ'ನಿಂದ ಹೊರಗೆ ಬಂದ ಹತ್ತು ತಿಂಗಳಲ್ಲಿಯೆ ಎಂದರೆ ೧೯೧೦ನೆಯ ಫೆಬ್ರುವರಿ ತಿಂಗಳಲ್ಲಿ ಬ್ರಿಟಿಷ್ ಇಂಡಿಯಾದಿಂದ ಪಾರಾಗಿ ಫ್ರೆಂಚರಿಗೆ ಸೇರಿದ್ದ ಚಂದ್ರನಗರಕ್ಕೆ ಬಂದು ರಹಸ್ಯವಾಗಿಯೆ ಇದ್ದರು. ಕೆಲದಿನಗಳಲ್ಲಿ ಆ ನಗರವೂ ಕಲ್ಕತ್ತೆಯ. ಆಗ ಭರತಖಂಡದ ರಾಜಧಾನಿಯಾಗಿದ್ದ ಕಲ್ಕತ್ತೆಯ ಗಡಿಬಿಡಿಗೂ ಕೋಲಾಹಲಕ್ಕೂ ಸಮೀಪವಾಗಿದ್ದುದರಿಂದ ಅದನ್ನೂ ಪರಿತ್ಯಜಿಸಿ ದಕ್ಷಿಣಕ್ಕೆ ಹೊರಟು ಮತ್ತೊಂದು ಫ್ರೆಂಚ್ ನಗರವಾದ ಪಾಂಡುಚೆರಿಗೆ ಬಂದರು, ೧೯೧೦ನೆಯ ಏಪ್ರಿಲ್ ೪ರಲ್ಲಿ.

ಅತ್ತ ಸರಕಾರ ಅವರ ಬಹಿರಂಗ ಪತ್ರಕ್ಕಾಗಿ ಅವರ ಮೇಲೆ ಇನ್ನೊಂದು ರಾಜದ್ರೋಹದ ಆಪಾದನೆ ಹೊರಿಸಿ ಮೊಕದ್ದಮೆ ಹೂಡಿತು. ಅರವಿಂದರು ತಲೆತಪ್ಪಿಸಿಕೊಂಡು ಹೆದರಿ ಓಡಿಹೋದರೆಂದು ಆಪಾದಿಸಿತು. ಅದಕ್ಕೆ ಅರವಿಂದರೂ ಮದರಾಸಿನ ಪತ್ರಿಕೆಯೊಂದರ ಮೂಲಕ ಸರಿಯಾದ ಉತ್ತರ ಕೊಟ್ಟರು. ಆದರೂ ಸರಕಾರ ಪತ್ರವನ್ನು ಅಚ್ಚುಮಾಡಿದವನನ್ನೆ ಹಿಡಿದು ಕೇಸುಹಾಕಿತು. ಆದರೆ ಮೊಕದ್ದಮೆ ನಿಲ್ಲಲಿಲ್ಲ ಮಾತ್ರವಲ್ಲ, ಅರವಿಂದರ ಬಹಿರಂಗಪತ್ರದಲ್ಲಿ ರಾಕದ್ರೋಹಕರವಾದದ್ದು ಏನೂ ಇಲ್ಲ ಎಂದೂ ಕೋರ್ಟು ತೀರ್ಪುಕೊಟ್ಟಿತು.

೯

೧೯೧೦ರಲ್ಲಿ ಪಾಂಡುಚೆರಿಗೆ ಬಂದ ಶ್ರೀ ಅರವಿಂದರು ೧೯೫೦ರಲ್ಲಿ ಮಹಾಸಮಾಧಿಸ್ಥರಾಗುವ ವರೆಗೂ ನಾಲ್ವತ್ತು ವರ್ಷಗಳೂ ಆ ಒಂದೆಡೆಯಲ್ಲಿ ಶರೀರತಃ ಸ್ಥಾನಬದ್ಧರಾಗಿ, ಒಂದು ರೀತಿಯ ಸ್ಥಾಣುವ್ರತಿಗಳಾಗಿದ್ದರು. ಪಾಶ್ಚಾತ್ಯ ವಿದ್ಯಾಸಂಸ್ಕೃತಿಗಳ ರೀತಿನೀತಿಗಳಲ್ಲಿಯೂ ದ್ರುತಪದಕರ್ಮದಲ್ಲಿಯೂ ಬೆಳೆದು, ಭಾರತೀಯ ಸ್ವಾತಂತ್ರ್ಯ ಸಂಗ್ರಾಮರಂಗದಲ್ಲಿ ಮಿಂಚಿನಂತೆ ಬಿರುಗಾಳಿಯಂತೆ ಮಹಾನದಿಯಂತೆ ವಿಕ್ಷುಬ್ಧಸಾಗರದಂತೆ ಕ್ರಾಂತಿಕಾರನಾಗಿ ಚಲಿಸಿದ ಯೌವನ ಪ್ರಾಯದ ಒಬ್ಬ ವ್ಯಕ್ತಿ ಒಂದು ಮೂಲೆಯ ಕಿರುದಾಣದಲ್ಲಿಯೆ ನಾಲ್ವತ್ತು ವರ್ಷಗಳನ್ನು ಕಳೆದನೆಂದರೆ ಅದೊಂದು ಅದ್ಭುತಪವಾಡವಾಗಿ ತೋರುತ್ತದೆ. ಆದರೆ ಆ ಅದ್ಭುತಪವಾಡ ಅವರು ಸಾಧಿಸಿದ ಇತರ ಕಾರ್ಯಗಳ ಮುಂದೆ, ಕೈಕೊಂಡ ಸಾಹಸಗಳ ಭವ್ಯತೆಯ ಇದಿರಿನಲ್ಲಿ ಅತಿಸಾಮಾನ್ಯವೂ ಆಗುತ್ತದೆ ಎಂಬುದನ್ನು ನೆನೆದರೆ ನಾಲಗೆ ಮೂಕವಾಗುತ್ತದೆ, ಹಣೆ ಮಣಿಯುತ್ತದೆ, ಕೈ ಮುಗಿಯುತ್ತವೆ, ಕಣ್ಣು ಹನಿಗೂಡುತ್ತವೆ, ಸಮಸ್ತಚೇತನವೂ ಪೂಜ್ಯತಾಭಾರದಿಂದಲೂ ಭಗವದ್‌ಗೌರವದಿಂದಲೂ ಸಾಷ್ಟಾಂಗ ಪ್ರಣಾಮದಲ್ಲಿ ಸ್ಥಾಯಿಯಾಗುತ್ತದೆ!

ಶ್ರಿ ಅರವಿಂದರು ಪಾಂಡುಚೆರಿಗೆ ಬಂದಂದು ಮೊದಲುಗೊಂಡು ನಾಲ್ಕು ವರ್ಷಗಳ ಅವರ ಜೀವನವು ಸಾರ್ವಜನಿಕ ದೃಷ್ಟಿಗೆ ದುಷ್ಪ್ರವೇಶ್ಯವಾದ ಶೈಲನೀರವತಾಯವನಿಕೆಯ ಮರೆಯಲ್ಲಿ ನಿಗೂಢವಾಗಿದೆ. ಬಹುಶಃ ಹಿಮಾಲಯದ ಆ ಧವಳಗಿರಿಯ ಶಿವನಿಕೇತನ

ಕೈಲಾಸದ ಕುಳಿರ್ಪುರ್ಚಳಿಗೆ ಮನುಷ್ಯಮತಿ ಮರವಡುತ್ತದೆಯೋ ಏನೋ! ಏನಾಯಿತು? ಏನು ನಡೆಯಿತು? ಯಾವುದೂ ಗೊತ್ತಿಲ್ಲ. ಅವರು ಪೂರ್ಣಯೋಗ ಸಾಧನೆಯ ಸಾಗರ ಭಗೀರಥ ಸಾಹಸದಲ್ಲಿ ಅಹೋರಾತ್ರಿಯೂ ನಿಮಗ್ನರಾಗಿದ್ದರೆಂದು ಅವರ ಕೆಲವು ಕವನಗಳಿಂದ ಊಹಿಸಬಹುದಷ್ಟೆ.[14] ಯೋಗಶಕ್ತಿಯಿಂದ ಜಗತ್ತಿನ ಸ್ವರೂಪ ಸ್ವಭಾವಗಳಲ್ಲಿಯೆ ಪರಿವರ್ತನೆಯನ್ನುಂಟುಮಾಡುವ, ಸಾಮಾನ್ಯಮಾನವನ ಊಹೆಗೂ ಅತಿ ಭೀಕರವಾಗಿ ತೋರುವ ಮತ್ತು ಮೇಧಾವಿಗಳ ಆಲೋಚನೆಗೂ ಅಸಾಧ್ಯವಾಗಿ ಅಸಂಭವನೀಯವಾಗಿರುವ ಅಘಟನಘಟನಪಟೀಯವಾದ ಆಧ್ಯಾತ್ಮಿಕ ವಿಜ್ಞಾನದ ಪ್ರಯೋಗಾಶಾಲೆಯಲ್ಲಿ ಅಭಿನವ ವಿಶ್ವಾಮಿತ್ರನೆಂಬತೆ ಲೋಕನೇತ್ರಗಳಿಗೆ ಅತೀತರಾಗಿದ್ದರು. ಮುಂದೆ ಅವರು ಪ್ರಾರಂಭಿಸಿದ 'ಆರ್ಯ' ಎಂಬ ಮಾಸಪತ್ರಿಕೆಯಲ್ಲಿ ಕ್ರಮಕ್ರಮವಾಗಿ ಲೇಖನಗಳ ರೂಪದಲ್ಲಿ ಪ್ರಕಟವಾಗಿ, ತರುವಾಯ ಗ್ರಂಥರೂಪವನ್ನು ಪಡೆದು, ಈಗ ಸಮಸ್ತ ಪ್ರಪಂಚವನ್ನೂ ಬೆಕ್ಕಸಗೊಳಿಸುತ್ತಿರುವ ಅವರ ಮಹಾ ಮೇರುಕೃತಿಗಳಲ್ಲಿ, ಎಂದರೆ 'ಪೂರ್ಣಯೋಗ ದರ್ಶನ'ದ ಸಿದ್ಧಾಂತಶಾಸ್ತ್ರವಾದ 'ದಿವ್ಯಜೀವನ' **(The Life Divine)** ದಲ್ಲಿಯೂ ಮತ್ತು 'ಸರ್ವಯೋಗ ಸಮನ್ವಯ'ದ ಸಿದ್ಧಾಂತಶಾಸ್ತ್ರವಾದ 'ಯೋಗಸಮನ್ವಯ' **(The Synthesis of Yoga)** ದಲ್ಲಿಯೂ ಪ್ರತಿಪಾದಿತವಾಗಿರುವ ಮೂಲತತ್ತ್ವಗಳೂ ಸಾಧನ ಮಾರ್ಗಗಳೂ ಯಾವ ಪ್ರತ್ಯಕ್ಷಾನುಭವದಿಂದ ಮಾತ್ರವೆ ಸಾಧ್ಯವೋ ಆ ಅಪರೋಕ್ಷಾನುಭೂತಿಯಲ್ಲಿ ಪೂರ್ಣಸಿದ್ಧರಾಗಿ, ತಮ್ಮದೆ ಆದ ಒಂದು ನೂತನ ವಿಧಾನದಿಂದ ಲೋಕಸಂಗ್ರಹ ಕಾರ್ಯಕ್ಕೆ ತೊಡಗುವುದನ್ನು ಕಾಣುತ್ತೇವೆ, ೧೯೧೪ರ ಹೊತ್ತಿಗೆ.

ನಾಲ್ಕು ವರ್ಷಗಳ 'ವ್ಯೋಮಸಾಹಸ'ದ ತರುವಾಯ ಶ್ರೀ ಅರವಿಂದರು 'ವಲ್ಮೀಕ'ದಿಂದ ಹೊರಬಂದು ಒಂದು ದಾರ್ಶನಿಕ ಮಾಸಪತ್ರಿಕೆಯನ್ನು ಪ್ರಾರಂಭಿಸಿದರು. ಅದೇ ಈಗ ಸುಪ್ರಸಿದ್ಧವಾಗಿರುವ 'ಆರ್ಯ' ಸುಮಾರು ಆರು ವರ್ಷಗಳು, ಎಂದರೆ ೧೯೨೧ರ ವರೆಗೆ, ತಿಂಗಳಿಗೆ ೬೪ ಪುಟಗಳಂತೆ ಶ್ರೀ ಅರವಿಂದರ ದಿವ್ಯಲೇಖನಿ ದೇವಗಂಗಾ ಪ್ರವಾಹವಾಗಿ ನಿರಂತರ ಸ್ರೋತ್ರವಾಗಿ ಆ ಅಮೃತಪತ್ರಿಕೆಯ ರೂಪದಲ್ಲಿ ಪೃಥ್ವಿಗೆ ಅವತರಿಸಿತು.[15] ಭಗವದಿಚ್ಛೆಯಂತೆ ಅವರಿಗೆ ಸಹಾಯವಾಗಿ ಪಾಲ್ ಮತ್ತು ಮಿರಾ ರಿಚರ್ಡ್ ಎಂಬ ಫ್ರೆಂಚ್ ದಂಪತಿಗಳೂ ಅಲ್ಲಿಗೆ ಕರೆದುತಂದಂತೆ ಬಂದು ಸೇರಿದರು. ಅಂದಿನ ಆ ಮಿರಾ ಇಂದು 'ತಾಯಿ' ಎಂದು ಶ್ರೀ ಅರವಿಂದರ ಶಿಷ್ಯರೆಲ್ಲರಿಗೂ ಶ್ರೀ ಅರವಿಂದ ಸಮಾನರಾಗಿ, ಅವರಿಂದ ಅಭೇಧ್ಯವಾಗಿ ಅತ್ಯಂತ ಪೂಜ್ಯನೀಯರಾಗಿದ್ದಾರೆ.

ಸೂರ್ಯನು ಉದಯಿಸಿದರೆ ಮೊದಲು ಆ ಹೊಂಬೆಳಕಿಗೆ ತಮ್ಮ ನೆತ್ತಿಯನ್ನು ಚಾಚಿ, ಆ ಜ್ಯೋತಿಯ ಸ್ನಾನದಿಂದ ಪುನೀತವಾಗುತ್ತವೆ, ಅತ್ಯುನ್ನತ ಗಿರಿಶೃಂಗಗಳು ಮಾತ್ರ. ಶ್ರೀ ಅರವಿಂದರ 'ಆರ್ಯ' ಪತ್ರಿಕೆಯಿಂದ ಅವರ ಶ್ರೀ ಮಹಿಮೆಯನ್ನರಿತವರು ಬಹಳ ಜನ ಇರಲಿಲ್ಲ. ಏಕೆಂದರೆ ಅಸಾಮಾನ್ಯವಾದ ಮೇಧಾಶಕ್ತಿಯೂ ಅಸಾಧಾರಣವಾದ ಅಭೀಪ್ಸೆಯೂ ಅಪಾರ್ಥಿವಪರವಾದ ಉತ್ಕಟ ಶ್ರದ್ಧೆಯೂ, ನಿರಹಂಕಾರ, ನಿರಸೂಯೆ ಮತ್ತು ಸ್ವಪ್ರಷ್ಟಾಪರವಲ್ಲದ ಜ್ಞಾನಾಸಕ್ತಿ, ಇವುಗಳ ಜೊತೆಗೆ ಉನ್ನತಮಟ್ಟದ ಇಂಗ್ಲಿಷ್ ಭಾಷಾಜ್ಞಾನವೂ ಇಲ್ಲದಿದ್ದರೆ ಶ್ರೀ ಅರವಿಂದರ ಪೂರ್ಣಯೋಗ ಶ್ರೀಯನ್ನು ಅರ್ಥಮಾಡಿಕೊಳ್ಳುವುದು ಅಸಾಧ್ಯ. ಆದ್ದರಿಂದ ಔನತ್ಯವಿದ್ದು ಶಕ್ತಿಯಿದ್ದು ಆಕರ್ಷಿತರಾದ ಕೆಲವರು ಮಾತ್ರವೆ ಪಾಂಡುಚೆರಿಗೆ ಬಂದು 'ಅತಿಮಾನಸಯೋಗ'ದ ಸಾಧನೆಯನ್ನು ಕೈಕೊಂಡು ಶಿಷ್ಯರಾದರು. ಇಂತು ಶ್ರೀ ಅರವಿಂದಾಶ್ರಮ ಪ್ರಾರಂಭವಾಯಿತು, ತನಗೆ ತಾನೆ.

ಶ್ರೀ ಅರವಿಂದರನ್ನು ರಾಜಕೀಯವಾದ ಕರ್ಮರಂಗಕ್ಕೆ ಮತ್ತೆ ಎಳೆಯಲು ಪದೇ ಪದೇ ಬಹಳ ಪ್ರಯತ್ನಗಳು ನಡೆದುವಂತೆ. ಚಿತ್ತರಂಜನದಾಸ ಮತ್ತು ಲಾಲಾ ಲಜಪತರಾಯರಂತಹ ಅಖಿಲ ಭಾರತೀಯ ಸುಪ್ರಸಿದ್ಧ ವ್ಯಕ್ತಿಗಳೂ ಕಾಂಗ್ರೆಸ್ಸಿನಂತಹ ಪ್ರತಿಷ್ಠಾವಂತ ಸಂಸ್ಥೆಗಳೂ ಮಾಡಿದ ಸರ್ವಪ್ರಯತ್ನದಿಂದಲೂ ಮಹರ್ಷಿಯ ಸ್ಥಾಣುತ್ವ ಒಂದಿನಿತೂ ವಿಚಲಿತವಾಗಲಿಲ್ಲ. ಜಗನ್ಮಹಾಕವಿಯಾಗಿ,**[16]** ಪೂರ್ಣಸಿದ್ಧನಾಗಿ, ಅತಿಮಾನಸಯೋಗಿಯಾಗಿ, ಗುರುಮಹರ್ಷಿಯಾಗಿ, ಅದ್ಭುತ ಮನೀಷಿಯಾಗಿ, ತತ್ತ್ವಜ್ಞಾನಿಯಾಗಿ, ದಾರ್ಶನಿಕನಾಗಿ, ದ್ರಷ್ಟಾರನಾಗಿ, ಮಾನವ ಜ್ಞಾನಲೋಕದ ಸರ್ವರಂಗಗಳಲ್ಲಿಯೂ ಬೆರಗುಗೊಳಿಸುವ ಕೃತಿಮೇರುಗಳನ್ನು ಸೃಷ್ಟಿಸಿರುವ ಅವರು ಅತೀಂದ್ರಿಯವಾದ ಅತಿಮಾನಸಯೋಗದ ಚಿತ್‌ತಪಸ್‌ಶಕ್ತಿಯಿಂದಲೆ ಜಗತ್ತಿನಲ್ಲಿ ಸ್ವಯಂಕ್ರಿಯೆಗಳನ್ನು ಪ್ರಚೋದಿಸುವ ಭಗವದ್ ವಿಧಾನವನ್ನು ಕೈಕೊಂಡರಲ್ಲದೆ ಮನುಷ್ಯವಿಧಾನದ ದುರ್ಬಲಪ್ರಕಾರದ ಅಸಮರ್ಪಕ ಮಾರ್ಗಗಳಿಗೆ ಇಳಿಯಲು ಇಷ್ಟಪಡಲಿಲ್ಲ.

ಮನುಷ್ಯದೃಷ್ಟಿಗೆ ಅಗೋಚರವಾದ ಆ ವಿಧಾನಗಳ ಮಾತಂತಿರಲಿ; ಗೋಚರವಾಗುವ ವಿಧಾನಗಳಲ್ಲಿ ಕೆಲವನ್ನಾದರೂ ಅವರು ಕೈಕೊಂಡುದನ್ನು ಕಾಣುತ್ತೇವೆ: ಒಂದು, ಲೇಖನವಿಧಾನ, ಎರಡು, ಪತ್ರವಿಧಾನ;**[17]** ಮೂರು, ದರ್ಶನ ವಿಧಾನ. ಶ್ರೀ ರಾಮಕೃಷ್ಣ ಪರಮಹಂಸರಂತೆ ಸಂಭಾಷಣಾವಿಧಾನವನ್ನು ಅವರು ಕೈಕೊಳ್ಳಲಿಲ್ಲ. ಅಧಿಕಾರೀಸಾಧಕರ ಚೈತನ್ಯವನ್ನು ಎಚ್ಚರಿಸುವ ಪರಮಹಂಸರ ಸ್ಪರ್ಶಾದಿ ವಿಧಾನಗಳನ್ನೂ ಅರವಿಂದರು ಕೈಕೊಂಡಂತೆ ತೋರುವುದಿಲ್ಲ. ಒಂದು ವೇಳೆ ಕೈಕೊಂಡಿದ್ದರೂ ಆ ವಿಷಯ ಇನ್ನೂ ಸರ್ವಜನ ಪ್ರಕಟವಾಗಿಲ್ಲ. ಅದೇನೆ ಇರಲಿ, ಶ್ರೀ ಅರವಿಂದರನ್ನು ಜೀವನವಿಮುಖರೆಂದು ತಿಳಿಯುವುದು ಕಕ್ಕಡುಮೂರ್ಖನಿಗೂ ಅವಮಾನಕರ.

## ೧೦

ಶ್ರೀ ಅರವಿಂದರು ತಮ್ಮ ಸ್ವಂತ ಮುಕ್ತಿಗಾಗಿ ಸಾಧನೆಯನ್ನು ಕೈಕೊಳ್ಳಲಿಲ್ಲ. ಅವರ ಯೋಗದ ಗುರಿ 'ಸಂಭೂತಿ'ಯಿಂದ ತಪ್ಪಿಸಿಕೊಂಡು 'ಅಸಂಭೂತಿ'ಯಲ್ಲಿ ವಿಲಯಹೊಂದುವುದಲ್ಲ. ಯಾವುದು ಈಗ ಅತೀತದಲ್ಲಿದೆಯೋ, ಯಾವುದರ ಒಂದು ಪಾದ ಮಾತ್ರ ನಮ್ಮ ಮರ್ತ್ಯದಲ್ಲಿದ್ದರೂ ಸದ್ಯಕ್ಕೆ ನಿಗೂಢವಾಗಿ ಅವ್ಯಕ್ತಸ್ಥಿತಿಯಲ್ಲಿದೆಯೋ ಆ ಸಚ್ಚಿದಾನಂದ ವಿಜ್ಞಾನಶಕ್ತಿ ಮೊದಲು ಮನೋಮಯ ಪ್ರಾಣಮಯಗಳಿಗೂ, ಕೊನೆಗೆ ಅನ್ನಮಯಕ್ಕೂ ಅವತರಿಸಿ ಸುವ್ಯಕ್ತವಾಗುವಂತೆ ಮಾಡಿ, ಅವಿದ್ಯಾಜನ್ಯವಾದ ಅಜ್ಞಾನ ಅಶಕ್ತಿ ಜರಾಮರಣ ರೋಗಾದಿಗಳನ್ನು ಸಂಪೂರ್ಣವಾಗಿ ಪರಿಹರಿಸಿ, ಮರ್ತ್ಯವನ್ನು ಅಮರ್ತ್ಯವನ್ನಾಗಿ ಪರಿವರ್ತಿಸಿ, ನರತ್ವದಲ್ಲಿಯೆ ಸಂಪೂರ್ಣ ದಿವ್ಯತ್ವವನ್ನೂ ಭಗವತ್‌ಸ್ವರೂಪತೆಯನ್ನೂ ಸ್ಥಾಪಿಸುವ 'ಅತಿಮಾನವ'ನ ಸೃಷ್ಟಿಯೆ ಅವರ 'ಅತಿಮಾನಸ ಯೋಗ'ದ ದಿವ್ಯೋದ್ದೇಶ. ಶ್ರೀ ಅರವಿಂದರನ್ನು ಮಿರಿಸುವ ಆಶಾವಾದಿಗಳಾಗಲಿ ಜೀವನ ಪ್ರೇಮಿಗಳಾಗಲಿ ಇದ್ದಾರೆಯೆ?

ಅವರ ಸ್ವಂತ ಸಿದ್ಧಿ ಅವರಿಗೆ ಎಂದೋ ಲಭಿಸಿತ್ತು. ಅವರು ಜೀವನ್ಮುಕ್ತರಾಗಿಯೂ ಸಾಧನೆಮಾಡಿದುದು ಸರ್ವರ ಶ್ರೇಯಸ್ಸಿಗಾಗಿ.**[18]** ಅವರ ಹುಟ್ಟುಹಬ್ಬದ ದಿನವೆ ಭರತ ಖಂಡದ ಸ್ವಾತಂತ್ರ್ಯವೂ ಹುಟ್ಟಿತೆಂಬುದನ್ನು (೧೫-೮-೧೯೪೭) ನೆನೆದರೆ ಎಂತಹ ಧ್ವನಿಪೂರ್ಣವಾದ ಅರ್ಥಾನುಭವವಾಗುತ್ತದೆ! ಆ ದಿನ ಸಂದೇಶ ಇಡೀ ಪ್ರಪಂಚಕ್ಕೇ

ಭಗವದ್‌ವಾಣಿಯ ಒಂದು 'ತಾಮ್ರ ಪಟನಿರೂಪ'ವಾಗುವಂತಿದೆ. ರಾಜಕೀಯ ಸ್ವಾತಂತ್ರ್ಯಸಿದ್ಧಿಯಾದ ಆರು ತಿಂಗಳಲ್ಲಿಯೆ, ೧೯೫೦ರಲ್ಲಿ ಶ್ರೀ ಅರವಿಂದರು ಭವಿಷ್ಯ ನುಡಿದಿದ್ದಂತೆ, ಭಗವಂತನು ಕಳುಹಿಸಿದ್ದ 'ಅಭಿಷಿಕ್ತ ದೇವದೂತ' ನಮ್ಮ ಸ್ವಾತಂತ್ರ್ಯಶಿಲ್ಪಿ ಇಹರಂಗದಿಂದ ಕಣ್ಮರೆಯಾದನು. ಆಗ ಅರವಿಂದರು ಹೇಳಿದರು: "ಯಾವ ಜ್ಯೋತಿ ನಮ್ಮನ್ನು ಪೂರ್ಣ ಸ್ವರಾಜ್ಯಕ್ಕೆ ಕರೆದೊಯ್ದಿತೋ ಆ ಜ್ಯೋತಿ ನಮ್ಮೊಡನೆಯೆ ತಳತಳಿಸುತ್ತಾ ಇದೆ" ಎಂದು. ಮೊನ್ನೆ ಮೊನ್ನೆ ಭಾರತೀಯ ಗಗನದ ಮತ್ತೊಂದು ಆಧ್ಯಾತ್ಮಿಕಜ್ಯೋತಿ ಶ್ರೀ ರಮಣಮಹರ್ಷಿಗಳೂ ದೇಹ ತ್ಯಾಗ ಮಾಡಿದರು. ಅದಾಗಿ ಒಂದೆರಡು ತಿಂಗಳೊಳಗೆ ಇನ್ನೊಂದು ಸರ್ವಲೋಕ ದೀಪ್ಯಮಾನವಾದ ಮಹಾಜ್ಯೋತಿಯ ನಿರ್ಮಾಣಕ್ಕೆ ಯಾರೂ ಸಿದ್ಧರಾಗಿರಲಿಲ್ಲ. ನಿರೀಕ್ಷಿಸಿಯೂ ಇರಲಿಲ್ಲ. ಆದ್ದರಿಂದ ಇದೇ ತಿಂಗಳು ಐದನೆಯ ತೇದಿ ಶ್ರೀ ಅರವಿಂದರ ನಿಧನದ ವಾರ್ತೆ ಬಂದಾಗ ಅನೇಕರಿಗೆ ವಿಸ್ಮಯವಾಯಿತು. ಇದೇನು ನರತ್ವಕ್ಕೆ ಅಮರತ್ವಪಟ್ಟವನ್ನು ಕಟ್ಟಲೆಂದು ಪಣತೊಟ್ಟು ಸಾಧನೆಯಲ್ಲಿ ತೊಡಗಿದ್ದ ಯೋಗೀಂದ್ರನಿಗೆ ತನ್ನ ಅಮರತ್ವವನ್ನೆ ಸಾಧಿಸಲಾಗಲಿಲ್ಲವೆ ಎಂದು! ಆದರೆ ಅವರ ಕಳೇಬರದಿಂದ ಐದು ದಿನಗಳವರೆಗೆ ಒಂದು ದಿವ್ಯ ತೇಜಸ್ಸು ಹೊರಡುತ್ತಿತ್ತು ಎಂಬ ವಾರ್ತೆಯನ್ನು ಓದಿ, ಅರವಿಂದರ ಅತಿಮಾನಸಯೋಗದ ಅರ್ಥ ಕ್ರಮ, ಕಾಲ, ವಿಧಾನ, ತಪಸ್ಯೆ ಇವುಗಳನ್ನು ಅರಿಯದ ಅಥವಾ ತಪ್ಪಾಗಿ ಅರಿತಿದ್ದ ಆ ಯಕ್ಷಿಣೀಪ್ರಿಯರಿಗೆ ಸ್ವಲ್ಪ ಸಮಾಧಾನವಾಗಿರಬೇಕು: ಮೃತಪಟ್ಟ ಮೇಲೆಯೂ ಆ ಕಳೇಬರದಲ್ಲಿ, ಅತಿಮಾನಸಯೋಗದ ವಿಜ್ಞಾನಶಕ್ತಿಗೆ ಬಹುಕಾಲ ವಾಹನವಾಗಿದ್ದ ಆದಿವ್ಯ ಕಳೇಬರದಲ್ಲಿ, ಪ್ರತಿಷ್ಠಿತವಾಗಿದ್ದ ತೇಜಸ್ಸು ತಿರೋಹಿತವಾಗಿ, ಅದರ ಹಂಚಿಕೆಗೆ ಮರ್ತ್ಯಶಕ್ತಿಗಳು ಕೈಹಾಕಬೇಕಾದರೆ ಐದು ದಿನಗಳು ಕೈಕಟ್ಟಿಕೊಂಡೋ ಕೈಮುಗಿದುಕೊಂಡೋ ಬಳಿನಿಂತು ಬೇಡಿ ಕಾಯಬೇಕಾಯಿತಲ್ಲ!

ಮಹಾತ್ಮಾ ಗಾಂಧೀಜಿ ಆಹುತಿಯಾದಾಗ ಶ್ರೀ ಅರವಿಂದರು ಏನನ್ನು ಹೇಳಿದ್ದರೋ ಅದನ್ನೇ ನಾವು ಇನ್ನೂ ಸಮರ್ಪಕವಾಗಿ ಧೈರ್ಯವಾಗಿ ಹೇಳಿಕೊಳ್ಳಬಹುದು: 'ಯಾವ ಜ್ಯೋತಿ ಸಮಸ್ತ ಮರ್ತ್ಯವನ್ನೂ ಪೂರ್ಣಯೋಗದ ಪೂರ್ಣಸಿದ್ಧಿಗೆ ಕರೆದೊಯ್ಯುವುದಾಗಿ ತನ್ನ ಸಮಸ್ತ ಚಿತ್‌ತಪಸ್ಸನ್ನೂ ಪ್ರಯೋಗಿಸಲು ಅನವರತ ಸಾಧನೆಯಲ್ಲಿದ್ದಿತೋ ಆ ಜ್ಯೋತಿ ಇನ್ನೂ ನಮ್ಮೊಡನೆ ತಳತಳಿಸುತ್ತಾ ಇದೆ; ದಾರಿ ತೋರಿಸುತ್ತಾ ಇದೆ. ನಮಗಾಗಿ ಅಸುರೀಶಕ್ತಿಗಳೊಡನೆ ಹೋರಾಡುತ್ತಾ ಇದೆ. ನಮ್ಮ ಪೂಜೆಯಲ್ಲಿ ಪ್ರಾರ್ಥನೆಯಲ್ಲಿ ಧ್ಯಾನದಲ್ಲಿ ಉದ್ಧಾರದ ಹಂಬಲದಲ್ಲಿ ನಮಗೆ ಬೆಂಬಲವಾಗಿ ಆಶೀರ್ವಾದವಾಗಿ ದೈವೀ ಶಕ್ತಿಗಳ ನೆರವನ್ನೀಯುತ್ತಾ ಇದೆ. ಅಮಸ್ತ ಪೃಥ್ವೀತತ್ವವೂ ಸಂಪೂರ್ಣವಾಗಿ ಪರಿವರ್ತನೆಗೊಂಡು ಭೂಮಿಯೆ ವೈಕುಂಠವಾಗುವವರೆಗೆ, ಕೈಲಾಸವಾಗುವವರೆಗೆ, ರಾಮರಾಜ್ಯವಾಗುವವರೆಗೆ ಆ ಜ್ಯೋತಿ ವಿರಾಮಹೊಂದುವುದಿಲ್ಲ. ಮರ್ತ್ಯ ದೂರವಾಗುವುದಿಲ್ಲ. ಭೂಮನೋ ಮಂಡಲದಿಂದ ತಿರೋಹಿತವಾಗುವುದಿಲ್ಲ.**[19]**

ಶ್ರೀ ಅರವಿಂದರಂತಹ ಸರ್ವತೋಮುಖವಾದ ಸಂಪೂರ್ಣವಾದ ಪೂರ್ಣ ವಿಭೂತಿಯನ್ನು ನಾವು ಇತಿಹಾಸದಲ್ಲಿ ಹುಡುಕಿದರೆ ದೊರೆಯುವುದು ಸಂದೇಹಕರ. ಸ್ವಲ್ಪವಾದರೂ ಸಾದೃಶ್ಯ ದೊರೆಯಬೇಕಾದರೆ ಪುರಾಣಗಳಿಗೇ ಹೋಗಬೇಕಾಗುತ್ತದೆ. ಬಹುಶಃ ಪುರಾಣಗಳು ಮುಂದೆ ಸಂಭವಿಸಲಿರುವ ಇತಿಹಾಸವನ್ನು ಪ್ರತಿಮಾವಿಧಾನದಿಂದ ಪ್ರತಿಬಿಂಬಿಸುವ ಪೃಥ್ವಿಮನೋಮಂಡಲದ ವ್ಯೋಮಾಭಿಲಾಷೆಗಳಾಗಿರಬೇಕಲ್ಲವೆ? ಶ್ರೀ ಅರವಿಂದರೂ ಈ

ಭೂಮನಸ್ಸಿನ ಅಂತಹ ಭೂಮವ್ಯೋಮಾಭಿಲಾಷೆಯ ಸಾಹಸೋನ್ಮುಖವಾದ ಒಂದು ಭವ್ಯ ವಿರಾಟ್‌ಪ್ರತಿಮೆಯಾಗಿರಬೇಕೆ?

# ಕವಿ ರವೀಂದ್ರರು

ಕಳೆದ ಒಂದು ಶತಮಾನದಲ್ಲಿ ಭಾರತೀಯ ಪ್ರತಿಭಾಲಕ್ಷ್ಮಿ ವಂಗದೇಶದಲ್ಲಿ ಅಭಿವ್ಯಕ್ತೆಯಾದಂತೆ ಬಹು ರೂಪಿಣಿಯಾಗಿ ಮತ್ತಾವ ದೇಶಭಾಷಾ ಸೀಮೆಯಲ್ಲಿಯೂ ಆವಿರ್ಭೂತೆಯಾದಂತೆ ತೋರುವುದಿಲ್ಲ. ಈಶ್ವರಕೃಪೆಯೊಂದಿದ್ದರೆ ಅಮಂಗಳದಿಂದಲೂ ಮಂಗಳವೆ ಮೂಡಬಹುದೆಂಬುದಕ್ಕೆ ಅದೊಂದು ನಿದರ್ಶನ. ಕ್ಲೈವನ ಕೈತವಕ್ಕೆ ಸಿಲುಕಿ ಪಲಾಸಿ ಕದನದಲ್ಲಿ ಪರಾಜಿತೆಯಾದ ವಂಗೀಯ ಕ್ಷಾತ್ರಶ್ರೀ ಆಂಗ್ಲೇಯರ ಆಧಿಪತ್ಯಕ್ಕೆ ಒಳಗಾದ ತರುವಾಯ ಯಾವ ಯಾವ ಕ್ಷೇತ್ರಗಳಲ್ಲಿ ಎಂತೆಂತಹ ವಿಭೂತಿಗಳನ್ನು ಪಡೆದು, ಭಾರತೀಯ ಆತ್ಮಶ್ರೀಗೆ ಅದೆನಂತಹ ಲೋಕಗೌರವ ಪಾತ್ರವಾಗುವ ಅನನ್ಯ ಸಾಧಾರಣವಾದ ಸಂಪತ್ತನ್ನು ಸಂಪಾದಿಸಿಕೊಟ್ಟಿದ್ದಾಳೆ! ಸುಧಾರಣಾಕ್ಷೇತ್ರದಲ್ಲಿ, ಮತಕ್ಷೇತ್ರದಲ್ಲಿ, ತತ್ತ್ವವಿಚಾರಕ್ಷೇತ್ರದಲ್ಲಿ, ರಾಜಕೀಯ ಕ್ಷೇತ್ರದಲ್ಲಿ, ಕ್ರಾಂತಿ ಮತ್ತು ಶಾಂತಿಕ್ಷೇತ್ರಗಳಲ್ಲಿ, ವಿಜ್ಞಾನ, ಸಾಹಿತ್ಯ, ಕಲೆ, ತ್ಯಾಗ ಮತ್ತು ಯೋಗಗಳಲ್ಲಿ ಎಲ್ಲೆಲ್ಲಿಯೂ ಆ ದಿವ್ಯ ಪ್ರತಿಭೆ ಮಿಂಚುತ್ತಿರುವುದನ್ನು ನಾವು ನೋಡುತ್ತೇವೆ. ಆ ಶತಮಾನದ ಭಾರತೀಯ ಮಹದ್ವ್ಯಕ್ತಿಗಳ ಪಂಕ್ತಿಯಲ್ಲಿ ಅಗ್ರಸ್ಥಾನದ ಬಹುಭಾಗಗಳನ್ನು ವಂಗದೇಶವೆ ಆಕ್ರಮಿಸಿದೆ. ಆ ಅಗ್ರಪಂಕ್ತಿಯ ಉಜ್ವಲಜ್ಯೋತಿಗಳಲ್ಲಿ ಕವಿ ರವೀಂದ್ರರೂ ಒಬ್ಬರಾಗಿ ತಮ್ಮ ವಿಶಿಷ್ಟ ದೀಪ್ತಿಯಿಂದ ವಿರಾಜಿಸುತ್ತಿದ್ದಾರೆ.

ರವೀಂದ್ರರ ವ್ಯಕ್ತಿಪ್ರಭಾವಳಿ ಏಕಮುಖ ಸಂಭೂತವಾದುದಲ್ಲ. ಬಹುಮುಖ ಸ್ಫಟಿಕಮಣಿಯಂತೆ ಅವರ ಪ್ರತಿಭಾವಾಸುಕಿ ಅವರ ಆತ್ಮದ ಕಾಂತಿಯನ್ನು ತನ್ನ ನಾನಾ ಫಣೆಗಳಿಂದ ಪ್ರಸರಿಸುತ್ತದೆ. ಒಂದೊಂದು ಮುಖದಲ್ಲಿಯೂ ಒಂದೊಂದು ವರ್ಣ, ಒಂದೊಂದು ವಿಶಿಷ್ಟತೆ, ಒಂದೊಂದು ಮೋಹಕತೆ ಹೊಮ್ಮುತ್ತದೆ. ಬಹುಮುಖವಾದ ಆ ಪ್ರತಿಭೆಯ ಯಾವ ಒಂದು ಮೆಯ್ಯಿಂದಲೇ ಆದರೂ ಅವರು ಜಗತ್‌ಗೌರವ ಪಾತ್ರರಾಗಬಹುದಾಗಿತ್ತು. ಅವರ ವ್ಯಕ್ತಿತ್ವಕ್ಕೆ ಅಂತಹ ಹಲವು ಮೈಗಳಿವೆ ಎಂದಮೇಲೆ ಅದರ ವೈಭವಕ್ಕೆ ಮೇರೆ ಎಲ್ಲಿ! ತನ್ನ ಒಂದೊಂದು ಗುಣಕ್ಕಾಗಿ, ಒಂದೊಂದು ಕಾರಣಕ್ಕಾಗಿ, ಒಂದೊಂದು ಬಣ್ಣಕ್ಕಾಗಿ ಅಥವಾ ಒಂದೊಂದು ರಸಕ್ಕಾಗಿ ಒಂದೊಂದೇ ವರ್ಗದವರನ್ನು ಸೆಳೆದರೂ ಸಾಕು; ಮೊತ್ತದಲ್ಲಿ ಅದು ಸರ್ವಜನಪ್ರಿಯವಾಗಿ ಸರ್ವಗೌರವ ಭಾಜನವಾಗುವುದರಲ್ಲಿ ಸಂದೇಹವಿಲ್ಲ. ಈ ದೃಷ್ಟಿಯಿಂದ ನೋಡಿದರೆ ವಿಶ್ವಕವಿಯೆಂದು ಅವರನ್ನು ಸಂಬೋಧಿಸುವುದು ಸಾರ್ಥಕವಾಗುತ್ತದೆ.

ಆದರೆ ಅವರ ವ್ಯಕ್ತಿತ್ವದ ವಿಶ್ವತ್ವ ಎಂಬುದು ಅವರ "ಕವಿತ್ವ" ಮಾತ್ರದಲ್ಲಿಯೆ ಎಂದೂ, "ವಿಶ್ವತ್ವ" ಎಂಬ ಪದಕ್ಕೆ ಸರ್ವಶ್ರೇಷ್ಠತ್ವ ಎಂದೂ ವ್ಯಾಖ್ಯಾನ ಮಾಡಿದರೆ ಅದು ಚರ್ಚಾಸ್ಪದವಾಗಬಹುದು. ಈ ಭಾಷಣದ ವಿಷಯ ಸಮಗ್ರ ರವೀಂದ್ರರನ್ನು ಕುರಿತದ್ದಲ್ಲ; ಕವಿ ರವೀಂದ್ರರನ್ನು ಕುರಿತದ್ದು. ಆದ್ದರಿಂದ ಅವರ "ಕವಿತ್ವ" ಮಾತ್ರವನ್ನೇ ಇಲ್ಲಿ ವಿಶೇಷವಾಗಿ

ಗಮನಿಸಿ, ಕೊಟ್ಟಿರುವ ಸ್ವಲ್ಪಾವಕಾಶದಲ್ಲಿ ಸ್ಥೂಲರೇಖಾವಿನ್ಯಾಸದಿಂದ ಎರಡು ಮಾತು ಹೇಳುತ್ತೇವೆ.

ರವೀಂದ್ರರ ಬಹುರೂಪಿಣೀ ಕಾವ್ಯಪ್ರತಿಭೆ ಭಾವಗೀತೆಗಳಲ್ಲಿ, ಸಣ್ಣ ಕತೆಗಳಲ್ಲಿ, ದೃಶ್ಯಕಾವ್ಯಗಳಲ್ಲಿ, ದೊಡ್ಡ ಕತೆಗಳಲ್ಲಿ, ಕಾದಂಬರಿಗಳಲ್ಲಿ, ಸಾಹಿತ್ಯ ಸಮಾಲೋಚನೆಯಲ್ಲಿ, ಪತ್ರಲೇಖನ ಸಾಹಿತ್ಯದಲ್ಲಿ, ಕಾವ್ಯವಿಮರ್ಶೆಯಲ್ಲಿ, ಆತ್ಮಕಥಾ ಶಾಖೆಯಲ್ಲಿ, ಭಾರತೀಯ ಸಂಸ್ಕೃತಿಯ ಉತ್ಥಾನ, ಸ್ಥಾಪನೆ ಮತ್ತು ಪ್ರಚಾರ ಇವುಗಳ ಉದ್ಯಮದಲ್ಲಿ, ರಾಜಕೀಯಾತ್ಮಕವಾದ ವಿಶ್ವಶಾಂತಿಯ ಬೋಧೆಯಲ್ಲಿ, ಕವಿದರ್ಶನದ್ಯೋತಕವಾದ ತಾತ್ವಿಕೋಪನ್ಯಾಸಗಳಲ್ಲಿ, ವಿದೇಶೀಯ ಖಂಡನೆಗಳನ್ನು ಖಂಡಿಸುವ ಉತ್ತರ ಪ್ರತ್ಯುತ್ತರ ರೂಪವಾದ ಲೇಖನಗಳಲ್ಲಿ, ಸಮಾಜ ಸುಧಾರಣೆಯಲ್ಲಿ, ಗ್ರಾಮೋದ್ಧಾರಾದಿ ವ್ಯವಹಾರ ಕ್ಷೇತ್ರಗಳಲ್ಲಿ, ಸ್ವಭಾಷಾ ಪರವಾದ ಸಂಗ್ರಾಮದಲ್ಲಿ, ನೃತ್ಯ, ಗಾನ ಮತ್ತು ಚಿತ್ರ ಕಲೆಗಳಲ್ಲಿ, ಭಾರತ ಸ್ವಾತಂತ್ರ್ಯಸಾಧನೆಯ ವಾಙ್ಮಯಸೇವೆಯಲ್ಲಿ ಇತ್ಯಾದಿಯಾದಿ ಅನೇಕಾನೇಕ ವಿಧಾನಗಳಲ್ಲಿ ಪ್ರಕಾಶಿತವಾಗಿದೆ. ಬಹುಶಃ ಬದುಕಿನ ಯಾವ ಕ್ಷೇತ್ರವನ್ನೂ ಆ ಪ್ರತಿಭೆ ಗಮನಿಸದೆ ಬಿಟ್ಟಿಲ್ಲ. ಆದರೆ ಆ ಸಕಲ ವೈವಿಧ್ಯವನ್ನು ಒಂದು ಮೂಲಭೂತವಾದ ರಸಸೂತ್ರ, ಮಣಿಗಣದ ನಡುವಣ ಹೊನ್ನದಾರದಂತೆ, ವ್ಯಾಪಿಸಿ ಬಂಧಿಸಿದೆ. ಅದೇ ಅವರ ವ್ಯಕ್ತಿತ್ವದ ಸ್ವರೂಪಲಕ್ಷಣದಂತಿರುವ ಕವಿಶಕ್ತಿ. ರವೀಂದ್ರರು ಮತ್ತೇನೆ ಆಗಿರಲಿ ಆಗಿರದಿರಲಿ ಅವರು ಎಲ್ಲದರಲ್ಲಿಯೂ ಎಲ್ಲೆಲ್ಲಿಯೂ ಮುಖ್ಯವಾಗಿ ಶೀಲತಃ ಕವಿ. ಗಂಧದ ಮರದಲ್ಲಿ ಮೀನನ್ನು ಕೆತ್ತಿರಬಹುದು, ಪುನಗಿನ ಬೆಕ್ಕನ್ನು ಕೆತ್ತಿರಬಹುದು, ಅಥವಾ ಕಸ್ತೂರಿ ಮೃಗವನ್ನೇ ಮಾಡಿರಬಹುದು. ಆ ಎಲ್ಲ ಗೊಂಬೆಗಳಲ್ಲಿಯೂ ಸಮಾನವಾಗಿ ಗಂಧದ ಸುವಾಸನೆ ಆಪ್ಯಾಯಮಾನವಾಗಿರುತ್ತದೆ. ಕಲಾದೃಷ್ಟಿಯಿಂದ ಒಂದುವೇಳೆ ಕಸ್ತೂರಿಮೃಗದ ಆಕೃತಿ ತುಂಬಾ ಕೀಳುಮಟ್ಟದ್ದಾದರೂ ಅದರ ಸುಗಂಧಕ್ಕೆ ಸ್ವಲ್ಪವೂ ಊನಬರುವುದಿಲ್ಲ. ಸುಗಂಧದಿಂದಲಾದರೂ ಅದು ಆಕರ್ಷಣೀಯವಾಗದೆ ಇರುವುದಿಲ್ಲ. ಅದರಂತೆಯ ರವೀಂದ್ರರ ಕೃತಿಗಳು ಎಲ್ಲ ಭಾಗಗಳಲ್ಲಿಯೂ ಎಲ್ಲ ಶಾಖೆಗಳಲ್ಲಿಯೂ ಒಂದೇ ಸಮನೆ ಸರ್ವ ಶ್ರೇಷ್ಠವಾಗಿರದಿದ್ದರೂ ಅವುಗಳಲ್ಲಿ ಎಲ್ಲೆಲ್ಲಿಯೂ ಕಂಡುಬರುವ ಒಂದು ದಿವ್ಯವಾದ ಕವಿ ಶಕ್ತಿಯ ಮತ್ತು ಅಪ್ಸರೀಸದೃಶವಾದ ಮಧೂರಶೈಲಿಯ ಮೋಹಕತ್ವದಿಂದ ಅವೆಲ್ಲವೂ ಆಕರ್ಷಣೀಯವಾಗಿರುವುದರಲ್ಲಿ ಎಳ್ಳನಿತೂ ಸೋಜಿಗವಿಲ್ಲ.

ಆದರೆ ಮಿಠಾಯಿಸಾಬಿ ಸಕ್ಕರೆಯಲ್ಲಿ ಬಣ್ಣಬಣ್ಣದ ಕೋಳಿಗಳನ್ನೂ ನವಿಲುಗಳನ್ನೂ ಆನೆ ಕುದುರೆ ಮೀನು ಮೊಸಳೆಗಳನ್ನೂ ರಚಿಸಿ ಕೋಲಿಗೆ ಸಿಕ್ಕಿಸಿ ಎತ್ತಿ ಹಿಡಿದು ಬೀದಿಯಲ್ಲಿ ಕೂಗುತ್ತ ಬಂದರೆ ನಾಲಗೆಯ ರುಚಿಗಾಗಿ ಕಣ್ಣಿಗೆ ಮಾರುಹೋಗುವ ಮಕ್ಕಳಂತಾಗಿ, ನವಿಲಾದರೇನು? ಮೊಸಳೆಯಾದರೇನು? ಅಥವಾ ನವಿಲು ಕಾಗೆಯಹಾಗಿದ್ದರೇನು? ಮೊಸಳೆ ಇಲಿಯಂತಿದ್ದರೇನು? ಸಕ್ಕರೆಯ ಸಿಹಿಯಲ್ಲವೆ ಮುಖ್ಯ! ಅಃ ಈ ಕಾಗೆ ಎಷ್ಟು ಚೆನ್ನ? ಈ ಗೂಬೆ ಎಷ್ಟು ಸುಂದರ? ಎಂದು ಕೇಕೆ ಹಾಕುತ್ತ, ಕಲೆ ಚೆನ್ನಾಗಿದ್ದರೂ ಕೃಶವಾಗಿ ಕಾಣುವ ನವಿಲನ್ನು ಸಕ್ಕರೆಯ ಪ್ರಮಾಣಕ್ಕಾಗಿ ತಿರಸ್ಕರಿಸಿ, ಗಾತ್ರದಲ್ಲಿ ದಪ್ಪ ದಪ್ಪವಾಗಿರುವ ಕಾಗೆ ಗೂಬೆಗಳನ್ನೆ ಆರಿಸಿ ಮನಸೋತರೆ ಸಾಹಿತ್ಯವಿಮರ್ಶೆ ದಿಕ್ಕು ತಪ್ಪಿದಂತಾಗುತ್ತದೆ.

ರವೀಂದ್ರ ಸಾಹಿತ್ಯದಲ್ಲಿ ಪೂರ್ವೋಕ್ತ ಉಪಮಾನಗಳಲ್ಲಿ ಸಕ್ಕರೆ ಮತ್ತು ಗಂಧದಮರ ಇವುಗಳಂತಿರುವ ಅಪ್ಸರೀ ಮೋಹಕತೆಗೆ ಮಾತ್ರ ಮಾರುಹೋಗದೆ ಅವನ್ನು ನಿಷ್ಪಕ್ಷ

ವಿಮರ್ಶೆಯ ನಿಕಷದಲ್ಲಿ ಪರೀಕ್ಷಿಸಿದರೆ ಅವರ ಭಾವಗೀತೆಗಳೂ ಸಣ್ಣಕತೆಗಳೂ ಸರ್ವಶ್ರೇಷ್ಠತ್ವಕ್ಕೆ ಏರಿ ಶಿಖರಸ್ಥಾನದಲ್ಲಿ ನಿಲ್ಲುತ್ತದೆ. ಅವರು ಮುಖ್ಯವಾಗಿ ಭಾವಕವಿ. ಅವರ ಪ್ರತಿಭೆ ಪ್ರಧಾನತಃ ಭಾವ ಗೀತಾತ್ಮಕವಾದುದ್ದು; ಮಹಾಕಾವ್ಯಾತ್ಮಕವಾದುದಲ್ಲ. ಅವರು ತಮ್ಮ ಲಘುಕೃತಿಗಳಲ್ಲಿ ಮುಟ್ಟಿರುವ ಪರಾಕಾಷ್ಠತೆಯನ್ನೂ ತಮ್ಮ ದೀರ್ಘ ಕೃತಿಗಳಲ್ಲಿ ಮುಟ್ಟದಿರುವುದಕ್ಕೂ ಅದೇ ಕಾರಣ, ಅಲ್ಲದೆ ಅವರು ಮಹಾಕಾವ್ಯಗಳ ರಚನೆಯ ಗೋಜಿಗೆ ಹೋಗದಿರುವುದಕ್ಕೂ ಅದೇ ಕಾರಣವೆಂದು ತೋರುತ್ತದೆ. ಅವರನ್ನು "ಮಹಾಕವಿಯಾಗಿರುವ ಶ್ರೇಷ್ಠವ್ಯಕ್ತಿ" ಎಂದು ವರ್ಣಿಸುವುದಕ್ಕಿಂತಲೂ "ಶ್ರೇಷ್ಠ ಕವಿಯಾಗಿರುವ ಮಹಾವ್ಯಕ್ತಿ" ಎಂದು ವರ್ಣಿಸಿದರೆ ಹೆಚ್ಚು ಸತ್ಯವಾಗಿ ತೋರುತ್ತದೆ.

ಇಲ್ಲಿ ಮತ್ತೊಂದು ವಿಷಯವನ್ನು ಸೂಕ್ಷ್ಮವಾಗಿ ಸೂಚಿಸಿದರೆ ಮೇಲಿನ ಇತ್ಯರ್ಥಕ್ಕೆ ಇನ್ನಷ್ಟು ಪುಷ್ಟಿ ದೊರೆಯುತ್ತದೆ. ಅದೇನೆಂದರೆ, ರವೀಂದ್ರರ ವಿರಾಟ್ ಪ್ರತಿಭೆಯನ್ನು ಸಂಕುಚಿತವೂ ಏಕಮುಖ ಮಾತ್ರವೂ ಆದ ಒಂದು ತತ್ವಪಂಜರದಲ್ಲಿ ಸಂಚರಿಸುವಂತೆ ಮಾಡಿದ ಹೊಣೆ ಬ್ರಾಹ್ಮಸಮಾಜಕ್ಕೆ ಸೇರಿದುದು. ಆ ಸಮಾಜದವರು ಉಪನಿಷತ್ತುಗಳನ್ನು ಮುಖ್ಯವಾಗಿ ಒಪ್ಪಿಕೊಂಡು, ಹಿಂದೂ ಸಾಹಿತ್ಯ ಸಂಸ್ಕೃತಿಯ ಆಕರಗಳಾದ ಪುರಾಣಗಳನ್ನು ಮತೀಯ ಕಾರಣಕ್ಕಾಗಿ ತಿರಸ್ಕರಿಸಿದರು. ಆ ಸಮಾಜದ ಶ್ರದ್ಧೆಯಲ್ಲಿಯೆ ಚಿಕ್ಕಂದಿನಿಂದಲೂ ಸಾಣೆಗೊಂಡ ರವೀಂದ್ರರ ಮತಿ ತನ್ನ ಪ್ರತಿಭೆಗೂ ಆ ಶೃಂಖಲೆಗಳನ್ನು ತೊಡಿಸಿತು. ಹಾಗಾಗಿ ಮಹಾಕಾವ್ಯಾತ್ಮಕವೂ ಆಗಬೇಕಾಗಿದ್ದ ಆ ಪ್ರತಿಭೆ ಭಾವ ಗೀತಾತ್ಮಕ ಮಾತ್ರವಾಗಿಯೆ ಪರ್ಯವಸಾನ ಹೊಂದಬೇಕಾಯಿತು. ರವೀಂದ್ರರು ರಾಮಾಯಣ, ಮಹಾಭಾರತ ಮತ್ತು ಇತರ ಪುರಾಣಗಳಿಂದ ವಸ್ತುಗಳನ್ನು ಸ್ವೀಕರಿಸಿ ಹಿಂದೂ ಸಂಸ್ಕೃತಿಯ ನಂದಾದೀಪವಾಗುವಂತೆ ಯಾವ ಮಹಾಕಾವ್ಯವನ್ನೂ ಬರೆಯಲಾರದೆ ಹೋದರು. ಕ್ರೈಸ್ತಮತವನ್ನು ಅವಲಂಬಿಸಿದ್ದ ಮೈಕೇಲ್‌ಮಧುಸೂದನ ದತ್ತರೂ ಕೂಡ ಅಲ್ಲಿ ಇಲ್ಲಿ ತೊಳಲಿ, ವಿದೇಶೀಯ ಭಾಷೆ ಮತ್ತು ಸಂಸ್ಕೃತಿಗಳಲ್ಲಿ ಕವಿತ್ವಮಾಡುವ ಸಾಹಸದಲ್ಲಿ ವಿಫಲರಾಗಿ ಬೇಸತ್ತು ಕಡೆಗೆ "ಮೇಘನಾದ ವಧ" "ತಿಲೋತ್ತಮಾ ಸಂಭವ" ಎಂಬ ಹಿಂದೂ ಪುರಾಣ ವಿಷಯಗಳನ್ನೊಳಗೊಂಡ ಎರಡು ಮಹಾಕಾವ್ಯಗಳನ್ನು ರಚಿಸಿ, ಬಂಗಾಳೀ ಸಾಹಿತ್ಯಕ್ಕೆ ನೂತನ ಕಳೆಯನ್ನು ತಂದುದನ್ನು ನೆನೆದರೆ ರವೀಂದ್ರರಂತಹ ವಿಶ್ವ ಪ್ರತಿಭಾಶಾಲಿಯಾದ ಕವಿ ಹಾಗೆ ಮಾಡದಿದ್ದುದರಿಂದ ಬಂಗಾಳಿಗೂ ತನ್ಮೂಲಕ ಭಾರತಕ್ಕೂ ಮತ್ತು ಲೋಕಕ್ಕೂ ಎಂತಹ ನಷ್ಟವಾಯಿತೆಂಬುದನ್ನು ಊಹಿಸುವುದು ಅಸಾಧ್ಯ. ಅಥವಾ ಆ ಪ್ರತಿಭೆಯ ಪ್ರಕಾಶನದ ಮಿತಿಯೇ ಅಷ್ಟಿರಬೇಕು ಎಂಬುದು ವಿಧಿಸಂಕಲ್ಪಿತವೆಂದು ಊಹಿಸಬೇಕಾಗುತ್ತದೆ.

ಮತಪುರಾಣಗಳನ್ನು ಆಶ್ರಯಿಸಿ ಬರೆದಿದ್ದ ಮಾತ್ರಕ್ಕೆ ಕಾವ್ಯದ ವಿಶ್ವತ್ವ ನಷ್ಟಾಗುತ್ತಿರಲಿಲ್ಲ. ಕ್ರೈಸ್ತಮತದ ಬೈಬಲ್ ಕಥೆಯನ್ನು ತನ್ನ ಕಾವ್ಯವಿಷಯವಾಗಿ ಆರಿಸಿಕೊಂಡ ಮಿಲ್ಟನ್ ಕವಿಯ "ಪ್ಯಾರಡೈಸ್ ಲಾಸ್ಟ್" ಮಹಾಕಾವ್ಯ ತನ್ನ ವಿಶ್ವತ್ವವನ್ನೂ ಕಳೆದುಕೊಂಡಿಲ್ಲ. ರೋಮನ್ ಕ್ಯಾಥೋಲಿಕ್ ಮತವಿಷಯವನ್ನು ಆಶ್ರಯಿಸಿ ಮಹಾಕೃತಿಯನ್ನು ರಚಿಸಿದ "ಡಾಂಟೆ" ತನ್ನ ವಿಶ್ವತ್ವವನ್ನು ಕಳೆದುಕೊಂಡಿಲ್ಲ. ಹಿಂದೂಮತ ವಿಷಯಗಳನ್ನು ಆಶ್ರಯಿಸಿ ಕೃತಿ ರಚನೆಮಾಡಿದ ವಾಲ್ಮೀಕಿ, ವ್ಯಾಸ, ಕಾಳಿದಾಸರು ತಮ್ಮ ವಿಶ್ವತ್ವವನ್ನು ಕಳೆದುಕೊಂಡಿಲ್ಲ. ಜೈನ ಮತಕಥೆ "ಆದಿಪುರಾಣ"ವನ್ನು ಬರೆದು ಪಂಪ ತನ್ನ ವಿಶ್ವತ್ವವನ್ನು ಕಳೆದುಕೊಂಡಿಲ್ಲ. ಅಂತಹ ಮಹಾಕಾವ್ಯವನ್ನು ಬರೆದಿದ್ದರೆ ರವೀಂದ್ರರ ವಿಶ್ವತ್ವವೂ ಕುಂಠಿತವಾಗುತ್ತಿರಲಿಲ್ಲ.

ಅದಕ್ಕೆ ತನ್ನ ಪೂರ್ವಸಿದ್ಧತೆಯೂ ಅವರಿಗಿತ್ತು ಎನ್ನುವುದನ್ನು 'ಪ್ರಾಚೀನ ಸಾಹಿತ್ಯ' ಮೊದಲಾದ ಅವರ ಕಾವ್ಯವಿಮರ್ಶೆಗಳು ಸಾರಿ ಹೇಳುತ್ತವೆ.

ರಚನೆ ಮಾಡಲಿಲ್ಲ ಎಂಬ ಕಾರಣದಿಂದ ಒದಗಿರುವ ನಷ್ಟದ ಜೊತೆಗೆ ಮಾಡಿದ ರಚನೆಗಳೂ ಹಗುರವಾದುವು ಎಂಬ ಇನ್ನೊಂದು ನಷ್ಟವೂ ಸೇರುತ್ತದೆ. ಮೇರುದಂಡ ಬಲಿಷ್ಠವಾಗಿರುವ ರಾಮಾಯಣ, ಮಹಾಭಾರತ ಮತ್ತು ಪುರಾಣ ವಿಷಯಗಳನ್ನು ತೆಗೆದುಕೊಳ್ಳಲು ತಿರಸ್ಕರಿಸಿದುದರಿಂದಲೇ ರವೀಂದ್ರರ ನಾಟಕಗಳೂ ಅವರ "ಕತ್ತಲೆಯ ಕೋಣೆಯ ರಾಜ"ನಂತೆ ಹೊಗೆಹೊಗೆಯಾಗಿ ಮಂಜುಮಂಜಾಗಿ ರಕ್ತಮಾಂಸವಿಲ್ಲದೆ ಪ್ರೇತವತ್ತಾಗಿ ಉಳಿದಿವೆ.

ನಿದರ್ಶನಗಳನ್ನು ಇನ್ನೂ ಸಮರ್ಪಕವಾಗಿ ಕೊಟ್ಟು, ತತ್ವಗಳನ್ನು ಮತ್ತಷ್ಟು ವಿಶದವಾಗಿಯೂ ವಿವರವಾಗಿಯೂ ಸಮರ್ಥಿಸಲು ಇಲ್ಲಿ ಕಾಲಾವಕಾಶವಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಕವಿ ರವೀಂದ್ರರ ಸಾಹಿತ್ಯದಲ್ಲಿ ಭಾವಗೀತೆಗಳು ಸಣ್ಣ ಕತೆಗಳು ಉತ್ತಮವರ್ಗಕ್ಕೆ ಕವಿ ರವೀಂದ್ರರ ಸಾಹಿತ್ಯದಲ್ಲಿ ಭಾವಗೀತೆಗಳೂ ಸಣ್ಣ ಕತೆಗಳೂ ಉತ್ತಮವರ್ಗಕ್ಕೆ ಸೇರುತ್ತವೆ. ನಾಟಕಗಳಂತೂ, ಬಹುಶಃ ಪುರಾಣ ವಸ್ತುಗಳನ್ನು ಆಶ್ರಯಿಸಿರುವ ಚಿತ್ರಾ, ಕುಂತಿ ಕರ್ಣ ಮೊದಲಾದ ಒಂದೆರಡು ಲಘು ಪ್ರಯೋಗಗಳನ್ನುಳಿದು, ನಾಟಕಗಳಾಗಿ ನಿಲ್ಲುವುದಿಲ್ಲ. ಅವುಗಳಲ್ಲಿರುವ ಭಾವ ಗೀತಾಂಶಗಳಿಗಾಗಿಯಾದರೂ ನಿಲ್ಲುತ್ತವೆಯೇ ಎಂಬುದೂ ಸಂದೇಹಕರ. ಅವರ ಕಾದಂಬರಿಗಳೂ, ಅವುಗಳಲ್ಲಿರುವ ಕವಿತ್ವಾಂಶವನ್ನು ಬಿಟ್ಟರೆ, ಆ ಜಾತಿಯ ಸಾಹಿತ್ಯದಲ್ಲಿ ಅತ್ಯುತ್ತಮವರ್ಗಕ್ಕೆ ಸೇರುತ್ತವೆ ಎಂದು ಧೈರ್ಯವಾಗಿ ಹೇಳಲಾಗುವುದಿಲ್ಲ. ಗದ್ಯಲೇಖನಗಳಲ್ಲಿ ಅವರ ಸಾಹಿತ್ಯಮೀಮಾಂಸೆಗೂ ಕಾವ್ಯ ವಿಮರ್ಶೆಗೂ ನಿಜವಾಗಿಯೂ ಅತ್ಯುತ್ತಮವು ಸ್ಥಾನ ಒದಗಬೇಕಾಗುತ್ತದೆ. ಅವರು ಕವಿಮಾತ್ರರಾಗಿ ಮಹಾಕವಿ ಅಲ್ಲ. ಮಹಾವ್ಯಕ್ತಿಯಾಗಿ ಉತ್ತಮಕವಿಯೂ ಆಗಿರುವುದರಿಂದ ವ್ಯಕ್ತಿಯ ವಿಶೇಷಣ ಕವಿಗೂ ಲಭಿಸಿ ಮಹಾಕವಿಯಾಗಿದ್ದಾರೆ.

## ಪೂರ್ಣದೃಷ್ಟಿಗೆ ಗಾಂಧೀಜಿ[1]

ಇಂದು ಸಾಮಾನ್ಯ ಭಾರತೀಯನು ತನ್ನ ಪುಣ್ಯಭೂಮಿಯ ಇತಿಹಾಸದ ಯಾವ ಕಾಲಭಾಗವನ್ನು ಅವನತಿಯ ಕಾಲವೆಂದೂ ಪತನದ ಕಾಲವೆಂದೂ ದಾಸ್ಯದ ಕಾಲವೆಂದೂ ಇಳಿಗಾಲವೆಂದೂ ಭಾವಿಸಿ ಹಾಗೆ ಕರೆಯುತ್ತಾನೆಯೊ ಆ ಕಾಲಮಾನವೆ ಒಳಹೊಕ್ಕು ಕಾಣಬಲ್ಲ ವಿಚಾರಮತಿಗೆ ಎಂತಹ ಶ್ರೀಮಂತತೆಯಿಂದ ರಂಜಿಸುತ್ತದೆ ಎಂದರೆ ಸಾಮಾನ್ಯದ ದೃಷ್ಟಿಗೂ ವಿಚಾರಮತಿಯ ದೃಷ್ಟಿಗೂ ರಾಜಿಗೆ ಅವಕಾಶವಿಲ್ಲವೆಂದೆ ಹೇಳಬೇಕಾಗುತ್ತದೆ. ಹಾಗೆ ರಾಜಿಗೆ ಅವಕಾಶವಿಲ್ಲದಿರುವುದಕ್ಕೆ ಕಾರಣ, ಆ ಎರಡು ದೃಷ್ಟಿಗೂ ಬೇರೆಬೇರೆ ಭೂಮಿಕೆಗಳ ಮೇಲೆ ನಿಂತು, ಭಿನ್ನ ಭಿನ್ನ ಪುರುಷಾರ್ಥಗಳನ್ನು ತಮ್ಮ ತಮ್ಮ ಮುಖ್ಯ ಲಕ್ಷ್ಯವಾಗಿಟ್ಟುಕೊಂಡಿರುವುದೆ. ರಾಜಕೀಯವೂ ಆರ್ಥಿಕವೂ ಆದ ಲೌಕಿಕ ದೃಷ್ಟಿಯಿಂದ ನೋಡಿದರೆ ಸಾಮಾನ್ಯನ ದೃಷ್ಟಿಗೆ ಸತ್ಯದ ಹೆಸರು ಸಲ್ಲುತ್ತದೆ. ಧಾರ್ಮಿಕವೂ ಆಧ್ಯಾತ್ಮಿಕವೂ ಆಗಿರುವ ಲೋಕೋತ್ತರ ದೃಷ್ಟಿಯಿಂದ ಸಮೀಕ್ಷಿಸಿದರೆ ವಿಚಾರಮತಿಯ ಇತ್ಯರ್ಥದಲ್ಲಿಯೆ ಸತ್ಯಕ್ಕೆ ಪಟ್ಟಾಭಿಷೇಕವಾಗುವಂತೆ ಅರ್ಥವಾಗುತ್ತದೆ.

ಸಾಮಾನ್ಯವಾಗಿ ಇತಿಹಾಸಕಾರನ ದೃಷ್ಟಿ ಲೋಕಧರ್ಮಿಯಾದದ್ದು. ನಮ್ಮಲ್ಲಿ ಪ್ರಚುರವಾಗಿರುವ ಇತಿಹಾಸ ರಚನಾವಿಧಾನವು ಪಾಶ್ಚಾತ್ಯರಿಂದ ಆಮದಾಗಿ ಬಂದದ್ದು ಎಂಬುದನ್ನು ಗಮನಿಸಿದರೆ ನಮ್ಮವರ ಚರಿತ್ರದೃಷ್ಟಿಯೂ ಲೌಕಿಕವಾದುದರಲ್ಲಿ ಆಶ್ಚರ್ಯವೇನೂ ಕಾಣುವುದಿಲ್ಲ. ಆದರೆ ವಿಶ್ವಸರ್ವ ಗ್ರಾಸಿಯೂ ವಿಶ್ವರೂಪದರ್ಶಿಯೂ ಆಗಿರುವ ಪುರ್ಣದೃಷ್ಟಿಗೆ ಚರಿತ್ರಕಾರನ ಅಂಶದೃಷ್ಟಿ, ಆತನ ಮನೋಧರ್ಮಕ್ಕೂ ಆತನು ಕೈಗೊಂಡಿರುವ ಕಥಾರೀತಿಯ ಕರ್ಮಕ್ಕೂ ಅನಿವಾರ್ಯವಾದುದಾದರೂ, ಸಮರ್ಪಕವಾಗಿ ತೋರುವುದಿಲ್ಲ. ವಿಶ್ಲೇಷಣಾತ್ಮಕವಾದ ಆಧುನಿಕ ಶಾಸ್ತ್ರದೃಷ್ಟಿ ತನ್ನ ಪರಿಶೀಲನೆಗೆ ಒಳಗಾಗುವ ವಿಷಯವಲಯವನ್ನು ಇತರ ವಿಷಯವಲಯಗಳಿಂದ ಪ್ರತ್ಯೇಕಿಸಿ, ತನ್ನ ಜಿಜ್ಞಾಸೆಗೆ ಪ್ರಕೃತವಾದ ವಿಷಯವನ್ನು ಅದೇ ಸರ್ವಸ್ವವೆಂಬಂತೆ ಪರಿಗಣಿಸುವುದು ಪದ್ಧತಿಯಾಗಿದೆ. ಈ ಪದ್ಧತಿ ಆಯಾ ವಿಷಯದ ಕೂಲಂಕುಷವಾದ ಹೃದಯ ಪರಿಚಯಕ್ಕೆ ಬೇಕಾದ ಏಕಾಗ್ರತೆಯನ್ನೂ ಏಕಮುಖತೆಯನ್ನೂ ದಯಪಾಲಿಸುವುದು ನಿಜವಾದರೂ ಏಕಾಗ್ರತೆಯಿಂದ ಲಭಿಸುವ ಪ್ರಯೋಜನವನ್ನು ಏಕಮುಖತೆ ಅಸತ್ಯ ಅಥವ ಅರ್ಧಸತ್ಯ ಕಲುಷಿತವನ್ನಾಗಿ ಮಾಡುತ್ತದೆಂದು ಒಪ್ಪಿಕೊಳ್ಳಬೇಕಾಗುತ್ತದೆ. ಆಧುನಿಕ ಇತಿಹಾಸ ಪದ್ಧತಿಗೂ ಈ ಟೀಕೆ ಬಹುಮಟ್ಟಿಗೆ ಸಲ್ಲುತ್ತದೆ.

ಚರಿತ್ರೆಯ ಗಮನವನ್ನೆಲ್ಲ ವಿಶೇಷವಾಗಿ ವ್ಯಾಪಿಸಿರುವುದು ರಾಜಕೀಯ. ರಾಜರು, ರಾಜ್ಯಗಳು, ಯುದ್ಧಗಳು, ಕೌಲುಗಳು, ಪಟ್ಟಾಭಿಷೇಕ, ಸಿಂಹಾಸನ-ಚ್ಯುತಿ ಇತ್ಯಾದಿ. ಅದಕ್ಕೆ ಸಹಾಯಕವಾಗಿ ಸಾಮಾಜಿಕ ಮತ್ತು ಆರ್ಥಿಕ ವ್ಯಾಪಾರಗಳನ್ನು ಉಪಯೋಗಿಸಲಾಗುತ್ತದೆ. ಒಮ್ಮೊಮ್ಮೆ ಧಾರ್ಮಿಕದ ಅಂಶಗಳಲ್ಲಿ ಒಂದಾದ ಮತಗಳನ್ನೂ ಮತಾಂದೋಲನಗಳನ್ನೂ ಅವುಗಳಲ್ಲಿರಬಹುದಾದ ಐತಿಹಾಸಿಕಾಂಶಗಳಿಗಾಗಿ ಪರಿಭಾವಿಸುತ್ತದೆ. ನಾಗರಿಕತೆ ಮತ್ತು ಸಂಸ್ಕೃತಿಗಳ ಕಡೆಗೂ ಆಗಾಗ್ಗೆ ಅದರ ಕೃಪಾವಲೋಕನ ಬೀಳುತ್ತದೆ. ಆದರೆ ಪರಮಪುರುಷಾರ್ಥ ಲಕ್ಷಣವಾದ ಆಧ್ಯಾತ್ಮಿಕ ಜ್ಯೋತಿ ಅದಕ್ಕೆ ಅಲಕ್ಷಿತ. ಏಕೆಂದರೆ ಆಧ್ಯಾತ್ಮಿಕ ವ್ಯಾಪಾರ "ಐತಿಹಾಸಿಕ ಘಟನೆ"ಯಾಗುವಷ್ಟು ಸ್ಥೂಲವಾಗಿರುವುದಿಲ್ಲ. ಮುಷ್ಟಿಗ್ರಾಹ್ಯವಾಗಿರುವುದಿಲ್ಲ. ಅದು ಕಾಲದೇಶಗಳ ಚೌಕಟ್ಟಿನಲ್ಲಿ ಸಂಭವಿಸಿದರೂ ಸ್ವರೂಪತಃ ಕಾಲದೇಶಗಳಿಗೆ ಅತೀತವಾದದ್ದು. ಕಾಲದೇಶ ವ್ಯಾಪಾರಗಳಲ್ಲಿ ವ್ಯವಹರಿಸುವ ಇತಿಹಾಸ ಅವುಗಳಿಗೆ ಅತೀತವಾಗಿರುವುದನ್ನೇ ಮುಖ್ಯ ಲಕ್ಷಣವಾಗುಳ್ಳ ಆಧ್ಯಾತ್ಮಿಕವನ್ನು ಅಲಕ್ಷಿಸಿದರೆ ಅದು ನೈಸರ್ಗಿಕವೆಂದೆ ಭಾವಿಸಬೇಕಾಗುತ್ತದೆ.

ಹಾಗೆ ಭಾವಿಸಿ ಇತಿಹಾಸಕಾರನಿಗೆ ಗೌರವ ತೋರಿಸಲು ನಾವು ಪ್ರಯತ್ನಿಸಿದರೂ ಅವನ ಅಂಶದೃಷ್ಟಿಯ 'ಚರಿತ್ರೆ' ಪೂರ್ಣದೃಷ್ಟಿಗೆ ಎಂದೂ ಸರ್ವಮಾನ್ಯವಾಗಲಾರದು. ಏಕೆಂದರೆ ಪೂರ್ಣದೃಷ್ಟಿ ಸೃಷ್ಟಿಸಮಸ್ತದ ತಾತ್ಪರ್ಯವನ್ನು ತನ್ನ ಚಿರಭಿತ್ತಿಯನ್ನಾಗಿಟ್ಟುಕೊಂಡು ಲೋಕವ್ಯಾಪಾರಗಳ ಅರ್ಥವನ್ನು, ಎಂದರೆ ಕಾರಣ ಉದ್ದೇಶ ಮತ್ತು ಪ್ರಯೋಜನಾತ್ಮಕವಾದ ಅವುಗಳ ವಿಕಾಸ ಕ್ರಮವನ್ನು, ಗ್ರಹಿಸಲು ಧ್ಯಾನಿಯಾಗುತ್ತದೆ. ಆದ್ದರಿಂದ ಪೂರ್ಣದೃಷ್ಟಿ ಪ್ರಪಂಚದ ರಾಜಕೀಯ ಸಾಮಾಜಿಕ ಆರ್ಥಿಕ ಮತ್ತು ಧಾರ್ಮಿಕವಾದ ವ್ಯಾಪಾರಗಳನ್ನೂ ಆಂದೋಲನಗಳನ್ನು ಸೃಷ್ಟಿಯ ಪರಮ ತಾತ್ಪರ್ಯದ ವ್ಯಾಖ್ಯಾನ ವೇದಿಕೆಯ ಮೇಲೆ ನಿಲ್ಲಿಸಿ ಅವುಗಳ ಸಾಕ್ಷ್ಯವನ್ನು ಸಂಗ್ರಹಿಸುತ್ತದೆ. ರಾಜಕೀಯದ ವಿಚಾರಣೆಯನ್ನು ರಾಜಕೀಯವೆ ನಡೆಸಲು ಅದು ಒಪ್ಪುವುದಿಲ್ಲ. ಆರ್ಥಿಕ ಮಾತ್ರ ದೃಷ್ಟಿಯ ಅರ್ಥಶಾಸ್ತ್ರಕ್ಕೆ ಆರ್ಥಿಕಾಂದೋಲನಗಳ ಅರ್ಥ ನಿರ್ಣಯ ಮಾಡಲು ಬಿಡುವುದಿಲ್ಲ. ಎಲ್ಲ ವ್ಯಾಪಾರಗಳನ್ನೂ

ಪರಮ ತಾತ್ಪರ್ಯವೆ ಇಚ್ಛಿಸುತ್ತದೆ; ಆದ್ದರಿಂದಲೆ ಎಲ್ಲ ವ್ಯಾಪಾರಗಳ ಅರ್ಥವನ್ನೂ ಪರಮ ತಾತ್ಪರ್ಯವೆ ಸಮರ್ಥಿಸಬೇಕಾಗುತ್ತದೆ; ಏಕೆಂದರೆ, ಎಲ್ಲ ವ್ಯಪಾರಗಳ ಅರ್ಥವೂ ಪುರುಷಾರ್ಥವೂ ಪರಮತಾತ್ಪರ್ಯದಿಂದಲೆ ಸಾರ್ಥಕವಾಗುತ್ತವೆ.

ಭರತಖಂಡದ ಬದುಕಿನಲ್ಲಿ ಸ್ವಾತಂತ್ರ್ಯೋದಯಕ್ಕೆ ಪೂರ್ವದ ಒಂದೂವರೆ ಶತಮಾನವು ನಮ್ಮ ರಾಷ್ಟ್ರದ ಇಳಿಗಾಲದ ಯುಗವೆಂದು ಸಾಮಾನ್ಯವಾಗಿ ಭಾವಿಸುತ್ತೇವೆ. ರಾಜಕೀಯದಲ್ಲಿ ದಾಸ್ಯ, ಆರ್ಥಿಕದಲ್ಲಿ ದಾರಿದ್ರ್ಯ, ಸಾಮಾಜಿಕದಲ್ಲಿ ಛಿದ್ರತೆ, ಧಾರ್ಮಿಕದಲ್ಲಿ ಕ್ಷುದ್ರತೆ-ಎಂಬೆಲ್ಲ ವರ್ನನೆಗೆ ಪಕ್ಕಾಗುವ ಆ ಕಾಲಕ್ಕೆ ಇಳಿಗಾಲವೆಂದು ಹೆಸರಿಟ್ಟರೆ ಅದರಲ್ಲಿ ತಪ್ಪೇನು? ಹೌದು; ಲೋಕನಿಷ್ಠವಾದ ಮನೋಧರ್ಮಕ್ಕೆ ಅದರಲ್ಲಿ ತಪ್ಪೇನೂ ಕಾಣುವುದಿಲ್ಲ. ಆದರೆ ವೇದನಿಷ್ಠವಾದ, ಎಂದರೆ ಆತ್ಮಶ್ರೀ ನಿಷ್ಠವಾದ, ಪರಮತಾತ್ಪರ್ಯಾರ್ಥದ ಪೂರ್ಣದೃಷ್ಟಿಗೆ ಅದು ವ್ಯಾವಹಾರಿಕ ಮಾತ್ರವಾದ ಮಿಥ್ಯಾದೃಷ್ಟಿ.

ಏಕೆಂದರೆ, ಹತ್ತೊಂಬತ್ತನೆಯ ಶತಮಾನ ಮತ್ತು ಇಪ್ಪತ್ತನೆಯ ಶತಮಾನದ ಪೂರ್ವಭಾಗ ಇವನ್ನೊಳಗೊಂಡ ಆ ಕಾಲಮಾನದಲ್ಲಿ ನಮ್ಮ ದೇಶದಲ್ಲಿ ಗೋಚರವಾದ ಆತ್ಮಶ್ರೀಗೆ ಸಮಾನ ತೇಜಸ್ಸಿನ ಆತ್ಮಶ್ರೀ ಬೇರೆ ಇನ್ನಾವ ದೇಶದಲ್ಲಿಯೂ ಆವಿರ್ಭೂತವಾಗಲಿಲ್ಲ ಎಂದು ಹಾಗೆ ಇತ್ಯರ್ಥ ಹೇಳಲು ಸಮರ್ತರೂ ವಿಖ್ಯಾತರೂ ಆದ ವಿದೇಶೀಯ ಮಹದ್ವ್ಯಕ್ತಿಗಳೇ ಒಪ್ಪಿಕೊಂಡಿದ್ದಾರೆ. ರಾಜಕೀಯಾದಿ ಲೌಕಿಕ ಭೂಮಿಕೆಗಳಲ್ಲಿ ನಾವು ಗಳಿಸಿದ ಅಸದೃಶವಾದ ವಿಜಯ ಪರಂಪರೆಗಳಿಗೂ ಆ ಆಧ್ಯಾತ್ಮಿಕ ತಪಶ್ಯಕ್ತಿಯೇ ಪ್ರಚೋದಕವೂ ಸಾಧಕವೂ ಆಯಿತೆಂಬುದರಲ್ಲಿ ಸಂದೇಹವಿಲ್ಲ. ಆ ಕಾಲಮಾನದಲ್ಲಿ ಸಂಭವಿಸಿದ ಹಿಂದೂ ಧರ್ಮದ ನವೋದಯದ ದಿವ್ಯಕಥೆ ಎಂತಹ ಉದಾಸೀನನಿಗೂ ರೋಮಾಂಚನಕಾರಿಯಾಗುವುದನ್ನು ಅದ್ಭುತವಾಗಿದೆ. ವಿವರಗಳಿಗೆ ಹೋಗದೆ ನಮ್ಮ ದೃಷ್ಟಿ ವಿಹಂಗಮವಾಗಿ ವೀಕ್ಷಿಸದರೂ ಸಾಕು, ಭರತಖಂಡದ ಬೃಹದ್‌ವಿಸ್ತೀರ್ಣದಲ್ಲಿ ದಿಕ್ಕುದಿಕ್ಕುಗಳಲ್ಲಿ, ಕಣ್ಣು ಹರಿದತ್ತ ಆತ್ಮಶ್ರೀಯ ಜ್ಯೋತಿಃಸ್ತೂಪಗಳು ಮನಂಗೊಳಿಸಿ, ಅವಿರಾಮಶಿಖರದ ಅಗ್ನಿ ಗೋಪುರಗಳಂತೆ ರಾರಾಜಿಸುತ್ತವೆ. ರಾಮಮೋಹನರಾಯ, ಶ್ರೀ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಋಷಿ ದಯಾನಂದಸರಸ್ವತಿ, ರವೀಂದ್ರನಾಥ ಠಾಕೂರ, ಶ್ರೀ ರಮಣಮಹರ್ಷಿ, ಶ್ರೀ ಅರವಿಂದರು, ಮಹಾತ್ಮಾ ಗಾಂಧೀಜಿ-ಈ ಒಂದೊಂದು ಹೆಸರಿನ ಹಿಂದೆ ಎಂತಹ ಉಸಿರು ಸ್ಪಂದಿಸುತ್ತದೆ ಎಂಬುದನ್ನು ಅರಿತು ಅನುಭವಿಸಿದರೆ ನಾವು ಮೇಲೆ ಹೇಳಿದ ಮಾತಿನ ಸತ್ಯಾಂಶ ಸುಸಂವೇದ್ಯವಾಗುತ್ತದೆ.

ನಮ್ಮ ದೇಶದ ಸ್ವಾತಂತ್ರ್ಯ ಸಾಧನೆಯ ಯುಗದ ಪ್ರತ್ಯುಷೆಯಲ್ಲಿಯೆ ಸ್ವಾಮಿ ವಿವೇಕನಾಂದರ ಕ್ರಾಂತದರ್ಶಿಯಾದ ಸಿಡಿಲವೀಣೆ ಹೀಗೆಂದು ಗುಡುಗಿದೆ:

“ಓ ನನ್ನ ಭರತಮಾತೆ, ಓ ನನ್ನ ಭಾರತೀಯ ಭ್ರಾತೃಗಳಿರಾ, ನಿದ್ದೆಯಿಂದೆದ್ದೇಳಿ! ನವೋದಯವಾಗುತ್ತಿದೆ; ಕಣ್ದೆರೆದು ನೋಡಿ! ಅದೋ!

“ಸುದೀರ್ಘರಾತ್ರಿ ಕಡೆಗಿಂದು ಕೊನೆಗಾಣುತ್ತಿದೆ...ಶವದಂತೆ ಬಿದ್ದಿದ್ದ ಶರೀರವಿಂದು ಸಪ್ರಾಣವಾಗುತ್ತಿದೆ. ಅದೋ ಕಿವಿಗೊಡಿ: ತೂರ್ಯವಾಣಿಯೊಂದು ಕೇಳಿಬರುತ್ತದೆ: ಬಹು ಪುರಾತನ ಕಾಲದ ಇತಿಹಾಸಗರ್ಭದಿಂದ ಹೊಮ್ಮಿ, ಪರ್ವತಪರ್ವತ ಶಿಖರಗಳಿಂದ ಚಿಮ್ಮಿ,

ಅರಣ್ಯಾರಣ್ಯ ಕಂದರ ಕಂದರಗಳಲ್ಲಿ ಸಂಚರಿಸಿ, ಬರಬರುತ್ತ ಪ್ರಬಲವಾಗಿ, ಬಂದಂತೆಲ್ಲ ಅಪ್ರತಿಹತವಾಗಿ, ನಮ್ಮೀ ಪುಣ್ಯಭೂಮಿಯನ್ನು ನಿದ್ರೆಯಿಂದೊದೆದೆಬ್ಬಿಸಿ, ಜ್ಞಾನ ಭಕ್ತಿ ಕರ್ಮ ವೈರಾಗ್ಯ ಸೇವಾತತ್ತ್ವಗಳನ್ನು ಉಚ್ಚ ಕಂಠದಿಂದ ಸಾರುವ ತೂರ್ಯವಾಣಿ ಯೊಂದು ಕೇಳಿಬರುತ್ತಿದೆ. ಹಿಮಾಲಯಗಳಿಂದ ಬೀಸಿಬರುವ ಪುಣ್ಯ ಸಮೀಕರಣ ನಂತೆ ನಿರ್ಜೀವವಾದಂತಿದ್ದ ಅಸ್ಥಿಮಾಂಸಗಳಿಗೆ ಜೀವದಾನ ಮಾಡುತ್ತಿದೆ; ಜಡನಿದ್ರೆಯನ್ನು ಹೊಡೆದೆಬ್ಬಿಸುತ್ತಿದೆ; ಕಾರ್ಯೋತ್ಸಾಹ ಧೈರ್ಯ ಸ್ಥೈರ್ಯಗಳನ್ನು ಉದ್ರೇಕಿಸುತ್ತಿದೆ, ಕುರುಡರಿಗೆ ಕಾಣದು; ಮೂರ್ಖರಿಗೆ ತಿಳಿಯದು. ನಮ್ಮೀ ಭರತಭೂಮಿ ಯುಗಯುಗಗಳ ನಿದ್ರೆಯಿಂದ ಮೇಲೇಳುತ್ತಿದೆ. ಆಕೆಯನ್ನು ಇನ್ನರೂ ತಡೆಯಬಲ್ಲವರಿಲ್ಲ. ಇನ್ನಾಕೆ ನಿದ್ರೆಮಾಡುವುದಿಲ್ಲ. ಯಾವ ಶಕ್ತಿಯೂ ಆಕೆಯನ್ನು ಬಗ್ಗಿಸಲಾರದು. ಏಕೆಂದರೆ, ಅದೋ ನೋಡಿ. ಮಹಾಕಾಳಿ ಮತ್ತೊಮ್ಮೆ ಎಚ್ಚತ್ತು ಮೈಕೊಡವಿ ಉರಿರೆಳೆದು ನಿಲ್ಲುತ್ತಿದ್ದಾಳೆ!...

"ಯಾವ ಶಕ್ತಿಯ ಉನ್ಮೇಷಮಾತ್ರದಿಂದಲೇ ದಿಗ್ದಿಗಂತವ್ಯಾಪಿಯಾದ ಪ್ರತಿಧ್ವನಿಯಿಂದ ಜಗತ್ತು ಜಾಗ್ರತವಾಗುತ್ತಿರುವುದೋ ಆ ಶಕ್ತಿಯ ಪೂರ್ಣತ್ವವನ್ನು ಭಾವಿಸು, ಅನುಭವಿಸು. ವೃಥಾ ಸಂದೇಹ ಬೇಡ; ದುರ್ಬಲತೆ ಬೇಡ. ದಾಸಜಾತಿ ಸುಲಭವಾದ ಈರ್ಷ್ಯಾದ್ವೇಷಗಳನ್ನು ದೂರಮಾಡಿ-ಈ ಮಹಾ ಯುಗಚಕ್ರ ಪರಿವರ್ತನೆಯ ಸಹಾಯಾರ್ಥವಾಗಿ ಹೆಗಲುಕೊಟ್ಟು ನಿಲ್ಲು; ಸೊಂಟ ಕಟ್ಟಿ ನಿಲ್ಲು; ಧೀರನಾಗಿ ನಿಲ್ಲು:"

ಶ್ರೀ ವಿವೇಕಾನಂದರಂತೆಯೆ ಮಹಾಯೋಗೀಂದ್ರ ಆರೀ ಅರವಿಂದರೂ ಅಂದಿನ ತಮ್ಮ ರಾಜಕೀಯಾಂದೋಲನದ ಮಧ್ಯದಲ್ಲಿಯೆ ಈ ಸತ್ಯವನ್ನು ಅನುಭವಿಸಿ ಕಂಡು ಭರತ ಖಂಡದ ಜೀವಿತೋದ್ದೇಶವನ್ನು ಕುರಿತು ಹೀಗೆಂದು ಭವಿಷ್ಯ ನುಡಿದಿದ್ದಾರೆ:

"ನರನಲ್ಲಿ ನಾರಾಯಣ, ನಾರಾಯಣನಲ್ಲಿ ನರ-ಎಂಬುದೇ ಧ್ಯೇಯ. ಆ ಧ್ಯೇಯದ ಸಾಧನೆ ಮತ್ತು ಲೋಕಕ್ಕೆ ಅದರ ಬೋಧನೆ-ಇವೇ ಭರತವರ್ಷದ ಜೀವಿತೋದ್ದೇಶ. ಇತರ ಜನಾಂಗಗಳಿಗಿಲ್ಲದ ರಹಸ್ಯ ಶಕ್ತಿಯೊಂದು ಆಕೆಗಿದೆ. ಆಕೆಗಿಂದು ಬೇಕಾಗಿರುವುದು ಆ ಶ್ರದ್ಧೆಯ ಉನ್ಮೀಲನ ಮತ್ತು ಆ ಇಚ್ಛಾಶಕ್ತಿಯ ಉದ್ಬೋಧನ. ಆಕೆ ಕೈಕೊಂಡ ಯುಗಯುಗಗಳ ಶಿಕ್ಷಾತಪಸ್ಯೆಯ ಗುರಿ ಇಂದು ಬಳಿಸಾರುತ್ತಿದೆ. ಪುರ್ವ ರೋದೋಂತದಲ್ಲಿ ಮಹಾಜ್ಯೋತಿಯೊಂದು ಮೂಡಿಬರುತ್ತಿದೆ. ಅದರ ರಶ್ಮಿರಾಯಭಾರಿಗಳಾಗಲೆ ದಿಗಂತದಲ್ಲಿ ದೃಗ್ಗೋಚರವಾಗುತ್ತಿದ್ದಾರೆ. ಅದೇ ಕಾರಣ, ಭರತಖಂಡದ ಪುನರುತ್ಥಾನಕ್ಕೆ; ಅದೇ ಸಾಕ್ಷಿ, ವಿಶ್ವಶಕ್ತಿ ಆಕೆಯ ಶ್ವಾಸಕೋಶಗಳಿಗೆ ಮತ್ತೊಮ್ಮೆ ಪ್ರಾಣವಾಯುವನ್ನು ಊದುತ್ತಿದ್ದಾಳೆ ಎಂಬುದಕ್ಕೆ. ಅದೇ ಪ್ರೇರಣೆಯಿಂದಲೆ ಆಕೆಯ ವಿಮೋಚನಕ್ಕಾಗಿ ಮಹದ್ವ್ಯಕ್ತಿಗಳು ಈಗಾಗಲೆ ಕರ್ಮನಿರತರಾಗಿದ್ದಾರೆ. ಆದಕಾರಣವೆ ಆಕೆಯ ಸಂತಾನರ ಹೃದಯ ವಲ್ಮೀಕಗಳಲ್ಲಿ ಪರಿವರ್ತನೆಯ ಮಹಾಶೇಷನು ಹಠಾತ್ತನೆ ಹೆಡೆಯೆತ್ತುತ್ತಿದ್ದಾನೆ.

"ಯಾವ ಜಾಗೃತಿಯ ಪ್ರಪ್ರಥಮ ಪದನ್ಯಾಸವು ರಾಜಕೀಯ ರೂಪದಲ್ಲಿ ಮೈದೋರಿತೋ ಅದು ತುತ್ತತುದಿಗೆ ಆಧ್ಯಾತ್ಮಿಕ ತೇಜಸ್ಸಿನಲ್ಲಿ ಪರ್ಯವಸಾನ ಹೊಂದಿ ಕೃತಕೃತ್ಯವಾಗುತ್ತದೆ. ಭರತಮಾತೆಯ ಚೈತನ್ಯ ಆಕೆಯಲ್ಲಿ ಇನ್ನೂ ಅಕ್ಷಯವಾಗಿದೆ. ಜಗತ್ತು ತನ್ನ ವಿಮೋಚನದ ಸಂದೇಶವನ್ನು ಭರತ ಕಂಡದಿಂದಲೆ ಸ್ವೀಕರಿಸಿ ಉದ್ಧಾರವಾಗುತ್ತದೆ."

ಇಬ್ಬರು ಮಹಾಮಹಿಮರೂ ಕ್ರಾಂತದರ್ಶಿಗಳಾಗಿ ಭವಿಷ್ಯ ನುಡಿದಿದ್ದಾರೆ. ಅದು ಇಂದು ಬಹುಮಟ್ಟಿಗೆ ಸಫಲವಾಗಿದೆ; ಸಫಲವಾಗುತ್ತಲೂ ಇದೆ. ಅಂತಹ ಸಫಲತೆಯ ಸಿದ್ಧಿಗಾಗಿ ಕಂಕಣಬದ್ಧನಾಗಿ ದುಡಿದು ಮಡಿದ ಮಹಾ ಪುರುಷನೊಬ್ಬನ ವ್ಯಷ್ಟಿಶಕ್ತಿಯನ್ನು ಸಮಷ್ಟಿಶಕ್ತಿಯ ಹಿನ್ನೆಲೆಯಲ್ಲಿಟ್ಟು ನೋಡುವ ಪ್ರಯತ್ನವನ್ನೇ ನಾವು 'ಪೂರ್ಣದೃಷ್ಟಿಗೆ ಗಾಂಧೀಜಿ' ಎಂದು ಕರೆದಿದ್ದೇವೆ.

ಗಾಂಧೀಜಿ ಈಗ ತೀರಿಕೊಂಡಿದ್ದಾರೆ. ಅವರ ಐಹಿಕ ಜೀವನಯಾತ್ರೆಯ ದೈಹಿಕರೂಪ ಕೊನೆಗೊಂಡಿದೆ. ಅವರ ಬದುಕು ನಮಗಿಂದು ಚಿತ್ರಕಾರನು ಪೂರೈಸಿದ ಚಿತ್ರದಂತಿದೆ. ಅದನ್ನು ಒಟ್ಟಿಗೆ ನೋಡಬಹುದು. ತಿರುಗಿಸಿ ತಿರುಗಿಸಿ, ಬೇಕಾದ ಕಡೆ ನಿಂತು, ಬೇಕಾದ ಬೆಳಕು ಬಿಟ್ಟು ನೋಡಬಹುದು. ಅವರು ತೀರಿದ ತರುಣದಲ್ಲಿಯೆ ಇಷ್ಟು ಬೇಗನೆ ನಿಷ್ಪಕ್ಷವಾಗಿ ನೋಡುತ್ತೇವೆಂದು ಹೇಳುವುದು ಪ್ರಾಯಶಃ ಸಾಹಸದ ಮಾತಾದೀತು. ಅವರು ತೀರಿಕೊಂಡರೂ ಇನ್ನೂ ನಮಗೆ ಬಹಳ ಹತ್ತಿರವಿದ್ದಾರೆ. ಹಿಮಾಲಯದ ಹತ್ತಿರ ನಿಂತು ನೋಡಿದರೆ ಅದು ಬೃಹದಾಕಾಶವನ್ನೆಲ್ಲ ವ್ಯಾಪಿಸಿದಂತೆ ತೋರುವುದು ಸಹಜ. ದೂರ ಸರಿದರೆ ಮಾತ್ರ ಗೊತ್ತಾಗುತ್ತದೆ,-ಅದರ ಇತಿ, ವಿಸ್ತಾರ, ಔನ್ನತ್ಯ; ಇತರ ಗಿರಿಗಳೊಡನೆ ಅದಕ್ಕಿರುವ ಸಂಬಂಧ; ಇತರ ಪರ್ವತಗಳ ಸಮುದಾಯದಲ್ಲಿ ಅದಕ್ಕಿರುವ ಸ್ಥಾನ, ಮಾನ. ದೂರ ಸರಿಯುವುದರಿಂದ ನಮಗೆ ನಷ್ಟವಾದಂತೆ ತೋರಬಹುದು: ಮೊದಲು ಅದಕ್ಕಿದ್ದ ಬೃಹತ್ತು ಕಡಮೆಯಾಗುತ್ತದೆ; ಆಕಾಶವನ್ನೆಲ್ಲ ತುಂಬಿರುವಂತೆ ತೋರುತ್ತಿದ್ದ ಅದು ಕಿರಿದಾದಿ ಕಾಣತೊಡಗುತ್ತದೆ; ಅದರ ಸರ್ವಸ್ವತೆಗೆ ಚ್ಯುತಿಯೊದಗಿ ಪರ್ವತಶ್ರೇಣಿಯಲ್ಲಿ ಅದೂ ಒಂದು ಎಂಬರಿವು ಮೂಡುತ್ತದೆ; ಅದರ ಎತ್ತರಕ್ಕೆ ಇತರ ಕಿರುಬೆಟ್ಟಗಳು ಎಷ್ಟರ ಮಟ್ಟಿಗೆ ಆಧಾರವಾಗಿವೆ ಎಂಬಂಶ ಸ್ಫುರಿಸುತ್ತದೆ. ಹೀಗಾದರೂ ಅದು ನಿಜವಾಗಿಯೂ ನಮಗೊದಗುವ ನಷ್ಟವಲ್ಲ. ಅದನ್ನು ನಷ್ಟವೆಂದು ಭಾವಿಸುವುದು ಮೋಹಮೂಲವಾದ ಭ್ರಾಂತಿಯನ್ನೇ ಪ್ರೀತಿಸುವ ಒಂದು ಮನೋದೌರ್ಬಲ್ಯವಾದೀತು. ಸತ್ಯಲಾಭ ಎಂದಿಗೂ ನಷ್ಟವಲ್ಲ, ತತ್ಕಾಲದಲ್ಲಿ ಹಾಗೆ ತೋರಿದರೂ. ಏಕೆಂದರೆ ಹಿಮಾಚಲದ ನಿಜವಾದ ಬೃಹತ್ತು ನಮ್ಮ ಸ್ಥಾನ ವ್ಯತ್ಯಾಸದಿಂದ ಸ್ವರೂಪತಃ ಹಿಗ್ಗುವುದೂ ಇಲ್ಲ, ಕುಗ್ಗುವುದೂ ಇಲ್ಲ. ಅದು ಸುಸ್ಥಿರ. ಬದಲಾಗಿ ನಮಗೊದಗುವ ಲಾಭವೆಂದರೆ, ಹಿಮಾಲಯಕ್ಕೆ ಆಧಾರವಾದ ಪೃಥ್ವಿಯ ವಿಪುಲತರ ವಿಸ್ತೀರ್ಣವೂ ಎಲ್ಲವನ್ನೂ ಒಳಗೊಂಡಿರುವ ಅಪಾರವಾದ ವ್ಯೋಮಮಂಡಲದ ಮಹತ್ತರವಾದ ಅನಂತತೆಯೂ ಅನುಭವಗೋಚರವಾಗಿ, ನಮ್ಮ ಚೇತನ ವಿರಾಟ್‌ಸಂಗಿಯಾಗುತ್ತದೆ. ಅಹಂಕಾರ ಮತ್ತು ಮಮಕಾರಪೂರ್ಣವಾದ ನಮ್ಮ 'ಅಲ್ಪ' ದೃಷ್ಟಿಗೆ ಅತ್ಯಂತ ಹಿರಿದಾಗಿ ತೋರುತ್ತಿದ್ದರೂ ಕೂಡ ಅದರ ನಿಜವಾದ ಹಿರಿತನಕ್ಕೆ ಕುಂದುಬರದ ರೀತಿಯಲ್ಲಿ ಕಿರಿದಾಗಿ ತೋರಿ, ಎಲ್ಲವನ್ನೂ ತನ್ನ ಇಚ್ಛಾಮಾತ್ರದಿಂದ ಹೊರಹೊಮ್ಮಿಸಿ ಅನಿರ್ವಚನೀಯವಾದ ತನ್ನ ಇಚ್ಛಾಸೂತ್ರದಿಂದ ಲೀಲಾಜಗತ್ತನ್ನು ನಡೆಸುತ್ತಿರುವ ಭಗವನ್ನಿತ್ಯದ ಭೂಮತೆ ಭವ್ಯತೆಗಳು ಚೇತಃಸ್ಪರ್ಶಿಗಳಾಗಿ ನಮ್ಮನ್ನು ಪ್ರವೇಶಿಸುತ್ತವೆ. ಹೆಮ್ಮೆ ಹೆಡೆಮುಚ್ಚಿ, ಅಹಂಭಾವ ಸಾಷ್ಟಾಂಗ ದಂಡ ಪ್ರಣಾಮಮಾಡಿ, ಜೀವ ವಿನಯಶೀಲವಾಗುತ್ತದೆ. ಅಂತಹ ಅನುಭವಕ್ಕಿಂತಲೂ ಹೆಚ್ಚಿನ ಲಾಭವಾಗಲಿ, ದಿವ್ಯತರವಾದ ಪ್ರಯೋಜನವಾಗಲಿ ಬೇರೆ ಏನಿದೆ?

ಗಾಂಧೀಜಿಯ ಜೀವನವನ್ನು ಚರಿತ್ರೆಯ ರೂಪದಲ್ಲಿ ಒಕ್ಕಣಿಸುವುದು ನಮ್ಮ ಉದ್ದೇಶವಲ್ಲ. ಸಂಕ್ಷೇಪವಾಗಿಯಾದರೂ ಅದನ್ನು ಹೇಳುವುದು ಇಲ್ಲಿ ಅನಾವಶ್ಯಕ. ಅದರ ರೂಪುರೇಖೆಗಳು

ಮಾತ್ರವಲ್ಲ, ವಿವರಗಳೂ ಕೂಡ ಮಕ್ಕಳು ಮುದುಕರಾದಿಯಾಗಿ ಈಗಾಗಲೆ ತಕ್ಕಮಟ್ಟಿಗೆ ಎಲ್ಲರಿಗೂ ತಿಳಿದಿದೆ. ಅವರ ಜೀವನಪ್ರತಿಮೆಯನ್ನು ವಿಶೇಷವಾಗಿ ಭರತ ಖಂಡಕ್ಕೆ ಅನ್ವಯಿಸುವಂತೆ ಜಗಜ್ಜೀವನ ರಂಗಭಿತ್ತಿಯಲ್ಲಿಟ್ಟು ಸಮೀಕ್ಷಿಸುವುದೇ ನಮ್ಮ ಪ್ರಕೃತಸಂಕಲ್ಪ.

ಶ್ರೀ ಮೋಹನದಾಸ ಕರಮಚಂದ ಗಾಂಧಿ ಗುಜರಾತು ಪ್ರಾಂತದ ಕಾಥೆವಾಡ ಸಂಸ್ಥಾನಗಳಲ್ಲಿ ಒಂದಾಗಿದ್ದ ಪೋರಬಂದರು ಸಂಸ್ಥಾನದ ದಿವಾನರ ಮಗನಾಗಿ ಕ್ರಿ.ಶ.೧೮೬೯ನೆಯ ಅಕ್ಟೋಬರ್ ೨ನೆಯ ದಿನ ಸಾಮಾನ್ಯ ರೀತಿಯಲ್ಲಿ ಸಾಮಾನ್ಯರಂತೆ ಭೂಪ್ರಜೆಯಾಗಿ ಅವತರಿಸಿದರು.

ಜೈನರ ಕಾವ್ಯಗಳಲ್ಲಿ ತಿರ್ಥಂಕರನಾಗುವವನು ಜನ್ಮವೆತ್ತುವ ಸಂದರ್ಭದಲ್ಲಿ ವರ್ಣಿತವಾಗುವಂತೆ ಇಲ್ಲಿ ಗರ್ಭಶೋಧನೆ, ಜನ್ಮಾಭಿಷೇಕ, ಇಂದ್ರನ ಆನಂದ ನೃತ್ಯ ಇತ್ಯಾದಿಗಳೇನೂ ನಡೆಯಲಿಲ್ಲ. ಸೂಕ್ಷ್ಮಲೋಕದ ಭಗವತ್‌ಕವಿಯ ಕಾವ್ಯಸತ್ತೆಯಲ್ಲಿ ನಡೆದುವೋ ಬಿಟ್ಟುವೋ ಗದ್ಯಲೇಖಕನಿಗೆ ಅದೆಲ್ಲ ಅಪ್ರಕೃತ. ಅಂತೂ ಅವರೂ ಹುಟ್ಟಿದರು. ಇತರ ಬಾಲಕರಂತೆ ಬೆಳೆದರು. ಶಾಲೆಗೆ ಹೋದರು. ಇತರರಂತೆಯೆ ವಿದ್ಯಾರ್ಜನೆ ಮಾಡಿದರು. ಅಂದಿನ ಕಾಲಸ್ಥಿತಿಗೆ ವಶರಾಗಿ ಇತರ ಅನೇಕರಂತೆ ವಿದ್ಯಾರ್ಜನೆಗಾಗಿ ವಿದೇಶಕ್ಕೆ ಹೋದರು. ಅದನ್ನು ಪೂರೈಸಿಕೊಂಡು ಸ್ವದೇಶಕ್ಕೆ ಹಿಂತಿರುಗಿದರು. ವಕೀಲಿ ವೃತ್ತಿಗೆ ಸೇರಿ ದುಡಿಯಲಾರಂಭಿಸಿದರು. ಪ್ರಾಸಂಗಿಕವಾಗಿ ಒದಗಿದ ಅವಕಾಶ ಅವರನ್ನು ದಕ್ಷಿಣ ಆಫ್ರಿಕಕ್ಕೆ ಕೊಂಡೊಯ್ದಿತು. ಅಲ್ಲಿ ನಡೆದ ಒಂದು ದಾರುಣವಾದ ಅನುಭವ ಅವರನ್ನು ದೀಕ್ಷಿತರನ್ನಾಗಿ ಪರಿವರ್ತಿಸಿತು. ಅಲ್ಲಿ ಸತ್ಯಾಗ್ರಹದ ಪ್ರಯೋಗ ನಡೆಸಿ ಜಯಶೀಲರಾಗಿ ಭಾರತಕ್ಕೆ ಹಿಂತಿರುಗಿದರು. ವಿಧಿ ಇಲ್ಲಿಯೂ ಅವರಿಗಾಗಿ ರಂಗವನ್ನು ಸಮೆದು ಸಿದ್ಧಗೊಳಿಸಿತ್ತು. ನಿರಾಡಂಬರವಾಗಿ ಒಂದು ಮೂಲೆಯಿಂದ ರಂಗಪ್ರವೇಶಮಾಡಿದರು. ದೃಶ್ಯದಿಂದ ದೃಶ್ಯಕ್ಕೆ ಅಂಕದಿಂದ ಅಂಕಕ್ಕೆ ಅವರ ಜೀವನನಾಟಕ ಭರತಖಂಡದ ಜೀವನನಾಟಕದಲ್ಲಿ ಹಾಸುಹೊಕ್ಕಾಗಿ ಎಸಳೆಸಳೆಸಳಾಗಿ ಅರಳಿತು. ಅರಳುತ್ತಾ ಅರುಳುತ್ತಾ ದಿಕ್ಕುದಿಕ್ಕಿಗೂ ಅಮರ ಸೌರಭವನ್ನು ಹರಡಿ ಜಗನ್ನೇತ್ರಾಳಿಗಳನ್ನು ತನ್ನೆಡೆಗೆ ಆಕರ್ಷಿಸುತ್ತಾ ಕೊನೆಗೆ ಸಹಸ್ರದಲಪದ್ಮವಾಗಿ, ತಪೋನಿರತನಾದ ಭಾರತ ಭಾಗ್ಯವಿಧಾತನಿಗೆ ಸ್ವಾತಂತ್ರ್ಯ ಸಹಸ್ರಾರ ಸಿಂಹಾಸನವಾಗಿ ಪರಿಣಮಿಸಿತು. ಅದರ ಉತ್ಕರ್ಷದ ಮಹೋನ್ನತಿ ಕೈಲಾಸ ಶಿಖರಶಿರಶ್ಚುಂಬಿಯಾಗುತ್ತಿದ್ದಾಗಲೆ ಅತ್ಯಂತ ನಾಟಕೀಯವಾಗಿ ಆಕಸ್ಮಿಕವೆಂಬಂತೆ ಜಗತ್‌ರಂಗದಿಂದ ಅಂತರ್ಧಾನವಾಯಿತು, ೧೯೪೮ನೆಯ ಜನವರಿ ೩೦ನೆಯ ಶುಕ್ರವಾರ ಸಂಜೆ. ಅದರ ಬಿಳಿ ನೆನಪೂ ಅದರ ನರುಗಂಪೂ ಭೂಮಿಯ ಅಕರ್ಷಣ ಶಕ್ತಿಯಂತೆ, ಸೂರ್ಯನ ಜ್ಯೋತಿಶ್ಶಕ್ತಿ ಯಂತೆ, ಲೋಕಾಂಶಗಳಾಗಿ, ಸೃಷ್ಟ್ಯಂಶಗಳಾಗಿ ನಿತ್ಯವಾಗಿವೆ. ಗಾಂಧೀಜಿ ಬಿಟ್ಟುಹೋಗಿರುವ ನಮ್ಮಿ ಪೃಥ್ವಿ ಅವರು ಪ್ರವೇಶಿಸಿದ ಅಂದಿನ ಪೃಥ್ವಿಗಿಂತಲೂ ಸಮಧಿಕತರವಾಗಿ ಶ್ರೀಮಂತವಾಗಿದೆ.

ಆದರೆ ಆ ಶ್ರೀ ಒಬ್ಬ ವ್ಯಕ್ತಿಯ ದುಡಿಮೆಯಂತೆ ತೋರಿದರೂ ಪೂರ್ವಾರ್ಜಿತವಾದ ಆಸ್ತಿಯ ಆಧಾರವಿಲ್ಲದಿದ್ದರೆ, ಅದರ ಬೆಂಬಲವಿಲ್ಲದಿದ್ದರೆ, ಒಬ್ಬ ವ್ಯಕ್ತಿಗೆ ಅದು ಸಾಧ್ಯವಾಗುತ್ತಿತ್ತೆ? ಗಾಂಧೀಜಿ ಜರ್ಮನಿಯಲ್ಲಿ ಹುಟ್ಟಿದ್ದರೆ? ರಷ್ಯಾದಲ್ಲಿ ಹುಟ್ಟಿದ್ದರೆ? ಬಹುಶಃ ಪೃಥ್ವಿಯ ಇನ್ನಾವ ದೇಶದಲ್ಲಿ ಹುಟ್ಟಿದ್ದರೂ ಆ ಶಕ್ತಿ ಈ ರೀತಿಯಲ್ಲಿ ವ್ಯಕ್ತವಾಗಿ ವಿಕಾಸಗೊಳ್ಳಲು ಸಾಧ್ಯವಾಗುತ್ತಿರಲಿಲ್ಲವೆಂದು ಇತಿಹಾಸತಜ್ಞರಿಗೆ ವೇದ್ಯವಾಗುತ್ತದೆ. ಸ್ವಾಸ್ತಿಕದ ಚಪ್ಪಡಿಯ

ಅಡಿಯಲ್ಲಿಯೊ ಕುಡುಗೋಲು ಸುತ್ತಿಗೆಯ ನಡುವೆಯೂ ಸಿಕ್ಕಿ ಆ ಜೀವಬೀಜ ಮೊಳಕೆಯಲ್ಲಿಯೆ ಜರ್ಝರಿತವಾಗುತ್ತಿತ್ತು. ಭರತವರ್ಷದ ಶತಶತಮಾನಗಳ ಸುದೀರ್ಘಕಾಲದ ಆತ್ಮಶ್ರೀಪೂರ್ಣವಾದ ಆಧ್ಯಾತ್ಮಿಕ ಸಂಸ್ಕೃತಿಯ ಅಮೃತ ತೋಪಮವಾದ ಆಧಾರವೂ ಬೆಂಬಲವೂ ಪ್ರೇರಣೆಯೂ ಪ್ರೋತ್ಸಾಹವೂ ದೊರೆಯದಿದ್ದರೆ ಗಾಂಧೀಜಿಯ ಆವಿರ್ಭಾವ ಅಸಾಧ್ಯವಾಗುತ್ತಿತ್ತು. ಶ್ರೀ ರಾಮಕೃಷ್ಣ ಪರಮಹಂಸರ ವಿಚಾರವಾಗಿ ಬರೆಯುತ್ತಾ ಋಷಿಸದೃಶನಾದ ಸಾಹಿತಿ ರೋಮಾ ರೋಲಾಂಡ್ **(Romain Rolland)** ಹೀಗೆಂದು ಬರೆಯುತ್ತಾರೆ.

"ಈ ಭಗವದ್ ವಿಭೂತಿಯ (ಶ್ರೀ ರಾಮಕೃಷ್ಣರ) ವ್ಯಕ್ತಿತ್ವವು ಒಂದು ಮಹಾ ಸ್ವರಮೇಲದಂತೆ ಸಹಸ್ರಾರು ರಾಗೋಪರಾಗಗಳ ಸಮನ್ವಯ ರಂಗವಾಗಿದೆ. ಅನೇಕ ತಲೆಮಾರುಗಳ ಸಾಧನಸಂಪತ್ತಿ ಆತನ ಹೃದಯದಲ್ಲಿ ಐಕ್ಯವಾಗಿದ್ದರೂ ಅದೆಲ್ಲ ವೈವಿಧ್ಯವನ್ನೂ ತನ್ನತನದೊಂದು ದೀಪ್ತಿಯ ಪೋಷಣೆಗೆ ತೈಲವೆಂಬಂತೆ ಸ್ವೀಕರಿಸಿ ಆತನ ಆತ್ಮಜ್ಯೋತಿ ಸಾರ್ವಭೌಮಿಕೋಜ್ಜ್ವಲವಾಗಿ ರಂಜಿಸುತ್ತಿದೆ. ಸಹಸ್ರಾರು ಸಂವತ್ಸರಗಳಲ್ಲಿ ಕೋಟ್ಯಂತರ ಹೃದಯಗಳಲ್ಲಿ ಭಾರತಮಾತೆ ಸಾಧಿಸಿದ ತಪಸ್ಸೆ ಈತನಲ್ಲಿ ಮೂರ್ತಿಮತ್ತಾಗಿ ಸಫಲವಾಗಿದೆ."

ತನ್ನ ಹುಟ್ಟಿದ ನಾಡನ್ನು ಬಿಟ್ಟರಿಯದ, ಓದುಬರಹ ಅಷ್ಟೇನೂ ಬಾರದಿದ್ದ, ಗಾಂಧೀಜಿಯಂತಲ್ಲದೆ ಬಹುಜನ ಸಂಪರ್ಕದಿಂದ ದೂರವಾಗಿದ್ದ ದಕ್ಷಿಣೇಶ್ವರದ ಗುರುದೇವನಿಗೆ ಅನ್ವಯವಾಗುವುದಕ್ಕಿಂತಲೂ ಸತ್ಯತರವಾಗಿ ಗಾಂಧೀಜಿಯ ಬದುಕಿಗೆ ಹೊಂದಿಕೊಳ್ಳುತ್ತದೆ, ಮೇಲೆ ಹೇಳಿದ ಮಾತು. ಗಾಂಧೀಜಿ ಹುಟ್ಟುವಾಗ ಶ್ರೀ ರಾಮಕೃಷ್ಣ ಪರಮಹಂಸರಿಗೆ ೩೩ ವರ್ಷಗಳಾಗಿತ್ತು; ಸ್ವಾಮಿ ವಿವೇಕಾನಂದರಿಗೆ ೬ ವರ್ಷ; ರವೀಂದ್ರರು ಎರಡು ವರ್ಷದ ಹಸುಳೆ; ಸ್ವಾಮಿ ದಯಾನಂದ ಸರಸ್ವತಿಗಳಿಗೆ ಆಗಲೆ ೪೫ ವರ್ಷಗಳಾಗಿತ್ತು. ಇನ್ನು ಮೂರೇ ವರ್ಷಗಳಲ್ಲಿ ಶ್ರೀ ಅರವಿಂದರ ಜನ್ಮಧಾರಣೆಗೆ ವಿಧಿ ಸಂಕಲ್ಪಿಸಿದ್ದಿತು; ಶ್ರೀ ರಮಣ ಮಹರ್ಷಿಗಳ ಬರವಿಗೆ ಇನ್ನೂ ಹನ್ನೊಂದು ವರ್ಷವಿತ್ತು. ಈ ಪ್ರಖ್ಯಾತವಾದ ಆಧ್ಯಾತ್ಮಿಕ ಜ್ಯೋತಿಗಳನ್ನು ಮಾತ್ರ ಗಮನಿಸಿದರೂ ಕೂಡ ಆ ಕಾಲಮಾನ ಎಷ್ಟು ಶ್ರೀಮಂತ ಗರ್ಭಿತವಾಗಿತ್ತು ಎಂಬುದು ಹೊಳೆಯುತ್ತದೆ. ಶುದ್ಧ ಆಧ್ಯಾತ್ಮಿಕವಲ್ಲದೆ ಲೌಕಿಕವೂ ಆಗಿರುವ ಬೇರೆ ಎಷ್ಟೋ ಇತರ ಮಹಾಪುರುಷರೂ ಗಣ್ಯವ್ಯಕ್ತಿಗಳೂ ವಿಜ್ಞಾನಿಗಳೂ ಕವಿಗಳೂ ಆ ಕಾಲಮಾನದಲ್ಲಿ ಜನ್ಮವೆತ್ತಿದ್ದಾರೆ ಎಂಬುದನ್ನು ನೆನೆದರೆ ಅದರ ವಿಭವ, ಸಾಮಾನ್ಯರು ಊಹಿಸುವಂತೆ, ಬರಿಯ ಕಾಕತಾಳೀಯ ಮಾತ್ರವಾದೀತೆ ಎಂದು ಸಂದೇಹಪಡಬೇಕಾಗುತ್ತದೆ. ಶ್ರೀ ವಿವೇಕಾನಂದರು ಭರತಭೂಮಿಯ ನವೋದಯದ ವಿಚಾರದಲ್ಲಿ ಹೇಳಿದಂತೆ, ಯುಗನಿದ್ರೆಯಿಂದ ಎಚ್ಚರಗೊಳ್ಳುವ ಮಹಾಕಾಳಿಯ ಬೇರೆಬೇರೆ ತೋಳುಗಳೆ ಅಲ್ಲಲ್ಲಿ ಮೈದೋರಿದಂತೆ ಭಾಸವಾಗುತ್ತದೆ. ಆದಿಶಕ್ತಿಯ ತರಂಗಿತೇಚ್ಛೆ ಉದ್ದೇಶಪೂರ್ವಕವಾದ ಚಿನ್ಮಯಸೂತ್ರಗಳನ್ನೆಳೆದು ನವೋದಯರಂಗದಲ್ಲಿ ತನ್ನ ಲೀಲಾವಿಭೂತಿಯನ್ನು ಅಲ್ಲಲ್ಲಿ ಮೂಡಿಸುವಂತೆ ತೋರುತ್ತದೆ. ಪೂರ್ಣದೃಷ್ಟಿಯಿಂದ ಧ್ಯಾನಿಸಿದರಂತೂ ನಮ್ಮ ಊಹೆ ಶ್ರದ್ಧೆಯಾಗತೊಡಗಿ ಅನುಮಾನವು ನಿಶ್ಚಿತವಾದ ಅಂತಜ್ಞಾನವಾಗುತ್ತದೆ. ಬಂಕಿಮಚಂದ್ರ ಮಹಾಶಯನು ಯಾವ ಲೋಕಾಲೋಕಶಕ್ತಿಯನ್ನು ವಂದೇಮಾತರಂ ಎಂಬ ಮಂತ್ರಗೀತೆಯಿಂದ ರಾಷ್ಟ್ರಪುರುಷನ ಹೃದಯಕ್ಕೆ ಆಹ್ವಾನಗೈದು, ರಾಷ್ಟ್ರಕುಂಡಲಿನಿ ಉನ್ಮೀಲಿತವಾಗಿ ಉನ್ಮೇಷಗೊಳ್ಳುವಂತೆ ಮಾಡಲು ಸಮರ್ಥನಾದನೋ ಆ ಚಿಚ್ಛಕ್ತಿಯ ಇಚ್ಛಾವಿನ್ಯಾಸಗಳೇ ಈ ಎಲ್ಲ ವಿಭೂತಿಗಳೋಪಾದಿಯಲ್ಲಿ ವಿಕಾಸಗೊಳ್ಳುವುದನ್ನು ಕಾಣುತ್ತದೆ, ಪೂರ್ಣದೃಷ್ಟಿ.

ಗಾಂಧೀಜಿ ಜೀವನವನ್ನು ಆ ದೃಷ್ಟಿಯಿಂದ ಅವಲೋಕಿಸಿದರೆ ದೇಶಭಕ್ತಿ, ಸಮಾಜಸೇವೆ, ಸ್ವಾತಂತ್ರ್ಯಸಂಪಾದನೆ. ಹರಿಜನೋದ್ಧಾರ, ಸ್ವದೇಶಿ, ಖಾದಿ, ಇತ್ಯಾದಿ ರಾಜಕೀಯ ಸಾಮಾಜಿಕ ಆರ್ಥಿಕ ಭೂಮಿಕೆಗಳಿಗೆ ತುರೀಯವಾದ ಶಾಶ್ವತ ತತ್ತ್ವವೊಂದು ಬೋಧೆಯಾಗುತ್ತದೆ. ಆ ತತ್ತ್ವವೆ ಪೂರ್ಣ ಮನುಷ್ಯತ್ವದ ಸಂಪೂರ್ಣ ವಿಕಾಸಕ್ಕೆ ಕಾರಣವೆಂದೂ, 'ಸಕಲ ಪ್ರಯೋಜನ ಮೌಲಿಭೂತ'ವಾದ ಸಚ್ಚಿದಾನಂದ ಸಾಕ್ಷಾತ್ಕಾರವೆ ಅದರ ಅವತರಣೋದ್ದೇಶವೆಂದೂ ಆ ಪರಮ ಪ್ರಯೋಜನವು ಅತೀತದಲ್ಲಿ ಮಾತ್ರವಲ್ಲದೆ ಐಹಿಕದಲ್ಲಿಯೂ ಸಂಸ್ಥಾಪಿತವಾಗಬೇಕಾಗಿರುವುದು ಸೃಷ್ಟಿಯ ಚರಮೋದ್ದೇಶವೆಂದೂ ನಮಗೆ ಬುದ್ಧಿಗೋಚರವಾಗುತ್ತದೆ. ಅಂತಹ ಅಮರ್ತ್ಯಸ್ಥಿತಿ ಮರ್ತ್ಯಕ್ಕೂ ಇಳಿಯಲು ಮನುಷ್ಯತ್ವ ತನ್ನ ಸರ್ವಸ್ವವನ್ನೂ ಸಮರ್ಪಿಸಲು ತಪಸ್ವಿಯಾಗದಿದ್ದರೆ ಬರಿಯ ರಾಜಕೀಯವೂ ಸಾಮಾಜಿಕವೂ ಆರ್ಥಿಕವೂ ಆಗಿರುವ ಪ್ರಯತ್ನಗಳಿಂದ, ಅವು ಎಷ್ಟೇ ಶ್ಲಾಘನೀಯವಾಗಿರಲಿ ಉದಾತ್ತವಾಗಿರಲಿ, ಸುಖಶಾಂತಿಗಳು ನಮ್ಮ ಭಾಗಕ್ಕೆ ಬರಿಯ ಹಂಬಲಿಕೆಗಳಾಗಿಯೆ ಉಳಿಯುತ್ತವೆ ಎಂಬ ಎಚ್ಚರಿಕೆಗೆ ಗಾಂಧೀಜಿಯ ಜೀವನ ಚರಿತ್ರೆ, ತಪಿಸುತ್ತಿರುವ ಪ್ರಪಂಚಕ್ಕೆ ವಿಧಿ ಎತ್ತಿದ ಬೆಂಕಿಯ ತೋರ್ಬೆರಳಂತೆ, ಒಂದು ಭಗವತ್ ಸಾಕ್ಷಿಯಾಗಿದೆ.

---

[1]ಗಾಂಧೀಜಿಯ ಜನ್ಮೋತ್ಸವ ಸಂದರ್ಭದಲ್ಲಿ ೨-೧೦-೧೯೪೮.